
೭೬ನೇ
ಅಖಿಲ ಭಾರತ
ಕನ್ನಡ ಸಾಹಿತ್ಯ
ಸಮ್ಮೇಳನ, ಗದಗ



ಶಾಸನಗಳಲ್ಲಿ ದಾನದತ್ತಿಗಳು

ಡಾ. ಎಚ್. ಜಯಮ್ಮಕರಿಯಣ್ಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

BVP-1211- 27/2/17
1217-(5)

೭೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ

ಶಾಸನಗಳಲ್ಲಿ ದಾನ ದತ್ತಿಗಳು

(ಲೇಖನಗಳ ಸಂಕಲನ)

ಡಾ. ಎಚ್. ಜಯಮ್ಮ ಕರಿಯಣ್ಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SHASANAGALALLI DĀNADATTIGALU - Lekhanagala Sankalana
by : **Dr. H. Jayamma Kriyanna**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vi + 113   Price : Rs. **50=00** ; **2010**

ಮೊದಲನೇ ಮುದ್ರಣ : ೨೦೧೦
ಪ್ರತಿಗಳು : ೧೦೦೦
ಬೆಲೆ : ಐವತ್ತು ರೂಪಾಯಿಗಳು

ಪ್ರಕಟಣಾ ಸಮಿತಿ

ಮುಖಪುಟ ವಿನ್ಯಾಸ : ಶ್ರೀ ಮುರುಳಿಧರ ವಿ. ರಾಠೋಡ್

ಮುದ್ರಣ : ನಂದಿ ಪ್ರೋಸೆಸ್, ನಂ.೩೧, ೪ನೇ ಅಡ್ಡರಸ್ತೆ, ನೇತಾಜಿ ರಸ್ತೆ,
ನಾಗಸಂದ್ರ, ತ್ಯಾಗರಾಜನಗರ, ಬೆಂಗಳೂರು- ೫೬೦ ೦೨೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹು ವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದರಲ್ಲೇ ಸಾಹಿತ್ಯ ಪರಿಷತ್ತಿನ ಜೀವಂತಿಕೆಯಿದೆಯೆಂದು ಬಲವಾಗಿ ನಂಬಿ ನಡೆಯುತ್ತಿರುವವನು ನಾನು. ಕನ್ನಡದಲ್ಲಿ ಇತ್ತೀಚೆಗೆ ಬರುತ್ತಿರುವ ವೈವಿಧ್ಯಮಯ ಪುಸ್ತಕಗಳನ್ನು ನೋಡಿದರೆ ಮೊದಲು ಅವುಗಳನ್ನು ಕಣ್ಣಿಗೊತ್ತಿಕೊಂಡು, ಮೃದುವಾಗಿ ಮೈದಡವಿ, ಸ್ವಲ್ಪ ಹತ್ತಿರದಿಂದಲೂ ನಂತರ ದೂರದಿಂದಲೂ ನೋಡಿ ಪುಳಕಗೊಂಡು ಪುಟ ತಿರುವಬೇಕೆನ್ನಿಸುತ್ತದೆ. ಪಂಚೇಂದ್ರಿಯಗಳಲ್ಲಿ ನಾಲಗೆಯೊಂದನ್ನು ಹೊರತುಪಡಿಸಿ ಉಳಿದವುಗಳೆಲ್ಲ ತಣಿಯದ ದಿವ್ಯಸುಖವನ್ನು ಖಂಡಿತ ಅನುಭವಿಸುತ್ತವೆ. ಪುಸ್ತಕಪ್ರೇಮಿಗಳು ಯಾರೂ ಈ ಭವಸುಖನಿಮಜ್ಜನದಿಂದ ಬಿಡಿಸಿಕೊಳ್ಳಲಾರರು.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ, ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರ ವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ, ಕೈಯಿಂದ ಎತ್ತಿ ನೋಡುತ್ತಾರೆ, ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನದ ಸಾಧ್ಯತೆಗಳನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ–ಮಂಥನ, ಪರೀಕ್ಷೆ–ಪ್ರಯೋಗ, ಅವಲೋಕನ–ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ

ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡಲು ಸಾಧ್ಯವಾಗಿದೆ. ಬೆಂಗಳೂರು ಮತ್ತು ಹೊರಗೆ ನಡೆಯುತ್ತಿರುವ ಪುಸ್ತಕ ಮೇಳ-ಪುಸ್ತಕ ಪ್ರದರ್ಶನಗಳಲ್ಲಿ ಜಯಭೇರಿ ಬಾರಿಸಲು ಸಾಧ್ಯವಾಗಿದೆ. ೨೦೦೯ರ ಕನ್ನಡ ರಾಜ್ಯೋತ್ಸವದ ನೆನಪಿಗೆ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ದಾಖಲೆಯ ವಹಿವಾಟು ನಡೆಸಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಸಮ್ಮೇಳನಗಳ ಸಂದರ್ಭದಲ್ಲಿ ಭರವಸೆಯಿಂದ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಿದೆ. ಇದನ್ನೆಲ್ಲ ಸಾಧ್ಯವಾಗಿಸುವುದಕ್ಕೆ ಕಾರಣರಾದ ಕನ್ನಡ ಪುಸ್ತಕಪ್ರೇಮಿಗಳನ್ನು ಅಭಿನಂದಿಸಬೇಕಾಗಿದೆ.

೨೦೧೦ ಫೆಬ್ರವರಿ ೧೯ ರಿಂದ ೨೧ ರವರೆಗೆ ಮೂರು ದಿನಗಳ ಕಾಲ ಗದಗದಲ್ಲಿ ನಡೆಯಲಿರುವ ೭೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ೭೬ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳಲಿರುವ ಈ ಪುಸ್ತಕಗಳ ಆಯ್ಕೆಗೆ ಅವುಗಳ ಗುಣಮಟ್ಟವೇ ಮೂಲ ಬಂಡವಾಳವಾಗಿದೆ. ಪರಿಷತ್ತು ತಮ್ಮ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿ ನಾಡಿನ ಮೂಲೆಮೂಲೆಗಳಿಂದ ಲೇಖಕರು ಪತ್ರ ಬರೆದು ವಿನಂತಿ ಮಾಡಿಕೊಳ್ಳುತ್ತಾರೆ. ಅನೇಕರು ಹಸ್ತಪ್ರತಿಗಳನ್ನೇ ಕಳುಹಿಸಿಕೊಡುತ್ತಾರೆ. ಜಿಲ್ಲಾಧ್ಯಕ್ಷರುಗಳ ಮೂಲಕ ಒತ್ತಾಯ ತರುತ್ತಾರೆ. ಅಂಥ ಮನವಿಗಳು ವರ್ಷವೊಂದರಲ್ಲಿ ಸಾವಿರವನ್ನೂ ಮೀರುತ್ತವೆ. ಹಾಗೆ ಎಲ್ಲ ಪುಸ್ತಕಗಳನ್ನೂ ಮರುಮಾತಿಲ್ಲದೆ ಪ್ರಕಟಿಸುವುದು ಪರಿಷತ್ತಿಗೆ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಪುಸ್ತಕದ ಶಕ್ತಿ-ಯೋಗ್ಯತೆಗಳನ್ನು ಜರಡಿಯಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಪರಿಶೀಲನಾ ಸಮಿತಿಯ ಅಗ್ನಿದಿವ್ಯವನ್ನು ಎದುರಿಸಿಯೇ ಕೃತಿ ಪ್ರಕಟಗೊಳ್ಳಬೇಕಾಗುತ್ತದೆ. ಈ ಬಾರಿಯ ಅಕ್ಷರಜಾತ್ರೆಯನ್ನು ಅರ್ಥಪೂರ್ಣವಾಗಿ ಸಿಂಗರಿಸುವುದಕ್ಕಾಗಿಯೇ ಸಜ್ಜುಗೊಂಡಿರುವ ಈ ಪುಸ್ತಕಗಳು ಪ್ರೀತಿಸುವ ಸಹೃದಯರ ಮಡಿಲನ್ನು ಸೇರಲಿ, ಅವರ ಜ್ಞಾನಭಂಡಾರವನ್ನು ವಿಸ್ತರಿಸಲಿ, ಅವರನ್ನು ರಸಾನಂದದಲ್ಲಿ ಮುಳುಗಿಸಲಿ ಎಂದು ಹಾರೈಸುತ್ತೇನೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಲೇಖಕರ ನುಡಿ

ಶಾಸನಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿಯಬೇಕೆನ್ನುವ ಹಂಬಲದಿಂದ ೧೯೯೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ಶಾಸನಶಾಸ್ತ್ರ ತರಗತಿಗಳಿಗೆ ಸೇರಿ ಪ್ರವೇಶ ಮತ್ತು ಪ್ರೌಢ ತರಗತಿಗಳಲ್ಲಿ ಉತ್ತೀರ್ಣಳಾದೆ. ಇದುವರೆಗೆ ಕವನ ಮತ್ತು ಸ್ತ್ರೀಪರ ವಿಚಾರ ಲೇಖನಗಳನ್ನು ಬರೆಯುತ್ತಿದ್ದ ನನಗೆ ಈ ತರಗತಿಗಳಿಂದ ಸಂಶೋಧನಾ ಲೇಖನ ಬರೆಯುವುದನ್ನು ವಿವರಿಸಿ ಪ್ರಾಯೋಗಿಕವಾಗಿ ಒಂದು ಲೇಖನ 'ಬೆಂಗಳೂರು ಜಿಲ್ಲೆಯ ವೀರಗಲ್ಲು' ವಿಷಯದಲ್ಲಿ ಉಪನ್ಯಾಸಕರು ಬರೆಸಿದ್ದರು.

ಇಲ್ಲಿಂದ ಆರಂಭವಾದ ಶಾಸನ ಸಂಶೋಧನೆ ಬಗೆಗಿನ ನನ್ನ ಆಸಕ್ತಿ ಪ್ರವಾಸಗಳ ಮೂಲಕ ಅಧ್ಯಯನದ ಮೂಲಕ ಹೆಚ್ಚುತ್ತಾ ಹೋಯಿತು. ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನಗಳಲ್ಲಿ ನಾನು ಸಹ ಶಾಸನ ಮತ್ತು ಇತಿಹಾಸಕ್ಕೆ ಸಂಬಂಧಿಸಿದಂತೆ ಪ್ರಬಂಧಗಳನ್ನು ಮಂಡಿಸುತ್ತಾ ಬಂದೆ. ಮುಂದೆ ೧೯೯೮ರಲ್ಲಿ ಹಂಪಿ ಕನ್ನಡ ವಿ.ವಿ. ಶಾಸನಶಾಸ್ತ್ರ ವಿಭಾಗದಲ್ಲಿ 'ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಆರಿಸಿಕೊಂಡು ಆ ಮೂಲಕ ಪಿಎಚ್.ಡಿ. ಪದವಿಯನ್ನು ೨೦೦೨ರಲ್ಲಿ ಪಡೆದೆ. ಈ ಘಟನೆ ನನ್ನ ಸಂಶೋಧನ ಲೇಖನಗಳು ಗಟ್ಟಿಗೊಳ್ಳಲು ಕಾರಣವಾಯಿತು. ಈ ಜ್ಞಾನದ ಸದುಪಯೋಗದಿಂದ ಇತಿಹಾಸ ಅಕಾಡೆಮಿ ಸಮ್ಮೇಳನಗಳಲ್ಲಿ ರಾಜ್ಯ ಪುರಾತತ್ವ ಇಲಾಖೆಯವರು ನಡೆಸುವ ಅನೇಕ ವಿಚಾರಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸುತ್ತಾ ಬಂದೆ. ಈ ಸಂಶೋಧನ ಲೇಖನಗಳನ್ನು ಮಂಡಿಸಲು ಮಾರ್ಗದರ್ಶನ ನೀಡಿದ ಡಾ. ದೇವರ ಕೊಂಡಾರೆಡ್ಡಿ ಮತ್ತು ಡಾ. ಕೆ.ಆರ್. ಗಣೇಶ್ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಹೀಗೆ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸೇರಿಸಿ 'ಶಾಸನಗಳಲ್ಲಿ ದಾನದತ್ತಿಗಳು' ಎಂಬ ಕೃತಿಯ ರೂಪದಲ್ಲಿ ಹೊರತರಲು ಕಾರಣರಾದ '೭೬ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ'ದ ಅಂಗವಾಗಿ ೭೬ ಕೃತಿಗಳನ್ನು ಪ್ರಕಟಿಸುವ ಯೋಜನೆ ಅಡಿಯಲ್ಲಿ ಆಯ್ಕೆಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಆರ್.ಕೆ.ನಲ್ಲೂರುಪ್ರಸಾದ್, ಕಾರ್ಯದರ್ಶಿಗಳಾದ ಶ್ರೀ ಎಚ್.ಕೆ. ಮಳಲಿಗೌಡರು ಮತ್ತು ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಈ ಪುಸ್ತಕ ಪ್ರಕಟಣೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸಿಬ್ಬಂದಿ ವರ್ಗಕ್ಕೆ ನನ್ನ ಕೃತಜ್ಞತೆಗಳು.

ಡಾ. ಎಚ್.ಜಯಮ್ಮ ಕರಿಯಣ್ಣ

ಪರಿವಿಡಿ

೧.	ತುಮಕೂರು ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು	೧
೨.	ಚಿಕ್ಕಮಗಳೂರು ಪ್ರದೇಶದ ಶಾಸನಗಳಲ್ಲಿ ವೀರಶೈವರು	೧೭
೩.	ಬೆಳಗಾವಿ ಜಿಲ್ಲೆ ಐತಿಹಾಸಿಕ ಉತ್ಸವಗಳು	೩೨
೪.	ಶಿಂದಿ ಹಟ್ಟಿಯ ಅಪರೂಪದ ವಿಷ್ಣು ಶಿಲ್ಪ	೪೦
೫.	ಎಳತ್ತೂರಿನ ಅವಶೇಷಗಳು	೪೨
೬.	ಕರ್ನಾಟಕದ ಪ್ರಾಚೀನ ಮೈಲಾರ ದೇವಾಲಯಗಳು	೪೫
೭.	ಹಲಸಬಾಳು ಫಲಹಾರ ಮಠದ ೪ ತಾಮ್ರಶಾಸನಗಳು	೫೨
೮.	ನೊಳಂಬ ದೇವಾಲಯಗಳು ಮತ್ತು ಶಾಸನೋಕ್ತ ದಾನದತ್ತಿಗಳು	೫೭
೯.	ಚಿತ್ರದುರ್ಗ ಜಿಲ್ಲೆ ಮತ್ತು ನೊಳಂಬ ಪಲ್ಲವರು	೬೩
೧೦.	ನೊಳಂಬರ ಕಾಲದ ನೀರಾವರಿ ವ್ಯವಸ್ಥೆ	೬೮
೧೧.	ಮೈಸೂರು ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು	೭೪
೧೨.	ವಿಪ್ರಗ್ರಾಮದ ಅವಶೇಷಗಳು	೧೦೧
೧೩.	ಚಿಕ್ಕಮಗಳೂರು ಜಿಲ್ಲೆಯ ಕೆಲವು ಅಪರೂಪದ ವೀರಗಲ್ಲು-ಶಿಲ್ಪಗಳು	೧೦೫
೧೪.	ನೊಳಂಬ ಅರಸಿ ದೀವಬ್ಬರಸಿಯ ರಚನಾತ್ಮಕ ಕಾರ್ಯಗಳು	೧೧೦

ತುಮಕೂರು ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು

ವಿಶೇಷವಾಗಿ ಬ್ರಾಹ್ಮಣರ ಜೀವನಾಧಾರಕ್ಕಾಗಿ ಬಿಟ್ಟುಕೊಡುತ್ತಿದ ಗ್ರಾಮಗಳನ್ನು ಅಗ್ರಹಾರಗಳೆಂದು ಕರೆಯುತ್ತಿದ್ದರು. ಇವುಗಳನ್ನು ಅಗ್ರಹಾರ ಚತುರ್ವೇದಿಮಂಗಲ, ಶ್ರೋತ್ರೀಯ ಗ್ರಾಮಗಳೆಂದು, ಪುರವರ್ಗಗಳೆಂದು ಶಾಸನಗಳಲ್ಲಿ ಕರೆಯಲಾಗಿದೆ.

ವೇದಾಂಗ ಪಾರಂಗತರಾದ ಷಟ್ಕರ್ಮನಿರತರಾದ ಬ್ರಾಹ್ಮಣರಿಗೆ ಅರಸರು ಭೂಮಿಯನ್ನು ಬ್ರಹ್ಮದೇಯವಾಗಿ ದಾನಕೊಡುವ ಪದ್ಧತಿ ಕರ್ನಾಟಕವೂ ಸೇರಿದಂತೆ ಭಾರತದ ಇತರ ಕಡೆಗಳಲ್ಲಿ ಹಿಂದಿನಿಂದಲೂ ವಾಡಿಕೆಯಲ್ಲಿತ್ತೆಂದು ತಿಳಿದು ಬರುತ್ತದೆ. ನಾನಾ ಗೋತ್ರಗಳಿಗೆ ಸೇರಿದ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣರಿಗೆ ಮತ್ತು ಅವರು ಗೃಹಸ್ಥಾಶ್ರಮದ ನೀತಿ ನಿಯಮಗಳನ್ನು, ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಸ್ಮೃತಿ ಸಮ್ಮತವಾದ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಲೆಂದು ಒಂದು ಗ್ರಾಮವನ್ನು ಅಥವಾ ಮನೆಯ ನಿವೇಶನಗಳನ್ನು ವೃತ್ತಿಯಾಗಿ ವಿಂಗಡಿಸಿ ಸಾಮೂಹಿಕವಾಗಿ ದಾನಕೊಟ್ಟಾಗ ಅಗ್ರಹಾರವೊಂದರ ಸೃಷ್ಟಿಯಾದಂತೆ. ಕೆಲವು ಶಾಸನಗಳು ಈ ಪಾರಿಭಾಷಿಕ ಪದವನ್ನು 'ಅಗ್ರಹಾರ' ಎಂದು ಉಲ್ಲೇಖಿಸಲಾಗಿದೆ. ಅಗ್ರಹಾರದ ಮೂಲರೂಪ ಅಗ್ರಾಹಾರ (ಅಗ್ರ + ಆಹಾರ) ಎಂದೇ ಇದ್ದಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕದಲ್ಲಿ ಗೌತಮಗೋತ್ರದ ಶುಕ್ಲ ಯಜುರ್ವೇದದಲ್ಲಿ ಪಾರಂಗತನಾದ ಬದಿರಕುಲದ ಮಹಿಷ ವಿಷಯದ ಪೆರ್ಬಟ ಗ್ರಾಮವನ್ನು 'ಬ್ರಹ್ಮದೇಯನ್ಯಾಯ'ದ ರೀತ್ಯ ಅಗ್ರಹಾರವನ್ನಾಗಿ ಕೊಡಲಾಯಿತೆಂದು ಕ್ರಿ.ಶ.೫ನೇ ಶತಮಾನದ ಉತ್ತರಾರ್ಧದೆನ್ನಬಹುದಾದ ಕದಂಬ ಕೃಷ್ಣವರ್ಮನ ಹೆಬ್ಬಟ ತಾಮ್ರಶಾಸನ ಹೇಳುತ್ತದೆ. ೧೦-೧೧ನೆಯ ಶತಮಾನಗಳ ಶಾಸನಗಳಿಂದ ತಿಳಿದುಬರುವಂತೆ ಸ್ಥಾನಕುಂದೂರು (ಇಂದಿನ ತಾಳಗುಂದ) ನಿಷ್ಠಾವಂತ ವೈದಿಕ ಬ್ರಾಹ್ಮಣರ ವಾಸಸ್ಥಾನವಾಗಿತ್ತು. ವಾತಾಪಿ (ಬಾದಾಮಿ) ೨೦೦ ಸದಸ್ಯರನ್ನೊಳಗೊಂಡ ಮಹಾಚಾತುರ್ವಿದ್ಯಾ ಸಮುದಾಯದ (ವೈದಿಕ ಬ್ರಾಹ್ಮಣ ಸಂಘ) ನೇರ ಆಡಳಿತಕ್ಕೆ ಒಳಪಟ್ಟಿದ್ದು 'ಚತುರ್ದಶ ವಿದ್ಯಾಸ್ಥಾನ' ಎಂದು ಹೆಸರಾಗಿತ್ತು. ಅದರಂತೆ ಆರ್ಯಪುರವೆಂದು ಕರೆಯುತ್ತಿದ್ದ ಇಂದಿನ ಐಹೊಳೆ ೫೦೦ ಸದಸ್ಯರನ್ನೊಳಗೊಡ 'ಮಹಾಚಾತುರ್ವಿದ್ಯ ಸಮುದಾಯ'ದ ಆಡಳಿತಕ್ಕೆ

ಸೇರಿತ್ತು. ಇವು ಅಗ್ರಹಾರಗಳೆಂದು ಶಾಸನಗಳು ಸ್ಪಷ್ಟವಾಗಿ ಹೇಳಿಲ್ಲವಾದರೂ ಈ ಮೂರು ಪ್ರಸಿದ್ಧ ಕೇಂದ್ರಗಳೂ ಅಗ್ರಹಾರಗಳೇ ಆಗಿರಬೇಕು. ಕಾಲ ಕಳೆದಂತೆ ಇಂತಹ ಪ್ರಾಚೀನ ಅಗ್ರಹಾರಗಳ ನಿಜವಾದ ಇತಿಹಾಸ ಅಳಿಸಿಹೋಗಿ, ಮಧ್ಯಯುಗದ ಶಾಸನಗಳಲ್ಲಿ ಇವನ್ನು 'ಅನಾದಿ ಅಗ್ರಹಾರ' 'ಜನಮೇಜಯ ದತ್ತಿಯ ಮಹಾಗ್ರಹಾರ' 'ಶ್ರೀರಾಮದತ್ತಿ ಮಹಾಗ್ರಹಾರ' ಎಂದು ಕರೆಯಲಾಗಿದೆ.

ಕರ್ನಾಟಕದ ಇತಿಹಾಸದ ಮಧ್ಯಯುಗದಲ್ಲಿ ಆನೇಕ ಅಗ್ರಹಾರಗಳು ಅಸ್ತಿತ್ವಕ್ಕೆ ಬಂದುವು. ಆ ಕಾಲದ ಹಲವು ಶಾಸನಗಳು ಅಗ್ರಹಾರಗಳನ್ನು ದೀರ್ಘವರ್ಣನೆ ಮಾಡಿವೆ. ಶಿವಮೊಗ್ಗ ಜಿಲ್ಲೆ 'ಸರ್ವನಮಸ್ಯದನಾದಿ ಅಗ್ರಹಾರ' ಕುಪ್ಪಟೂರನ್ನು ಶಾಸನ 'ವಿಪ್ರಸುರ ಚಿತ್ರನಿಕೇತನ ಮಾಳೆಯಿಂದ ಕಣ್ಗೊಳಿಪುದು ಕುಪ್ಪಟೂರ್ ಸರಳವಿದ್ಯೆಗೆ ತಾನೆನೆ ಜನ್ಮ ಭೂತಳಂ' ಎಂದು ಪ್ರಶಂಸಿಸಲಾಗಿದೆ.

ಅಗ್ರಹಾರವೆಂಬುದು ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿಟ್ಟ ಗ್ರಾಮವನ್ನು ತಿಳಿಸಿದರೆ, ಬ್ರಹ್ಮಪುರಿ ಎಂಬುದು ನಗರ, ಪಟ್ಟಣಗಳಲ್ಲಿ ಬ್ರಾಹ್ಮಣರ ವಾಸಕ್ಕಾಗಿ ಮೀಸಲಿರಿಸಿದ್ದ ಕೇರಿಗಳನ್ನು ಸೂಚಿಸುತ್ತದೆ. ಅಲ್ಲದೆ ಶೈವಧರ್ಮಾವಲಂಬಿಗಳ ಅದರಲ್ಲೂ ಮುಖ್ಯವಾಗಿ ವೀರಶೈವರ ವಾಸಕ್ಕೆಂದು ಸೃಷ್ಟಿಸಲಾದ ಆಗ್ರಹಾರಗಳನ್ನು 'ಶಿವಪುರಗಳೆಂದು' 'ಪುರವರ್ಗ'ಗಳೆಂದು ಶಾಸನಗಳಲ್ಲಿ ಹೆಸರಿಸಲಾಗಿದೆ.

ಅಗ್ರಹಾರಗಳಲ್ಲಿ ಬ್ರಾಹ್ಮಣೇತರರೂ ಅದರಲ್ಲೂ ಮುಖ್ಯವಾಗಿ ಪರಂಪರಾಗತ ಕಸುಬುದಾರರೂ ತಮ್ಮ ತಮ್ಮ ಕೇರಿಗಳಲ್ಲಿ ವಾಸ ಮಾಡುತ್ತಿದ್ದರು. ಆದರೆ ಆ ಗ್ರಾಮಗಳ ಮೇಲಿನ ಅಧಿಕಾರ ಬ್ರಾಹ್ಮಣರದ್ದೆ ಆಗಿತ್ತು. ಅಗ್ರಹಾರದ ಆಡಳಿತ ಸೂತ್ರ ಅಲ್ಲಿಯ ಬ್ರಾಹ್ಮಣ ಗೃಹಪತಿಗಳನ್ನೊಳಗೊಂಡ ಮಹಾಜನರ ಕೈಲಿತ್ತು. ಕರ್ನಾಟಕದ ಅಗ್ರಹಾರಗಳಲ್ಲಿನ ಮಹಾಜನರ ವರ್ಣನೆಗಳು ಅನೇಕ ಶಾಸನಗಳಲ್ಲಿ ಕಾಣಸಿಗುತ್ತವೆ. ಮಹಾಜನರು ಮಾಡಬೇಕಾಗಿದ್ದ ಷಟ್ಕರ್ಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳೂ ಮುಖ್ಯವಾಗಿದ್ದುದರಿಂದ ಆಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾಕೇಂದ್ರಗಳನ್ನೇ ಸ್ಥಾಪಿಸಿದಂತಾಗಿ ವಿದ್ಯಾಪ್ರಸಾರ ಕಾರ್ಯ ಸತತವಾಗಿ ಹಾಗೂ ಸುಗಮವಾಗಿ ನಡೆಯುತ್ತಿತ್ತು. ಈ ಮಹಾಜನರು ಒಂದು ದೇವಸ್ಥಾನದಲ್ಲಿ ಅಥವಾ ಮಂಟಪದಲ್ಲಿ ಸಭೆ ಸೇರಿ ಗ್ರಾಮಾಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಿದ್ದರು. ಸಾಮಾನ್ಯವಾಗಿ ಎಲ್ಲಾ ಮುಖ್ಯ ಗ್ರಾಮ ಕಾರ್ಯಕ್ರಮಗಳು ನಡೆಯುತ್ತಿದ್ದುದು ಮಹಾಜನರ ಸನ್ನಿಧಿಯಲ್ಲೇ. ಕೆರೆ ಕಾಲುವೆಗಳ ನಿರ್ಮಾಣ ಮಾಡುವುದರ ಮೂಲಕ ವ್ಯವಸಾಯ ಅಭಿವೃದ್ಧಿಗೊಳಿಸುವುದು, ಮಠ ದೇವಸ್ಥಾನಗಳ ಆಡಳಿತವನ್ನು ನಿರ್ವಹಿಸುವುದು, ದಾನಿಗಳು ನೀಡುವ ಹಣ ಅಥವಾ ಭೂಮಿಯನ್ನು ರಕ್ಷಿಸಿ ಧರ್ಮಕಾರ್ಯಗಳಿಗೆ ವಿನಿಯೋಗಿಸುವುದು ಅಗ್ರಹಾರದ ಮಹಾಜನಗಳ ಕರ್ತವ್ಯವಾಗಿದ್ದಿತು.

ಊರಿನಲ್ಲಿ ವಿವಾದ ತಲೆದೋರಿದಾಗ ಅದು ಮಹಾಜನರ ಸಮಕ್ಷಮದಲ್ಲಿ ಇತ್ಯರ್ಥವಾಗುತ್ತಿತ್ತು. ಅಗ್ರಹಾರಗಳು ಉನ್ನತ ವಿದ್ಯಾಕೇಂದ್ರಗಳು ಮಾತ್ರವಲ್ಲದೆ ಸ್ವಯಂ ಆಡಳಿತ ಪದ್ಧತಿಯ ಮಾದರಿಗಳೂ ಅಗಿದ್ದವು. ಪ್ರಾಚೀನ ಸಂಪ್ರದಾಯ ಮತ್ತು ವಿದ್ವತ್ ಧಾರೆ ಅವಿಚ್ಛಿನ್ನವಾಗಿ ಹರಿದು ಬರಲು ಈ ಅಗ್ರಹಾರಗಳು ಬಹು ಸಹಾಯಕವಾಗಿದ್ದವು.

ಈ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ.೧೧೫೦ಕ್ಕಿಂತ ಹಿಂದೆ ಅಸ್ತಿತ್ವದಲ್ಲಿದ್ದಿರ ಬಹುದಾದ ಅಗ್ರಹಾರಗಳ ಉಲ್ಲೇಖ ಸಿಗುತ್ತಿಲ್ಲ. ಹೀಗಾಗಿ ಪ್ರಾಚೀನವಾದ ಅಗ್ರಹಾರಗಳು ಈ

ಜಿಲ್ಲೆಯಲ್ಲಿ ಎಲ್ಲಿದ್ದವು ಹೇಗಿದ್ದವು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ. ಆದರೆ ಈ ಜಿಲ್ಲೆಯಲ್ಲಿ ಕೆಲವು ಪ್ರಮುಖ ಶಾಸನಗಳು ಅಗ್ರಹಾರಗಳನ್ನು ರಚಿಸಿ ವ್ರಿತ್ತಿಗಳನ್ನಾಗಿ ವಿಂಗಡಿಸುತ್ತಿದ್ದ ಕ್ರಮ, ಮತ್ತು ಆ ವ್ರಿತ್ತಿಗಳನ್ನು ಅನುಭವಿಸುವ ವ್ಯಕ್ತಿಗಳು ಅನುಸರಿಸಬೇಕಾದ ರೀತಿ-ನೀತಿಗಳ ಬಗ್ಗೆ ತುರುವೇಕೆರೆ ಶಾಸನ ಸಂಖ್ಯೆ-೨ ಸ್ಪಷ್ಟವಾಗಿ ತಿಳಿಸುತ್ತದೆ. ಹಾಗೇ ದೇವರ ಪೂಜೆಗೆ ಬೇಕಾಗುವ ವಸ್ತುಗಳನ್ನು ತರುವವರಿಗೆ ನೈವೇದ್ಯ ಅಥವಾ ಪ್ರಸಾದ ತಯಾರಿಸಲು ಬೇಕಾಗುವ ಪ್ರತಿ ವಸ್ತುಗಳನ್ನು ಹೇಳುತ್ತಾ ಅಂತಹ ವ್ಯಕ್ತಿಗಳಿಗೆ ಕೊಡುವ ಗದ್ಯಾಣ, ಪಣ, ಇತ್ಯಾದಿ ವಿವರಗಳನ್ನು ನೀಡುವ ಚಿಕ್ಕನಾಯಕನಹಳ್ಳಿ ಶಾಸನ ಸಂಖ್ಯೆ-೩ ಸಾಕಷ್ಟು ಸಂಕ್ಷಿಪ್ತವಾಗಿ ಸಂಗ್ರಹವಾಗಿ ಪ್ರಸ್ತಾಪಿಸಲಾಗಿದೆ. ಇಲ್ಲಿ ಅಗ್ರಹಾರಗಳ ಬಗ್ಗೆ ಪ್ರಸ್ತಾಪಿಸುತ್ತಿರುವುದರ ಜೊತೆಯಲ್ಲಿ ಬ್ರಾಹ್ಮಣೇತರರಿಗೆ ನೀಡುತ್ತಿದ್ದ ಪುರವರ್ಗ, ಕೊಡುಗೆ ಮತ್ತು ಉಂಬಳಿಯ ಬಗ್ಗೆ ಕೆಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಕಾಲಾನುಕ್ರಮದಲ್ಲಿ ಪ್ರಸ್ತಾಪಿಸುವ ಅಗ್ರಹಾರಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ತಿಪಟೂರು ತಾಲೂಕಿನ ತುರುವೇಕೆರೆ ಚೆನ್ನಿಗರಾಮ ದೇವಸ್ಥಾನದ ಮಂಟಪದ ತೊಲೆ ಕಲ್ಲಿನಲ್ಲಿರುವ ಶಾಸನವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ದಾನಮಾಡಿದಾಗ, ಆ ಗ್ರಾಮಗಳ ನಿರ್ವಹಣೆಯನ್ನು ಮಹಾಜನರು ಸೂಕ್ತರೀತಿಯಲ್ಲಿ ನೀತಿ ನಿಯಮಗಳನ್ನು ರೂಪಿಸಿ ಅವುಗಳ ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ. ಇದೊಂದು ಪ್ರಮುಖ ಶಾಸನವೆಂದು ಗುರುತಿಸಿ ವಿದ್ವಾಂಸರ ಗಮನ ಸೆಳೆಯುವ ಸಲುವಾಗಿ ಇದನ್ನು ಪ್ರಾರಂಭದಲ್ಲಿಯೇ ಪ್ರಸ್ತಾಪಿಸಲಾಗಿದೆ.

ಕ್ರಿ.ಶ.೧೨೨೩ ರಲ್ಲಿ ಹೊಯ್ಸಳ ವೀರ ನರಸಿಂಹನ ಆಳ್ವಿಕೆಯಲ್ಲಿ ಅವನ ಮಹಾಪ್ರಧಾನಿ ಸಂಧಿ ವಿಗ್ರಹಿ ಸೋಮಣ್ಣ ದಂಡನಾಯಕ ತುರುವೇಕೆರೆಯನ್ನು ೫ ವ್ರಿತ್ತಿಯ ಅಗ್ರಹಾರವನ್ನಾಗಿ ಮಾಡಿ ಶ್ರೀ ವೇದರಾದ್ಯ ಕೋಟಿ ಶಂಕರದೇವರ ಮುಂದಿಟ್ಟು ದ್ರುವ ವುಂಡಿಗೆಯಾಗಿ ಮಾಡಿಕೊಟ್ಟ ಕ್ರಮವನ್ನು ವಿವರಿಸಲಾಗಿರುವ ಶಾಸನದ ಪಾಠವನ್ನು ಮಾಹಿತಿಗಾಗಿ ಮುಂದೆ ಕೊಡಲಾಗಿದೆ. ''ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತ್ಸರ್ವನಮಸ್ಸದ ಪಿರಿಯಗ್ರಹಾರಂ ಸರ್ವಜ್ಞ ಶ್ರೀವಿಜಯ ನಾರಸಿಂಹಪುರವಾದ ತುರುವೇಕೆರೆಯ ಶ್ರೀಮದಶೇಷಮಹಾಜನಂಗಳು ತಮ್ಮೊಳು ಸರ್ವಯ್ಕಮತ್ಯವಾಗಿ ಕಂಟೆಣುಪಾಧ್ಯಯರ ವಿಠಣ್ಣಂಗಳ ಮಾಸವೆರ್ಗ್ಗಡೆ ತನದಲ್ಲಿ ಆ ತುರುವೇಕೆರೆಯ ಸಮಸ್ತ ಹಳ್ಳಿಗಳ ಗದ್ದೆ ಬೆದ್ದಲುಗಳು, ಕಟ್ಟೆ ಕಿರುಕಟ್ಟೆಂಗಳ ಆಹ ಆಗಾಮಿಗಳು ಸಹಿತ ಅನುಭವದಿಂದವು ಗದ್ದೆ ಬೆದ್ದಲುಗಳ ಶಂಕೆಯಿಂದವುಂ ವರ್ಣದಿಂದವು, ಆರು ಪ್ರಜೆಗಳಿಂದವು, ಹೊನ್ನಿಂದವುಂ, ಸರ್ವ್ವವುಂ ಸಮವಾಗಿಯೆಂಟು ತತ್ತ ಮಾಡಿ ಧೃವವುಂಡಿಗೆಯ ನಿಕ್ಕಿ ಕೊಂಬಲ್ಲಿ ಮಾಡಿದ ಸಮಯ ಪತ್ರದ ಕ್ರಮವೆಂತೆಂದಡೆ, ತತ್ತೊಂದಕ್ಕೆ ವೃತ್ತಿ ಹನ್ನೆರಡರ ಮರಿಯಾದೆಯಲ್ಲಿ ಕಲ್ಲಕರೆ, ಗೊಟ್ಟಿಯ ಕೆರೆ ಉಂತತ್ತೊಂದು, ಕೋಳಾಲ ತಾವರೆಯ ಕೆರೆ, ಕಾಳಜ್ಜೆ ಮಾಡೆಯನ ಹಳ್ಳಿ ಉಂತತ್ತೊಂದು, ಚಿಕ್ಕ ತುರುವೆಯ ಕೆರೆ, ಬೇವಿನಕೆರೆ. ಂತಿದಿಕೆಯ ಹಳ್ಳಿ, ಗಂಗಣ್ಣನ ಹಳ್ಳಿಯಲಿ ಗದ್ದೆ ಬೆದ್ದಲೆನಲು ಅರ್ದ್ಧಯಿಂ ತುತತ್ತೊಂದು ಅಯ್ಯರಸಿನ ಹಳ್ಳಿ, ಮುನಿವೂರು, ಚವುಡೆನಾಯ್ಕನಹಳ್ಳಿ, ಸೋಮಗೌಡನ ಹಳ್ಳಿ, ಉಂತತ್ತೊಂದು, ದೋರನಹಳ್ಳಿ, ಕಳ್ಳನಕೆರೆ, ಬೂವನಹಳ್ಳಿ, ಹಳೆಯದೊಡ್ಡೆಯನ ಹಳ್ಳಿ, ಉಂತತ್ತೊಂದು, ಮಲ್ಲನಗಟ್ಟೆ, ಮಾದಿಯ ಹಳ್ಳಿ, ಕರಡಿಯಕೆರೆವುಂತತ್ತಂದು, ದೊಡ್ಡಗಟ್ಟ ಎಲ್ಲವದ ಹಳ್ಳಿ, ಸೆಟ್ಟಿಯಹಳ್ಳಿ, ಗಂಗಣ್ಣನ ಹಳ್ಳಿಯಲ್ಲಿ ಗದ್ದೆಬೆದ್ದಲಲಿ ಅರ್ಥ ಅತತ್ತೊಂದು! ಅರಯಳಿಕೆರೆ ಅದಿನ ಹಳ್ಳಿಯ ಬೆದ್ದಲು ಮಾರಗೌಡನ ಹಳ್ಳಿ,

ಮಾವಿನ ಹಳ್ಳಿಯಿಂತು ಹನ್ನೊಂದು ವೃತ್ತಿಯತತ್ತೊಂದು! ಅನ್ತು ಎರಡು ತತ್ತಿನೊಳಗೆ ವುಂಡಿಗೆ ಇಂದ ಹಳ್ಳಿಗೆ ಅವತ್ತತ್ತು ಬಂದಡಂ ಬಂಧ ಮರಿಯಾಲೆ ಧೃವವುಂಡಿಗೆಯಾಗಿ ಇಹರು! ತಮ್ಮ ತಮ್ಮ ತತ್ತಿನ್ನಲ್ಲಿಯ ಕಿರುಕಟ್ಟಂಗಳುಂ ಗೊಡೆಯ ಗದ್ದೆಗಳಂ ಕೊಡಗಿ ಬಂಟುಮಣ್ಣ ಹೆಚ್ಚು ಕುಂದುಗಳುಂ, ಅಲ್ಲಿಯ ಆಗಾಮಿ ಕ್ಷೇತ್ರಂಗಳುಂ ವೊಕ್ಕಲುಗಳ ಆದ ದಂಡದೋಷಗಳುಂ. ತಮ್ಮ ತಮ್ಮದು, ಹಳ್ಳದ ಬಳಿಗೆದಲು ತಮ್ಮ ತಮ್ಮ ಭೂಮಿಗಳ ವೊಳಗೆ ಅಹಂತ ಗದ್ದೆಗಳು ಹೊಸತಾಗಿ ಕಟ್ಟುವಂತಹ ಕಟ್ಟೆಗಳನುಂತವ ತವಗೆ ಆಗು ಮಾಡಿಕೊಂಬರು, ಹೊಸದಾಗಿ ಕಟ್ಟೆ ಕಿರುಕಟ್ಟೆಂಗಳ ಕಟ್ಟುವಲ್ಲಿ ಮತ್ತೊಬ್ಬರ ತತ್ತಿನ ಕ್ಷೇತ್ರಕ್ಕೆ ಹಾನಿಯಾಗದ ಹಾಗೆ ವೊಡಂಬಡಿಸಿ ಕಟ್ಟುವರು ಹಳೆಯ ಕೆರೆಗಳಿಗೆ ಮೇಲಂಕಣವನು ಇಕ್ಕಿಸುವಡೆ ನಿರುವೊತ್ತಿ ಹಿದೆಂದು ಬೇಡೆನ್ನಲಾಗದು, ಅಯ್ಯರಸನ ಹಳ್ಳಿಯ ಕೆರೆಗೆ ಮೇಲಂಕಣವನಿಕ್ಕಿದೊಡೆ ಆ ನೀರೊತ್ತಿ ಅರಳಿಯ ಕೆರೆಯ ಗದೆಯೆ ಇಷ್ಟು ಹೋದಯಿಷ್ಟನುಂ ಪ್ರತಿಕ್ಷೇತ್ರವನು ಅಡನ ಹಳ್ಳಿಯಲು ಪ್ರಥಮ ಸ್ಥಳದ ತೋಟಂಗಳ ತರುವಾಯ ತುದಿ ಬಯಲಲು ಮಹಾಜನಂಗಳು ಇಕ್ಕುವರು. ರಾಜಗಟ್ಟಿಯ ಕಟ್ಟಿಸಿ ಎರಡು ಕೋಡಿಯಲು ನೀರು ಹರಿದು ಗದ್ದೆಯ ರಾಜಗಟ್ಟುವ ಕಟ್ಟಿಸಿ ನೀರು ಹರಿದ ಪಕ್ಷ ಕೆಂಚನ ಕಟ್ಟೆಯ ಪ್ರಾಪ್ತಕ್ಕೆ ೫೦ ಸಲಗೆ ಗದ್ದೆಯನ್ನು ಕೊಂಡು ಮಿಗಿಲಾದುದನು ಮಹಾಜನಂಗಳಿಗೆ ಬಿಡುವರು, ತಾವು ಕೆಂಚನ ಕಟ್ಟೆಯ ಕಟ್ಟಿಸದೆ ರಾಜಗಟ್ಟಿಯ ಕೋಡಿಯ ನೀರ ಹರಿಸಿಕೊಂಡಡೆ ಖಂಡುಗಕ್ಕೆವೊಂದು ಹೊನ್ನ ಮರಿಯಾದೆಯಲು ಗದ್ಯಾಣಂ. ೫೦ ಹೊನ್ನನ್ನು ಆ ತತ್ತಿನವರು ಹಿರಿಯ ಮಹಾಜನಂಗಳಿಗೆ ಕೊಟ್ಟು ಅನುಭವಿಸುವರು. ಪೂರ್ವದಲು ವುಳ್ಳ ಭಂಡೀದಾರಿ ವೋಣಿಗಳಲ್ಲಿ ಯೆಂಮ ಭೂಮಿ ತಂದು ಭೂಮಿಯೆಂದು ನಡೆಯಲಿಯೆವೆಂದೆನಲಾಗದು ಕೆತ್ತಕುರುವ ಮಾಡಿದ ಹೊಲ ತಪ್ಪಿಸಿ ಆರ ಹಳ್ಳಿಗಳ ಜೀವದನವನು ಯಾಲಯಾಡಿಸುವಡಂ ಬೇಡೆಂದೆನಲಾಗದು. ಸೋಮನಾಥ ಸಮುದ್ರದ ಎರಡು ಕೋಡಿಗಳ ಕಾಲುವೆಯ ಪಂಡಿದ ನೀರು ಹರಿವ ಠಾವಿಸಲು ಮುನ್ನ ಕೋಡಿಯ ಬಿಟ್ಟದಲ್ಲದೆ ಮಿಗಿಲಾಗಿ ತತ್ತಿನವರ ಬೆದ್ದಲು ಹಾನಿಯಾದಡೆ ಪ್ರಥಮ ಸ್ಥಳದ ಬೆದ್ದಲಲಿ ಮಹಾಜನಂಗಳು ಪ್ರತಿಕ್ಷೇತ್ರವನಿಕ್ಕುವರು. ಆವ ಹೊಲದಲು ಹಳಿವ ಕಡಿದುತ್ತಹದಂ ಬೇಡೆಂದೆನಲಾಗದು. ತಮ್ಮ ತಮ್ಮ ಕ್ಷೇತ್ರಂಗಳೊಳಗಣ ಮಾವು ಹುಣಸೆಗಳುಂ ತಮ್ಮ ತಮ್ಮವು. ತಮ್ಮ ತತ್ತಿನ ಹಳ್ಳಿಗಳವೊಳಗೆ ವೊಂದು ಹಳ್ಳಿಯ ವೊಕ್ಕಲು ವೊಂದು ಹಳ್ಳಿಗೆ ಬಂದಡಂ ಸಂತವಿಡಲಾಗದು. ಪ್ರಜೆಗಳಿಗೆ ಆವ ತೊಡಕು ಬಂದಡಂ ಮಹಾಜನಂಗಳು ನ್ಯಾಯಗಾಣ್ಸಿ ಕೊಡುವರು. ಪ್ರತಿಗ್ರಿಹಸ್ಥರು ಮಾಳಿಗೆಯ ಮಾಡಿಸಲು ಗುಂಡೋತ್ತರಕ್ಕೆ ಕಲ್ಲ ಹೊಡ್ಸಿವಡಂ ಬಾವಿ ಬಚ್ಚಲುಗಳ ಕಟ್ಟಿಸಲು ಕಟ್ಟೆ ಕೆರೆಗಳಿಗೆ ಕಲ್ಲ ಹೊಡ್ಸಿವಡಂ ಎಂದು ತತ್ತಿನ ಹೊಲದೊಳಗಣ ಕಲ್ಲ ಹೊಡಲೀಯೆವೆಂದೆನಲಾಗದು. ಸೋಮನಾಥ ಸಮುದ್ರದ ಕೆಳಗಣ ತೋಟದ ಸ್ಥಳಗಳ ಪ್ರಥಮ ದ್ವಿತೀಯಂಗಳುಂ ಇತ್ಸಾವಿತ್ರಿಯ ತೋಟಂಗಳು. ಸುದ್ವಿತೀಯಂಗಳಂ. ತಮ್ಮ ತಮ್ಮ ತಲೆಕಂಡಿನ ಭೂಮಿಗಳುಂತವ ತೆವಗೆ ಎಂದೆದಿಂಗಂ ಧ್ರುವ ವುಂಡಿಗೆ ಕಲೆ ಕಂಡಿನ ಭೂಮಿ ಸಂಖ್ಯೆಯ ಆಕಾರತೆಯಾದವರಿಗೆ ಮಹಾಜನಂಗಳು ಮಧ್ಯ ಕದಗದ್ದೆಯೊಳಗೆ ಕೋಡಿತೆಯ ಗದ್ದೆಯ ನಿಕ್ಕುವರು''! ಎಂದು ಹೇಳಿದ ನಂತರ 'ಆ ಸಂವತ್ಸರದ ಕಾರ್ತೀಕದಂದು ಭದ್ರಯ್ಯ ವಾಸುದೇವ ಕ್ರಮಿತರ ಮಾಸ ವೆಗ್ಗಡೆ ತನದಲ್ಲಿ ಮಹಾಜನರು ಸೋವಣ್ಣ ದಂಡನಾಯರುಂದಾಸೆಯ ನಮಗ ಸೋವಣ್ಣಂಗೆ ತೋಟಸ್ಥಳವಾಗಿ ೫೩ ಕಂಬ ಗದ್ದೆಯನ್ನು ೨೦೦ ಕಂಬ ಬೆದ್ದಲು, ಹನ್ನೆರಡು ಕೈ ಮನೆಯ ನಿವೇಶವನ್ನು ಶ್ವರುಚಿಯಿಂದ

ಧಾರೆಯನೆರದು' ಕೊಟ್ಟದನ್ನು ಉಲ್ಲೇಖಿಸಿದೆ. ಇಲ್ಲಿ ಶಾಸನಪಾಠವನ್ನು ಯತಾವತ್ತಾಗಿ ದಾಖಲಿಸಿದೆ. ಈ ಸುದೀರ್ಘ ಶಾಸನದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಕ್ರಿ.ಶ.೧೩ನೇ ಶತಮಾನದಲ್ಲಿ ದಾಖಲಿಸಿರುವುದನ್ನು ಗಮನಿಸಬಹುದಾಗಿದೆ (ತುರುವೇಕೆರೆ. ಶಾ.ಸಂ. ೨).

ಕೊತ್ತಗೆರೆಯ ಕ್ರಿ.ಶ.೧೧೫೮ರ ಶಾಸನ ಹೊಯ್ಸಳ ವಿಷ್ಣುವರ್ಧನನು ಶ್ರೀಧರಪುರದ ಮಹಾಜನರಿಗೆ ಕೊತ್ತಂಗೆರೆಯನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಕೊಟ್ಟನು. ಆ ಕೊತ್ತಂಗೆರೆ ಅಗ್ರಹಾರದ ವರ್ಣನೆಯನ್ನು ಶಾಸನದಲ್ಲಿ ಸವಿಸ್ತಾರವಾಗಿ ಮಾಡಲಾಗಿದೆ. ಅಲ್ಲಿಯ ಮಹಾಜನರು ವಿದ್ಯಾವಿನಯ ಸಂಪನ್ನರು, ವೇದ ಶಾಸ್ತ್ರ ಪ್ರವೀಣರು, ಸತ್ಯವಂತರು. ಶಿಷ್ಟ ಜನರ ಸಂಕಷ್ಟಗಳನ್ನು ಪರಿಹರಿಸುವ ಜಗನ್ನಾಥನ ಭಕ್ತರಾಗಿದ್ದ ಪ್ರಖ್ಯಾತ ವಿದ್ವಾಂಸರು. ದೋರಸಮುದ್ರವನ್ನು ಆಳುತ್ತಿದ್ದ ವಿಷ್ಣುವರ್ಧನನಿಗೆ ಮಗ ನರಸಿಂಹ ಹುಟ್ಟಿದ್ದಕ್ಕೆ ಮನೆವೆಗ್ಗಡೆ ಬಿಲುಪಯ್ಯ ದಂಡನಾಯಕ ಉದಯಣ್ಣನಿಗೆ ಹೇಳಿ ಕೇಶವ ದೇವರ ಜೀರ್ಣೋದ್ಧಾರ ಮಾಡಿಸುವಂತೆ ತೋಟ, ಎಮ್ಮೆ, ಎತ್ತು ಪಶು ಮುಂತಾದ ದಾನಗಳನ್ನು ನೀಡಿದಂತೆ ಈ ಶಾಸನ ಉಲ್ಲೇಖಿಸಿದೆ (ಕುಣಿಗಲು -೧).

ಕ್ರಿ.ಶ.೧೧೭೭ರಲ್ಲಿ ಹೊಯ್ಸಳ ವೀರಬಲ್ಲಾಳನ ಮಹಾಪ್ರಧಾನ ಸರ್ವಾಧಿಕಾರಿ ಸೇನಾಪತಿ ಮಹಾಪಸಾಯಿತ ಮಾಧವ ದಂಡನಾಯಕನ ಸುಂಕದ ಅಧಿಕಾರಿ ನಾರಸಿಂಗಣ್ಣ ಹೆಗ್ಗಡೆ, ಮಂಚಯ್ಯ ಹೆಗ್ಗಡೆ ಎಂಬುವವರು ಹುಳಿವಾರ ಬ್ರಹ್ಮಪುರಿಯ ಮಹಾಜನರಿಗೆ ಪುರಾಣಕ್ಕೆ ೫ ಗದ್ಯಾಣ, ವೇದಖಂಡಿಕಕ್ಕೆ ೫ ಗದ್ಯಾಣ ಹೊನ್ನನ್ನು ಕೊಡಲಾಗಿದೆ (ಚಿಕ್ಕನ.ಹಳ್ಳಿ ೩೬). ಕ್ರಿ.ಶ.೧೧೯೩ರಲ್ಲಿ ಇದೇ ಅರಸನ ಕಾಲದಲ್ಲಿ ತಂಡಗದಲ್ಲಿರುವ ತ್ರುಟಿತ ಶಾಸನದಲ್ಲಿ ಈ ನಾಡ ಅಗ್ರಹಾರದ ಸಂಕರನಾರಾಯಾಣ ಪುರವಾದ ತಂಡಗದ ವಿಷಯ ಉಲ್ಲೇಖವಿದ್ದು ಮುಂದೆ ಅಲ್ಲಿನ ತುರುಗಳನ್ನು ಕಳ್ಳರಿಂದ ಬಿಡಿಸಿಕೊಂಡು ಬರುವಾಗ ಅವರೊಡನೆ ಹೋರಾಡಿ ಶತ್ರುಗಳನ್ನು ಕೊಂದು ಸತ್ತ ಆ ವ್ಯಕ್ತಿಯ ಹೆಂಡತಿ ಪರೋಕ್ಷ ವಿನಯವಾಗಿ ವೀರಗಲ್ಲು ಮಾಡಿಸಿದ್ದನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ಅಗ್ರಹಾರದ ಹೆಸರಿದ್ದು ಯಾರು ಯಾರಿಗೆ ಯಾವಾಗ ಕೊಟ್ಟರೆಂಬ ಮಾಹಿತಿ ಇಲ್ಲವಾದ್ದರಿಂದ ಈ ಶಾಸನದ ಕಾಲಕ್ಕಾಗಲೇ ಇದು ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ (ತಿಪಟೂರು ೩೧).

ಹೊನ್ನುಡುಕೆ ಹೋಬಳಿ ಮುಳುಕುಂಟೆ ಅಗ್ರಹಾರದ ತಾಮ್ರಶಾಸನ ಕ್ರಿ.ಶ. ೧೨೩೪ರಲ್ಲಿ ಕಾಕತೀಯ ರಾಜ ಗಜಪತಿ ವೀರಪ್ರತಾಪ ರುದ್ರರಾಜನು ಕಕುದ್ಗಿರಿ (ಶಿವಗಂಗೆ)ಗೆ ಬಂದಿದ್ದನ್ನು ತಿಳಿಸುತ್ತದೆ. ಈತ ಬಹುಶಃ ತೀರ್ಥಯಾತ್ರೆಗಾಗಿ ಕಕ್ಕುದ್ಗಿರಿಗೆ ಬಂದಿದ್ದಾಗ ಗಂಗಾಧರೇಶ್ವರನನ್ನು ಪೂಜಿಸಿ, ಗಿರಿಜಾಕಲ್ಯಾಣವನ್ನು ಮಾಡಿಸಿ ಆ ಗಿರಿಗೆ ಮೂರು ಕ್ರೋಶ ದೂರದಲ್ಲಿ ಅನಂತಪುರವೆಂಬ ಗ್ರಾಮವನ್ನು ಸ್ಥಾಪಿಸಿ ಅದನ್ನು ಋಕ್ ಶಾಖೆಯ ಭಾರದ್ವಾಜ ಗೋತ್ರದ ರಾಮಚಂದ್ರನ ಮೊಮ್ಮಗ ಲಕ್ಷ್ಮೀನರಸಿಂಹ ದೀಕ್ಷಿತನ ಮಗ ನೃಸಿಂಹ ದೀಕ್ಷಿತನಿಗೆ ದಾನಮಾಡಿದಂತೆ ತಿಳಿಯುತ್ತದೆ (ತುಮಕೂರು ೧೪).

ಕ್ರಿ.ಶ.೧೨೬೭ರ ಕಾಲಕ್ಕೆ ಸೇರಿದ ಈ ಶಾಸನ ಪಿರಿಯ ಅಗ್ರಹಾರ ಸರ್ವಜ್ಞ ಶ್ರೀ ವಿಜಯನರಸಿಂಹ ಪುರವಾದ ತುರುವೇಕೆರೆಯ ಶ್ರೀಮದಶೇಷ ಮಹಾಜನರು ಐಕ್ಯಮತ್ಯದಿಂದ ಸಂಕಣ್ಣನ ಮಾಸವೆಗ್ಗಡೆತನದಲ್ಲಿ ಮಹಾಪ್ರಧಾನಿ ಸಂಧಿವಿಗ್ರಹಿ ಸೋಮಣ್ಣ ದಂಡನಾಯಕನಿಗೆ ಪ್ರಸನ್ನ ಚನ್ನಕೇಶವ ದೇವರ ಕೇರಿಯ ಬಡಗಬಾಗಿಲ ಮೊದಲ ಮನೆಯ ೨೬ಕ್ಕೆ ಅಳತೆಯ

ನಿವೇಶನವನ್ನು ದ್ವಿತೀಯ ಭಾಗದಲ್ಲಿ ಹುಲ್ಲೆಯ ದಿಣ್ಣೆ ಸಹಿತ ೪೨ ಮೆಟ್ಟಿನ ಗೆಳೆಯಲಿ ೪೩೦ ಕಂಬ ಅಳತೆಯ ತೋಟಸ್ಥಳವನ್ನು ದಾನಕೊಟ್ಟರು. ಗೋವಿಂದ ಭಟ್ಟರಿಗೆ ಆ ಮಹಾಜನರು ದಾನರೂಪದಲ್ಲಿ ೩೬ ಮೆಟ್ಟಿನ ಗೆಳೆಯಲ್ಲಿ ಗದ್ದೆ ಸಾಸವೆಯ ದಿಣ್ಣೆಯಲ್ಲಿ ೩೧ ಕಂಬ, ಆಡನ ಹಳ್ಳಿಯ ಕೆರೆಯ ಕೆಳಗೆ ೪೦ ಕಂಬ ಆ ಬೆದ್ದಲು ಊರಿನ ತೆಂಕದ ೬೦೦. ಈ ಗದ್ದೆ ಬೆದ್ದಲಿಗೆ ಆ ಗೋವಿಂದ ಭಟ್ಟರಿಗೆ ಕ್ರಯವ ಕೊಡಿಸಿ ಸೋಮಣ್ಣ ದಂಡನಾಯ್ಕನನ್ನು ಮುಂದಿಟ್ಟುಕೊಂಡು ಧಾರೆಯನೆರೆಸಿಕಂಡು ಕೊಟ್ಟ ವಿಷಯ ತಿಳಿಸುತ್ತದೆ. ಆ ತತ್ತಿನವರಿಗೆ ಪ್ರತಿಯಾಗಿ ಮಾವಿನ ಗೊಂಡಿಯಲ್ಲಿ ಕ್ಷೇತ್ರವನ್ನು ಮಹಾಜನಗಳ ಹಸ್ತದವೊಪ್ಪವನ್ನು ಹಾಕಿಸಿ ದಾನ ಮಾಡಿದ್ದನ್ನು ತಿಳಿಸುತ್ತದೆ (ತಿಪ. ೪)

ಯೋಗಮಾಧವ ದೇವಾಲಯದಲ್ಲಿರುವ ಕ್ರಿ.ಶ.೧೨೭೨ರ ಶಾಸನದಲ್ಲಿ ಹೊಯ್ಸಳ ವೀರ ನರಸಿಂಹನ ಆಳ್ವಿಕೆಯಲ್ಲಿ ಆಸಂದಿನಾಡಡೊಳಗಿದ್ದ ಪ್ರಸಿದ್ಧ ಕಾಲುವಳಿಗಳ ಸಹಿತ ಸೆಟ್ಟಿಯ ಕೆರೆ ಮೊದಲುಗೊಂಡು ಬಳಿ ಸಹಿತ ಸರ್ವಾಯ ಶುದ್ಧಿಯಾಗಿ ಕಿರುಕುಳ ತಪ್ಪು ತೌಡಿ ಸಹಿತ ೩೫ ಗದ್ಯಾಣ, ೭ ಪಣ, ಒಂದು ಹಾಗ, ಆಸಂದಿನಾಡ ಹುಳಿಯಾರ ವ್ರಿತ್ತಿಯೊಳಗಿನ ಪ್ರಸಿದ್ಧ ಕಾಲುವಳ್ಳಿಗಳು ಕೂಡಿದ ಹೊಸಗೆರೆ ಹುಳಿಯಾರ ವ್ರಿತ್ತಿಯ ಮೊದಲು ಬಳಿಸಹಿತ ಸರ್ವಾಯ ಶುದ್ದಿಯಾಗಿ ಆ ನಾಡವಟ್ಟದಳೊಗಲ್ಲದೆ ಕುತ್ತುವಿತ್ತಿಯಾಗಿ ಕಟ್ಟುಗುತ್ತಿಗೆ ಪಿಂಡದಾನವಾಗಿ ಕಿರುಕುಳ ತಪ್ಪು ತೌಡಿ ಸಹಿತ ತೆರುವ ೫ ಗದ್ಯಾಣ, ೭ ಪಣ, ಒಂದು ಬೇಳೆಯಂತೆ ಸ್ಥಳವೆರಡಕ್ಕೂ ತೆರುವ ಸಿದ್ದಾಯ ೪೧ ಗದ್ಯಾಣ, ೪ ಪಣ, ಒಂದು ಹಾಗ, ಒಂದು ಬೇಳೆ ಸಿದ್ಧಾಯವನ್ನು ಅರಮನೆಗೆ ಸಲ್ಲಿಸಲಾಗುತ್ತಿತ್ತು. ಹೊಯ್ಸಳ ನರಸಿಂಹದೇವನು ಈ ಸಿದ್ದಾಯವನ್ನು ಅಗಸ್ತ್ಯಗೋತ್ರದ ನಾಚರಸ ಮತ್ತು ಸೋವಲದೇವಿಯವರಿಗೆ ಜನಿಸಿದ ಮಹಾಪ್ರಧಾನ ಗೋಪಾಲ ದಂಡನಾಯಕರಿಗೆ ಧಾರೆಯನೆರೆದು ಕೊಡುತ್ತಾ ಅಗ್ರಹಾರವನ್ನು ರಚಿಸುವಂತೆ ಹೇಳುತ್ತಾನೆ. ಅರಸ ನೀಡಿದ ಮರ್ಯಾದೆಯನ್ನು ಸ್ವೀಕರಿಸಿ ಹೊಸಗೆರೆ ಮತ್ತು ಸೆಟ್ಟಿಯ ಕೆರೆಗೆ ಸೇರಿದ ಪ್ರದೇಶಗಳನ್ನು 'ಶ್ರೀಭರಿತಪ್ರಕಾಶಪುರ' ವೆಂದು ಅಗ್ರಹಾರಕ್ಕೆ ಹೆಸರಿಟ್ಟು ೪೭ ವ್ರಿತ್ತಿಗಳನ್ನಾಗಿ ವಿಂಗಡಿಸುತ್ತಾನೆ. ಅದರಲ್ಲಿ ೩೬ ವ್ರಿತ್ತಿಯನ್ನು ನಾನಾ ಗೋತ್ರದ ಬ್ರಾಹ್ಮಣೋತ್ತಮರಿಗೆ ಕೊಡುತ್ತಾನೆ. ಉಳಿದ ೧೧ ವ್ರಿತ್ತಿಯಲ್ಲಿ ಖಂಡಿಕಕ್ಕೆ ಒಂದು ವ್ರಿತ್ತಿಯನ್ನು ನೀಡುತ್ತಾನೆ. ಆ ಖಂಡಿಕದ ವ್ರಿತ್ತಿಗೆ ೪ ಖಂಡುಗದ ಗದ್ದೆಯನ್ನು ೪೦೦ ಬೆದ್ದಲನ್ನು ಮಹಾಜನರು ಗೋಪಾಳ ದಂಡನಾಯಕನಿಗೆ ಕೊಡುತ್ತಾರೆ. ಆತ ಅದನ್ನು ಸ್ವತಃ ತಾನೇ ಸ್ವೀಕರಿಸಿ ಅದರಿಂದ ಬರುವ ಆದಾಯವನ್ನು ಧರ್ಮಕಾರ್ಯಗಳು ನಿಲ್ಲದಂತೆ ನಡೆಸುತ್ತಾನೆ. ಇನ್ನುಳಿದ ೧೦ ವ್ರಿತ್ತಿಯನ್ನು ಶೆಟ್ಟಿಕೆರೆಯ ಶ್ರೀಯೋಗನಾಥ ದೇವರಸೇವೆ ಹಾಗೂ ಪೂಜಾಕಾರ್ಯಗಳು ನಿಲ್ಲದಂತೆ ನಡೆಸಲು ೩೭ ವ್ರಿತ್ತಿಯನ್ನು ಪಡೆದ ಬ್ರಾಹ್ಮಣರನೊಡಂಬಡಿಸಿ ಕೊಡುತ್ತಾನೆ.

ಈ ೧೦ ವ್ರತ್ತಿಯಲ್ಲಿ ಬರುವ ಉತ್ಪತ್ತಿಯನ್ನು ಶ್ರೀಯೋಗನಾಥ ದೇವರು, ಶ್ರೀಲಕ್ಷ್ಮೀನಾರಾಯಣ ದೇವರು, ಶ್ರೀಗೋಪಾಲದೇವರು, ಶ್ರೀವಿಘ್ನೇಶ್ವರ ದೇವರು ಮತ್ತು ಶ್ರೀ ದುರ್ಗಾದೇವಿ ಸಹಿತ ಪ್ರತಿದಿನದ ನಿತ್ಯನೈಮಿತ್ತಿಕ ಪೂಜೆ ಹಾಗೂ ದೇವರ ಊಳಿಗಕ್ಕೆ ನಡೆವ ನಂಬಿಯರಿಗೆ, ಸಿಂಗಾರಿಗಳಿಗೆ, ಪರಿಚಾರಕರಿಗೆ, ಬಾಣಸಿಗರಿಗೆ, ಅಪ್ಪುಣಿಯನ್ನು ತರುವ ಪರಿಚಾರಕರಿಗೆ, ೫ ಜನ ನಿಯೋಗದವರಿಗೆ, ಇಬ್ಬರು ಮದ್ದಳೆಯವರಿಗೆ, ಅಂಘರಿಕರಿಗೆ,

ಮಾಲೆಗಾರನಿಗೆ, ಹೊರಗೆಲಸದವನಿಗೆ ಮೊದಲಾದ ಇನ್ನೂ ಹಲವರಿಗೆ ಜೀವಿತ ಗದ್ಯಾಣವನ್ನು ಕೊಡುತ್ತಾನೆ. ಭರತೆಯ ದಂಡನಾಯಕನಿಗೆ, ಹೆಗ್ಗಡಿಕೆ ಭಂಡಾರಿಕೆ ನಿಯೋಗಕ್ಕೆ, ಸಿಂಗೆಯ ದಂಡನಾಯಕನಿಗೆ, ಗೋಪಾಳ ದಂಡನಾಯಕನ ಮಗಳು ಬಾಯಕ್ಕನಿಗೆ, ಪಾಯಸ ಪಕ್ವಾನ್ನದ ಅಡುಗೆಯವರಿಗೆ, ಗಾಣಿಗ, ಕುಂಬಾರ, ಅಗಸ ಮೊದಲಾದ ಹಲವು ಕೆಲಸ ಮಾಡುವಂತವರಿಗೂ ಅವರ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ಜೀವಿತ ಗದ್ಯಾಣ ನೀಡುತ್ತಾನೆ. ವೈಷ್ಣವರ ಅಮೃತಪಡಿ, ಮಡಿವರ್ಗ, ಶ್ರೀಗಂಧ, ಕರ್ಪೂರ, ಧೂಪ, ಅಂಗಭೋಗ, ರಂಗಭೋಗ, ಚೈತ್ರ ಪವಿತ್ರ ಪಂಚಪರ್ವಂಗಳ ಎಲ್ಲಾ ಶ್ರೀಕಾರ್ಯಗಳಿಗೆ ವ್ರಿತ್ತಿಯ ಫಲ ದೊರೆಯುವಂತೆ ವ್ಯವಸ್ಥೆ ಮಾಡಿದ. ಗೋಪಾಳದಂಡನಾಯಕ ತಾನು ವರ್ಷಂ ಪ್ರತಿ ಮಾಡುವ ಶ್ರೀಭರಿತ ಪ್ರಕಾಶಪ್ರಭು ಯೋಗೇಶ್ವರನ ಸಮಾರಾಧನೆಗೆ ಮತ್ತು ದೇವಾಲಯ ಮತ್ತು ಅದಕ್ಕೆ ಹೊಂದಿಕೊಂಡ ಎಲ್ಲಾ ಗೃಹಗಳ ಅಂದಂದಿನ ಕೆಲಸಕ್ಕೆ ಬೇಕಾಗುವ ಸಾಮಾನು ತರುವ ಕೆಲಸಗಾರರಿಗೂ ಇಂತಿಷ್ಟು ಜೀವಿತ ಗದ್ಯಾಣವೆಂದು ನಿಗದಿ ಪಡಿಸುತ್ತಾನೆ.

ಶ್ರೀಯೋಗನಾಥ ದೇವರಿಗೆಂದು ಕೊಡುಗೆಯಾಗಿ ಮಹಾಜನರು ನೀಡಿದ್ದ ತೋಟದಿಂದ, ಸೆಟ್ಟಿಕೆರೆ ಮತ್ತು ಕಾಲುವಳಿ ಗ್ರಾಮದಿಂದ ಬರುವ ಆದಾಯವನ್ನು ದೇವರ ಸೇವೆಗೆ ಬಳಸುವಂತೆ ಮಾಡಿದ್ದ. ಸೆಟ್ಟಿಕೆರೆಯ ಮಹಾಜನರು ಶಂಕರದೇವರ, ಕಲಿದೇವರ, ವ್ರಿತ್ತಿಕಟ್ಟಿನ ತೋಟಗಳ (ಪ್ರದೇಶಗಳ ವಿವರವಿದೆ) ಕ್ಷೇತ್ರಗಳನ್ನು ಗೋಪಾಳ ದಂಡನಾಯಕ, ಸಿರಿಗೆಯ ದಂಡನಾಯಕ ಮತ್ತು ಭರಿತೆಯ ದಂಡನಾಯಕರಿಗೆ ಪ್ರೀತಿಯ ಕೊಡುಗೆಯಾಗಿ, ಉಂಬಳಿಯಾಗಿ, ಬಿತ್ತುವಟ್ಟ ಮೊದಲಾದವನ್ನು ಸ್ವ-ಇಚ್ಛೆಯಿಂದ ಧಾರಾಪೂರ್ವಕವಾಗಿ ಕೊಡುತ್ತಾರೆ. ಅಲ್ಲದೆ ದೇವಾಲಯದಲ್ಲಿ ನಡೆಯುವ ಪುರಾಣ ನಿಯೋಗಕ್ಕೆ, ಅಗ್ನಿ ಕಾರ್ಯಕ್ಕೆ, ಮಕ್ಕಳಿಗೆ ಶೃತಿ ಹೇಳಲು, ಜೋತಿಷ್ಯಕ್ಕಾಗಿ ಬ್ರಾಹ್ಮಣನಿದ್ದು ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು ಎಂಬ ಇನ್ನೂ ಅನೇಕ ಮಾಹಿತಿಗಳಿಂದ ತುಂಬಿರುವ ಈ ಶಾಸನದಿಂದ ಅಗ್ರಹಾರಗಳನ್ನು ರಚಿಸಿ ದಾನಮಾಡಿದ ಮೇಲೆ ದೇವರ ಪೂಜೆ, ಆಹಾರದಾನ, ಇತ್ಯಾದಿಗಳಿಗಾಗಿ ಹಲವಾರು ವೃತ್ತಿಗಳಿಗಾಗಿ ವ್ರಿತ್ತಿಯನ್ನು ವಿತರಿಸುತ್ತಿದ್ದ ಮಾದರಿಗಳು ದೊರಕುತ್ತದೆ. (ಚಿಕ್ಕನಾಯಕನ ಹಳ್ಳಿ.೨)

ಕ್ರಿ.ಶ.ಸು ೧೨೬೩ಕ್ಕೆ ಸೇರಬಹುದಾದ ತುರುವೇಕೆರೆ ಚೆನ್ನಿಗರಾಯ ದೇವಾಲಯದ ಶಾಸನದಲ್ಲಿ 'ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತ್ಸರ್ವಸಮಸ್ತದ ಪಿರಿಯ ಅಗ್ರಹಾರಂ, ಸರ್ವಜ್ಞ ಶ್ರೀವಿಜಯನರಸಿಂಹಪುರವಾದ ತುರುವೇಕೆರೆಯ ಮಹಾಜನಗಳು ಐಕ್ಯಮತ್ಯದಿಂದ ಗೋವಿಂದಕ್ರಮಿತರ ಮಾಸವೆಗ್ಗಡೆಯ ಹಿರಿತನದಲ್ಲಿ ಪ್ರಸನ್ನ ಚನ್ನಕೇಶವ ದೇವರ ದೇವಾಲಯದಲ್ಲಿ ಸಭೆ ಸೇರಿ ಅನೇಕ ಹಳ್ಳಿಗಳಿಂದ ಕಂಬಗಳ ಅಳತೆಯಲ್ಲಿ ಭೂಮಿಯನ್ನು ಪಡೆದು ಏಕಸ್ಥಳವಾಗಿ ಮಾಡಿಸಿದ ವಿವರ ಉಲ್ಲೇಖವಾಗಿದೆ. (ತಿಪಟೂರು-೩)

ಕ್ರಿ.ಶ.೧೨೮೩ರಲ್ಲಿ ವಿಜಯನಗರದ ಇಮ್ಮಡಿ ಹರಿಹರನ ಕಾಲದ ತಾಮ್ರಶಾಸನದಲ್ಲಿ ಅರಸ ತನ್ನ ಪಿತೃಗಳಿಗೆ ಪುಣ್ಯವಾಗಲೆಂದು, ಕಾಶ್ಯಪಗೋತ್ರದ ಯಜುರ್ಶಾಖೆಗೆ ಸೇರಿದ ನಾಗಭಟ್ಟನ ಮಗ ಮಲ್ಲಿಭಟ್ಟನಿಗೆ ವಿರೂಪಾಕ್ಷನ ಸಾಕ್ಷಿಯಾಗಿ ತುರುವೇಕೆರೆಯಲ್ಲಿನ ಅಯ್ಯರಸನ ಹಳ್ಳಿಯನ್ನು ಅಗ್ರ ಹಾರವನ್ನಾಗಿ ರಚಿಸಿ ವೆಗ್ಗನಾಡು ಸೇರಿದಂತೆ ಇತರ ೧೩ ಹಳ್ಳಿಗಳನ್ನು ದಾನ ಮಾಡಿದ. ಈ ಶಾಸನ ಲಿಪಿಕಾರನ ಹೆಸರನ್ನು ಮತ್ತು ಖಂಡರಣಿಕಾರನ ಹೆಸರನ್ನೂ ಉಲ್ಲೇಖಿಸಿದೆ (ತಿಪಟೂರು-೯).

ಹೊನ್ನುಡುಕೆ ಹೋಬಳಿ ಇರಿಪಸಂದದ ಕ್ರಿ.ಶ ೧೨೯೦ರ ಶಾಸನ, ಹೊಯ್ಸಳ ವೀರರಾಮನಾಥ ಅರಸ ಕುಂದಣಿಯ ಬೀಡಿನಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಅವನ ಮಾಂಡಲೀಕ ಜಾನಿಕಯ್ಯ ಮತ್ತು ಕಂಪಯ್ಯ ದಂಡನಾಯಕರು ಮರುಗಲೆ ನಾಡೊಳಗಿನ ಮಯಿಂದವೊಳಲ ಕೆರೆಯ ಒಡ್ಡನ್ನು ಕಟ್ಟಿಸಿ ಮರುಗಳೆನಾಡಿನ ಶ್ರೀಮನಾದಿಯಗ್ರಹಾರ ಗಂಧವಾರಣ ಪುರವಾದ ಹೊನ್ನುಡಿಕೆಯ ಚೊಕ್ಕ ಪೆರುಮಾಳು ದೇವರ ಪ್ರಾರ್ಥನೆ ಮತ್ತು ಅಮೃತಪಡಿಗೆ ಮಯಿಂದವೊಳಲ ಬಯಲನ್ನು ಅಧಿಕಾರಿಗಳಾದ ಮಾಣಿಕದೇವರು ಮತ್ತೊಬ್ಬ ಕಲ್ಯೆಯ್ಯತ್ತರೆಯರು ಆ ಮಯಿಂದ ವೊಳಲ ಕೆರೆಯ ಒಡ್ಡನ್ನು ಕಟ್ಟಿಸಿ ದಾನವಾಗಿ ಅದೇ ದೇವರಿಗೆ ಕಲ್ಲುನೆಟ್ಟು ಗದ್ದೆ ಕೊಟ್ಟಿದ್ದನ್ನು ಉಲ್ಲೇಖಿಸಿದೆ (ತುಮ.೧೭).

ಹೊಯ್ಸಳ ವೀರ ಬಲ್ಲಾಳನ ಆಳ್ವಿಕೆಯಲ್ಲಿ ಕ್ರಿಶ.೧೩೦೩ರ ಕರಡಿಗ್ರಾಮದ ಶಾಸನ ತೊಯಸಿಂಗೆಯ ಡಣ್ಣಾಯಕರ ಅಧಿಕಾರದಲ್ಲಿ ಅವರ ಮಕ್ಕಳು ಶ್ರೀಮದನಾದಿಅಗ್ರಹಾರವಾದ ಹಿರಿಯ ನರಸಿಂಹಪುರವಾದ ಕರುವಿಡಿಯ ಶ್ರೀಮದಶೇಷಮಹಾಜನರಿಗೆ ಹಳ್ಳಿಯೂರು ಹಿರಿಯೂರು ತೋಟ, ಗದ್ದೆ, ಬೆದ್ದಲು, ಒಕ್ಕಲು ಜೊತೆಗೆ ಹಲವಾರು ಹಳ್ಳಿಗಳ ವೃತ್ತಿಗಳನ್ನು ನೀಡಿದಾಗ ಆ ಮಹಾಜನರು ಎಲ್ಲಾ ಹಿತಗಳನ್ನು ರಾಶಿ ಮಾಡಿ ಸಮನಾಗಿ ವತ್ತೆಕಟ್ಟಿ ದೃವ ಉಂಡಿಗೆಯನ್ನಿಕ್ಕಿ ಅಗ್ರಹಾರದ ವೃತ್ತಿ ಹಂಚಿಕೊಂಡ ಹಸುಗೆಯ ಕ್ರಮವನ್ನು ಹೇಳಿದೆ. ಅಲ್ಲದೆ ಮುಖ್ಯವಾದ ಮತ್ತೊಂದು ವಿಶೇಷ ವಿಷಯವೆಂದರೆ ಒಂದು ಗುಂಪಿನವರು ಮತ್ತೊಂದು ಗುಂಪಿನವರನ್ನು ಸಂಖ್ಯಾ ಸಮ, ವರ್ಣ ಸಮವಿಲ್ಲವೆಂದು ಬಿಡುವುದು ಸರಿಯಲ್ಲ ಎಂಬ ಎಚ್ಚರಿಕೆಯನ್ನು ನೀಡಿದೆ (ತಿಪ.೮೩).

ಹೆಗ್ಗರೆ ಕಲ್ಲೇಶ್ವರ ದೇವಾಲಯದಲ್ಲಿನ ಶಾಸನ ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಕ್ರಿ.ಶ.೧೩೧೪ರಲ್ಲಿ ಸೇನಬೋವ ಕಾಮಣ್ಣ, ಕಲ್ಲಗೌಡ, ನಯಗೌಡ ಮೊದಲಾದ ಗೌಡ ಪ್ರಜೆಗಳು ಬಲ್ಲಾಳನ ಅಪ್ಪಣೆಯಂತೆ ಬರೆಸಿದ ಶಾಸನದಲ್ಲಿ 'ಸಮಸ್ತಪ್ರಶಸ್ತಿ ಸಹಿತ ಶ್ರೀನಮಸ್ಯವಾದ ವೀರವಿಜಯ ವೀರಬಲ್ಲಾಳಪುರವಾದ ಅಗ್ರಹಾರಕ್ಕೆ ಅರಸಿಕೆರೆಯ ಶ್ರೀಮದಶೇಷ ಮಹಾಜನಗಳಿಗೆ ಹೆಗ್ಗರೆಯವೊಳಗೆ ಬೂದಿಹಾಳ ಕೆರೆಯ ನೀರೊತ್ತುವ ಭೂಮಿಯನ್ನು ದಾನವಾಗಿ ನೀಡಿ ಆ ಫಲವನ್ನು ಮಹಾಜನಗಳಿಗೆ ಆಚಂದ್ರಾರ್ಕವಾಗಿ ಸಲ್ಲುವುದೆಂದು ಹೇಳಿದೆ. (ಚಿಕ್ಕ.ನಾ.ಹಳ್ಳಿ.೨೬)

ತುರುವೇಕೆರೆ ಶಂಖರೇಶ್ವರ ದೇವಾಲಯದ ಕ್ರಿ.ಶ.೧೩೧೮ರ ಶಾಸನ ಹೊಯ್ಸಳ ನರಸಿಂಹದೇವರ ಮಹಾಪ್ರಧಾನ ಸಂಧಿವಿಗ್ರಹಿ ಸೋಮನಾಥ ನಾಯ್ಕರು ಶ್ರೀ ವಿಜಯನರಸಿಂಹ ಪುರವಾದ ತುರುವೇಕೆರೆಯನ್ನು ಅಗ್ರಹಾರ ಮಾಡುವಲ್ಲಿ ಮಹಾಸಾಮಂತ ಕಡಬ ಕಂಟೀರವ ಮರುಗಲು ನಾಡಾಳ್ವ ಶ್ರೀ ರಾಮನಾಥ ದೇವರ ಪಾದಾರಾಧಕ ಕೈದಾಳದ ಮಲ್ಲದೇವನ ಮಗ ಗಂಗದೇವನು ತುರುವೇಕೆರೆಯಲ್ಲಿನ ತಾಳಕೆರೆ, ಕಲ್ಲಕೆರೆ, ದೊಂಕಿಯಹಳ್ಳಿ, ಗೊಟ್ಟಿಯಕೆರೆ, ಸೆಟ್ಟಿಯಹಳ್ಳಿ, ಹೊಣಕೆರೆ ಮುಖ್ಯವಾದ ಶಾಸನಸ್ತವ ಹಸಮಸ್ತಹಳ್ಳಿ ಹಿರಿಯರಲ್ಲಿ ಕೊಂಬ ಮನ್ನೆಯದ ಹೊನ್ನನ್ನು 'ವಿಜಯನರಸಿಂಹಪುರ'ವಾದ ತುರುವೇಕೆರೆಯ ಮಹಾರಾಜನರಿಗೆ ಗಂಗದೇವನು ಸ್ವರುಚಿಯಾಗಿ ವೊಡಂಬಟ್ಟು ಧಾರೆಯೆರದ ವಿಷಯ ಉಲ್ಲೇಖವಾಗಿದೆ (ತಿಪಟೂರು.೮).

ಹೊಯ್ಸಳರ ಕ್ರಿ.ಶ.೧೩೨೪ರ ಕಾಲಕ್ಕೆ ಸೇರಿದ ವಿಘ್ನಸಂತೆ ಗ್ರಾಮದ ನರಸಿಂಹ

ದೇವಾಲಯದ ಶಾಸನ 'ಶ್ರೀಮದನಾದಿ ಅಗ್ರಹಾರ ಶ್ರೀವಿಜಯಗೋಪಾಳ ಪುರವಾದ ವಿಘ್ನಸಂಥೆ'ಯ ಶ್ರೀಮದಶೇಷ ಮಹಾಜನರು ಒಮ್ಮನಸ್ಸಿನಿಂದ ತಮಗೆ ಕೊಟ್ಟಿರುವ ಬೋರಣ್ಣನ ನಿರುಗುಂದದ ಹಳ್ಳಿಗಳನ್ನು ಧ್ರುವ ವುಂಡಿಗೆಯಾಗಿ ಆನೆಗಿನಕೆರೆ, ಆಕಾಳಬೋವನ ಹಳ್ಳಿ, ಮಂಚೇಗೌಡನ ಹಳ್ಳಿ ಮೊದಲಾದ ಹಳ್ಳಿಗಳ ವ್ರಿತ್ತಿವಂತರಿಗೆ ವಿವಾದ ಬಾರದಂತೆ ವ್ರಿತ್ತಿಯನ್ನು ವಿತರಿಸುವ ವ್ಯವಸ್ಥೆ ಮಾಡಿರುವುದನ್ನು ತಿಳಿಸುತ್ತದೆ (ತಿಪ.೪೧) ಹೊಯ್ಸಳ ವೀರಬಲ್ಲಾಳನ ಕಾಲದ ಕ್ರಿ.ಶ.ಸು.೧೩೨೯ರ ಬಿಜ್ಜವರದ ಶಾಸನದಲ್ಲಿ ಅನೇಕ ಸಾಲುಗಳು ತ್ರುಟಿತವಾಗಿದ್ದು 'ಗಂಗೆಯ ತಡಿಯಲ್ಲಿ ಸಾವಿರ ಅಗ್ರಹಾರವ ಮಾಡಿ ಬಿಟ್ಟರು' ಎಂಬುದನ್ನು ಉಲ್ಲೇಖಿಸಿದೆ (ಮದ್ದಗಿರಿ.೨೨).

ಕ್ರಿ.ಶ.೧೩೮೦ಕ್ಕೆ ಸೇರಿದ ನಾಗಸಂದ್ರ ಕಾಳೇನಹಳ್ಳಿಯ ಸೂರಭಟ್ಟರಲ್ಲಿದ್ದ ತಾಮ್ರ ಶಾಸನದಲ್ಲಿ ಇಮ್ಮಡಿ ವೀರಹರಿಹರರಾಯನ ಆಳ್ವಿಕೆಯಲ್ಲಿ ಅವನ ಒಡಹುಟ್ಟಿದ ವೀರಮಲ್ಲಪ್ಪ ಒಡೆಯನ ಕುಮಾರ ವೀರ ಚನ್ನಪ್ಪ ಒಡೆಯನು ಆದವಾನಿಯ ದುರ್ಗ ತುರುಕರ ವಶವಾಗುತ್ತಿದ್ದುದನ್ನು ತಪ್ಪಿಸಿ ಯುದ್ಧದಲ್ಲಿ ಅವರನ್ನು ಗೆದ್ದು ಅರಸ ಹರಿಹರನಿಗೆ ಒಪ್ಪಿಸಿದಾಗ ವೀರ ಚನ್ನಪ್ಪ ಒಡೆಯ ತಮ್ಮ ಇಷ್ಟಾರ್ಥ ಸಿದ್ಧಿಯಾಗಲೆಂದು ಹೇರೂರಿನ ಸೀಗೆ ಮಾವಿನ ಹಳ್ಳಿಯನ್ನು ವೇದಮೂರ್ತಿ ಉಪಾಧ್ಯಾಯರ ಪುತ್ರ ವಿದ್ಯಾಭೂಷಣ ದೀಕ್ಷಿತರಿಗೆ ಆ ಗ್ರಾಮವನ್ನು ಸರ್ವ ಮಾನ್ಯವಾಗಿ ಹಾಗೂ ಏಕಭೋಗ್ಯದ ಅಗ್ರಹಾರವನ್ನಾಗಿ ಮಾಡಿ ದಾನಕೊಟ್ಟಿದ್ದನ್ನು ಉಲ್ಲೇಖಿಸಿದೆ. ಅಲ್ಲದೆ ಶ್ರೀವಿದ್ಯಾರಣ್ಯಪುರ ಗ್ರಾಮದ ಚತುಃಸೀಮೆಯ ಗಡಿಗಳಲ್ಲಿ ಹೇರೂರು ಮಹಾಜನಗಳು ಗಡಿಕಲ್ಲುಗಳನ್ನು ನೆಟ್ಟು ಆ ಚತುಃಸ್ಸೀಮೆಯಲ್ಲಿರುವ ಕಾಶ್ಯಪ ಗೋತ್ರ, ವಶಿಷ್ಟಗೋತ್ರ, ಭಾರದ್ವಾಜ ಗೋತ್ರ, ಜಮದಗ್ನಿ ಗೋತ್ರ ಮೊದಲಾದ (೯ ಜನ ಗೋತ್ರಜರ ಹೆಸರಿದೆ) ಬ್ರಾಹ್ಮಣರ ಮಕ್ಕಳಿಗೆ ವೃತ್ತಿಗಳನ್ನು ಹಂಚಿಕೊಟ್ಟು ಅದನ್ನು ಸಮಸ್ವಾಮ್ಯವಾಗಿ ಭೋಗಿಸುವುದಕ್ಕೆ ರಾಜಹರಿಹರನ ಹಸ್ತಾಕ್ಷರದಲ್ಲಿ ದಾನ ನೀಡಿರುವುದನ್ನು ಹೇಳಿದೆ (ಕುಣಿಗಲು ೪೩). ಇದೇ ಕಾಲದಲ್ಲಿ ವಿಜಯನಗರದ ಅರಸ ಇಮ್ಮಡಿ ಹರಿಹರ 'ಬೆನಕನ ಕೆರೆಗೆ ಹರಿಹರ ರಾಜಾಧಿರಾಜಪುರಂ ಎಂಬ ಹೆಸರಿನ ಅಗ್ರಹಾರವನ್ನು ರಾಜನಿಗೆ ಒಳಿತಾಗಲೆಂದು ರಚಿಸಿ ದಾನವಾಗಿ ನೀಡಿದ ಉಲ್ಲೇಖವಿದೆ. (ತಿಪ ೪೩)

ನಿಡುಗಲ್ಲ ಬೆಟ್ಟ ಮೂಟನೂರ ಬಾಗಿಲಲ್ಲಿರುವ ಕ್ರಿ.ಶ.೧೪೮೭ರ ಶಾಸನ ನಿಡುಗಲ್ಲು ಪಾಳಯಗಾರ ಚಿಕ್ಕತಿಪ್ಪರಾಜೇಂದ್ರನ ಕಾಲದಾಗಿದ್ದು ಅವನನ್ನು ಅನೇಕ ಬಿರುದಾವಳಿಗಳಿಂದ ಹೊಗಳಿದೆ. ಚಿಕ್ಕತಿಪ್ಪರಾಜ ತನ್ನರಸಿ ಲಕ್ಷ್ಮಾದೇವಿಯ ಹೆಸರಲ್ಲಿ ಶಿವಾಲಯವನ್ನು ಲಕ್ಷ್ಮಣೇಶ್ವರ ಗುಡಿಯನ್ನು ಕಟ್ಟಿಸಿ ನಿಡುಗಲ್ಲಿಗೆ ತೆಂಕದೆಡೆಯಲ್ಲಿರುವ ಸೀಗಲಗುಡ್ಡದಲ್ಲಿ ಲಕ್ಷ್ಮಾದೇವಿಯ ಹೆಸರಲ್ಲಿ ಕೆರೆಯನ್ನು ಕಟ್ಟಿಸಿ ಅದನ್ನು ಬ್ರಾಹ್ಮಣರಿಗೆ ಧಾರೆಯನ್ನೆರೆದು ಅಗ್ರಹಾರವನ್ನು ಮಾಡಿ ದಾನ ಮಾಡಿದನ್ನು ಉಲ್ಲೇಖಿಸಿದೆ. (ಪಾವಗಡ.೫೪) ಇದೇ ಕಾಲದ ಇದೇ ಅರಸನನ್ನು ಬೆಟ್ಟದ ಮೇಲೆ ಮಳೇ ಮಲ್ಲಿಕಾರ್ಜುನ ದೇವಾಲಯದ ಸಮೀಪದಲ್ಲಿರುವ ಶಾಸನದಲ್ಲಿ 'ಯೆಱಬಾಪನಾಯಕರಿಗೆ ಅಂಮೋನಾಕಿತಿಯರಿಗಂ' ಜನಿಸಿದ ಪುತ್ರನು, ಶ್ರೀ ತಿರುವೆಂಗಳನಾಥ ದೇವರ ಶ್ರೀಪಾದ ಪದ್ಮಾರಾಧಕ ಚಿಕ್ಕತಿಪ್ಪರಾಜೇಂದ್ರ ನಿಜಗಲ್ಲು ದುರ್ಗವನಾಳುತ್ತಿದ್ದಾಗ ತನ್ನ ಅರಸಿ ಲಕ್ಷ್ಮಾದೇವಿ ವೈಕುಂಠವನ್ನೈದಲಾಗಿ ಆಕೆಯ ಹೆಸರಲ್ಲಿ ಕೆರೆಯನ್ನು ಕಟ್ಟಿಸಿ ಅಗ್ರಹಾರವಾಗಿ ರಚಿಸಿ ಬ್ರಾಹ್ಮಣರಿಗೆ ಧಾರೆಯನೆರೆದು ಕೊಟ್ಟನು ಎಂಬುದನ್ನು ಉಲ್ಲೇಖಿಸಿದರು (ಪಾವುಗಡ.೫೫). ಈ ಎರಡೂ

ಶಾಸನಗಳು ಒಂದೇ ವಿಷಯದ ಬಗ್ಗೆ ಮಾಹಿತಿ ನೀಡುತ್ತಿವೆ.

ಕ್ರಿ.ಶ.೧೪೧೮ರಲ್ಲಿ ಅಹೋಬಳರಾಯ ವೊಡೆಯರು ಶಿವರಾತ್ರಿಯ ಪುಣ್ಯಕಾಲದಲ್ಲಿ ಹರಿಹರ ದೇವರ ಅಂಗರಂಗ ವೈಭವಕ್ಕೆ ದೇವಾದಾಯ, ಬ್ರಹ್ಮಾದಾಯವಾಗಿ ತೋಟ, ಗದ್ದೆ ಗಂಜಳಗುಂಟೆ ಗ್ರಾಮ, ಬಿಜ್ಜಾವರ ಕೆರೆಯ ಕೆಳಗೆ ಅಡಕೆ ಮರ ೫೦೦ರ ಸ್ಥಳ, ಬಿದಿರಮೆಳೆ, ಗದ್ದೆ ಖಂಡುಗದ ಭೂಮಿಯನ್ನು ದಾನವಾಗಿ ಕೊಡುತ್ತಾನೆ. ವೀರಭದ್ರದೇವರಿಗೆ ಮೊದಲೇರಿಯ ಖಂಡುಗದ ಭೂಮಿಯನ್ನು ಬ್ರಹ್ಮಾದಾಯವಾಗಿ ಪುರೋಹಿತ ನಿಂಗಣ್ಣನಿಗೆ ವಾಮನಮುದ್ರೆ ಕಲ್ಲ ನಿಲ್ಲಿಸಿ ಧಾರೆಯೆರೆದು ಕೊಡುತ್ತಾನೆ. ಬಿಜ್ಜಾವರದ ಸೇನಬೋವ ದೇವರಸನ ಮಗ ರಾಮರಸನಿಗೆ ದಾದಗೊಂಡನ ಹಳ್ಳಿಯನ್ನು 'ಅಹೋಬಳ ಪುರವೆಂದು ಪ್ರತಿನಾವನ್ನಿರಿಸಿ ಸರ್ವಮಾನ್ಯದ ಅಗ್ರಹಾರವನ್ನಾಗಿ ರಚಿಸಿ ಸಾವಿರ ಅಡಕೆಯ ಮರದ ಸ್ಥಳವನ್ನು, ದೇವದಾಯ, ಬ್ರಹ್ಮದಾಯಗಳನ್ನು ಹರಿಹರದೇವರ ಸನ್ನಿಧಿಯಲ್ಲಿ ಧಾರೆಯೆರೆದು ಕೊಡುತ್ತಾನೆ. ಬಿಜ್ಜಾವರದ ಸಿಂಗೇಗೌಡನ ಮಕ್ಕಳು ರಾಮೇಗೌಡನಿಗೆ ಕೊಡುಗೆಯಾಗಿ ಮದಗಿರಿ ಹಳ್ಳಿ, ಕೆರೆಯ ಕೆಳಗಣ ವೊಡ್ಡಿನ ಕಾಲುವೆ, ೨ ಸಾವಿರ ಅಡಿಕೆ ಮರದ ಸ್ಥಳವನ್ನು ನಾಡಗೌಡಿಕೆಗೆ ಹೊಲಮಾನ್ಯವಾಗಿ ಕೊಡುತ್ತಾನೆ. ಈ ಶಾಸನದಲ್ಲಿ ಅಗ್ರಹಾರ ರಚಿಸುವುದರ ಜೊತೆಗೆ ದೇವದಾಯ, ಬ್ರಹ್ಮದಾಯ, ಕೊಡುಗಿಯಾಗಿ ನೀಡಿದ ವಿವರ ದೊರೆಯುತ್ತದೆ (ಮದ್ದಗಿರಿ ೨೦).

ಕ್ರಿ.ಶ ಸು.೧೫೧೦ರ ದೇವರಾಯದುರ್ಗದ ತಾಮ್ರಶಾಸನ ನರಸಿಂಗರಾಯನ ಕುಮಾರ ಕೃಷ್ಣರಾಯನು ಆಳುತ್ತಿದಾಗ ಬಲಭದ್ರಯ್ಯನ ಕುಮಾರ ಲಕ್ಷ್ಮಯ್ಯನಿಗೆ ಕುರುವೇಲ ಗ್ರಾಮ, ಮುದ್ದಸಮುದ್ರದ ಗ್ರಾಮ, ದಾಸರಹಳ್ಳಿ ಗ್ರಾಮ ಮೊದಲಾದ ಆರು ಗ್ರಾಮಗಳನ್ನು ಮೈದಾಲೆ ಕೆರೆ ಕೆಳಗೆ ಗದ್ದೆಯನ್ನು ದಿಕ್ಕಳ ಅಗ್ರಹಾರ ದಲ್ಲಿ ಗೌಡಗೆ ಪಾಲು ಕೊಟ್ಟು ವೃತ್ತಿ-ಹಳರ ನಾಗನಹಳ್ಳಿ, ಉಪ್ಪಾರಹಳ್ಳಿ, ಕಟ್ಟಿಗೆಹಳ್ಳಿ, ಹೊಲಗದ್ದೆ ಇವನ್ನೂ ಕೊಟ್ಟಂತೆ ಉಲ್ಲೇಖವಿದೆ (ತುಮಕೂರು ೪೩).

ಕನ್ನಮೇಡಿ ಗ್ರಾಮದ ಆಂಜನೇಯ ದೇವಾಲಯದ ಬಳಿಯ ಕ್ರಿ.ಶ. ೧೫೧೭ರ ಶಾಸನ ವೀರಪ್ರತಾಪ ಸದಾಶಿವದೇವನು ಆಳುತ್ತಿದ್ದಾಗ ಪೆನುಗೊಂಡೆ ರಾಜ್ಯದಲ್ಲಿನ ಕನ್ನಮೇಡಿಗೆ ಪ್ರತಿ ನಾಮವಾದ ಹರಿಹರರಾಯ ಸಮುದ್ರವೆಂಬ ಸರ್ವಮಾನ್ಯ ಅಗ್ರಹಾರದಲ್ಲಿ ಎಲ್ಲಂಭಟ್ಟನ ಮಗ ನಾರಸಿಂಹಭಟ್ಟನು ಶಿಲಾಗುಡಿಯನ್ನು ಕಟ್ಟಿಸಿ ಶ್ರೀ ಸಿದ್ಧಿವಿನಾಯಕನ ಪ್ರತಿಷ್ಠೆ ಮಾಡಿಸಿದಂತೆ ತಿಳಿಸುತ್ತದೆ. ಶ್ರೀ ಸಿದ್ಧಿವಿನಾಯಕನ ಪ್ರತಿಷ್ಠೆಯ ಕಾಲದಲ್ಲಿ ಅತ್ರಿಗೋತ್ರದ ಅಶ್ವಾಯನ ಸೂತ್ರದ ಋಕ್ ಶಾಖಾದ್ಯಮಿಗಳಾದ ವಿಪ್ರವಿನೋದಿ ಮಂತ್ರಮೂರ್ತಿ ವೀರಮರಾಜಕುಮಾರ ಪೆದ್ದಬಸವಯ್ಯ, ಗೋವಿಂದಯ್ಯನ ಮಗ ಗೋವಿಂದಯ್ಯ, ಚಾಗಲಮರಿ ಕೇಶವಯ್ಯನ ಮಗ ಕೇಶವಯ್ಯ ಮತ್ತು ಮಾಧವಯ್ಯ ಇವರು ಒಂದಾಗಿ ವಿಘ್ನೇಶ್ವರನಿಗೆ ಕಂಸಮೇಟಿ ಅಗ್ರಹಾರವನ್ನು ಛಾಮರದವರಿಗೆ ಕೊಟ್ಟನು. ಈ ವರ್ತನೆಯಲ್ಲಿ ಗಣಾಧಿಪತಿಗೆ ಕಾರ್ತೀಕ ಮಾಸದಲ್ಲಿ ನೈವೇದ್ಯ, ದೀಪಾರಾಧನೆ ಮೊದಲಾದ ಪೂಜೆಗಾಗಿ, ೩೨ ಛಾಮರದವರಿಗೆ ಪುಣ್ಯವಾಗಲೆಂದು ಮಾಡಿಕೊಟ್ಟ ಧರ್ಮಶಾಸನ (ಪಾವುಗಡ ೨೧).

ಕ್ರಿ.ಶ.೧೫೨೨ ಪಾವುಗಡ ತಾಲೂಕಿನ ತಾಮ್ರಶಾಸನದಲ್ಲಿ ನಲಂಜಿ ಗ್ರಾಮಕ್ಕೆ ಪ್ರತಿನಾಮವಾಗಿ ಇಮ್ಮಡಿ ದೇವರಾಯಪುರವೆಂದು ಹೆಸರಿಟ್ಟು ಅಗ್ರಹಾರವನ್ನು ಚತುಃಸೀಮಾ ವಿವರಗಳೊಡನೆ ದಾನಮಾಡಿದ ಉಲ್ಲೇಖವಿದೆ. ಆ ಅಗ್ರಹಾರ ಖಿಲವಾಗಿದ್ದಾಗ ಭಾರದ್ವಜ ಗೋತ್ರದ ಅಶ್ವಲಾಯನ

ಸೂತ್ರದ ಋಕ್ ಶಾಖಾಧ್ಯಾಯರಾದ ರಾಯದುರ್ಗದ ಆದಿತ್ಯದೇವಗಳ ಮುಮ್ಮಕ್ಕಳು ದೇಮಯ್ಯ ವೊಬಯ್ಯ ಮೊದಲಾದವರು ಸೇರಿ ಕೃಷ್ಣರಾಯ ಮಹಾರಾಯನ ಕಾಲದಲ್ಲಿ ಚಿನ್ನಮಹಾದೇವೀರನ ಕೈಲಿ ಹೇಳಿಸಿ ಸರ್ವಮಾನ್ಯವಾಗಿ ಬಿಡಿಸಿಕಂಡು ಗಣಸಂಖ್ಯಾ ೭೦ ವ್ರಿತ್ತಿಯೊಳ್? ಮೂಲಸ್ವಾಮಿಗಳಿಗೆ ೨೦ ವ್ರಿತ್ತಿ ಶ್ರೀರಂಗಸಮುದ್ರದ ಶ್ರೀರಂಗದೇವರಿಗೆ ಅಮೃತಪಡಿ, ನೈವೇದ್ಯ, ಮಹೋತ್ಸವಕ್ಕೆ ೨೦ ವ್ರಿತ್ತಿ ಈ ಮರ್ಯಾದೆಯಲ್ಲಿ ಅನುಭವಿಸುವಂತೆ ಅಗ್ರಹಾರವನ್ನು ಪುನರ್ದತ್ತಿಯಾಗಿ ನೀಡಿದ ಹಕ್ಕು ಪತ್ರವಾಗಿದೆ (ಪಾವಗಡ ೬೯).

ಬೂದಿಹಾಳ ಹೋಬಳಿ ಪುರಾಣಿಕರ ನರಸಿಂಹ ಭಟ್ಟರಲ್ಲಿದ್ದ ತಾಮ್ರಶಾಸನ ಕ್ರಿ.ಶ.ಸು.೧೫೨೫ರ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಮಗಂನಾಡವೇಂಠೆದ ಬೂದಿಹಾಳ ಸೀಮೆಗೆ ಸೇರಿದ ಲಖಾಮಪುರಕ್ಕೆ ಪ್ರತಿನಾಮವಾಗಿ ಕೃಷ್ಣರಾಯಸಮುದ್ರ ಅಗ್ರಹಾರವೆಂದು ಹೆಸರಿಟ್ಟು ಅದನ್ನು ದಾನ ಮಾಡಿದ ವಿವರವಿದೆ (ಚಿಕ್ಕ.ನಾ.ಹಳ್ಳಿ ೧೦). ಕ್ರಿ.ಶ.೧೫೩೯ರ ಕೋಳಾಲ ಗ್ರಾಮದ ತಾಮ್ರಶಾಸನ ನರಸಿಂಗರಾಯನ ಪುತ್ರ ಅಚ್ಚುತ್ತೇಂದ್ರ ರಾಜ ವಿಜಯನಗರವನ್ನು ಆಳುತ್ತಿದ್ದಾಗ ವಿಶ್ವಾಮಿತ್ರಗೋತ್ರ ಆಶ್ವಲಾಯನ ಸೂತ್ರ ಚಂನಾವದಾನಿ ಮೊಮ್ಮಗ ಹೊನ್ನಾರ್ಯನ ಮಗ ಅನಂತ ಎಂಬ ಬ್ರಾಹ್ಮಣನಿಗೆ ಘನಗಿರಿಗೆ ಸೇರಿದ ಮಣ್ಣೆಕೋಳಾಲ ಸೀಮೆಯ ಹುಲುಕೂಡಾನಾಡಿನ ಯಲವಿಗೆ ಎಂಬ ಗ್ರಾಮವನ್ನು 'ಅಚ್ಯುತಾಂಬುಧಿ' ಎಂದು ಹೆಸರಿಟ್ಟು ದಾನ ಮಾಡಿದ ಉಲ್ಲೇಖವಿದೆ. (ತುಮ.೫೦)

ಕಳವರಹಳ್ಳಿ ಗ್ರಾಮದ ಕ್ರಿ.ಶ.೧೫೪೧ರಲ್ಲಿ ಸದಾಶಿವರಾಯರ ಆಳ್ವಿಕೆಯಲ್ಲಿನ ಈ ಶಾಸನದ ಸಾಲುಗಳ ನಡುನಡುವೆ ಬಹುಭಾಗ ತ್ರುಟಿತವಾಗಿದ್ದು ಅರಸನ ಸೇನಾಧಿಪತಿ ಶಿರಾ ತಾಲೂಕಿನ ಒಂದು ಗ್ರಾಮವನ್ನು ಅರೆಹಳ್ಳಿ ತಿರುವೆಂಗಳನಾಥ ಅಗ್ರಹಾರ ಮಾಡಿ ಅನೇಕ ಗ್ರಾಮಗಳನ್ನು ಶ್ರೋತ್ರಿಯ ಬ್ರಾಹ್ಮಣರಿಗೆ ದಾನಮಾಡಿದ ವಿಷಯವನ್ನು ಉಲ್ಲೇಖಿಸಲಾಗಿದೆ (ಶಿರಾ.೭೩). ಪಾವುಗಡ ತಾಲೂಕಿನ ಆಂಜನೇಯ ಗರುಡ ವಿಗ್ರಹದ ಹತ್ತಿರವಿರುವ ಕ್ರಿ.ಶ.೧೫೪೨ರ ಶಾಸನದಲ್ಲಿ ಅರಸ ಅಚ್ಚುತರಾಯನ ಅಪ್ಪಣೆ ಪ್ರಕಾರ ರಾಮಭಟ್ಟನ ತಮ್ಮ ಯಲ್ಲಪಯ್ಯನು ಕೇತಗೌಡನ ಕೆರೆಯನ್ನು ವಾಸುದೇವ ನಾಗಯ್ಯನ ಮಗ ಧ್ವಜ ತಿಮ್ಮಣ್ಣದಾಸನಿಗೆ ಈ ಗೋಪಗೊಂಡನ ಹಳ್ಳಿಯನ್ನು 'ಶ್ರೀ ವೆಂಕಟಸಮುದ್ರವೆಂದು' ಅಗ್ರಹಾರಕ್ಕೆ ಪ್ರತಿನಾಮುವನ್ನಿಟ್ಟು ಶ್ರೀ ವೆಂಕಟಾದ್ರಿಗರ್ಪಿತವೆಂದು ಧಾರೆಯೆರೆದು ಕೊಟ್ಟ ಉಲ್ಲೇಖವಿದೆ (ಪಾವು Supplement 102).

ಅಮೃತೂರು ಚನ್ನಕೇಶವ ದೇವಾಲಯದಲ್ಲಿರುವ ಕ್ರಿ.ಶ ೧೫೪೫ರ ಶಾಸನ ವೀರಪ್ರತಾಪ ಸದಾಶಿವರಾಯರು 'ಶ್ರೀಮತುಸರ್ವನಮಸ್ತದೇಶಮಹಾಗ್ರಹಾರ ಶ್ರೀ ಮದೂದ್ಭವ ಸರ್ವಜ್ಞ ಶ್ರೀವೀರನಾರಸಿಂಹಪುರವಾದ ಆತಕೂರಲ್ಲಿಯ ಶ್ರೀಕೇಶವದೇವರ ಪೂಜೆ, ದೇವಸ್ಥಾನದ ಪ್ರಾಕಾರ ಮೊದಲಾಗಿ ಎಲ್ಲವೂ ಖಿಲವಾಗಿದ್ದಾಗ ಪುನರ್ದತ್ತಿ ನೀಡಿ ಆ ಅಗ್ರಹಾರದ ದೇವಾಲಯದ ಜೀರ್ಣೋದ್ಧಾರ ಮಾಡಿದ್ದನ್ನು ತಿಳಿಸುತ್ತದೆ (ಕುಣಿಗಲು ೪೦). ಇದೇ ಕಾಲದ ಮತ್ತು ಅರಸನ ಕಾಲದಲ್ಲಿ ಶ್ರೀ ವೀರನರಸಿಂಹ ಪುರವಾದ ಆತಕೂರು ಅಗ್ರಹಾರದ ಕೇಶವದೇವರ ಮುಖಮಂಟಪ ಮೊದಲಾದವಕ್ಕೆ ದಾನ ನೀಡಿದ ಉಲ್ಲೇಖವಿದೆ (ಕುಣಿಗಲು-೪೨). ವಾಜರಹಳ್ಳಿ ಹಳೆ ಕಟ್ಟೆ ಏರಿಯ ಬಳಿಯಲ್ಲಿನ ಕ್ರಿ.ಶ.೧೫೭೭ರ ಶಾಸನ 'ಶ್ರೀ ಮತ್ತೂಪುರುಷೋತ್ತಮ ಶ್ರೀ ಗಾಸಿ ತಿಮ್ಮಣ್ಣ ನಾಯಕರಿಗೆ' ಕೊಡಗಿಯನ್ನು ಕೊಟ್ಟು ಹೆಂಜೇರಿನ ಸೀಮೆಯೊಳಗಣ ಅಗ್ರಹಾರದ ತಿಮ್ಮನಾಯಕನ ಕುಂಟೆ

ಒಡೆದಿರಲಾಗಿ ಅದನ್ನು ಕಟ್ಟಿಸಿ ಮಣ್ಣು ಹಾಕಿಸಿ ನವೀಕರಿಸುವ ಸಲುವಾಗಿ, ಆ ಕುಂಟೆಯ ಕೆಳಗಿನ ಐಗೊಳ ಗದ್ದೆಯನ್ನೂ ದಾನ ಮಾಡಿದ ಉಲ್ಲೇಖವಿದೆ (ಶಿರಾ ೧೮). ಇದೇ ತಾಲೂಕಿಗೆ ಸೇರಿದ ಹಂದಿಕುಂಟೆ ಗ್ರಾಮದ ವೀರಭದ್ರ ದೇವಾಲಯದ ಮುಂದಿರುವ ಶಾಸನ ತ್ರುಟಿತವಾಗಿದ್ದು ಶ್ರೀಮತು... ಪುರದ...ಆಗ್ರಹಾರದ.... ಯಿವರಿಗೆ ಗ್ರಾಮವೆರಡು ಮಾನ್ಯಮಾಡ್ದಿದನ್ನು ತಿಳಿಸುತ್ತದೆ (ಶಿರಾ. ೪೯).

ಕುಣಿಗಲು ತಾಲೂಕಿನ ಕೃಷ್ಣಸಾಗರ ಗ್ರಾಮದ ಶಾಸನ ಕ್ರಿ.ಶ.೧೫೯೯ರಲ್ಲಿ ವಿಜಯನಗರದ ಅರಸು ಶ್ರೀರಂಗದೇವರಾಯನ ಆಳ್ವಿಕೆಯಲ್ಲಿ ಯಲಹಂಕ ನಾಡಪ್ರಭು ಇಮ್ಮಡಿ ಹಿರೇ ಕೆಂಪೇಗೌಡರ ಪುಣ್ಯಸ್ತ್ರೀ ವೆಂಕಟಕೃಷ್ಣಾಜಮ್ಮನವರು ಕುಣಿಗಲಿಗೆ ಪಡುವ ದಿಕ್ಕಿನಲ್ಲಿ ಕಟ್ಟಿದ ವೆಂಕಟಕೃಷ್ಣಸಾಗರದ ಗ್ರಾಮ ಒಂದಕ್ಕೆ ೩೦ ಖಂಡುಗದ ಹೊಲವನ್ನು, ದೊಡ್ಡಕೆರೆಯ ಕೆಳಗೆ ೨೦ ಖಂಡುಗದ ಗದ್ದೆಯನ್ನು ಗಂಗಾಧರ ಭಟ್ಟ, ಯಲ್ಲಂಭಟ್ಟ ನರಸವದಾನಿ ಮಾದಲಾದ ೧೯ ಜನರಿಗೆ ಕ್ರಮವಾಗಿ ಒಂದರಂತೆ ವ್ರಿತ್ತಿಯನ್ನು ನೀಡಿ ತಮ್ಮ ಮಾವ ಇಮ್ಮಡಿ ಕೆಂಪೇಗೌಡರಿಗೆ ಅತ್ತೆ ಲಿಂಗಾಜಮ್ಮನವರಿಗೆ ಪುಣ್ಯವಾಗಲಿ ಎಂದು ಅಗ್ರಹಾರಕ್ಕೆ ದಾನ ಮಾಡಿದ ವಿಷಯ ಉಲ್ಲೇಖಿಸಿದೆ. (ಕುಣಿಗಲು ೧೨)

ಅಮೃತೂರು ಹೋಬಳಿ ತೂಬಿನಕೆರೆ ಗ್ರಾಮದ ನಡುವಿರುವ ಶಾಸನದ ಕಾಲ ಕ್ರಿ.ಶ.೧೬೬೩ರಲ್ಲಿ ಶ್ರೀರಂಗಪಟ್ಟಣದಲ್ಲಿ ಸಿಂಹಾಸನರೂಢರಾದ ದೇವರಾಜ ಒಡೆಯರ ಅಳ್ವಿಕೆಯಲ್ಲಿ ತಾವು ಮಾಡಿದಂತ ಹಾಲುಗೆರೆಗೆ ಪ್ರತಿನಾಮದೇಯವಾದ ದೇವರಾಜ ಪುರವೆಂಬ ಅಗ್ರಹಾರವನ್ನ ರಚಿಸಿ ಶಿಲಾಶಾಸನ ಮಾಡಿಸಿ ದಾನ ಮಾಡಿದ ವಿವರ ಹೀಗಿದೆ. 'ತಮಗೆ ವಿಕ್ರಮಾರ್ಜಿತವಾಗಿ ಬಂದ ಹೊಯಿಸಣ ನಾಡಿಗೆ ಸಲುವ ನಾಗಮಂಗಲದ ಹೋಬಳಿ ಅಮೃತೂರು ಸ್ಥಳಕ್ಕೆ ಸಲ್ಲುವ ಹಾಲುಗೆರೆ ಗ್ರಾಮಕ್ಕೆ ತೂಬಿನಕೆರೆ ಉಪಗ್ರಾಮವನ್ನೂ ಇಮ್ಮಡಿ ತಿರುಮಲ ತಾತಾಚಾರಿಯರ ಪುತ್ರ ಕೋಟಿ ಕನ್ಯಾದಾನ ಮಾಡಿದ ಲಕ್ಷ್ಮೀಕುಮಾರ ತಾತಾಚಾರಿಯವರ ಪುತ್ರ ವೆಂಕಟವರದಾಚಾರಿಯರಿಗೆ ತಾವು ಮಾಡಿದ ಲಕ್ಷಹೋಮ, ಶ್ವೇತ ಅಶ್ವದಾನ ಮೊದಲಾದ ಅನೇಕ ದಾನಗಳನ್ನು ನೀಡಿದ ಉಲ್ಲೇಖವಿದೆ (ಕುಣಿಗಲು ೩೩).

ಕ್ರಿ.ಶ.೧೬೭೬ರಲ್ಲಿ ವೀರರಾಮದೇವರಾಯನ ಕಾಲದಲ್ಲಿ ರಣಬೈಚೇಗೌಡನ ಪೌತ್ರನಾದ ರಣಬೈರೇಗೌಡ, ಅವನ ಪುತ್ರ ಹೊಳವನಹಳ್ಳಿ ದೊಡ್ಡರಣಬೈರೇಗೌಡಯ್ಯನವರು ಕಾಳಿಕಾ ಕಮಟೇಶ್ವರ ದುರ್ಗಾಮಹಂಕಾಳಿದೇವಿಯ ದೀಪಾರಾಧನೆ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ಮೊದಲಾದ ಸೇವೆಗಳಿಗಾಗಿ ಸುಮಾರು ಹದಿಮೂರಕ್ಕೂ ಹೆಚ್ಚಿನ ಹಳ್ಳಿಗಳಲ್ಲಿರುವ ಕೆಲವು ಜಾತಿಗಳವರು ಒಂದು ವರ್ಷಕ್ಕೆ ಒಂದು ಮಣದ ಹಣದ ಮೇರೆಯಲ್ಲಿ ನಿಗದಿ ಮಾಡಿ ಮನೆ ಒಂದಕ್ಕೆ ಮದುವೆ, ಮುಂಜಿ, ಶೋಭನ, ನಾಮಕರಣ ಈ ಕಾರ್ಯಗಳ ಸಂಬಂಧ ಇಂತಿಷ್ಟು ನೀಡಬೇಕೆಂದು ನಿಗದಿ ಪಡಿಸಿದೆ. ಕೊರಟಗೆರೆಗೆ ಸೇರಿದ ಅರಸೀಪುರದ ಉಪಗ್ರಾಮ ಅಗ್ರಹಾರವೆಂಬ ಗ್ರಾಮಕ್ಕೆ ಸಹ ಒಳಿತಾಗಲೆಂದು ಅರಮನೆ ಕಡೆಯಿಂದ ದಾನ ಮಾಡಿದ ಉಲ್ಲೇಖವಿದೆ (ಮದ್ದಗಿರಿ.೩೧).

ಕ್ರಿ.ಶ.ಸು.೧೬೯೬ರಲ್ಲಿ ಇಮ್ಮಡಿ ಕೆಂಪಯ್ಯಗೌಡರ ಕಾಲದಲ್ಲಿ ಹುಲಿಯೂರು ದುರ್ಗದ ಹೋಬಳಿ ಶೃಂಗಾರ ಸಾಗರದ ಬಸವಣ್ಣನ ಗುಡಿ ಬಳಿ ಇರುವ ಶಾಸನ 'ಯಲಹಂಕ ನಾಡಪ್ರಭು

ಇಮ್ಮಡಿ ಹಿರೇಕೆಂಪಯ್ಯ ಗೌಡರ ವರಪಟದ ನಾಟಕ ಶಾಲೆಯ ಶೃಂಗಾರಮ್ಮನು ಮಾಡಿದಂಥಾ ಶೃಂಗಾರ ಸಾಗರದ ಅಗ್ರಹಾರದ ಗ್ರಾಮಕ್ಕೆ ಶುಭಮಸ್ತು ಎಂದಿದೆ (ಕುಣಿಗಲು ೨೯). ಇದೇ ೧೭ನೇ ಶತಮಾನಕ್ಕೆ ಸೇರಿದ ಪಾವುಗಡ ತಾಲೂಕು ನಾಗಲಮಡಿಲಿಕೆ ಗ್ರಾಮದ ಆಂಜನೇಯ ದೇವಾಲಯಕ್ಕೆ ಪಶ್ಚಿಮ ಕಾಲುವೆ ಬಳಿ ಇರುವ ತ್ರುಟಿತ ಶಾಸನ ಸೆಟ್ಟಿವರ್ತನ ಸಾವಿರಕ್ಕೆ ಸೇರಿದ ನಾಗಲಮಡಿಕೆಯ ಅಗ್ರಹಾರದ ಮಹಾಜನರಾದ ದೇವೀರಪ್ಪ, ಆನೆಗೊಂದಿಯ ಕುಮಾರ ವೀರಣ್ಣ ದಯರಪ್ಪ ಅವರ ಸಮಕ್ಷಮದಲ್ಲಿ ನಲ್ಲಶೆಟ್ಟಿಯ ನಾಲ್ಕುಕೊಳಗದ ಭೂಮಿಯನ್ನು ನಿರಸಮ್ಮಯಾಚಾರ್ಯರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. (ಪಾವಗಡ ೯೦) ಶಿರಾ ತಾಲೂಕಿಗೆ ಸೇರಿದ ಹಂದಿಕುಂಟೆಗ್ರಾಮದ...ವೀರಭದ್ರ ದೇವಾಲಯದ ಮುಂದಿರುವ ಶಾಸನ ತ್ರುಟತವಾಗಿದ್ದು ಶ್ರೀಮತು...ಪುರದ..ಅಗ್ರಹಾರದ...ಯಿವರಿಗೆ ಗ್ರಾಮವೆರಡು ಮಾನ್ಯ ಮಾಡಿದ ವಿಷಯ ತಿಳಿಯುತ್ತದೆ (ಶಿರಾ ೪೯).

ಕ್ರಿ.ಶ.೧೭೧೮ರ ದೇವರಾಯದುರ್ಗದ ತಾಮ್ರಶಾಸನ ಮೈಸೂರು ಅರಸ ಶ್ರೀಕೃಷ್ಣರಾಜ ವೊಡೆಯರು ಶ್ರೀರಂಗಪಟ್ಟಣದಲ್ಲಿ ಆಳುತ್ತಿರುವಾಗ ಕಕುದ್ಗಿರಿ ಕ್ಷೇತ್ರದ ಉತ್ತರದಲ್ಲಿರುವ ಶೂರಗಿರಿ ದುರ್ಗದ ಕಾವೇರಿ ನದಿಗೆ ದಕ್ಷಿಣಕ್ಕಿರುವ ಕಪಿಲಾನದಿಗೆ ಪೂರ್ವದಲ್ಲಿರುವ ತಾಯೂರು ಬಿಳುಗಲೆ ಪ್ರಭುಗಳಾದ ತಿಮ್ಮರಾಜ ವೊಡೆಯರ ವೊಮ್ಮಗ, ಕೆಂಪರಾಜ ವೊಡೆಯರ ಮಗ ದಾಸರಾಜಯ್ಯನವರು, ಹಿಂದೆ ಭೃಗುಋಷಿಗಳಿಂದ ದೇವತಾರ್ಚನೆಯಾದ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವರ ಸೇವಾನಿಮಿತ್ತ ಪೂರ್ವದಲಿ ಸದಾಶಿವರಾಯ ಸೋಮಸಾಗರ ಅಗ್ರಹಾರವನ್ನು ರಚಿಸಿ ನಾಗದೇವಭಟ್ಟರಿಗೆ ಏಕಭೋಗ್ಯ ವ್ರಿತ್ತಿಯನ್ನಾಗಿ ಮಾಡಿ ದಾನ ಮಾಡಿದ್ದನ್ನು, ದಾಸರಾಜಯ್ಯನು ನಾಗದೇವಭಟ್ಟನ ಮೊಮ್ಮಗ ವಾಂಬಣ್ಣಭಟ್ಟ, ಅವನ ಮೊಮ್ಮಗ ಮಘಂಭಟ್ಟನ ಮಗನಾದ ನರಸಾ ಭಟ್ಟನಿಂದ ಕ್ರಯಕ್ಕೆ ಕೊಂಡುಕೊಳ್ಳುತ್ತಾನೆ. ಕೊಂಡ ವ್ರಿತ್ತಿಗಳನ್ನು ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ದೇವರ ನಿತ್ಯ ಸೇವಾಪೂಜಾಕಾರ್ಯಗಳಿಗೆ ಸಲ್ಲುವಂತೆ ಗಣಸಂಖ್ಯೆ ವ್ರಿತ್ತಿಯನ್ನು ಮಾಡಿ ಅನೇಕ ಬ್ರಾಹ್ಮಣರಿಗೆ ಇಂತಿಷ್ಟು ಎಂದು ಕೊಡಲಾಗಿದೆ. ವ್ರಿತ್ತಿಗಳಿಗೆ ಸಲುವ ಸುಂಕ, ಸುವರ್ಣಾದಾಯ, ಸಕಲ ದವಸಾದಾಯ ಮೊದಲಾದ ಎಲ್ಲವೂ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯ ಶ್ರೀಭಂಡಾರಕ್ಕೆ ಸಲ್ಲುವುದೆಂಬ ವಿವರಣೆ ಸಹಿತ ದೇವಾಲಯದ ಅರ್ಚಕ ನರಸಯ್ಯನ ಪೌತ್ರ, ಚಿಕ್ಕನರಸಯ್ಯನ ಮಗ ತಾತಾಚಾರ್ಯನಿಗೆ ಧಾರಾದತ್ತವಾಗಿ ನೀಡಿದ ಉಲ್ಲೇಖವಿದೆ (ತುಮ ೪೬). ಇದೇ ಕಾಲಕ್ಕೆ ಮತ್ತು ಅದೇ ಲಕ್ಷ್ಮೀನರಸಿಂಹ ಸ್ವಾಮಿ ಸೇವೆಗೆ ದಾಸರಾಜಯ್ಯನು ಶೂರಗಿರಿ ಸೀಮೆಗೆ ಸಲ್ಲುವ ಮಣ್ಣೀವಳಿತವಾದ ಸೋಮಸಾಗರ ಅಗ್ರಹಾರದಲ್ಲಿ ಕ್ರಯಬದ್ಧವಾಗಿ ಸಂಪಾದಿಸಿದ ವ್ರಿತ್ತಿಗಳ ವಿವರಗಳನ್ನು ನೀಡಿದೆ. ಮತ್ತು ದೇವರ ಸೇವೆಯ ವಿವರದ ಜೊತೆ ಪೂಜೆಗೆ ಸಲ್ಲುವ (ವಿವರವಿದೆ) ಎಲ್ಲಾ ಸಾಮಗ್ರಿಗಳಿಗೆ ತಗಲುವ ದ್ರವ್ಯದ ವ್ಯವಸ್ಥೆ ಮಾಡಿ ಈ ಸೇವೆ ಆಚಂದ್ರಾರ್ಕವಾಗಿ ನಡೆಯತಕ್ಕದೆಂದು ದಾಸರಾಜಯ್ಯನು ಬರೆಸಿದ ಉಲ್ಲೇಖವಿದೆ (ತುಮ. ೪೮).

ಚಿಕ್ಕನಾಯಕನಹಳ್ಳಿ ವೋಟುಕೆರೆ ಗ್ರಾಮಕ್ಕೆ ಉತ್ತರದ ಹಾಳು ಸೋಮೇಶ್ವರ ದೇವಾಲಯದ ಬಳಿ ಇರುವ ಕ್ರಿ.ಶ.೧೨೩೫ರ ಹೊಯ್ಸಳ ವೀರಸೋಮೇಶ್ವರ ಆಳುತ್ತಿರುವಾಗ ವೆಬ್ಬೆಯ ಮಾವಂತಯ್ಯ ದಂಡನಾಯಕನು, ಸೇನಬೋವ ಸೋವಣ್ಣನು, ಸೇನಬೋವ ಚವುಡಣ್ಣನು, ವೊಟ್ಟಿಯ ಕೆರೆಯ ಕಲ್ಲಗಾವುಂಡನ ಮಗ ಮಲ್ಲಗೌಡ, ಚಿಕ್ಕಮಾಕಗೌಡ, ಕೇಶಗಾವುಂಡ

ಮೆದಿಗಾವುಂಡ ಸಮಸ್ತ ಪ್ರಜೆಗಾವುಂಡ ಕಾಟೂರವೃತ್ತಿಯ ಯೆಳಹದ ಸೇನಬೋವ ಮಾದಯ್ಯನ ಮಗ ಸೇನಬೋವ ಅಚಯಸಿವಯ್ಯಗಳು ಸೇರಿ ಹಿರಿಯ ಕೆರೆಗೆ ಕಲ್ಲತೂಬನ್ನು ಕಟ್ಟಿಸಿದರು. ಅದಕ್ಕೆ ಸಲುವಳಿಯಾಗಿ ಶ್ರೀಸೋಮನಾಥ ದೇವರ ಮುಂದೆ ಧಾರಪೂರ್ವಕವಾಗಿ ಮಾಡಿ ಬ್ರಹ್ಮಪುರಿಗೆ ಅನೇಕ ಸ್ಥಳದಲ್ಲಿ ಗದ್ದೆ-ಬೆದ್ದಲು ಬಿಟ್ಟ ಉಲ್ಲೇಖವಿದೆ. ಬ್ರಹ್ಮಪುರಿಯನ್ನಾಗಿ ಮಾಡಿ ದಾನ ನೀಡುವುದು ಬ್ರಾಹ್ಮರಿಗೆ. ಈ ಬ್ರಹ್ಮಪುರಿಯನ್ನು ಸಹ ಅಗ್ರಹಾರದ ರೀತಿಯಲ್ಲಿ ಪರಿಗಣಿಸಿ ದಾಖಲು ಮಾಡಲಾಗಿದೆ. (ಚಿಕ್ಕನಾಯಕನಹಳ್ಳಿ Tum.Suppl.vol.xvi -70)

ಮೇಲೆ ಉಲ್ಲೇಖಿತ ಶಾಸನಗಳಲ್ಲಿ ಅಗ್ರಹಾರಗಳನ್ನಾಗಿ ರಚಿಸಿ ಮಹಾಜನರಿಗೆ ಬ್ರಾಹ್ಮಣರಿಗೆ ದಾನ ನೀಡಿದಂತೆ ಬ್ರಾಹ್ಮಣೇತರರಿಗೂ ಅವರು ಸಲ್ಲಿಸಿದ ಗಮನಾರ್ಹ ಸೇವೆಗಳಿಗಾಗಿ ಅವರ ಜೀವಿತಕ್ಕಾಗಿ ರಾಜನೇ ನೀಡಿದ ಅಥವಾ ಅವನ ಕೈಕೆಳಗಿನ ಮಾಂಡಲೀಕರು, ಅಧಿಕಾರಿಗಳು ರಾಜನ ಅನುಮತಿ ಪಡೆದು ನೀಡುವ ದಾನಗಳನ್ನು ಪುರವರ್ಗ, ಕೊಡುಗೆ, ಉಂಬಳಿಗಳೆಂದು ವಿಂಗಡಿಸಲಾಗಿದೆ. ಇವು ಸಹ ಅಗ್ರಹಾರಗಳ ರೀತಿಯಲ್ಲಿ ನೀಡಿದ ದಾನಗಳಾಗಿವೆ. ಇಲ್ಲಿ ವೃತ್ತಿಯನ್ನು ಅನುಭವಿಸುವವರು ಬ್ರಾಹ್ಮಣರು ಸಹ ಇರಬಹುದಾಗಿತ್ತು. ಅಂತಹ ದಾನಗಳನ್ನು ಪರಿಶೀಲಿಸಲಾಗಿದೆ.

ಕ್ರಿ.ಶ.೧೩೧೪ರ ಕಾಲಕ್ಕೆ ಸೇರಿದ ಚಿಕ್ಕನಾಯಕನ ಹಳ್ಳಿ **ಪಾಳೆಯಗಾರ ಮುದಿಯಪ್ಪನಾಯಕರ ಮಗಳು ದೊಡ್ಡ ಬೈರಪ್ಪನಾಯಕರ ಪುಣ್ಯಸ್ತ್ರೀ ಚೆನ್ನಾಜಿ ಅಮ್ಮ ಶೀಲವಂತೆ ಬೋಯಿನಾಯಕರಿಗೆ ಸೀಲವಂತ ಪುರವನ್ನಾಗಿ ದಾನ ನೀಡಲಾಗಿದೆ.** (ಚಿಕ್ಕನಾ.ಹಳ್ಳಿ Tum.supp.46) ಬಹುಶಃ ಇದೇ ಕಾಲಕ್ಕೆ ಸೇರಬಹುದಾದ ಪಾವುಗಡ ತಾಲೂಕಿನ ಆರೇರಹಳ್ಳಿ ಶಾಸನ ಎರಡು ಸಾಲಿನಿಂದ ಕೂಡಿದ್ದು 'ಶುಭಮಸ್ತು ಆರೇರಹಳ್ಳಿಗೆ ಪ್ರತಿನಾಮವಾದ ಶ್ರೀರಾಮಚಂದ್ರ ಸರ್ವಮಾನ್ಯದ ಪುರ' ಎಂದಿದೆ (ಪಾವು.೩೦) ಇದು ಪುರವರ್ಗಕ್ಕೆ ಸೇರಿದ ಗ್ರಾಮವಿರಬೇಕು. ನಾಗೇನಹಳ್ಳಿ ಗ್ರಾಮಕ್ಕೆ ಸೇರಿದ ಕ್ರಿ.ಶ.೧೪೯೫ರ ಶಾಸನ ಕಠಾರಿ ಸಾಳುವ ಇಮ್ಮಡಿ ನರಸಿಂಗರಾಯನ ಸೇನಾಧಿಪತಿ ನರಸಣ್ಣ ನಾಯಕನ ಬಂಟ ನಾಡಪ್ರಭು ತಿಮ್ಮಣ್ಣಗೌಡರ ಮಗ ಕಲಿಯ ತಮ್ಮಯಗೌಡನು ಚೆನ್ನಮಲ್ಲಿಕಾರ್ಜುನ ಒಡೆಯರ ಪುತ್ರ ಸಿದ್ಧದೇವೊಡೆಯರಿಗೆ, ಬಸವರಾಜ ದೇವೊಡೆಯರಿಗೆ 'ನಮ್ಮ ನಾಯಕತನಕೆ ಸಲ್ಲುವ ಕೊರದನಾಡ ತುಮಕೂರ ರಾಜ್ಯದಲ್ಲಿನ ನಾಗೇನಹಳ್ಳಿ ಗ್ರಾಮವನ್ನು ನಮ್ಮಣ್ಣ ಮೂಲಸೂರಣ್ಣಗೌಡ ಸ್ವಾಮಿ ಸೇವೆಗಾಗಿ ಸ್ವರ್ಗಸ್ಥನಾದವನಿಗೆ ಪುಣ್ಯವಾಗಲೆಂದು ಸೋಮೇಗೌಡನಹೆಸರಲ್ಲಿ ನಾಗೇನಹಳ್ಳಿಯನ್ನು ಸೋಮಪುರವೆಂಬ ಪ್ರತಿಯಾಗಿ ಹೆಸರಿಟ್ಟು' ದಾನ ಮಾಡಿದ ಉಲ್ಲೇಖವಿದೆ (ಮದ್ದಗಿರಿ ೩೩) ಎರಮ್ಮನಹಳ್ಳಿ ಕ್ರಿ.ಶ.೧೬೨೦ರ ಶಾಸನ ಮಂಡಲೇಶ್ವರ ಮಳಲೆ ತಿಮ್ಮನಾಯಕನಿಗೆ ಮಗನಾದ ಸಂದರ್ಭದಲ್ಲಿ ಜಂಗಮಾತ್ಮರಾದ ಲೋಕಾರಾಧ್ಯರಿಗೆ ವಿತಳಿಕುಂಟೆ ಜಲಪಲಗುಂಡಿನ ಗ್ರಾಮವನ್ನು ಪುರವರ್ಗವನ್ನಾಗಿ ಮಾಡಿ ಲಿಂಮುದ್ರೆಯ ಗಡಿಕಲ್ಲು ಹಾಕಿಸಿ ದಾನಮಾಡಿದ ವಿಷಯವನ್ನು ತಿಳಿಸುತ್ತದೆ.

ಎಡೆಯೂರು ಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯದ ಪ್ರಾಕಾರದಲ್ಲಿರುವ ಶಾಸನ ಕ್ರಿ.ಶ.ಸು.೧೪೮೦ರಲ್ಲಿ ತೋಂಟದ ಸ್ವಾಮಿಯ ಭಕ್ತರಾದ ದಾನಿವಾಸಿ ನಿವಾಸಿಗಳಾದಚನ್ನರಾಯ ಒಡೆಯರ ಮಕ್ಕಳಾದ, ಲಿಂಗಪ್ಪ ಒಡೆಯರು ಅವರ ಸತಿ ಪಾರ್ವತಮ್ಮನವರು ತೋಂಟದ ಸ್ವಾಮಿಗಳಿಗೆ ಕಲ್ಲಮಠವ ಕಟ್ಟಬೇಕೆಂದು ಚಿಟ್ಟಿಗದೇವರಿಗೆ ಬೇಡಿ ಅನುಮತಿ ಪಡೆದು

ಯೆಡೆಯೂರಿಗೆ ಬಂದು ಎಂಟು ಜಡೆಯ ಬಗೆಯ ಹಿರಿಯರು ಕಟ್ಟಿಸಿ ಅದನ್ನು ಯೆಡೆಯೂರು ಸ್ಥಳದಲ್ಲಿ ಕೊಡಗಿ ಮಾನ್ಯವಾಗಿ ಮಾಡಿ ಚಿಟ್ಟಿಗದೇವರು ಪಡೆದ ಈ ಪುರವರ್ಗದಲ್ಲಿ ಬರುವ ಭಕ್ತರ ಕಾಣಿಕೆಯನ್ನು ದಾಸೋಹ ದ್ರವ್ಯವನ್ನು ತೋಂಟದ ಸ್ವಾಮಿಯ ದಾಸೋಹಕ್ಕೆ ಸಲ್ಲುವಂತೆ ತಿಳಿಸುತ್ತದೆ (ಕುಣಿಗಲು-೪೯).

ಗುಬ್ಬಿ ತಾಲೂಕಿನ ಅರೆಕೆರೆಗ್ರಾಮದ ಕ್ರಿ.ಶ.೧೨೩೩ರ ಶಾಸನ ವೀರನರಸಿಂಹ ದೇವನ ಆಳ್ವಿಕೆಯಲ್ಲಿ ಅರೆಕೆರೆ ಗ್ರಾಮದ ಇಡಗೂರದೇವಿಯ ಭಕ್ತ ಬಲ್ಲೆಯನಾಯಕನಿಗೆ, ಅಪ್ಪಯ್ಯ ದಂಡನಾಯಕನು, ಗೊಪ್ಪಯ್ಯ ದಂಡನಾಯಕನು, ಅರಸ ನಾದಸಿಂಹನಿಗೆ ಬಿನ್ನಹ ಮಾಡಿ ಅನೇಕರನ್ನು ಗೆದ್ದು ಜಯಿಸಿದ ದಂಡಿನ ಸಿರವರ ಬಲ್ಲೆಯ ನಾಯಕನಿಗೆ ಅರಕೆರೆಯ ವ್ರಿತ್ತಿಯನ್ನು ಕೊಡುಗೆಯಾಗಿ ಕೆಲವು ಪ್ರದೇಶಗಳನ್ನು ದಾನವಾಗಿ ಕೊಡುತ್ತಾರೆ. ಅದೇ ಶಾಸನ ಪೂರ್ವದಲ್ಲಿ ಮಾಚೇಶ್ವರ ದೇವರಿಗೆ ಬಿಟ್ಟ ದತ್ತಿಯಲ್ಲಿ ಸಾಮಂತ ಜಗದಾಳಬಲೆಯ ನಾಯಕ ಮಾಚೇಶ್ವರ ದೇವರ ಶ್ರೀಕಾರ್ಯಕ್ಕೆ ತಪೋಜನರ ಆಹಾರದಾನಕ್ಕೆ, ಜೀರ್ಣೋದ್ದಾರಕ್ಕೆ ರೂಪಜೀಯ, ಮಾದಜೀಯಂಗಳಿಗೆ ದಾನ ಕೊಟ್ಟಿದ್ದನ್ನು ಉಲ್ಲೇಖಿಸಿದೆ. (ಗುಬ್ಬಿ ೪೫)

ಕೊಂಡಜ್ಜಿ ಅಗ್ರಹಾರದಲ್ಲಿ ಮಹಾಪ್ರಧಾನಿ ರಾಯದಳರು, ಸಂಧಿವಿಗ್ರಹಿ ಬೊಮ್ಮಣ್ಣ ದಂಡನಾಯಕ,ಕೊಂಡಂಜಿನು ಆ ಹಳ್ಳಿ ಹಿರಿಯೂರ ಸಹಿತ ಶಿವಪುರವ ಮಾಡಿ ಅಘಂದುದೇವರ ಕಾಲುತೊಳೆದು, ಅಘಯ್ಯ ದೇವದೀಕ್ಷನ ಪುತ್ರ ಚಿಕ್ಕದೇವರಿಗೆ ೩೨ ಗಣವ್ರಿತ್ತಿಯನ್ನು ಮಾಡಿ ೨ ವ್ರಿತ್ತಿಯಿಂದ ಊರಿನಲ್ಲಿರುವ ಸೋಮನಾಥ; ಸೋಯಿದೇವರು, ಬ್ರಹ್ಮೇಶ್ವರ, ಅಘಂಮ್ಯೇಶ್ವರ ದೇವರ ಅಮೃತಪಡಿಗೆ ನೀಡಿ ಉಳಿದ ೩೦ ವ್ರಿತ್ರಿಗಳನ್ನು ೨೧ ಜನರಿಗೆ ಹಂಚಿಕೊಟ್ಟ ವಿವರವನ್ನೂ ಕ್ರಿ.ಶ ೧೨೫೫ರ ಶಾಸನ ಉಲ್ಲೇಖಿಸಿದೆ (ಗುಬ್ಬಿ.೪೬ Tum suppl). ತುಮಕೂರಿನ ಮಾವುಕೆರೆ ಗ್ರಾಮದ ಊರಮುಂದಿನ ಆಂಜನೇಯ ದೇವಾಲಯದ ಬಳಿ ಇರುವ ಕ್ರಿ.ಶ.೧೧೦ ರಲ್ಲಿ ಹೊಯ್ಸಳ ವೀರ ಬಲ್ಲಾಳ ದೇವರ ಆಳ್ವಿಕೆಯಲ್ಲಿ ವೀರಬಲ್ಲಾಳನ ಅಧಿಕಾರಿ ಸೋಮಣ್ಣ ಪೆನುಗೊಂಡೆಯ ಬಿಡಕಣಿ ಶ್ರೀವೀರಸಾಂಬುಗೌಡನಿಗೆ ಮಾವುಕೆರೆಯನ್ನು ಕೊಡುಗೆಯಾಗಿ ನೀಡಿದ ಭೂಮಿಕೆಯನ್ನು ಗುರುತಿಸಿ ಚತುಸ್ಸೀಮೆ ಗಡಿಯಲ್ಲಿ ಕಲ್ಲುನೆಟ್ಟು ದಾನ ಮಾಡಿರುವುದನ್ನು ಹೇಳುತ್ತದೆ (ತುಮ ೬೮).

ಬರಗೀಹಳ್ಳಿಯ ಕ್ರಿ.ಶ.೧೩೧೮ರಲ್ಲಿ ಹೊಯ್ಸಳ ವೀರನಾರಸಿಂಹದೇವ ಆಳುತ್ತಿದ್ದಾಗ ಮಹಾ ಮಂಡಲೇಶ್ವರ ಪೊಡೆಯರಾಯವಿಂದು ದೇವರಾಣಿಯರಿಗೆ ಹುಳಿಯನಾಡುವಿನ ಸಂವರಣಿಗಳಿಗೆ ಬರದಿದ್ದಲ್ಲಿ ಹುಳಿಯನಾಡಪ್ರಭು ಹೆಗ್ಗರೆಯ ಹೊನ್ನಗೌಡನ ಮಗ ಕಲ್ಲಗೌಡನ ಕೈಯಲ್ಲಿ ಹೇಳಿಸಿದಾಗ ವೀರಬಲ್ಲಾಳ ದೇವರು ಹುಳಿಯಾರ ನಾಡೊಳಗಣ ಬರಗೆಯ ಹಳ್ಳಿಯನ್ನು ಕಲ್ಲಗೌಡನಿಗೆ ಕೊಡುಗೆಯಾಗಿ ನೀಡಿದ್ದನ್ನು ತಿಳಿಸುತ್ತದೆ.(ಚಿಕ್ಕನಾಯಕನ ಹಳ್ಳಿ Suppl 68) ಇದೇ ಕಾಲದ ಶಾಸನ ವೀರಬಲ್ಲಾಳ ದೇವರ ಬೆಸಿದಿಂ ಶ್ರೀಮನುಮಹಾಪಸಾಯಿತ ಹೊನ್ನಣ್ಣನ ಮಗ ಕಾವಣ್ಣ 'ದೆವಗುಂಡದ ನಾಡು ಕೇಯೂರದ ವಸಣಗೌಡನಿಗೆ ಆ ನಾಡಿನ ಬ್ರಹ್ಮ ಸಮುದ್ರವನ್ನು ಕೊಡಗಿಯಾಗಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ (ತುಮ ೬೩)

ಕ್ರಿ.ಶ ೧೩೩೫ರ ಮುಮ್ಮಡಿ ವೀರಬಲ್ಲಾಳನ ಮಹಾಪ್ರಧಾನಿ ದೆಪಣದ ದೇವಪ್ಪ ದಂಡನಾಯಕ ಮೈದುನ ಬಿಮುಳಪ್ಪ ಅನೆಬಿದರಿಯ ಏಳುನಾಡನಾಥ ಮಾಹೆನಸಿಗರೆಯ ಹೊನ್ನಮಾರಗೌಡನ ಮಗ ಹಿರಿಯ ಬೈಚಗೌಡನಿಗೆ ಮಲೆಗಲನಾಡಿನ ಮೆಳೆಯ ಕೋಟೆಯನ್ನು

ಕೊಡುಗೆಯಾಗಿ ನೀಡಿದ ವಿವರವಿದೆ. (ತುಮ ೭೯) ಇದೇ ಕಾಲದ ಮಾಚೆಯ ದಂಡನಾಯಕನ ಮಗ ಕುಮಾರ ಗಂಗೀದೇವ ನಾಳ್ವಿಕೆಯಲ್ಲಿ ಹೊಸವೂರ ಗೌಡ ಪ್ರಭು ಬೊಮ್ಮಗೊಂಡ, ಅವನ ಮಗ ಲಕಲಿಗೊಂಡ ಮೊದಲಾದ ಪ್ರಜೆ ಗೌಡುಗಳು ಕೂಡಿ ಸಂಕೆಯ ಗೌಡನ ಹೆಸರನಲ್ಲಿ ಸಂಕೆಯನ ಹಳ್ಳಿಯನ್ನು ಮಾಕಲನಾಯಕನ ಮಗ ಚಿಮೆನಾಯಕನಿಗೆ ಪೂಜೆಗೊಡಗಿಯಾಗಿ ನೀಡಿದ್ದನ್ನು ತಿಳಿಸುತ್ತದೆ. (ತುಮ ೮೫) ಕ್ರಿ.ಶ.೧೫೬೫ರಲ್ಲಿ ಸದಾಶಿವರಾಯ ಮಹಾರಾಯರ ಆಳ್ವಿಕೆಯಲ್ಲಿ ಕೋಣನಕುರುಕೆಗೆ ಪ್ರತಿನಾಮವಾದ ವಿಠಲಾಪುರದ ತಿರುವೆಂಗಳನಾಥನ ಸನ್ನಿಧಿಯಲ್ಲಿ ಆ ಗ್ರಾಮದ ಅನೇಕ ಪ್ರದೇಶಗಳನ್ನು ಕೊಡಗಿಯಾಗಿ ನೀಡಿದ ವಿವರವಿದೆ. (ಪಾವುಗಡ ૩૪)

ಸಮುದ್ರನ ಕೋಟೆಯ ಆಂಜನೇಯ ದೇವಾಲಯದಲ್ಲಿನ ಶಾಸನ ಕ್ರಿ.ಶ.೧೬ನೇ ಶತಮಾನಕ್ಕೆ ಸೇರಿದ್ದು ಬೈರಪ್ಪನಾಯಕನ ಮಗ ಚಿಕ್ಕಹನುಮಪ್ಪ ನಾಯಕ, ತ್ಯಾಗಟೂರ ರಾಮೇಶ್ವರಿ ಕುಮಾರರಾಯ ಬೇಟಪ್ಪನ ಕೊಡಿಗೆ ಮಗ ಬೇಟರಾಯನ ಶಾಸನ (ಗುಬ್ಬಿ ೧೫) ಇದೇ ಕಾಲದ ಧೂಳನಹಳ್ಳಿಗ್ರಾಮದಲ್ಲಿನ ಶಾಸನದ ಆರಂಭದ ಭಾಗ ತ್ರುಟಿತವಾಗಿದ್ದು ನಾಡಪ್ರಭು.... ಮಸಣಿಗೌಡನ ಮಕ್ಕಳು ರಾಮಣ್ಣನು ಮಸಣಪ್ಪನಿಗೆ ಗುಬ್ಬಿಯ ಸ್ಥಳದ ಧೂಳನ ಹಳ್ಳಿಯನ್ನು ಕೊಡಗಿಯಾಗಿ ಕೊಟ್ಟ ವಿವರವಿದೆ (ಗುಬ್ಬಿ ೩).

ಕ್ರಿ.ಶ.೧೫೪೩ರ ಶಾಸನದಲ್ಲಿ ಬಯಿರಪ್ಪನಾಯಕ ಅಯ್ಯನ ಕಾರ್ಯಕರ್ತರಾದ ಕೆಂಪಣ್ಣ ನಾಯಕ, ನಂದ್ಯಪ್ಪ ನಾಯಕ ಅಯ್ಯನು ಶೀತಕಲ್ಲು ಗಂಗಪ್ಪನಾಯಕನಿಗೆ 'ನಾಡಗೌಡಿಕೆಯ ದಂಡಿಗೆ ಉಂಬಳಿ'ಯಾಗಿ ನೀಡಿದ ವಿವರವಿದೆ (ತುಮ.೫೯). ಕ್ರಿಶ.೧೫೬೨ರಲ್ಲಿ ಶ್ರೀರಾಮಕೃಷ್ಣ ದೇವರಾಯರು ಪೆನುಗೊಂಡೆಯಲ್ಲಿ ರಾಜ್ಯವಾಳುತ್ತಿದ್ದಾಗ ಮಹಾನಾಡ ಪ್ರಭು ಬಿಡ್ಯವರದ ಮುಮ್ಮಡಿ ಚಿಕ್ಕಪ್ಪಗೌಡಯ್ಯ ನಮ್ಮ ಅಳಿಯ ಕೆರೆಯಪ್ಪಗೌಡ ನಮ್ಮ ಹೆಣ್ಣು ಮಗಳ ಕ... ಮಗೆ ಕೊಟ್ಟ ಕೋರೆಯ ಮಾಗಣಿಗೆ ಸಲ್ಲುವ ಬ್ರಹ್ಮಸಮುದ್ರದ ಕಾಲುವಳಿ ಕರಿಕೆರೆ ಗ್ರಾಮವನ್ನೂ ಉಂಬಳಿಯಾಗಿ ನೀಡಿದ ಉಲ್ಲೇಖವಿದೆ (ತುಮ.೬೬). ಹಾಗಲವಾಡಿ ಹೋಬಳಿ ಅಳಲಗಟ್ಟದ ಶಾಸನ ಕ್ರಿ.ಶ ೧೫೭೩ರಲ್ಲಿ ಚವರದ ಚೆನ್ನಪ್ಪ ನಾಯಕನ ಕಾರ್ಯಕರ್ತನಾದ ರಾಮಪರಸಯ್ಯನು ಪೆನುಗೊಂಡೆಯ ಆನೆಬಿದರೆಯ ಶಿವಗಂಗೆಯ ಸ್ಥಳದ ಬಿದರೆಯ ಸೀಮೆಯಲ್ಲಿನ ಅಳುಲಗಟ್ಟದ ಗ್ರಾಮವನ್ನು ಚೆನ್ನಪ್ಪನಾಯಕರು ನಿನಗೆ ಪಲ್ಲಕ್ಕಿಯ ಉಂಬಳಿಗಾಗಿ ದಾನ ಮಾಡಿದರು. ಅದನ್ನು ನಿನ್ನ ಪುತ್ರ ಪೌತ್ರ ಪರಂಪರೆಯಲ್ಲಿ ಅನುಭವಿಸುವಂತೆ ಹೇಳಿದೆ (ಗುಬ್ಬಿ ೫೯). ಹುಲಿಯೂರು ದುರ್ಗದ ಟಂಕನಹಳ್ಳಿ ಗ್ರಾಮದ ಹೊಲದಲ್ಲಿನ ಕ್ರಿ.ಶ.೧೭ನೇ ಶತಮಾನಕ್ಕೆ ಸೇರಿದ ಶಾಸನ ಬಹಳಷ್ಟು ತ್ರುಟಿತವಾಗಿದ್ದು 'ಕಂಟನಹಳ್ಳಿಯನ್ನು ಕೆಂಪರಾಮೇಗೌಡನಿಗೆ ಉಂಬಳಿಯನ್ನಾಗಿ ನೀಡಿದ ವಿಷಯವಿದೆ.

ಗ್ರಂಥ ಋಣ EC Vol.12, ತುಮಕೂರು, Suppl. Vol.XIV

ಚಿಕ್ಕಮಗಳೂರು ಪ್ರದೇಶದ ಶಾಸನಗಳಲ್ಲಿ ವೀರಶೈವರು

ಪ್ರಾಚೀನ ಕರ್ನಾಟಕವನ್ನಾಳಿದ ಅರಸುಮನೆತನಗಳು ಹಿಂದೂ ಧರ್ಮದ ಅನುಯಾಯಿಗಳಾಗಿದ್ದರೂ, ಪರಮತ ಸಹಿಷ್ಣುಗಳಾಗಿದ್ದರೆಂಬುದಕ್ಕೆ ಶಾಸನಗಳು ಆಧಾರವಾಗಿವೆ. ಬೌದ್ಧ, ಜೈನ, ಶೈವ, ವೈಷ್ಣವ ಹಾಗೂ ಶ್ರೀವೈಷ್ಣವ ಧರ್ಮಗಳು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಜನಪ್ರಿಯತೆಯನ್ನು ಹೊಂದಿದ್ದು, ಇಂದಿಗೂ ಅವು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಅದರಲ್ಲೂ ಸುಮಾರು ೧೦-೧೧ನೆಯ ಶತಮಾನದಲ್ಲಿ ತಲೆ ಎತ್ತಿದ ವೀರಶೈವಧರ್ಮವು ಕನಾಟಕದ ಸಂಸ್ಕೃತಿಗೆ ತನ್ನದೆ ಆದ ವಿಶಿಷ್ಟ ಕೊಡುಗೆಯನ್ನು ನೀಡಿದೆ. ವೀರಶೈವಧರ್ಮವು ಶಿವಾಗಮ ತಳಹದಿಯ ಮೇಲೆ ರೂಪುಗೊಂಡಿದೆ. ಶಿವಯೋಗಿ ಶಿವಾಚಾರ್ಯರ 'ಸಿದ್ಧಾಂತ ಶಿಖಾಮಣಿ', ಶ್ರೀಪತಿಪಂಡಿತರ 'ಶ್ರೀಕರಬಾಷ್ಯ,' ಶಿವಾಚಾರ್ಯರ 'ಶಿವಾದ್ವೈತಮಂಜರಿ' ಮೊದಲಾದ ಸಂಸ್ಕೃತ ಗ್ರಂಥಗಳಲ್ಲಿ ವೀರಶೈವ ಧರ್ಮವು ಪ್ರತಿಪಾದಿತವಾಗಿದೆ. ಅಲ್ಲದೆ 'ಶಿವತತ್ವ ಚಿಂತಾಮಣಿ', 'ವೀರಶೈವಾಮೃತ ಮಹಾಪುರಾಣ' ಮೊದಲಾದ ಕೃತಿಗಳಲ್ಲಿಯೂ ಈ ಧರ್ಮದ ಬಗ್ಗೆ ಸಾಕಷ್ಟು ವ್ಯಾಪಕ ವಿವರಗಳು ದೊರೆಯುತ್ತವೆ.

ಚಿಕ್ಕಮಗಳೂರು, ಕಡೂರು, ಕೊಪ್ಪ, ಶೃಂಗೇರಿ, ತರೀಕೆರೆ, ನರಸಿಂಹರಾಜಪುರ, ಮೂಡಿಗೆರೆ ತಾಲೂಕುಗಳನ್ನೊಳಗೊಂಡ ಕಾಫಿಯ ಕಂಪಿಗೆ ಈ ಚಿಕ್ಕಮಗಳೂರು ಜಿಲ್ಲೆ ಹೆಸರಾಗಿದೆ. ಈ ಜಿಲ್ಲೆಯಲ್ಲಿ ತುಂಗ, ಭದ್ರಾ, ಹೇಮಾವತಿ, ನೇತ್ರಾವತಿ, ವೇದವತಿ ಹಾಗೂ ಯಗಚಿ ನದಿಗಳು ಹುಟ್ಟಿ ಹರಿಯುತ್ತವ. ದಕ್ಷಿಣ ಭಾರತದಲ್ಲಿ ಅತಿ ಎತ್ತರದ ಮುಳ್ಳಯ್ಯನ ಗಿರಿಶ್ರೇಣಿಯನ್ನು ಈ ಜಿಲ್ಲೆ ಹೊಂದಿದೆ. ಜೊತೆಗೆ ಚಂದ್ರದ್ರೋಣಪರ್ವತ, ಕುದುರೆಮುಖ, ಕಲ್ಲತ್ತಗಿರಿ, ಕೆಮ್ಮಣ್ಣುಗುಂಡಿ ಮೊದಲಾದ ಗಿರಿಕಂದರಗಳನ್ನು ಹೊಂದಿರುವ ರಮ್ಯ ಸುಂದರ ಮಲೆನಾಡ ಪ್ರದೇಶವಾಗಿವೆ. ಪ್ರಾಕೃತಿಕ ಶ್ರೀಮಂತಿಕೆಯ ಜೊತೆಗೆ ಧಾರ್ಮಿಕ ಶ್ರೀಮಂತಿಕೆಯನ್ನು ಪಡೆದಿದೆ. ವೀರಶೈವ ಪಂಚಪೀಠಗಳಲ್ಲಿ ಒಂದಾದ ಶ್ರೀರಂಭಾಪುರಿ ಪೀಠ ಶ್ರೀರೇಣುಕಾಚಾರ್ಯರಿಂದ ಬಾಳೇಹೊನ್ನೂರಿನ ಭದ್ರಾನದಿಯ ದಂಡೆಯಲ್ಲಿ ಸ್ಥಾಪಿತವಾಗಿದೆ. ಈ ಜಿಲ್ಲೆಯಲ್ಲಿ ಪುರಾತನ ಕಾಲದಿಂದ ಎಪ್ಪತ್ತೇಳು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆತ ಆಧಾರದ ಮೇಲೆ ಶೋಧನೆಗೆ ತೊಡಗಿದಾಗ ೩೪ ಮಠಗಳು ಮಾತ್ರ ದೊರೆತ ಆಧಾರವಿದೆ. (ಕರ್ನಾಟಕದ

ವೀರಶೈವ ಮಠಗಳು ಲೇ.ಚಂದ್ರಶೇಖರ ನಾರಣಾಪುರ, ಪುಟ ೩೪೯). ಆದರೆ ಈಗ ಅಸ್ತಿತ್ವದಲ್ಲಿರುವ ಮಠಗಳು ೧೬ ಎಂದಿದ್ದಾರೆ (ಅದೇ, ಅನುಬಂಧ-೨). ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಜಿಲ್ಲೆಯ ಶಾಸನೋಕ್ತ ಮಠಗಳು ನಿರಾಸಿಮಠ, ವಿರಕ್ತಮಠ, ಫಲಾಹಾರಮಠ, ಬಾಳೇಹೊನ್ನೂರು ಮಠ (ರಂಭಾಪುರಿ ಪೀಠ), ಗಾಳಿಪೂಜೆಮಠ, ಪರ್ವತಮಠ, ಭಿಕ್ಷಾವೃತ್ತಿಮಠ, ಜಂಗಮವಾಡಿಮಠಗಳ ಉಲ್ಲೇಖ ದೊರಕುತ್ತವೆ.

ವೀರಶೈವಧರ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಚಲಿತವಾಗುವುದಕ್ಕೆ ಮುನ್ನ ಶೈವಧರ್ಮದ ಶಾಖೆಗಳಾದ ಶುದ್ಧಶೈವ ಮತ್ತು ಕಾಳಮುಖ ಶೈವಗಳು ಇಲ್ಲಿ ಪ್ರಭಾವಿತವಾಗಿದ್ದವು. ಜಿಲ್ಲೆಯ ಅನೇಕ ಶಾಸನಗಳು ಈ ಬಗ್ಗೆ ನಮಗೆ ಮಾಹಿತಿಯನ್ನು ನೀಡುತ್ತವೆ. ವೀರಶೈವಧರ್ಮ ಪ್ರಚಾರಕ್ಕೆ ಬಂದ ೧೨ನೇ ಶತಮಾನದ ಪೂರ್ವದಲ್ಲಿ ಮಹೇಶ್ವರರು, ಮಹಾಮಾಹೇಶ್ವರರು ಎಂಬ ಉಲ್ಲೇಖಗಳು ಶಾಸನದಲ್ಲಿ ಬರುತ್ತವೆ. ಅವರಲ್ಲಿ ಕೆಲವರು ಕಾಳಮುಖ ಪಂಥಕ್ಕೆ ಸೇರಿದವರು ಇದ್ದಾರೆ. ಇಂತಹ ಮಾಹೇಶ್ವರರನ್ನು ಸಾಮಾನ್ಯವಾಗಿ ವೀರಶೈವಧರ್ಮದ ಮೊದಲ ಹಂತದ ಶೈವರು ಎಂದು ಭಾವಿಸುತ್ತಾರೆ. ನನ್ನ ನಿರೂಪಣೆಯಲ್ಲಿ ಮಾಹೇಶ್ವರರನ್ನು ವೀರಶೈವಧರ್ಮದ ಅಂಕುರಾರ್ಪಣ ಆದ ಕಾಲದ ಮೊದಲ ವೀರಶೈವರು ಎಂದೇ ಭಾವಿಸಿ ಈ ಉಲ್ಲೇಖಗಳನ್ನು ಗಮನಿಸಿದ್ದೇನೆ. ತಲಕಾಡಿನ ಗಂಗರ ಕಾಲದಲ್ಲಿ ಅವರ ನಂತರ ಬಂದ ಹೊಯ್ಸಳರ ಕಾಲದಲ್ಲಿ ಈ ಶೈವಧರ್ಮ ಶಾಖೆಗಳಿಗೆ ಸಂಬಂಧಪಟ್ಟ ವ್ಯಕ್ತಿಗಳ ಅನೇಕ ಶೈವ ದೇವಾಲಯಗಳನ್ನು ನಿರ್ಮಾಣ ಮಾಡಿರುತ್ತಾರೆ. ಹೀಗಾಗಿ ಶೈವಧರ್ಮದ ವಿವಿಧ ಶಾಖೆಗಳಿಗೆ ಒಂದು ಗಟ್ಟಿಯಾದ ನೆಲೆಗಟ್ಟನ್ನು ಇವರು ರೂಪಿಸಿರುತ್ತಾರೆ. ಕ್ರಿ.ಶ.೭ನೆಯ ಶತಮಾನದಲ್ಲಿಯೇ ಈ ಜಿಲ್ಲೆಯಲ್ಲಿ ಪಾಶುಪತಧರ್ಮವು ಪ್ರಚಲಿತದಲ್ಲಿತ್ತೆಂಬುದನ್ನು ಕಿಗ್ಗದ ಶಾಸನ (ಶೃಂ.೫೭) ಶ್ರೀ ಸಾನ್ತರಸನ ಕಾಲದಲ್ಲಿ 'ಸ್ವಸ್ತಿಪೂರ್ವ ಮರಿಯಾದೆಯಾ ಕಮ್ಮಱರ ಪಾಶುಪಾತಮರಿಯಾದೆಯಾ' ಎಂದು ತಿಳಿಸುತ್ತದೆ. ಹೀಗಾಗಿ ಈ ಪ್ರದೇಶದಲೆಲ್ಲಾ ಶೈವಪಂಥೀಯರ ಪ್ರಭಾವವನ್ನು ಕಾಣಬಹುದಾಗಿದೆ.

ವೀರಶೈವಧರ್ಮ ಪ್ರಾಚೀನವಾದುದೆಂಬುದು ಸ್ಪಷ್ಟವಾಗಿದೆ. ಈ ಧರ್ಮದ ಪ್ರಕಾರ ವಿಶ್ವಸೃಷ್ಟಿಗೆ ಸರ್ವಾಂತರ್ಯಾಮಿ ಶಿವನೇ ಆಧಾರ. ಶಿವನೇ ಸತ್ಯ; ತತ್ವಸಿದ್ಧಾಂತ ಅಮೂಲ್ಯ ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಶಿವನಲ್ಲಿ ಭಕ್ತಿಯ ಮೂಲಕ ಸಾಕ್ಷಾತ್ಕಾರ ಅಥವಾ ಮುಕ್ತಿ ಪಡೆಯುವುದು ಎಲ್ಲಾ ಮಾನವರ ಹಕ್ಕು ಎಂದು ಬೋಧಿಸುವ ಈ ಧರ್ಮವನ್ನು ಆಚರಿಸಿಕೊಂಡು ಬಂದು ಕಾಯಕಗಳಿಗೆ ಹೆಚ್ಚು ಮಾನ್ಯತೆ ನೀಡಿ ಮೇಲು-ಕೀಳು, ಧನಿಕ-ದರಿದ್ರ, ವರ್ಣ-ವರ್ಗ-ಲಿಂಗ ಈ ಮೊದಲಾದ ತಾರತಮ್ಯ ಭಾವನೆಯನ್ನು ತೊಡೆದು ಹಾಕಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಪ್ರದೇಶಗಳಲ್ಲಿ ವೀರಶೈವಕ್ಕೆ ಸಂಬಂಧಿಸಿದಂತೆ ಸುಮಾರು ನಲವತ್ತಕ್ಕೂ (೪೦) ಹೆಚ್ಚಿನ ಶಾಸನಗಳು ದೊರತಿವೆ. ಆ ಶಾಸನಗಳಲ್ಲಿ ದೊರಕಿರುವ ವಿವರಗಳನ್ನು ಈ ಪ್ರಬಂಧದಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಇತಿಹಾಸಕ್ಕೆ ಸಂಬಂಧಿಸಿದ ವಿವರಗಳಿಗೆ ಹೋಗಿರುವುದಿಲ್ಲ, ಶಾಸನಗಳಲ್ಲಿ ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ಲಭಿಸುವ ಅಗತ್ಯ ವಿವರಗಳನ್ನು ಮಾತ್ರ ವಿಶೇಷವಾಗಿ ಪರಿಗಣಿಸಲಾಗಿದೆ.

ವೀರಶೈವ ಧರ್ಮದ ಸ್ಪಷ್ಟವಾದ ಉಲ್ಲೇಖಗಳು ಈ ಜಿಲ್ಲೆಯಲ್ಲಿ ಹದಿನಾಲ್ಕನೆ ಶತಮಾನದ ನಂತರ ಗೋಚರಿಸಿದರು, ಆ ಕಾಲಕ್ಕಿಂತ ಮೊದಲೇ ಈ ಜಿಲ್ಲೆಯಲ್ಲಿ ಅಲ್ಲಲ್ಲಿ ಆಚರಣಯಲ್ಲಿದ್ದ

ಕೆಲವು ಕುರುಹುಗಳನ್ನು ಕಾಣಬಹುದಾಗಿದೆ. ಕಡೂರು ತಾಲೂಕಿನ ಕ್ರಿ.ಶ.೧೦೬೧ರ (ಕ.೩೯) ಶಾಸನ 'ಮಹಾಮಹೇಶ್ವರ ಗಣಾವತಾರಂ' ಎಂಬ ಪದ ಉಲ್ಲೇಖವಾಗಿದ್ದು ವೀರಶೈವರ ಕಲ್ಪನೆಯಾದ ಗಣಾವತಾರದ ಪ್ರಾಚೀನ ಉಲ್ಲೇಖವೆಂಬುದನ್ನು ಗಮನಿಸಬಹುದು. ಇದರಿಂದ ಇಲ್ಲಿ ಬಸವಣ್ಣನವರಿಗಿಂತ ಮೊದಲೆ ವೀರಶೈವ ಧರ್ಮದ ಪ್ರಭಾವವಿದ್ದುದನ್ನು ತಿಳಿಯಬಹುದು. ನೇರವಾಗಿ ವೀರಶೈವ ಎಂದು ಗುರುತಿಸಲು ಕಷ್ಟವಾದರೂ ಕೋಟೆವೂರು ಗ್ರಾಮದ ಕ್ರಿ.ಶ.೧೦೫೮ರ ಶಾಸನವು (ಚಿ.ಮ.೧೪೭) ಆವಣೂರ ದೇವರಿಗೆ ಮತ್ತು ಕೆಱೆಯ ಪಂಚವೇಶ್ವರ ದೇವರಿಗೆ ಕಾಡಹಳ್ಳಿಯನ್ನು ದೇವದಾನವಾಗಿ ನೀಡಿದ್ದನ್ನು ಹೇಳುತ್ತದೆ. ಎಲೂಗೆರೆಯ ಶಿವಾಲಯದ ಬಳಿಯ ಕ್ರಿ.ಶ.೧೧೪೮ರ ಶಾಸನವು (ತರಿ.೨೦) ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಸಾಮಂತ ಮನ್ನೆಯ ಪೆರ್ಗ್ಗಡೆ ನರಸಿಂಹನ ಕಾಲದಲ್ಲಿ ಗಂಗಗೌಡ, ಮಲ್ಲೇಗೌಡ,'ಎಲವಂಗೆಱೆಯ ಶ್ರೀಗಂಗೇಶ್ವರ ದೇವರ ಮತ್ತು ಕುರುವದ ರಾಮೇಶ್ವರದೇವರ ರಂಗಭೋಗಕ್ಕೆ ತ್ರಿಕಾಲಪೂಜೆಗೆ ನೈವೇದ್ಯಕ್ಕೆ ಗುರುಪರ್ವ್ವ ನಿಮಿತ್ತಕ್ಕೆ, ಸೊಡರಿಗೆ ಗಾಣದೆಣ್ಣೆ ಮೊದಲಾದವನ್ನು ಚಂದ್ರಶೇಖರಪಂಡಿತರ ಕಾಲನ್ನು ತೊಳೆದು ಭೂದಾನ ಮಾಡಿದ ವಿಷಯ ತಿಳಿಸುತ್ತದೆ. ಕ್ರಿ.ಶ.೧೧೫೬ರ ಆರಂತೊಳೆಯ (ಕ.೬) ಶಾಸನವು ಹೊಯ್ಸಳ ಒಂದನೇ ನರಸಿಂಹನ ಕಾಲದಲ್ಲಿ ಹೆರ್ಗ್ಗಡೆ ಹಡವಳಯ್ಯನು ಸೋಮೇಶ್ವರಪಂಡಿತರ ಕಾಲು ತೊಳೆದು ಹಿರಿಯಕೆಱೆಯ ಕೆಳಗಣ ಪ್ರದೇಶವನ್ನು ಮಲ್ಲಿಕಾರ್ಜುನದೇವರಿಗೆ ಭೂದಾನ ಮಾಡಿದ್ದನ್ನು ಹೇಳುತ್ತದೆ.

ಆಸಂದಿಯ ಕ್ರಿ.ಶ.೧೯೧ರ ಶಾಸನ (ಕ.೧೭) ದಲ್ಲಿ ಗಂಗ ಮಾಂಡಳೀಕ ನರಸಿಂಹದೇವನ ಕಾಲದಲ್ಲಿ ಮಹಾಪ್ರಧಾನಿ ಬಂಮ್ಮರಸದೇವನು 'ತಂಮ ತಾಯಿ....ಮಹಾದೇವಿಯರುಂ ಸ್ವರ್ಗಗಾಮಿಗಳಾದಾಗ ಆಕೆಗೆ ಪಿಂಡಪ್ರದಾನಮುಂ ಮಾಡಿ' ಆಕೆಯ ಮೋಕ್ಷಪ್ರಾಪ್ತಿಗಾಗಿ ಶ್ರೀಪರ್ವತದ ಪಾತಾಳಗಂಗೆಯಿಂದ 'ಸಲಕ್ಷಣಮಪ್ಪ ಲಿಂಗಸಲಾಖೆಗಳಂ ತರ್ಸಿ' ಪ್ರತಿಷ್ಠಾಪನೆಯನ್ನು ಮಾಡಿ 'ಬ್ರಹ್ಮೇಶ್ವರ, ಗಂಗೇಶ್ವರ ದೇವರೆಂದು ನಾಮೋಚ್ಚರಣಂ' ಮಾಡಿಸಿ 'ರಾಜಗುರು ಕ್ರಿಯಾಶಕ್ತಿದೇವ, ಸೇನಬೋವ ಕಲ್ಯಾಣದೇವ' ಈ ಇಬ್ಬರ ಕಾಲು ತೊಳೆದು ಅರ್ಪಿಸಿ, ಆ ದೇವರ...ರಂಗಭೋಗ, ಜೀರ್ಣೋದ್ಧಾರ, ಚಯಿತ್ರ, ಪಯಿತ್ರ, ನೈಮಿತ್ತಕ ತಿಥಿಗಳಿಗೆ ಸರ್ವನಮಃಶಿವಾಯವಾಗಿ ಆಸಂದಿಯ ಹಿರಿಯ ಕೆಱೆಯ ಕೆಳಗೆ 'ಕಪ್ಪರನ ಕುಱಿವ'ದಲ್ಲಿ ಗದ್ದೆಯನ್ನು ಭೂದಾನವಾಗಿ ನೀಡುತ್ತಾನೆ. ದತ್ತಿಯನ್ನಾಗಿ ನೀಡಿದ ಭೂಮಿಯ ನಾಲ್ಕು ದಿಕ್ಕಿನಲ್ಲಿ ಗಡಿಗಳನ್ನು ನಿಗದಿಪಡಿಸಿ ಲಿಂಗಮುದ್ರೆಕಲ್ಲುಗಳನ್ನು ಹಾಕಿಸಿ, ಆ ಸ್ಥಳದ ಸಂಪೂರ್ಣ ವಿವರಗಳನ್ನು ಶಾಸನ ನೀಡಿದೆ. ಅಲ್ಲದೆ ಅಸಂದಿಯ ಬಂಮಗೌಡ, ಆದಿಗೌಡ, ಪಟ್ಟಣಸ್ವಾಮಿ, ಸೆಟ್ಟಿಯಣ್ಣ ಇವರು ಸಹ ಶ್ರೀ ಬ್ರಹ್ಮೇಶ್ವರ, ಗಂಗೇಶ್ವರದೇವರ 'ಹೊತ್ತಱಿನ ಉಪಹಾರಕಂ, ನಂದಾದೀವಿಗೆಗಂ' ಭೂದಾನವನ್ನು ಕೊಟ್ಟು ನಾಲ್ಕು ದಿನಕ್ಕಿನಲ್ಲಿಯೂ ಗಡಿಗಳನ್ನು ನಿಗದಿಪಡಿಸಿ ಲಿಂಗಮುದ್ರೆಕಲ್ಲುಗಳನ್ನು ಹಾಕಿಸಿದಂತೆ ಹೇಳಿರುವುದನ್ನು ಗಮಿಸಿದಾಗ ಇದು ಆ ಕಾಲಕ್ಕೆ ಪಂಚಪೀಠ ಪರಂಪರೆಯ ಪ್ರಮುಖ ಪೀಠಗಳಲ್ಲಿ ಬಾಳೇಹೊನ್ನೂರು (ರಂಭಾಪುರಿ) ವೀರಶೈವ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಶ್ರೀಶೈಲದ ಪ್ರಭಾವವನ್ನು ತೋರಿಸುತ್ತದೆ. ಈ ಶಾಸನದ ಉಲ್ಲೇಖಗಳನ್ನು ಗಮನಿಸಿದಾಗ ಈ ಕಾಲಕ್ಕಾಗಲೇ ಪರೋಕ್ಷವಾಗಿ ಈ ಸ್ಥಳದ ಜನತೆಯ ಮೇಲೆ ವೀರಶೈವಧರ್ಮವು ಪ್ರಭಾವ ಬೀರಿರುವುದನ್ನು ಗುರುತಿಸಬಹುದಾಗಿದೆ.

ಗಂಗೇಶ್ವರ ದೇವಾಲಯದ ರಂಗಮಂಟಪದ ತೊಲೆಯ ಮೇಲಿರುವ ಕ್ರಿ.ಶ.೧೨೦೬ರ ಶಾಸನವು (ಕ.೧೪) ಆಸಂದಿನಾಡನ್ನು ಆಳುತ್ತಿದ್ದ ಮರಳು ಮಾರ್ಕಂಡದೇವನ ಕಾಲದಲ್ಲಿ ಸಮಸ್ತ ಗೌಡರು, ಪ್ರಭು ಗಾವುಂಡರು ಗಂಗೇಶ್ವರ, ಬ್ರಹ್ಮೇಶ್ವರ, ವೇದೇಶ್ವರ, ನಖರೇಶ್ವರ, ವೀರಬ್ರಹ್ಮೇಶ್ವರ, ದೇಕೇಶ್ವರ, ಬಲ್ಲೇಶ್ವರ, ಮಾಚೇಶ್ವರ, ಜಗತೇಶ್ವರ, ಜಾದೇಶ್ವರ ಮಾರೇಶ್ವರ ಮೊದಲಾದ 'ಸಿವಸ್ಥಾನಂ'ಗಳಿಗೆ ಲಖಿಗಡುಗೆ ಹಾಗೂ ನಂದಾದೀವಿಗೆಗೆಂದು ಸುಂಕ ಪನ್ನಾಯವನ್ನು ಸರ್ವಬಾಧೆ ಪರಿಹಾರವಾಗಿ ಆ ಸ್ಥಳದ ರಾಜಗುರು ಕ್ರಿಯಾಶಕ್ತಿದೇವರು ಮೊದಲಾದ ಸಮಸ್ತ ತಪೋಧನರ ಕಾಲು ತೊಳೆದು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ವೀರಭದ್ರ ದೇವಾಲಯದ ಮುಂದಿರುವ ಕ್ರಿ.ಶ.೧೨೧೭ರ ಶಾಸನ (ಕ.೧೧) ಕಲ್ಲಿನಲ್ಲಿ ಆಸಂದಿ ನಾಡನ್ನು ಆಳುತ್ತಿದ್ದ ಹರಿಹರದಣ್ಣಾಯಕರು, ಆಸಂದಿನಾಡ ಹೆಬ್ಬಾರ ಮಾರ್ಕಂಡದೇವ ಆಲಕಟ್ಟೆ ಹರಿಯಣ್ಣ, ಸಿಂಗಯ್ಯ ಪಟ್ಟಣಸಾಮಿ ಸೆಟ್ಟಿಯಣ್ಣ, ಆದಿಗೌಡ, ಕೇತಗಾವುಂಡ ಮುಂತಾದ ಸಮಸ್ತ ಪ್ರಜೆಗಾವುಂಡಗಳು ಮತ್ತು ಹರಿಹರ ದಣ್ಣಾಯಕರು ಶ್ರೀ ಬಲ್ಲೇಶ್ವರದೇವರ ಅಂಗಭೋಗಕ್ಕೆ, ನೈವೇದ್ಯಕ್ಕೆ ನಂದಾದೀವಿಗೆಗೆ, ಜೀರ್ಣೋದ್ಧಾರಕ್ಕೆ ಶಕ್ತಿಪಂಡಿತರ ಮಗ ರುದ್ರಶಕ್ತಿ ಮತ್ತು ಕಲ್ಯಾಣಶಕ್ತಿದೇವರುಗಳ ಕಾಲನ್ನು ತೊಳೆದು ಮಾಚರಸನ ನೆಲ್ಲಿಕೆರೆಗ್ರಾಮಕ್ಕೆ ಬಲ್ಲೇಶ್ವರಪುರವೆಂದು ಹೆಸರನ್ನಿಟ್ಟು ಗಡಿಕಲ್ಲುಗಳನ್ನು ನೆಟ್ಟು ದಾನ ಮಾಡಿದ ವಿಷಯ ತಿಳಿಸುತ್ತದೆ. ಅದೇ ಕಲ್ಲಿನಲ್ಲಿರುವ ಕ್ರಿ.ಶ.೧೨೩೪ (ಕ.೧೨) ಇನ್ನೊಂದು ಶಾಸನದಲ್ಲಿ ಮಾಚವ್ವೆ ಮಗಳು ನಾಗಮ್ಮ ಆಕೆಯ ಮಗ ಹೊನ್ನನ ಮಗಳು ಸಿರಿಯವ್ವೆಯರ ವೃತ್ತಿ ಸಂಬಂಧಿತ ವಿವಾದವನ್ನು ಅಸಂದಿಯ ರಾಜಗುರು ನಾರಸಿಂಗಗುರು ವಾಮಶಿವದೇವರು ಹಾಗೂ ಎಕ್ಕೋಟಿ ತಪೋಧನರು ಹಾಗೂ ಗೌಡು ನಖರಂಗಳ ಸನ್ನಿಧಿಯಲ್ಲಿ, ಬಲ್ಲೇಶ್ವರದ ಕಲ್ಲಜೀಯ ಮತ್ತು ನಾಗಜೀಯರಿಂದ ಎಂಟು ಹೊನ್ನನ್ನು ದಂಡವಾಗಿ ಪಡೆದು ಸಿರಿಯವ್ವೆ ಅವರಿಗೆ ಕೊಡುವ ಮೂಲಕ ವ್ಯಾಜ್ಯವನ್ನು ಬಗೆಹರಿಸಿದಾಗ, ಸ್ಥಾನಿಕರ ಕಾಲು ತೊಳೆದು ಬಲ್ಲೇಶ್ವರನ ಸನ್ನಿಧಿಯಿಂದ ಇನ್ನು ನಮ್ಮಿಂದ ಯಾವ ತಕರಾರು ಇಲ್ಲವೆಂದು ಹೇಳಿಕೆ ನೀಡಿದ ವಿಷಯ ದಾಖಲಾಗಿದೆ. ಕೋರ್ಟು, ಕಚೇರಿಗಳಿಲ್ಲದ ಆ ಕಾಲದಲ್ಲಿ ನಡೆಯುತ್ತಿದ್ದ ನ್ಯಾಯತೀರ್ಮಾನವನ್ನು ಮೇಲಿನ ಶಾಸನದಿಂದ ತಿಳಿಯಬಹುದು. ಕೌಟುಂಬಿಕ ತೊಂದರೆ ತಕರಾರು ಅಥವಾ ಇತರ ವ್ಯಾಜ್ಯಗಳಿದ್ದಲ್ಲಿ ಅವುಗಳನ್ನು ದೇವರು, ದೈವಗಳ ಸನ್ನಿಧಿಯಲ್ಲಿ ಬಗೆಹರಿಸಿ ಕೊಳ್ಳುತ್ತಿದ್ದರೆಂಬುದು ವೇದ್ಯವಾಗುತ್ತದೆ.

ಮರಲೆಯ ಕ್ರಿ.ಶ.೧೨೪೩ರ (ಚಿ.ಮ.೧೧೦) ಶಾಸನವು ಕುಡುಗಲೂರ ರಾಜರಸನ ಮಗ ಬಂಮರಸದೇವನು ಶ್ರೀರಾಯಕೇಶವಪುರವಾದ ಮೊರಲೆಯ ಸಿದ್ಧಾಯವನ್ನು ಶ್ರೀಕೇಶವದೇವರ ಹಾಗೂ ಶ್ರೀ ಸಿದ್ಧೇಶ್ವರದೇವರ ಸೊಡರೆಣ್ಣೆಯ ನಂದಾದೀವಿಗೆಯನ್ನು ನಡೆಸುವುದಕ್ಕೆ ಸುಂಕ ಮನ್ನಮಾಡಿ ದಾನ ನೀಡಿದ ಬಗ್ಗೆ ಗಮನ ಸೆಳೆಯುತ್ತದೆ. ಈ ಶಾಸನದಿಂದ ಶಿವನನ್ನು ಹಾಗೂ ಕೇಶವನನ್ನು (ವಿಷ್ಣು) ಜನತೆ ಸಮಾನ ಭಕ್ತಿಯಿಂದ ದೇವತಾರಾಧನೆ ಮಾಡುತ್ತಿದ್ದ ವಿಷಯ ತಿಳಿಯುತ್ತದೆ. ಅಂಬಳೆಯ ಲೋಕೇಶ್ವರ ದೇವಾಲಯದ ಕ್ರಿ.ಶ.೧೨೪೯ರ ಶಾಸನವು (ಚಿ.ಮ.೮೭) ಊರಂಮೆಳೆಯ ವೊರೊಡೆಯ ಮಾಚಯ್ಯ ಮತ್ತು ಇತರ ಸಮಸ್ತ ಪ್ರಜೆಗಾವುಂಡಗಳು 'ಹತ್ತು ಗದ್ಯಾಣಗಳನ್ನು ಬಳಿ ಸಹಿತ ಕುಳವ ಕಡಿದು ಪಂಚಮಠಸ್ಥಾನದ ಮೂಲಸ್ಥಾನದ ಲೋಕೇಶ್ವರದೇವರು, ಬಿಟ್ಟೇಶ್ವರ, ನಖರೇಶ್ವರ, ಹರಿಹರದೇವರು, ಕೇಶವದೇವರು, ಅಜೇಶ್ವರ,

ಗವರೇಶ್ವರ, ಗಂಗೇಶ್ವರ, ಚಿತ್ರೇಶ್ವರ, ತೆಲಿಗೇಶ್ವರ, ಬಲ್ಲೇಶ್ವರ, ಮಂಟೇಶ್ವರ ಹಾಗೂ ಎರಡು ಬಸದಿ ಮತ್ತು ಬಳ್ಳಾರಿಯೊಳಗಾದ ಸಮಸ್ತ ದೇವಸ್ಥಾನಂಗಳಿಗೆ ಸರ್ವಭಾದೆ ಪರಿಹಾರವೆಂದು ವೊರಂಮೆಳೆಯವರನೊಡಂಬಡಿಸಿ ಬೆಟ್ಟರಸ ಡಣ್ಣಾಯಕರು ಧಾರಾಪೂರ್ವಕವಾಗಿ ದಾನ ಕೊಟ್ಟ ವಿವರಗಳನ್ನು ನೀಡುತ್ತದೆ. ಈ ಶಾಸನಗಳಿಂದ ಗಮನಿಸಬೇಕಾದ ಮುಖ್ಯ ಅಂಶಗಳೆಂದರೆ ಶೈವ, ವೈಷ್ಣವ ಮತ್ತು ಜೈನ ಬಸದಿಗಳಿಗೆ ಸಹ ದಾನ ನೀಡಿರುವುದು, ಜನರು ಸಮನ್ವಯ ಭಾವನೆಯಿಂದ ದೇವತಾರಾಧನೆ ಮಾಡುತ್ತಿದ್ದ ವಿಷಯ ಗಮನ ಸೆಳೆಯುತ್ತದೆ.

ಚಿಕ್ಕಮಗಳೂರಿನ ಕ್ರಿ.ಶ.೧೨೫೭ರ ಶಾಸನವು (ಚಿ.ಮ.೧) ಶ್ರೀ ವೀರನಾರಸಿಂಗದೇವನ ಆಳ್ವಿಕೆಯಲ್ಲಿ 'ದೇವಳಿಗೆನಾಡು, ಚಿಕ್ಕಮುಗಳಿಯ ನಾಡನ್ನಾಳುತ್ತಿದ್ದ ಪ್ರಭು ಸೋಮಗೌಡನ ಮಗ ಮಸಣಗೌಡ, ಆತನ ಮಗ ಸೋಮಣ್ಣನ ತಮ್ಮ ಬಾಚನಾಯಕರು ಶ್ರೀ ಸೋಮನಾಥದೇವರನ್ನು ಹಾಗೂ ಶ್ರೀ ವೀರಭದ್ರದೇವರ ಪ್ರತಿಷ್ಠೆಯನ್ನು ಮಾಡಿ ಆ ದೇವರ 'ಪೂಜೆಯುಪಾರಕ್ಕೆ' ಭೂದಾನ ಮಾಡಿದ ವಿವರವಿದೆ. ಈ ಶಾಸನ ಬಾಚೆಯನಾಯಕನನ್ನು 'ಸೈ(ಶೈ)ವಸಮಯನಿಸ್ತಾರ (ಕ) ತಾಂ ಭೂವಳಯದೊಳಗೆ ಬುಧನಿಧಿ, ವೀರನೊಳಗೇಕ ವೀರಂ, ಬಾಚಂ, ಉರವಣಿಸಿ ಹರನ ಭಕ್ತರ... ಚರಣಾಂಬುಜವ ಪೂಜಿಸುವ ಕಲಿಯುಗ ವೀರಭದ್ರನು, ಮಾಹೇಶ್ವರ ಗಣಾವತಾರನು, ಸಿವಸಮಯ ವಾರ್ದ್ಧಿವರ್ಧನ ಸುಧಾಕರ'ನೆಂದು ಕಂದಪದ್ಯಗಳ ಮೂಲಕ ಹೊಗಳಿದೆ. ಗೌತಮೇಶ್ವರ ಕ್ರಿ.ಶ.೧೨೬೫ರ (ಚಿ.ಮ.೧೩೩) ಶಾಸನವು ಹೊಯ್ಸಳ ವೀರನಾರಸಿಂಗದೇವನ ಅಳ್ವಿಕೆಯಲ್ಲಿ ಅವರ ಮಹಾಪ್ರಧಾನಿ ಸೋಮಯ್ಯ ದಂಡನಾಯಕನ ಮೈದುನ ಬೊಮ್ಮಣ್ಣನು ತಳಿಗೆನಾಡವೊಂಬತ್ತು ಮಂದೆ, ಹದಿನಾಲ್ಕು ಹಳ್ಳಿ, ಆಱುನಾಡು, ಸಾಯಿರ ಭೂಮಿಗೆ ಮಯಗವುಡ, ಸೋಮಗೌಡ, ಬಪ್ಪಗೌಡ, ಆಣೂರ ಮಾದಿಗೌಡ ಮೊದಲಾದ ಸಮಸ್ತ ಗೌವುಡಗಳನ್ನು ಮುಂದಿಟ್ಟುಕಂಡು 'ನಾಡ ಶಿವಾಲ್ಯಂಗಳಿಗೆ ಅಭಾಗ್ಯತೆ, ಅನ್ಯಾಯ, ತಪ್ಪು, ತವುಡಿ, ದಂಡ, ವುಂಡಿಗೆ, ವೊಡದತಲೆ, ವೊಕ್ಕಭರಣಯಿಂತಿವು ಯಿಲ್ಲವೆಂದು' ನಾಡ ತಮ್ಮಡಿಗಳಿಗೆ ದಾನ ನೀಡಿ ಸುಂಕ ಮಾನ್ಯ ಮಾಡಿದ ವಿಷಯವನ್ನು ಉಲ್ಲೇಖಿಸಿದೆ. ಆಸಂದಿ ಗ್ರಾಮದ ವೀರಭದ್ರ ದೇವಾಲಯದಲ್ಲಿರುವ ಕ್ರಿ.ಶ.೧೩ನೇ ಶತಮಾನದ (ಕ.೧೦) ಶಾಸನವು ಬಲ್ಲವೆಗ್ಗಡೆ ಎಂಬಾತನು ಬಲ್ಲೇಶ್ವರದೇವರ ದೇವಾಲಯವನ್ನು ಮಾಡಿಸಿ ರುದ್ರಶಕ್ತಿಪಂಡಿತರಿಗೆ ಅರ್ಪಿಸಿ ಗದ್ದೆಯನ್ನು ಉಂಬಳಿಯಾಗಿ ನೀಡಿದ್ದನ್ನು ಹೇಳುತ್ತದೆ.

ಮಹಾಮಂಡಲೇಶ್ವರ ವೀರಬುಕ್ಕಣ್ಣೊಡೆಯರ ಆಳ್ವಿಕೆಯ ಕಾಲವು ಕ್ರಿ.ಶ.೧೩೬೯ರ ಶಾಸನವು (ನ.ಪು.೧೮) ಬಾಳೇಹಳ್ಳಿ ವೀರಭದ್ರ ದೇವಸ್ಥಾನದ ಪ್ರಾಕಾರದಲ್ಲಿರುವ ಶಾಸನ ಬಾಳೆಹೊನ್ನೂರು ಮಠದ ಇರುವಿಕೆಯ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ. ಅರಗದ ರಾಜಕುಮಾರ ವಿರುಪಣ್ಣ ಒಡೆಯರ ಪ್ರಧಾನಿ ಮಾದರಸ ಒಡೆಯನು ಸಾತಳಿಗೆ ನಾಡಿನ 'ಬಾಳೆಹಣ್ಣಿನ ವೀರೇಶ್ವರ ದೇವರ ಅಮೃತ ಪಡಿಗೆ ವರಹ ೧೦೧ರ ೪೦ ಕುಳವಕಡಿದು ನಾಡುಸಂತೆಲಿ ಸಿಗುರವಳಿ ಒಳಗೆ' ಭೂಮಿಬುನ ನೀಡಿದ್ದನು ತಿಳಿಸುತ್ತದೆ. ಇಂದಿಗೂ ಈ ಶಾಖೆಯ ಮಠಗಳಿರುವೆಡೆಯಲ್ಲಿ ಈ ದೇವಾಲಯಗಳು ಪ್ರಧಾನವಾಗಿರುತ್ತವೆ. ಹಿಂದೆ ಇಲ್ಲಿ ಬ್ರಾಹ್ಮಣರ ಸತ್ರವೂ ನಡೆಯುತ್ತಿದ್ದ ಬಗ್ಗೆ ಶಾಸನ ಉಲ್ಲೇಖಿಸುತ್ತದೆ. ಬಾಳೆಹಳ್ಳಿ ಅದೇ ಕಾಲದ ಅಂದರೆ ಕ್ರಿ.ಶ.೧೩೬೯ರ ಶಾಸನವು (ನ.ಪು.೨೦) ವೀರಬುಕ್ಕರಾಯನ ಆಳ್ವಿಕೆಯಲ್ಲಿ 'ಮದರ್ಸವೊಡೆಯನು ಅರಗ, ಸುಯಿಡುಗುಟ,

ಕೊಲೆನಾಡು ಮುಂತಾದ ರಾಜ್ಯವಾಳುತ್ತಿದ್ದಾಗ, ಅವನ ಮಕ್ಕಳಾದ ಬೊಲ್ಲರಸ ಮಕ್ಕಿವನು ಮಾಡುತ್ತಿದ್ದು, ಶ್ರೀ ವೀರ ವಿರುಪಣ್ಣವೊಡೆಯರಿಗೆ ಪ್ರಿಥ್ವಿರಾಜ್ಯವಹಂತಾಗಿ ಹೊಂಗನಾಡೊಳಗಣ ಬಾಳೆಹಳ್ಳಿಯ ವೀರಭದ್ರನ ನಂದಾದೀವಿಗೆಗೆ ಪ್ರತಿ ತಿಂಗಳು ೧ ಕ್ಕೆ ಪಣ ೫ ಲೆಕ್ಕದಲ್ಲಿ ವರುಷ ೧ ಕ್ಕೆ ಆರು ಹೊನ್ನು ನೀಡಬೇಕೆಂಬ ಉಲ್ಲೇಖವಿದೆ. ಇದೇ ಕಾಲದ (ತೇದಿ ಇಲ್ಲದ) ಇದೇ ಶಾಸನದ ಬಲಭಾಗದಲ್ಲಿ (ನ.ಪು.೨೧) ಬೊಲ್ಲರಸನಿಗೆ ಒಳ್ಳೆಯದಾಗಲಿ ಎಂದು ವೀರಭದ್ರದೇವರಿಗೆ ಪ್ರಾರ್ಥನೆ ಸಲ್ಲಿಸಿದಂತೆ ಹೇಳಲಾಗಿದೆ. ಈ ಬೊಲ್ಲರಸನು ವಿಜಯನಗರದ ಅರಸ ಒಂದನೇ ಬುಕ್ಕರಾಜನ ರಾಜ್ಯಪಾಲ ಮಾದರಸನ ಕೈಕೆಳಗಿನ ಅಧಿಕಾರಿಯಾಗಿದ್ದವನು ಬಾಳೆಹಳ್ಳಿ (ನ.ಪು.೨೪)ರಂಭಾಪುರಿ ಮಠದಲ್ಲಿರುವ ಹಿತ್ತಾಳೆಯ ಹಲಗೆಯ ಮೇಲೆ ''ಶ್ರೀ ಗುರುಪೀಠ ಶ್ರೀರಂಬಾಪುರಿ ವೀರಸಿಂಹಾಸನ'' ಎಂಬ ಬರಹ ಮಾತ್ರವಿದ್ದು, ಶಾಸನದಲ್ಲಿ ಮತ್ತೆ ಯಾವ ವಿವರವಿಲ್ಲ.

ಬಾಳೇಹಳ್ಳಿಯ ಕ್ರಿ.ಶ.೧೪೧೩ರ ವೀರಭದ್ರ ದೇವಸ್ಥಾನದ ಪ್ರಕಾರದಲ್ಲಿರುವ ಎರಡು ಶಾಸನಗಳಲ್ಲಿ ಒಂದು (ನ.ಪು.೨೨) ಆರಗದ ಹರಿಯಪ್ಪವೊಡೆಯರು, ಪ್ರಧಾನ ಮಲ್ಲಪವೊಡೆಯರ ಮನೆಯ ಅಧಿಕಾರಿ ಬೊಂಮರಸನು ಬಾಳೆಹಳ್ಳಿಯ 'ವೀರೇಶ್ವರದೇವರಿಗೆ ಕುಳವ ಕಡಿದು ಭೂವ್ರಿತ್ತಿ' ಬಿಟ್ಟ ಧರ್ಮದ ಪ್ರಸ್ತಾಪವಿದೆ. ಅದೇ ಕಲ್ಲಿನ ಹಿಂಭಾಗದಲ್ಲಿರುವ ಮತ್ತೊಂದು ಶಾಸನ (ನ.ಪು.೨೩) 'ನಿರಾಳದೇವನ ಮಗ ಎರಡಿಯಂಕಯ್ಯ ಹಾಗೂ ಮಹದೇವನ ಮಗ ಹರಿಯಂಣ' ಇವರಿಬ್ಬರು ವೀರೇಶ್ವರ ದೇವರನಾಳುವರು ಎಂದಿದೆ. ಅಂದರೆ ಇವರಿಬ್ಬರಿಗೆ ವೀರೇಶ್ವರ ದೇಗುಲದ ಆಡಳಿತಾಧಿಕಾರವನ್ನು ವಹಿಸಲಾಗಿದ್ದುದನ್ನು ಹೇಳಿ ಆ ದೇವರ 'ಆಮ್ರುತಪಡಿಗೆ ಸಾತಮಂಗಲದ ಹೆಬ್ಬಾರು ಮತ್ತು ಇತರರು ಸೇರಿ 'ಅರಸಕೆಱೆ ಭೂಮಿಯ ಕುಳವಕಡಿದು ಭೂಮಿಚಂದ್ರರಿರುವನಕ ಈ ಧರ್ಮ' ನಡೆಯಲೆಂದು ಹೇಳಿದೆ. ಬೆಂಡಗ ಗ್ರಾಮದ ಕ್ರಿ.ಶ.೧೫೨೨ (ಚಿ.ಮ.೫೬) ಶಾಸನವು 'ಶ್ರೀಮತು ಮುತರದಹೋಳ (?) ತಿಂಮಣನಾಯಕರ ಮಕ್ಕಳಾದ ಚೆನ್ನಣ್ಣನಾಯಕರು ಬೆಂಡಿಗದ ನಿರಾಸಿಮಠದ ಸಿದ್ಧಯ್ಯ ದ್ಯಾವಣ್ಣೊಡೆಯರಿಗೆ ಭೂದಾನ ನೀಡಿದ ಗದ್ದೆಯಲ್ಲಿ ಲಿಂಗಮುದ್ರೆಯ ಪಾಶಾಣ ಪ್ರತಿಷ್ಠೆ ಮಾಡಿ ದಾನ ನೀಡಿದ ವಿಷಯ ತಿಳಿಸುತ್ತದೆ. ಪುರದ ಮಲ್ಲಿಕಾರ್ಜುನ ದೇವಾಲಯದ ಗಣಪತಿದೇವರ ಮುಂಭಾಗದ ಕಲ್ಲಿನ ತೊಲೆಯ ಮೇಲಿರುವ ಕ್ರಿ.ಶ.೧೫೨೬ರ (ಕ.೧೨೩) ಶಾಸನವು ಹಡಪದ ಬೈಯಪ್ಪನಾಯಕರ ತಂದೆ ತಿಮಣ್ಣನಾಯಕರಿಗೆ ಪುಣ್ಯವಾಗಲೆಂದು ಅವರ ವಂಶಸ್ಥನಾದ ಚನ್ನಪ್ಪನೆಂಬುವನು ಶ್ರೀಮಲ್ಲಿಕಾರ್ಜುನ ದೇವರಿಗೆ ಸೂರ್ಯೋದಯವಾದ ೧೦ನೇ ಗಳಿಗೆಯ ನೈವೇದ್ಯಕ್ಕೆ ಅಕ್ಕಿ, ಹೆಸರು, ತುಪ್ಪ ಎಣ್ಣೆ ಮೊದಲಾದವುಗಳನ್ನು ನೀಡಿದ ವಿವರ ಉಲ್ಲೇಖವಾಗಿದೆ. ಫಲಶ್ರುತಿಯ ನಂತರ ಕಡೆಯಲ್ಲಿ 'ಶ್ರೀ ವೀರಭದ್ರನೆ ಗತಿ' ಎಂದಿದೆ. ಈ ಶಾಸನದಿಂದ ಈತನ ವಂಶಸ್ಥರು ವೀರಭದ್ರನ ಒಕ್ಕಲಾಗಿರಬೇಕೆಂಬ ಅಂಶವನ್ನು ಸೂಚಿಸುತ್ತದೆ. ಇದೇ ಬಾಳೆಹಳ್ಳಿ ಮಠಕ್ಕೆ ಸೇರಿದ ಕ್ರಿ.ಶ.೧೫೩೩ರ ಶಾಸನವು (ನ.ಪು.೧೭) ವೀರಭದ್ರ ದೇವಾಲಯದ ಮುಂದಿನ ಮಂಟಪದ ಹಾಸುಗಲ್ಲಿನಲ್ಲಿದ್ದು 'ದೇವಾಲ್ಯಕ್ಕೆ ವಿರುಪಾಕ್ಷಶಾಲೆ ಗೆಯ್ಸಿದರು' ಎಂಬ ವಿಷಯ ಮಾತ್ರವಿದೆ. ಲಿಂಗಾಪುರ ಕೆಱೆಯ ಏರಿಯ ಮೇಲಿರುವ ಕುರುವಂಗಿಯ ರಾಮೇಶ್ವರ ದೇವಸ್ಥಾನದ ಕ್ರಿ.ಶ.೧೫೪೯ರ ಶಾಸನವು (ಚಿ.ಮ.೮೫) ಶ್ರೀ ಸದಾಶಿವರಾಯರಿಗೆ ರಾಜಾಭ್ಯುದಯವಾಗಬೇಕೆಂದು ಹಿರಿಯ ಬಸವಪ್ಪ

ಗೌಡಪ್ರಭು ಮತ್ತು ಮೊದಲಾದ ಸಮಸ್ತರು ರಾಮೇಶ್ವರ ಲಿಂಗಕ್ಕೆ, ಅಂಗರಂಗ ವೈಭೋಗ, ಅಮಾವಾಸೆ, ಶಿವರಾತ್ರಿಯ ರಥೋತ್ಸವ, ಕರಡೆ, ಕಂಸಾಳೆ, ಡೋಳು, ಕಾಳೆ, ನಂದಾದೀವಿಗೆ ಇವು ನಡೆಯುವಂತೆ ಹೇಳಿ ಪುರವನು ಕಟ್ಟಿಸಿ ದೇವರ ಪೂಜಾಕಾರ್ಯಗಳು ನಡೆಯಲೆಂದು ದಾನ ಮಾಡಿರುವುದನ್ನು ಮತ್ತು ದೇವರ ಪೂಜೆಗೆ ಹಿಟ್ಟು, ಹುಗ್ಗೆಯ ತೆರಿಗೆಯನ್ನು ಮನ್ನಾ ಮಾಡಿದಂತೆ ಹೇಳುತ್ತದೆ.

ಲಿಂಗಾಪುರ ಕೆರೆಯ ಏರಿಯ ಮೇಲಿರುವ ಕ್ರಿ.ಶ.೧೫೫೩ರ (ನ.ಪು.೩೬) ಶಾಸನ ಶ್ರೀ ಸದಾಶಿವರಾಯರ ಆಳ್ವಿಕೆಯ ಕಾಲದಲ್ಲಿ ಲಿಂಗಣ್ಣ ನಾಯಕರು ದಾನಿವಾಸದ ಸೀಮೆಯೊಳಗೆ ಕೆರೆಯ ಮೂಡಣ ತೆವರ ಮೇಲೆ ವಿರೂಪಾಕ್ಷವೊಡೆಯರ ಮಗ, ಚೆನ್ನರಾಯವೊಡೆಯರ ಮಗನು ಸೇರಿ ಲಿಂಗ ಪ್ರತಿಷ್ಠೆಯನ್ನು ಮಾಡಿ, ನಮಗೂ ನಮ್ಮ ಮಾತಾಪಿತೃಗಳಿಗೂ ಶಿವಸಾಯುಜ್ಯವಾಗ ಬೇಕೆಂದು ದೇವರ ಅಮೃತಪಡಿಗೆ, ನಂದಾದೀವಿಗೆಗೆ ೫೦ ಅಯಿವತ್ತು ಖಂಡುಗ ಭೂಮಿಯನ್ನು ಬ್ರಾಹ್ಮಣರ ಸತ್ರಕ್ಕೆ, ವಿರೂಪಾಕ್ಷ ಲಿಂಗ, ಬಸವೇಶ್ವರ ದೇವರಿಗೆ ದತ್ತಿಯಾಗಿ ನೀಡುವುದರ ಜೊತೆಗೆ ವಿರೂಪಾಕ್ಷ ಹಾಗೂ ಬಸವೇಶ್ವರ ದೇವರ ಪ್ರತಿಷ್ಠೆಯನ್ನು ಮಾಡಿ ಗದ್ದೆ ಭೂಮಿಯನ್ನು ಅಮೃತಪಡಿ, ನಂದಾದೀಪ್ತಿ ಸೇವೆಗಳಿಗೆಂದು ದಾನ ನೀಡಿದ್ದನ್ನು ಮತ್ತು ಹಳೇಬೀಡಿನ ಶ್ರೀವೀರ ಹೊಯ್ಸಳ ಬಲ್ಲಾಳ ಮಹಾರಾಯರಿಂದ ತಮಗೆ ವಂಶಾನ್ವಯವಾಗಿ ನಾಯಕತನಕ್ಕೆ ಸಿಕ್ಕಿದ ದಾನಿವಾಸದ ಸೀಮೆಯ ಬಗ್ಗೆಯೂ ಶಾಸನ ಉಲ್ಲೇಖಿಸಿದೆ. ಇದೇ ಬಾಳೆಹಳ್ಳಿಯ (ನ.ಪು.೧೯) ವೀರಭದ್ರ ದೇವಾಲಯದ ಕ್ರಿ.ಶ.೧೫೪೯ರ ಶಾಸನವು ಬಾಳೇಹೊನ್ನೂರು ಸಿಂಹಾಸನಕ್ಕೆ ಸಂಬಂಧಿಸಿದ ಕುಮಾರ ಚೆನ್ನಬಸವಣ್ಣವೊಡೆಯರ ಗೋತ್ರ ಪುರುಷ ದೇವರಾದ ವೀರಭದ್ರದೇವರ ಭಂಡಾರಕ್ಕೆ ದಾನಿವಾಸದ ನಾಯಕರಾದ ಚೆನ್ನವೀರಣ್ಣನಾಯಕ, ಲಿಂಗಣ್ಣನಾಯಕ, ಮಲ್ಲಣ್ಣನಾಯಕ, ಚಿಕ್ಕಮಲ್ಲಣ್ಣನಾಯಕ ಹಾಗೂ ಅಲ್ಲಿನ ಸಮಸ್ತರೂ ಗ್ರಾಮ ಸಾಧನದ ಭಿನ್ನವತ್ತಳೆಯನ್ನು ಅರ್ಪಿಸಿದ್ದನ್ನು ತಿಳಿಸುತ್ತದೆ. ಮತ್ತು ಅಲ್ಲಿಯೇ ದೊರೆತ ಅವರ ಹಿರಿಯರ ಹೆಸರಿನಲ್ಲಿ ಅಂದರೆ ವಿರೂಪಾಕ್ಷ ವೊಡೆಯರು, ಚೆಂನರಾಯವೊಡೆಯರು, ಅರಸಪ್ಪೊಡೆಯರ ಹೆಸರಿನಲ್ಲಿ ಅಡವು ಮೈಸಾಲದ ಪತ್ರಗಳು, ಹಾಗೂ ದಾನಿವಾಸದ ನಾಡವರ ಹೆಸರ ಪತ್ರಗಳು, ಕೊಪ್ಪದ ಬಸವಪ್ಪನವರ ವಶದಲ್ಲಿದ್ದ ಕೈ ಸಾಲದ ವಿವರವುಳ್ಳ ಪತ್ರಗಳು, ಬಾಳೇಹಳ್ಳಿ ಸಿಂಹಾಸನಕ್ಕೆ ಸೇರಿದವುಗಳು. ಅವು ಸಿಂಹಾಸದಿಂದ ಹನ್ನೆರಡು ಸಾವಿರ ಹಣವನ್ನು ಸಾಲವಾಗಿ ಪಡೆದ ಸಾಲದ ಪತ್ರಗಳು ಮೇಲೆ ಉಲ್ಲೇಖಿಸಿದ ಭಿನ್ನವತ್ತಳೆಯಲ್ಲಿ ಗದ್ಯಾಣ ೧೨೦೦೦ ಹನ್ನೆರಡು ಸಾವಿರ ವರಹಕ್ಕೆ ಬಡ್ಡಿ ಸಹಿತವಾಗಿ ಶೇಕಡ ಒಂದರಂತೆ ಸಾಲ ತೀರಿಸಲು ದಾನಿವಾಸದ ಸೀಮೆಯ ಉಳುರ್ವಾನಿ, ಚಾರುಂಬಳ್ಳಿ, ದೊಡ್ಡಮಾನಿ ಗ್ರಾಮಗಳನ್ನು ಸಿಂಹಾಸನಕ್ಕೆ ಬಿಟ್ಟುಕೊಟ್ಟು ಸಾಲವನ್ನು ತೀರಿಸುತ್ತಿದ್ದೇವೆ. ಇನ್ನು ಮುಂದೆ ಸಿಂಹಾಸನದಲ್ಲಿ ಬಾಳುವ ಸ್ವಾಮಿಗಳಾಗಲಿ, ಸಿಂಹಾಸನದ ಸಂಮಂಧವಾಗಲಿ, ಬಸಪ್ಪಯ್ಯನ ಸಂಮಂಧವಾಗಲಿ ಬೇರೆ ಸಾಲವುಂಟೆಂದು ಕೇಳಲಾಗದು. ದಾನಿವಾಸದ ನೆಲದಲ್ಲಿ ಬಾಳುವಂಥಾ ಅರಸರಾಗಲಿ, ನಾಡವರಾಗಲಿ ಈ ಗ್ರಾಮಗಳ ವ್ಯವಹಾರದಲ್ಲಿ ತಲೆ ಹಾಕಬಾರದೆಂದು ಸಂಬಂಧಿ ಸಿದ ಗ್ರಾಮಗಳ ಎಲ್ಲಾ ಮುಖ್ಯಸ್ಥರುಗಳಿಂದ ಒಪ್ಪಿತ ಸಾಕ್ಷಿ ಹಾಕಿಸಿರುವುದನ್ನು ಹೇಳಿ, ದಾನಿವಾಸದ ಅರಸುಗಳ ಮನೆ ದೇವರಾದ ದಾನಿವಾಸದ ವೀರಭದ್ರ ಉಳುರ್ವಾನಿಯ ವೀರಭದ್ರರೇ ಎಲ್ಲಕ್ಕೂ ದೇವಸಾಕ್ಷಿಯಾಗಿದ್ದಾರೆ. ತಪ್ಪಿದರೆ ವೀರಭದ್ರದೇವರ ಪಾದಕ್ಕೆ ತಪ್ಪಿದ ಪಾಪವುಂಟಾಗುತ್ತದೆ ಎಂಬ

ವಿವರಗಳು ಶಾಸನದಲ್ಲಿದೆ. ಈ ಶಾಸನದಿಂದ ಬಾಳೇಹೊನ್ನೂರು ಮಠದ ಪ್ರಸಿದ್ಧಿ ತಿಳಿಯುತ್ತದೆ. ಮಠದ ಸ್ಥಿತಿವಂತಿಕೆಯ ಜೊತೆ ಜನ ಸಾಮಾನ್ಯರ ಹಾಗೂ ರೈತಾಪಿ ಜನರ ಅಗತ್ಯಗಳಿಗೂ ಮಠ ಸ್ಪಂದಿಸುತ್ತಿತ್ತು ಎಂಬ ವಿಷಯ ಖಚಿತವಾಗುತ್ತದೆ. ವೀರಶೈವರೂ ಹಾಗೂ ವಿವಿಧ ಗ್ರಾಮಗಳ ವಿವಿಧ ಜನಾಂಗದವರು ಭೇದಭಾವವಿಲ್ಲದೆ ಸಮಾನ ರೀತಿಯಲ್ಲಿ ಪೀಠಕ್ಕೆ ನಡೆದುಕೊಳ್ಳುತ್ತಿದ್ದ ಸ್ಪಷ್ಟ ಚಿತ್ರಣ ಸಿಗುತ್ತದೆ.

ವಿಜಯನಗರ ಸಾಮ್ರಾಜ್ಯದ ರಾಜದಾನಿ ಕ್ರಿಶ.೧೫೬೫ರ ಕಾಲಕ್ಕೆ ವಿಜಯನಗರದಿಂದ ಪೆನುಗೊಂಡೆಗೆ ಸ್ಥಳಾಂತರವಾದ ಈ ಅವಧಿಯಲ್ಲಿ ಸರಿಯಾದ ಪೋಷಕರಿಲ್ಲದೆ ಮಠಕ್ಕೆ ಬಹಳ ಹಾನಿಯಾದಂತೆಯೂ ಸಾಲಕ್ಕೆ ಸಿಲುಕಿದಂತೆಯೂ ತಿಳಿಯುತ್ತದೆ. ಆ ಸಂದರ್ಭದಲ್ಲಿ ಮಠಕ್ಕೆ ಸೇರಿದ ದಾನಿವಾಸ ಸೀಮೆಯ ಬಳಿಯ ಪಾಲೊಳಗಣ ಉಳುವರ್ಾನಿ, ಚಾರುಂಬಳ್ಳಿ, ದೊಡ್ಡಿನಮಾನಿ ಈ ಮೂರು ಗ್ರಾಮಗಳ ಉತ್ಪತ್ತಿಯನ್ನು ಸಿಂಹಾಸನಕ್ಕೆ ಬಿಟ್ಟುಕೊಟ್ಟು ಸಾಲ ತೀರಿಸಿದರೆಂಬ ಹೇಳಿಕೆ ಇದೆ. ತಾಳಿಕೋಟೆ ಯುದ್ಧದ ಪರಿಣಾಮ ಈ ಮಠದ ಮೇಲೆಯೂ ಆಗಿದ್ದಿರಬೇಕು. ಈ ಮಠಕ್ಕೆ ವಿಜಯನಗರದ ಅರಸರು, ಕೆಳದಿ ಅರಸರು, ದಾನಿವಾಸದ ಅರಸರು, ಮೈಸೂರು ಅರಸರು ಪೀಠಕ್ಕೆ ಭೇಟಿ ನೀಡಿ ಅನೇಕ ದಾನ ದತ್ತಿಗಳನ್ನು ನೀಡಿ ಪೋಷಿಸಿದ್ದಾರೆ. ಇದಲ್ಲದೆ ಈ ಮಠವು ತನ್ನ ಶುದ್ಧ ಶಿವಾಚಾರವನ್ನು ಕಾಪಾಡಿಕೊಂಡು ವಿರಕ್ತಮಠಗಳ ಪೋಷಣೆಯನ್ನು ಮಾಡಿದೆ. ಶ್ರೀಶೈಲದ ಪರಂಪರೆ ಈ ಮಠದ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದು ಹೇಳುವುದಕ್ಕೆ ಹೆಚ್ಚಿನ ಆಂತರಿಕ ಸಾಕ್ಷಿಗಳು ಸಾಲವು. ಆದರೂ ಈ ಮಠದ ಶಾಖೆಗಳು ಇಂದು ಕರ್ನಾಟಕದ ಉದ್ದಗಲಕ್ಕೆ ಹರಡಲು ಈ ಬಾಳೆಹೊನ್ನೂರು ರಂಭಾಪುರಿ ಮಠದ ವೈಶಾಲ್ಯ ದೃಷ್ಟಿಯೇ ಕಾರಣವಾಗಿದೆಯೆಂದರೆ ಅತಿಶಯೋಕ್ತಿಯಲ್ಲ.

ಕುರುವಂಗಿಯ ಚನ್ನಬಸವೇಶ್ವರ ಗುಡಿಯಲ್ಲಿರುವ ಕ್ರಿ.ಶ.೧೬೧೭ರ ಶಾಸನವು (ಚಿ.ಮ.೮೩) ಗಿರಿಯಪ್ಪ ನಾಯಕ, ದೊಡ್ಡಣ್ಣ, ಸೇನಬೋವ ಲಿಂಗಪ್ಪ, ಮತ್ತಿತರ ಗೌಡ ಪ್ರಜೆಗಳು 'ಕುರುವಂಗಿಯ ಚನ್ನಬಸವೇಶ್ವರ ದೇವರ ಪಾದಕ್ಕೆ ಮಂಟಪ, ಚಿಂನಹ ನಂದಾದೀಪ್ತಿಯ ಸೇವೆಗಾಗಿ' ಭೂದಾನ ಮಾಡಿದ್ದನ್ನು ಹೇಳಿದೆ. ಬಾಳೇಹಳ್ಳಿ ಮಠದಲ್ಲಿರುವ ಕ್ರಿ.ಶ.೧೬೭೪ರ ತಾಮ್ರಶಾಸನವು (ನ.ಪು.೨೮) ಬಾಳೆಹೊನ್ನೂರು ಸಿಂಹಾಸನ ಮಠದ ಗುರುಶಾಂತಸ್ವಾಮಿಗಳ ಮೇಲೆ ದುಷ್ಕೃತ್ಯದ ಅಪರಾಧಗಳನ್ನು ಹೊರಿಸಿ ಈ ಮಠದ ಬದುಕು, ಜಿಂದಗೆ ಸಾಮಾನು, ಮಠದಲ್ಲಿರುವ ಮುದ್ರೆಸಾಮಾನು, ಚಂದ್ರಮೌಳೇಶ್ವರ, ಬಲದಶಂಖ, ಯೇಕಬೆತ್ತ, ಮುತ್ತಿನ ಚವುಕಳಿ, ಗದ್ದಿಗೆ, ಭೂಚಕ್ರದಕೊಡೆ, ಶ್ವೇತಚ್ಛತ್ರ, ಸಿಂಹಮುಖದವಾಲಿ ಇಷ್ಟನ್ನು ಶಂಕರಾಚಾರ್ಯರ ಕರಸಂಜಾತ ಶೃಂಗಶಾಸ್ತ್ರಿಗೆ ಕೊಡಿಸಿ, ಸಂಸ್ಥಾನಕ್ಕೆ ಸೇರಬೇಕಾದ ಭೂಚಕ್ರದ ಕೊಡೆಯನ್ನು ಹಿಂದಿರುಗಿಸಿದಂತೆ ಉಲ್ಲೇಖವಾಗಿದೆ. ಪಾರಂಪರಿಕವಾಗಿ ನಡೆದು ಬಂದ ಮಠದ ಹಕ್ಕನ್ನು ಅಪವಾದದ ನೆವದಲ್ಲಿ ತಪ್ಪಿಸುವ ಉದ್ದೇಶವಾಗಿರಬೇಕು. ಶೃಂಗೇರಿ ಪೀಠಾಧಿಪತಿಗಳಲ್ಲಿ 'ಶೃಂಗಶಾಸ್ತ್ರಿ' ಎಂಬ ಹೆಸರು ಕಾಣಬರುವುದಿಲ್ಲ, ಶಾಸನ (ಸಂಪುಟ ೧೨) ಸಂಪಾದಕರು ಈ ತಾಮ್ರ ಶಾಸನವನ್ನು ಕೂಟಶಾಸನವೆಂದು ಉಲ್ಲೇಖಿಸಿರುವದನ್ನು ನಂಬಬಹುದಾಗಿದೆ. ಸಂಸ್ಥಾನಕ್ಕೆ ಯೋಗ್ಯವಾದ ಕುಲಗೋತ್ರಗಳು, ಶಿವಾಚಾರ ನಡೆ, ಶೈವಾಚಾರದ ಕಟ್ಟು, ಶಿವಭಕ್ತರ ಪಾಡು, ಸಾಧುವಕ್ಕಲಿಗ, ರಡ್ಡಿಗ, ಕುಂಬಾರ ಕೈವಾಡ ಜಾತಿ ಸಮಸ್ತರಿಂದ ಕಪ್ಪಗಾಣಿಕೆ ವಸೂಲ್

ಮಾಡಿಕೊಳ್ಳಬೇಕೆಂದು ಸಹ ಸೂಚಿಸಿದೆ. ಅಲ್ಲದೆ ಇಲ್ಲಿ ಇನ್ನೊಂದು ಮುಖ್ಯವಾದ ವಿಷಯವೆಂದರೆ ಈ ಶಾಸನದಿಂದ ವೀರಶೈವ ಸಿಂಹಾಸನ ಪೀಠದಲ್ಲಿದ ಪಾರಂಪರಿಕ ಪೂಜಾವಸ್ತುಗಳ ಸ್ಥೂಲ ಪರಿಚಯವಾಗುತ್ತದೆ. ಶೃಂಗೇರಿ ತಾಲೂಕಿನ ಕಿಗ್ಗದ ಕ್ರಿ.ಶ.೧೬೭೮ರ ಶಾಸನವು (ಶೃಂ.೬೧) ಕೆಳದಿ ಚೆನ್ನಮ್ಮಾಜಿಯ ಪ್ರಧಾನಿ ಗುರುಬಸವಪ್ಪದೇವರು, ಉತ್ಸವ ವಿಗ್ರಹ ಮಾಡಿಸಿ ಕಿಗ್ಗದ 'ಶೃಂಗೇಶ್ವರಸ್ವಾಮಿಗೆ' ಸಮರ್ಪಿಸಿದ ವಿಷಯ ತಿಳಿಸುತ್ತದೆ. ಅಂಬಳೆಯ ಈಶ್ವರ ದೇವಾಲಯದ ಲಿಂಗಪೀಠದ ಮೇಲಿರುವ ತೇದಿ ಇಲ್ಲದ ಶಾಸನವು (ಚಿ.ಮ.೯೪) ಶಂಕರದೇವರ ಪೂಜಾಕೈಂಕರ್ಯಗಳಿಗೆ ತಾಱಿಗೊಡಲು ಗ್ರಾಮದ ಮೂಗಂಡುಗದ ಗದ್ದೆಯನ್ನು 'ಗಣಕುಮಾರಿ ಬೊಪ್ಪವ್ವೆಯ' ಮಗ ನಾಗಯ್ಯನು ದೇಗುಲದ ಜೀಯರು ಮತ್ತು ಅರ್ಚಕರಿಗೆ ದಾನವಾಗಿ ಕೊಟ್ಟಿದ್ದನ್ನು ಹೇಳುತ್ತದೆ. ವೀರಶೈವರಲ್ಲಿ ಗಣಪುರುಷರಿದ್ದಂತೆ ಗಣಮಹಿಳೆಯರೂ ಆಧ್ಯಾತ್ಮಿಕ ಸಮಾನತೆಯಲ್ಲಿ ಬಾಗವಹಿಸುತ್ತಿದ್ದ ಬಗ್ಗೆ ತಿಳಿಸುತ್ತದೆ.

ಚಿಕ್ಕಮಗಳೂರು ಜಿಲ್ಲೆಯ ಹಲಸುಬಾಳು ಗ್ರಾಮದ ಫಲಹಾರ ಮಠದಲ್ಲಿ ಕ್ರಿ.ಶ.೧೬೯೮ರ ತಾಮ್ರಶಾಸನವು (ಚಿ.ಮ.೬೩) 'ಸೂರ್ಯಸಿಂಹಾಸನಾಧೀಶ್ವರ ಶ್ರೀಶೈಲಪರುವತ್ತದ ವೀರಭಿಕ್ಷವೃತ್ತಿಗಳ ಮಠದ ಪಟ್ಟದ ಉದಾನಸ್ವಾಮಿಯವರು ಫಾಳಿಪೂಜೆ ಚಂದ್ರದ್ರೋಣ ಪರುವತ್ತದ ಫಲಾಹಾರಸ್ವಾಮಿ ಮಠದ ಪಟ್ಟದಸ್ವಾಮಿಯವರಿಗೆ ಶರಣಾರ್ತಿಗಳನ್ನು ಸಲ್ಲಿಸಿ, ನಾವು ಶಿವಯೋಗ ಆನಂದದಲ್ಲಿ ಇದ್ದೇವೆಂದು ತಮ್ಮ ಯೋಗಕ್ಷೇಮದ ಬಗ್ಗೆಯೂ ತಿಳಿಸುತ್ತಿರಬೇಕೆಂದು ಹೇಳಿ, ಈ ಎರಡೂ ಮಠಗಳೂ ಸಹಯೋಗದಲ್ಲಿದ್ದು ಒಂದಾಗಿರುವುದರಿಂದ ನಮ್ಮ ಶಿಷ್ಯರು ತಮ್ಮ ಶಿಷ್ಯರು ಸಮಾನರೆಂಬುದು ಪರಾಂಬರಿಕೆ ಉಂಟಷ್ಟೆ ಎಲ್ಲಾ ಶಿಷ್ಯರು ಸುಡಗಾಡಸಿದ್ಧರು, ಗೋಲುಕೊಂಡೆಯವರು, ಎಕಾನಟ್ಟಜೂಹಂಜಿಕರು, ಕಳರು ಭೇದ ಮಾಡಿದೆ ಪೂರ್ವ ಮೇರೆಯಂತೆ ಅಂದರೆ ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಂತೆ ಕೊಡುತ್ತಿದ್ದ ಹನ್ನೆರಡು ರೂಪಾಯಿಗಳ ಕಾಣಿಕೆಯನ್ನು ಫಲಾಹಾರ ಮಠಕ್ಕೆ ಸಲ್ಲಿಸಬೇಕೆಂದು ಹೇಳಿದೆ. ಬಾಳೆಹೊನ್ನೂರು ಮಠದಲ್ಲಿರುವ ತಮಿಳುಭಾಷೆಯ ಅಪೂರ್ಣ (ನ.ಪು.೩೧) ತಾಮ್ರಶಾಸನದಲ್ಲಿ ಮಠಕ್ಕೆ ದಾನವಾಗಿ ನೀಡಿದ ಯಾವ ಮಾಹಿತಿಯೂ ಇಲ್ಲ. ಆದರೆ ಮಠದಲ್ಲಿರುವ ತಮಿಳು ಶಾಸನವನ್ನು ಗುರುತಿಸಲಾಗಿದೆ. ಬಾಳೇಹಳ್ಳಿ ಮಠದಲ್ಲಿರುವ ಕ್ರಿಶ.೧೭ನೆಯ ಶತಮಾನದ ತಾಮ್ರಶಾಸನ (ನ.ಪು.೨೯) ವಿಶೇಷತೆಯಿಂದ ಕೂಡಿದೆ. ಆರಂಭದಲ್ಲಿ 'ಶ್ರೀನಂದಿನಾಥ ಶ್ರೀಭೃಂಗಿನಾಥ ಶ್ರೀವೀರಭದ್ರದೇವರಿಗೆ ಮುಖ್ಯರಾದ ಶ್ರೀಮತು ರಂಭಾಪುರದ ವೀರಸಿಂಹಾಸನಕ್ಕೆ ಕರ್ತರಾದ ಕಪಟದ ಯೆಂಟುಜಡೆ ಸ್ವಾಮಿಯವರು ತಮ್ಮ ಸಿಂಹಾಸನದ ಶಿಷ್ಯರು ಮಕ್ಕಳಾದಂತ ಗಂಜಳಗೋಡ ನಮಃಶಿವಾಯ ದೇವರಿಗೆ ಬರೆಸಿಕೊಟ್ಟ ಪಟ್ಟೆವಾಲೆ ಕ್ರಮವೆಂತೆಂದಡೆ ಗಂಜಲಗೋಡ ಪುರವರ್ಗದ ಅಯ್ವತ್ತುನೂರು ಕಾಲಾರಭ್ಯ ಅರಮನೆ ಹಾಕಿಕೊಟ್ಟ ಕರಕುಡಿ ಲಿಂಗಮುದ್ರೆ ಕಲ್ಲು ನೆಟ್ಟ ಭೂಮಿಯನ್ನು ನೀನು ಕುಯಿಕ್ತಿಯಿಂದ ಹಿಡಿದು ಅರಸುಗಳಿಗೆ ಹೇಳಿ, ಕೇಳಿಕೊಂಡು ಇದ್ದು 'ಆಯ್ವತ್ತನೂರು ಹೊನ್ನಿನ ಸಾಲ ಸಂಮಂಧವಂ ತೆಗೆದು ಹಾಕಿಸಿ ವಚರವ ಹಿಡಿದು ಆ ಕಲ್ಲ ಶಾಸನವನ್ನು ಮರೆಸಿ' ಸಿಂಹಾಸನದ ಅನುಮತಿ ಪಡೆದ ವಿಷಯ ಹೇಳಿದೆ. ಬಹುಶಃ ಹಿಂದೆ ಕೊಟ್ಟ ದಾನದ ಅನ್ಯಾಯವನ್ನು ಗುರುತಿಸಿರಬೇಕು. ನಂತರ ಅದೇ ಪುರವರ್ಗದ ಭೂಮಿಯಲ್ಲಿ ೧೨ ಖಂಡುಗ ಗದ್ದೆಯನ್ನು ಸೇನಭೋಗರಿಗೆ, ಉಳಿದ ೧೧ ಖಂಡುಗ ಭೂಮಿಯಲ್ಲಿ ೧ ಖಂಡುಗದಲ್ಲಿ

೮ ಬಳ್ಳದಂತೆ ನೀನು ಅಂದರೆ ಸಿಂಹಾಸನದ ಶಿಷ್ಯನಾಗಿಯಿದ್ದಲ್ಲಿ ನಿನ್ನ ಮಕ್ಕಳಮಕ್ಕಳು ರವಿಶಶಿಯರಿರುವ ತನಕ ಅನುಭವಿಸುವಂತೆ ಉಲ್ಲೇಖಿಸಿದೆ. ಈ ರೀತಿ ಹಂಚಿಕೆ ಮಾಡಿ ಕೊಟ್ಟಿರುವುದರೊಳಗೆ ಅಂದರೆ ಉಳಿಕೆ ಪಾಲಿನಲ್ಲಿ 'ವೀರಭದ್ರ ದೇವರ ದೀಪಾರಾಧನೆಗೆ, ಮುನೀಶ್ವರ ದೇವರ ಕಡಲೆ ಪಲಾರಕೆ' ೨ ಗದ್ಯಾಣ ಕೊಡುವಂತೆ 'ಬರೆಸಿಕೊಟ್ಟಪಟೆವಾಲೆ' ಯಿದಕ್ಕೆ ಸಾಕ್ಷಿಯಾಗಿ 'ಆಡುವಳಿ ಹೆಗ್ಗಡೆ ಮುಳ್ಳೆಯಾ ಮತ್ತು ತಮ್ಮ ಶಿಷ್ಯರೊಳಗೆ ಮುನೀಶ್ವರದೇವ, ಸೋಮಶೇಖರದೇವ, ಹೊಸಉರಪುರದ ಚನ್ನವೀರದೇವ, ಬಾಣವಾಡಿ ಮುದ್ದುವೀರದೇವ, ಪೇಟೆಕಂನ್ಯೆಯ್ಯಸೆಟ್ಟಿ, ಬಸವಲಿಂಗಯ್ಯ' ಈ ಏಳು ಜನರು ಒಪ್ಪಿದ ಮೇಲೆ ನಂತರ ಶ್ರೀವೀರಭದ್ರದೇವರು ಯೆಂಟುಜಡೆಸ್ವಾಮಿಗಳ ಒಪ್ಪಿಗೆ ಪಡೆದು ದಾನ ನೀಡಿದ ವಿವರವನ್ನು ಬರೆದಾತ ಸೇನಬೋಗ ಮಹಂತ್ತಯ್ಯ ಎಂದು ಉಲ್ಲೇಖಿಸಿದೆ. ಈ ತಾಮ್ರ ಶಾಸನದಲ್ಲಿ ಅನೇಕ ಮಹತ್ವದ ವಿಚಾರಗಳು ಬೆಳಕಿಗೆ ಬಂದಿವೆ. ಅಲ್ಲದೆ ಈ ದಾನ ಪಡೆಯುವಂತಹ ವ್ಯಕ್ತಿ ರಂಭಾಪುರಿ ಸಿಂಹಾಸನಕ್ಕೆ ಶಿಷ್ಯರಾಗಿ ನಡೆದುಕೊಂಡವರಿಗೆ ಮಾತ್ರ ದಾನ ಲಭ್ಯವಾಗುತ್ತದೆ ಎಂಬ ಸೂಚನೆಯನ್ನು ನೀಡುತ್ತದೆ.

೧೭ನೇ ಶತಮಾನಕ್ಕೆ ಸೇರಿದ ಹಿರಿಯೂರಿನ (ಕ.೨೩೬) ಒಂದು ಶಾಸನ ಅಣತಿ ಲಿಂಗಣ್ಣನಾಯಕರು ವೀರಭದ್ರದೇವರ ನಂದಾದೀವಿಗೆಗೆಂದು, ಮನೆವಣ, ನೈವೇದ್ಯಕ್ಕೆಂದು ಹೊಲ ಹಾಗೂ ಗದ್ದೆಯ ಭೂಮಿಯನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ. ತೇದಿ ರಹಿತ ಆಲದಹಳ್ಳಿ ಶಾಸನವು (ಕ.೮) ಕಿಟ್ಟಪ್ಪನಾಯಕರು ಸಂತೆಬೆನ್ನೂರ ಹನುಮಿಯಕ್ಕನ ಮಗ ಚಿಕ್ಕನಾಯಕರಿಗೆ ನಾಲ್ಕು ಹಳ್ಳಿಗಳನ್ನು ಕೊಟ್ಟಿದ್ದನ್ನು, ಅದೇ ಚಿಕ್ಕಣ್ಣನಾಯಕರು ಕಲತಿ ವೀರೇಶ್ವರದೇವರ ಅಮೃತಪಡಿಗೆ ಕೊಡಲೆಂದು ಹಿಂದೆ ದಾನಿಯಾಗಿದ್ದ ಕಲತಿ ವೀರಣ್ಣನ ಅನುಮತಿ ಪಡೆದು ದಾನ ಕೊಟ್ಟಿದನ್ನು ತಿಳಿಸುತ್ತದೆ. ಹಲಸುಬಾಳು ಗ್ರಾಮದ ಕ್ರಿ.ಶ.೧೭೦೨ರ ಇನ್ನೊಂದು ತಾಮ್ರಶಾಸನವು ಚಿ.ಮ.೬೨)ಶ್ರೀಪರ್ವತ ಶ್ರೀಶೈಲಪಂಚಮಟ ಪಂಚಗ್ರಹಕ್ಕೆ ಮುಖ್ಯವಾದ ಶ್ರೀನಂದಿನಾಥ ಶ್ರೀಭೃಂಗಿನಾಥ ಶ್ರೀವೀರಭದ್ರದೇವರು ಮುಖ್ಯರಾದ ಶ್ರೀಗಿರಿಸೂರ್ಯಸಿಂಹಾಸನಕ್ಕೆ ಕಾರಣಕರ್ತರಾದ ಶ್ರೀವೀರಶೈವ ಪ್ರಸನ್ನ ವಿರುಪಾಕ್ಷವರ್ತಿ ಪಟ್ಟದ ಉದಾನಸ್ವಾಮಿಯವರು ಚತುರಾಚಾರ್ಯಪೀಠ ಸಿಂಹಾಸನರೂಡರಾದ ಫಾಳಿಪೂಜೆ ಹನ್ನೆರಡು ಯೋಜನ ಪರ್ವತದ ಮಧ್ಯದಲ್ಲಿ ಉದ್ಭವಿಸಿ ಶ್ರೀವಿರೂಪಾಕ್ಷ ಲಿಂಗಕ್ಕೆ ಸಮಯಾಚಾರ ಮೂರ್ತಿಗಳಾದ ಆದಿಗದ್ದಿಗೆ ಶ್ರೀಗುರು ದತ್ತಾತ್ರೇಯ ಶ್ರೀಫಳಾರಮಠದ ಸ್ವಾಮಿಯವರಿಗೆ ಬರೆಸಿಕೊಟ್ಟ ದಾನ ಶಾಸನದಲ್ಲಿ ಆ ಮಠ ಈ ಮಠ ಕೂಡಿದ್ದು ಹಿರೆಹೊಳೆಯಿಂದ ದಕ್ಷಿಣ ದಿಕ್ಕಿನ, ಪಶ್ಚಿಮ ದಿಕ್ಕಿನ, ಉತ್ತರ ದಿಕ್ಕಿನ ಈ ಮೂರು ದಿಕ್ಕಿನಲ್ಲಿರುವ ಸುಡುಗಾಡುಸಿದ್ಧರು, ಪಾಕನಾಟವರು, ಜಡೆಜೋಗಿಗಳೂ, ಗೋಲುಕೊಂಡೇರು, ಜಂಗಲರು ಉಪ್ಪಿನಕಂಗಳರು ಇಂತಿವರ ಕಾಣಿಕೆ ಕಪ್ಪ ತೆಗೆದುಕೊಂಡು ಅಲ್ಲೇ ದಾಸೋಹ, ದೀಪಾರಾಧನೆ, ನಡೆಸುವ ಧರ್ಮದಾನದ ಬಗ್ಗೆ ತಿಳಿಸಿದೆ. ಅದೇ ಮಠದಲ್ಲಿರುವ ಕ್ರಿ.ಶ.೧೭೦೭ರ ತಾಮ್ರಶಾಸನವು (ಚಿ.ಮ.೬೦) ಮಹಾನಾಡಿನ ಸಂಗನ ಬಸವಪ್ಪ ಮತ್ತಿತ್ತರ ಗೌಡುಗಳು ಕೂಡಿ ಚನ್ನವೀರದೇವರ ಮಠಕ್ಕೆ ಬರೆಸಿಕೊಟ್ಟ ದಾನಪಟ್ಟಿ ಕ್ರಮವೆಂತೆಂದರೆ 'ಲೊಕ್ಕಿಕಟ್ಟೆಗೆ ಬಂದಂಥಾ ಉಭಯ ಮಾರ್ಗದ ಹೇರು ಗಡಚು ಬದಿಸ್ತಿನ ನಡೆವೊಂದಕ್ಕೆ ೮ ..ವೀಸ ಭೂಸ ಬದ್ದಿಸಿದ ನಡೆವೊಂದಕ್ಕೆ ಅರೆವೀಸ ಯೀ ಮರಿಯಾದೆಯಲ್ಲಿ' ಪಾರಂಪರೆಯಾಗಿ ಸೂರ್ಯಚಂದ್ರಾದಿಗಳಿರುವ ಪರಿಯಂತರ ಸೇವೆ

ನಡೆಯುಷಂತೆ ಘಾಳಿಪೂಜೆ ಮಠಕ್ಕೆ ಬರೆದುಕೊಟ್ಟ ದಾನಪತ್ರ ಶಾಸನ. ಆ ಕಾಲದಲ್ಲಿ ಆಳ್ವಿಕೆ ಮಾಡುತ್ತಿದ್ದ ವೀರಬಲ್ಲಾಳರಾಯನ ಪೌರುಷವನ್ನು 'ಸಪ್ತಕೋಣೀ ವಿಷ್ಣುವರ್ಧನ, ಮಲವರಾಯಮಸ್ತಕಾಶೂಲ, ಗಜಪತಿ ಗಂಡಭೇರುಂಡ, ಅಶ್ವಪತಿ ಅನಂಗ ಮಹಾರುದ್ರ ಮೊದಲಾದ ವಿಶೇಷಣಗಳಿಂದ ಕರೆಯಲಾಗಿದೆ. ಮತ್ತು ಘಾಳಿಪೂಜೆಯ ಮಠವಿರುವ ಪರ್ವತದಲ್ಲಿ ಭಯಂಕರವಾದ ಮೃಗ, ವ್ಯಾಘ್ರ, ಘಠಸರ್ಪ ಮುಂತಾದ ಕ್ರೂರಪ್ರಾಣಿಗಳಿಂದ ಕೂಡಿರುವುದಲ್ಲದೆ ಸಂಜೀವನ್ನ, ಸಿಧರಸ, ಮಾಂಸವೇಧಿ, ಮೊದಲಾದ ಔಷದೀಯ ಗುಣಗಳುಳ್ಳ ಮೂಲಿಕೆಗಳೂ ದೊರೆಯುವುದರ ಜೊತೆಗೆ ಮುನಿಜನರ ಸಮೂಹವೂ ಇದೆ. ಎಲ್ಲದರ ನಡುವೆ ಅಲ್ಲಿ ಅಷ್ಟಭೈರವ, ಗಣೇಶ್ವರ, ಮಹಂಕಾಳಿ, ವೀರಭದ್ರ ಮುಂತಾದ ದೇವಾನುದೇವತೆಗಳ ದೇವಾಲಯಗಳು ಆ ಪರ್ವತದಲ್ಲಿರುವುದು ಸಾಮಾನ್ಯವೆಂದು ಭಾವಿಸಲಾಗದು ಎಂಬಂತೆ ವರ್ಣಿಸಿದೆ. ಅಂದರೆ ಅಷ್ಟು ಪ್ರಸಿದ್ಧವಾದ ಮತ್ತು ಪ್ರಮುಖವಾದ ಮಠ ಎಂಬುದನ್ನು ತಿಳಿಸುತ್ತದೆ. ಮಠದ ಸ್ವಾಮಿಗಳನ್ನು ಶ್ರೀ ವಿರುಪಾಕ್ಷಸ್ವಾಮಿಯವರ ಪ್ರೀತಿಪ್ರೇಮದ, ಶುದ್ಧಶಿವಾಚಾರ ಸಂಪನ್ನರಾದ, ಫಲಾಹಾರ ದೇವರ ಶಿಷ್ಯರಾದ ಚೆಂನವೀರದೇವರನ್ನೂ ಮುಕ್ತವಾಗಿ ಶ್ಲಾಘಿಸಲಾಗಿದೆ. ಈ ಮಠಕ್ಕೆ ದಾನ ನೀಡಿದಾಗ ಮಹಾನಾಡುಗಳ ಮುಖ್ಯಸ್ಥರು (೫೬ ಊರುಗಳು ಮತ್ತು ಆ ನಾಡಿನ ಪ್ರಮುಖರ ಹೆಸರುಗಳು ಉಲ್ಲೇಖವಾಗಿವೆ) ಕೂಡಿ ಬರೆಸಿ ಕೊಟ್ಟ ದಾನದ ಬಗ್ಗೆ ತಿಳಿಸಿದೆ.

ಬಾಳೇಹಳ್ಳಿ ಮಠದಲ್ಲಿರುವ ಕ್ರಿ.ಶ.೧೭೦೮ರ ತಾಮ್ರಶಾಸನ (ನ.ಪು.೨೫) ಶ್ರೀಮತ್ಸಜ್ಜನ ಶುದ್ಧಶಿವಾಚಾರ ಸಂಪನ್ನರಾದ ಕುರುವದ ಹಾಲದೇವರಿಗೆ' ಬೊಕ್ಕಸದ ಸಿದ್ದಬಸವಯ್ಯನು ಕಳಸದಲ್ಲಿ ಕಟ್ಟಿಸಿಕೊಟ್ಟ ವಿರಕ್ತಮಠದ ಧರ್ಮಕ್ಕೆ ಸೋಮಶೇಖರ ನಾಯಕರ ಧರ್ಮಪತ್ನಿ ಚೆನ್ನಮ್ಮಾಜಿಯ ಪುತ್ರ ಬಸವಪ್ಪನಾಯಕ ಬರೆಸಿಕೊಟ್ಟ ಭೂದಾನದ ಧರ್ಮಶಾಸನದ ನಿರೂಪಣೆಯಲ್ಲಿ ಆ ಮೊದಲು ಈ ಮಠಕ್ಕೆ ಧರ್ಮವಾಗಿ ನೀಡಿದ ಯಾವ ಶಾಸನವೂ ಇರಲಿಲ್ಲ. ಆಗ ನೀಡಿದ ದಾನಕ್ಕೆ ಈಗ ಶಾಸನ ಬರೆಸಿ ಕೊಡಬೇಕೆಂದು ಮರಿಯಪ್ಪ ಹೇಳಿದ್ದರಿಂದ ಬರೆಸಿ ಕೊಡುತ್ತಿರುವುದಾಗಿ ಹೇಳಿದೆ. ದಾನವಾಗಿ ನೀಡಿದ್ದನ್ನು 'ಬೇಳೆಯ ಸ್ವಾಸ್ತಿಮಾನ್ಯದ ಯೆತ್ತು ನಡೆಯೆಂದು ಯೆತ್ತಿನ ಮಾನ್ಯ ಸಹಾ ಶಿವಾರ್ಪಿತವಾಗಿ ಕೊಟ್ಟ ವಿಷಯವನ್ನು ಹೇಳಿ, ಯೀ ಭೂಮಿಗೆ ನೆಟ್ಟ ಲಿಂಗಮುದ್ರೆ ಕಲ್ಲಿನೊಳಗುಳ್ಳ ನಿಧಿ-ನಿಕ್ಷೇಪ, ಜಲ-ಪಾಶಾಣ' ಇತ್ಯಾದಿಯಾಗಿ ಯೇನು ಅಧಿಕ ಫಲದಂತೆ ಸದಾ ಆಗುಮಾಡಿಕೊಂಡು ಮಾನ್ಯದ ಯೆತ್ತುನಡೆ ಎರಡರ ಮೇಲೆ ಅಡಕೆ, ಮೆಣಸು, ಝುರಿಪಟ್ಟೆ ಕವಾಡ ಮುಂತಾದ ಘಡಿಸಿನ ಸರಕು ಹೊರತ್ತಾಗಿ ಹೇರಿಕೊಂಬ ಜಿನಿಸುಗಳಾದ 'ಅಕ್ಕಿ, ರಾಗಿ, ಭತ್ತ, ಉಪ್ಪು, ಹುಳಿ, ದ್ವಿದಳ, ಬೂಸ, ಎಣ್ಣೆ, ತುಪ್ಪ, ಬೇಳೆ, ಬೆಲ್ಲ, ಕಾಯಿ, ಕತ್ತ, ಕಾಚು, ಖೊಬರಿ, ಜವಳಿ, ಕಬುನ, ಹೊಗೆಸೊಪ್ಪು, ಉತ್ತುತ್ತೆ, ಖರ್ಜೂರ, ಯಿಂಗು, ಜೀರಿಗೆ, ಮೆಂಥ್ಯ, ನೀರುಳ್ಳಿ, ಬೆಳ್ಳುಳ್ಳಿ, ಅರಿಸಿನ, ಶುಂಟಿ' ಮುಂತಾದ ಜಿನಿಸುಗಳನ್ನು ತೆಗೆದುಕಂಡು ವೀರಮಾಹೇಶ್ವರ ಪಾರಂಪರ್ಯವಾಗಿ ಮಠದ ಧರ್ಮವನ್ನು ನಡೆಸಿಕೊಂಡು ಬರುವುದೆಂದು ಬರೆಸಿಕೊಟ್ಟ ಧರ್ಮದ ವಿವರವನ್ನು ಹೇಳುತ್ತದೆ. ಈ ಮಠದಲ್ಲಿ ನಡೆಯುವ ದಾಸೋಹಕ್ಕಾಗಿ ಬೇಕಾಗುವ ಎಲ್ಲಾ ಪದಾರ್ಥಗಳನ್ನು ದಾನ ನೀಡುತ್ತಿದ್ದ ಬಗ್ಗೆ ತಿಳಿಸುತ್ತದೆ.

ಹಲಸಬಾಳು ಗ್ರಾಮದ ಕ್ರಿ.ಶ.೧೭೧೭ರ (ಚಿ.ಮ.೬೧) ಮತ್ತೊಂದು ತಾಮ್ರಶಾಸನವು ಸಹ ಉಳಿದ ಮೂರು ಶಾಸನಗಳಂತೆ ಉಭಯ ಮಠಗಳೂ ಸಹಕಾರ ಸೌಹಾರ್ದತೆಯಿಂದ

ಕೂಡಿಕೊಂಡಿರುವ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಶ್ರೀಶೈಲ ಪಂಚಮಠ ಪಂಚಗೃಹಕ್ಕೆ ಮುಖ್ಯರಾದ ಉದಾನಸ್ವಾಮಿಯವರು ಮತ್ತು ಕಂನ್ನುಲ್ಲಾ ಬಬಾನ ದೊರೆಗಳು ಮೊದಲಾದವರು ಬರೆಸಿ ಕೊಟ್ಟ ತಾಮ್ರದ ದಾನಪತ್ರದಲ್ಲಿ 'ಪರ್ವತ ಪೀಠ ಮತ್ತು ಗಾಳಿಪೂಜೆ ಮಠ ಹಿಂದಿನಂತೆ ಉಭಯ ಮಠಗಳು ಸಹಯೋಗದಲ್ಲಿರುವುದರಿಂದ' ಹಿರೇಹೊಳೆಯಿಂದ ದಕ್ಷಿಣ ದಿಕ್ಕಿನ, ಪಶ್ಚಿಮ ದಿಕ್ಕಿನ, ಉತ್ತರ ದಿಕ್ಕಿನಲ್ಲಿರುವ ಪರ್ವತ ಪೀಠಕ್ಕೆ 'ಸೂತ್ರದಾರಿಗಳಾದಂತ ಪೀಠದವರು, ಚರಂತ್ರಿಗಳು, ಶೆಟ್ಟಿ ವರ್ತಕರು, ಗೌಡುಗಳು, ರಡ್ಡಿ ವಕ್ಕಲತನದವರು, ಕುಂಚ್ಚಿಗರು ಕಡಮೆ ಜನ ಸಹ ನಡೆದುಕೊಳ್ಳುವಂತ್ತಾವರು ಸಹ ಗಾಳಿಪೂಜೆ ಗಿರಿಪಟ್ಟದ ಸ್ವಾಮಿಯವರಿಗೆ ಕಾಣಿಕೆ ಕಪ್ಪ' ಕೊಡತಕ್ಕದ್ದೇ ಹೊರತು ಪರ್ವತ ಪೀಠಕ್ಕೆ ಕೊಡಬೇಕಾಗಿಲ್ಲ ಎಂದು ಹೇಳುತ್ತಾ, ಸದರಿ ಮೂರು ದಿಕ್ಕಿನಲ್ಲಿರುವ ಸುಡುಗಾಡು ಸಿದ್ದರು, ಜೆಡೆಜೋಗಿಗಳು, ಗೋಲುಕೊಂಡೇರು, ಜಂಗಲ್ಲೆರು, ಉಪ್ಪಿನ ಕಂಗಳರು, ಕಾಡಶಿದ್ದರು, ಗಾರ್ದ್ದಪ್ಪಗೊಲ್ಲರು ಜಂಗೆಲ್ಲೆರ್‍ರು, ಪಾಕನಾಟ್ಟಿಮರಿನಗೊಲ್ಲರು, ಹೆಳವರು ಮೊದಲಾದ ಬುಡಕಟ್ಟಿನವರು ಪರ್ವತ ಪೀಠಕ್ಕೆ ನಡೆದುಕೊಂಡು ಕಪ್ಪ ಕಾಣಿಕೆಯನ್ನು ಕೊಡುವುದು. ಗಾಳಿಪೂಜೆ ಪೀಠದ ಸ್ವಾಮಿಗಳು ಕಾಣಿಕೆ ತೆಗೆದುಕೊಂಡು ದಾಸೋಹ ದೀಪಾರಾಧನೆ ನಡೆಸಿಕೊಂಡು ಬರುವುದು. ಇದರ ಜೊತೆಗೆ ಬೆಳ್ಳಿ ಸಾಮಾನುಗಳಾದ 'ಪಲ್ಲಕ್ಕಿ, ಮುತ್ತಿನ ಕಂಠಿ, ಬಂಗಾರದಕೊಡೆ, ವೂಟಬೆಯ ಚಾಮರಗಳು, ಮಕರತೋರಣ, ಪಾಯಿಮುತ್ತು, ಮುಕ್ಕಣ್ಣ ವೈಜ್ಯ, ಬಸವನ ಡೆಕ್ಕೆ ನಂದಿಧ್ವಜ, ಬೇರಿಡ್ಯೆಂಕ, ಪಂಚವಾದ್ಯ' ಮುಂತಾದ ವೀರಶೈವ ಪೀಠಗೌರವಗಳನ್ನು ದಾನ ಪತ್ರದ ಮೂಲಕ ಕೊಟ್ಟದ್ದನ್ನು ವಿವರಿಸಿದೆ. ಈ ಶಾಸನಗಳ ಮೂಲಕ ಕೇದಾರ, ಉಜ್ಜಯಿನಿ ರಂಭಾಪುರಿ ಪೀಠದ ಗೋತ್ರ ಪುರುಷರು ಹಾಗೂ ವೀರಶೈವ ಪಂಚಪೀಠಗಳಿಂದ ಗೌರವಿಸಲಾದ ಫಲಾಹಾರ ಮಠದ ಘನತೆ ಗೌರವವನ್ನು ಎತ್ತಿ ಹಿಡಿದಂತಾಗಿದೆ. ಗುರುದತ್ತಾತ್ರೇಯ ಪೀಠವು ವೀರಶೈವ ಫಲಾಹಾರ ಮಠದೊಡನೆ ಸಹಯೋಗ ಹೊಂದಿತ್ತೆಂಬ ಅಂಶವೂ ಇಲ್ಲಿ ಗಮನಾರ್ಹ, 'ಕಂನ್ನುಲ್ಲಾಬಬಾನದೊರ್‍ರೆ' ಎಂಬ ಉಲ್ಲೇಖ ಇದ್ದು ಈತ ಬಹುಶಃ ವೀರಶೈವೇತರ ವ್ಯಕ್ತಿಯಂತೆ ಕಂಡುಬರುತ್ತದೆ. ಶ್ರೀಶೈಲ ಪೀಠದ ಶಾಖಾ ಮಠವಾಗಿರುವ ಫಲಾಹಾರಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ. ಈ ಮಠದ ಸ್ಥಾಪಕರಾದ ಶಿವಯೋಗಿಗಳು ಉತ್ತರದ ಕಡೆಯಿಂದ ಸಂಚಾರ ಕೈಗೊಂಡು ಈ ಪ್ರದೇಶಕ್ಕೆ ಬಂದಾಗ ರುದ್ರರಮಣೀಯವಾಗಿದ್ದ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡು ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿದ್ದುಕೊಂಡು ಮಠವನ್ನು ಸ್ಥಾಪಿಸಿದ್ದಾರೆ. ಶಿವಯೋಗಿಗಳು ಫಲಾಹಾರವನ್ನೇ ಸೇವಿಸುತ್ತಿದ್ದ ಕಾರಣ ಇವರನ್ನು ಫಲಾಹಾರಸ್ವಾಮಿಗಳೆಂದು, ಇವರು ಸ್ಥಾಪಿಸಿದ ಮಠವನ್ನು ಫಲಾಹಾರಮಠವೆಂದು ಕರೆಯಲಾಗುತ್ತಿದೆ.

ಬಾಳೇಹಳ್ಳಿ ಗ್ರಾಮದ ರಂಭಾಪುರಿ ಮಠದಲ್ಲಿರುವ ೧೭ನೆಯ ಶತಮಾನದ (ನ.ಪು.೩೦) ತಾಮ್ರಶಾಸನವು ಕೆಳದಿ ಅರಸ ಸೋಮಶೇಖರನಾಯಕನ ಕಾಲದಲ್ಲಿ ಬಗ್ಗುಂಜಿ ಸೀಮೆಯ ಸೀತಾನದಿ ತೀರದಲ್ಲಿ ಕೆಂಚವ್ವನೆಂಬ ಭಕ್ತೆ ವಿರಕ್ತಮಠವೊಂದನ್ನು ಕಟ್ಟಿಸಿದ ವಿಷಯವನ್ನು ತಿಳಿಸುತ್ತದೆ. ಆ ಮಠಕ್ಕೆ ಕೆಲವು ಭೂಮಿಯನ್ನು ದಾನವಾಗಿ ನೀಡಲಾಗಿತ್ತು. ಬಹುಶಃ ಪ್ರವಾಹದಿಂದ ನಷ್ಟವಾದ ಭೂಮಿಗೆ ಪರಿಹಾರ ಕೊಡಬೇಕೆಂದು ಅಳಿಯ ನಿರ್ವಾಣಯ್ಯ ಹೇಳಿದಾಗ ಕೆಂಪಿನ ಮಠದ ದೇವರ ಕೈಯ ಕ್ರಯ ೧೧೮ ಗದ್ಯಾಣ ಕೊಟ್ಟುಕೊಂಡು ಭೂಮಿಯನ್ನು ಮಠಕ್ಕೆ ನೀಡಿ ಗಡಿಕಲ್ಲುಗಳನ್ನು ನೆಟ್ಟು

ಎಲ್ಲೆಗಳನ್ನು ನಿಗದಿಗೊಳಿಸಿದಂತೆ ತಿಳಿಸುತ್ತದೆ. ಬಗ್ಗುಂಜಿ ಗ್ರಾಮದ ಕ್ರಿ.ಶ.೧೭೯೯ರ ಶಾಸನವು (ಕೊಪ್ಪ.೧೪) ಸಹ ಕೆಂಚವ್ವ ಕಟ್ಟಿಸಿದ ವಿರಕ್ತ ಮಠದ ವಿಷಯವನ್ನೇ ಪ್ರಸ್ತಾಪಿಸುತ್ತದೆ. ಈ ಶಾಸನದಲ್ಲಿ ವಿರಕ್ತ ಮಠಕ್ಕೆ ಹಿಂದೆ ಕೊಟ್ಟಿದ್ದ ಉತ್ತಾರ ಸಾಲದೆಂದು ಕೆಂಪಿನಮರಿದೇವರು ದೇವಸ್ಥಾನದ ಮತ್ತು ಅಂಗಡಿ ವೀರಭದ್ರದೇವರ ಉಳಿಕೆ ಹಣದಿಂದ ಪರಿಹಾರ ಕೊಟ್ಟುಕೊಂಡ ಭೂಮಿಗೆ ಗಡಿಕಲ್ಲುಗಳನ್ನು ಹಾಕಿರುವುದಿಲ್ಲ. ಆ ಭೂಮಿಗೆ ಗಡಿಕಲ್ಲು ಹಾಕಿಸಿ ಕೊಡುವ ಹಾಗೆ ನಿರೂಪವನ್ನು ಅಳಿಯ ನಿರ್ವಾಣಯ್ಯನ ಮೂಲಕ ಅರಸನಿಗೆ ಹೇಳಿ ಕಳಿಸುತ್ತಾನೆ. ಕೆಳದಿ ಅರಸ ಶಿವಪ್ಪನಾಯಕ ಭೂದಾನದ ಜೊತೆ ಇನ್ನಿತರ ಬೇರೆ ಬೇರೆ ದಾನಗಳನ್ನು ಶಿವಾರ್ಪಿತವೆಂದು ಕೊಟ್ಟು ಲಿಂಗಮುದ್ರೆ ಸಹಿತವಾಗಿ ಶಿಲಾಶಾಸನ ಹಾಕಿಸಿ ಗಡಿ ನಿರ್ದೇಶನ ಮಾಡಿಸಿ ದಾನ ಮಾಡಿದ ವಿಷಯ ನಿರೂಪಿಸುತ್ತದೆ. ಮೇಲಿನ ಎರಡೂ ಶಾಸನಗಳೂ ಕ್ರಮವಾಗಿ ೪೨ ಮತ್ತು ೫೦ ಸುದೀರ್ಘ ಸಾಲುಗಳಲ್ಲಿ ದಾನದ ವಿವರ ನೀಡುತ್ತದೆ.

ಬಾಳೇಹಳ್ಳಿಯಲ್ಲಿನ ರಂಭಾಪುರಿ ಮಠದಲ್ಲಿರುವ ಕ್ರಿ.ಶ.೧೭೨೭ರ ಮತ್ತೊಂದು ತಾಮ್ರಶಾಸನವು (ನ.ಪು.೨೭) ಬಾಳೇಹೊನ್ನೂರು ಸಿಂಹಾಸನ ಮಠದ ಬಸವಲಿಂಗಯ್ಯನವರಿಗೆ ಶಿಕಾರಿಪುರ, ಕುಂಸಿ, ಶಿವಮೊಗ್ಗ, ತರಿಕೆರೆ, ಲಕ್ಕವಳ್ಳಿ, ಮಂಡಗದ್ದೆ, ಹೊಳೆಹೊನ್ನೂರು, ಚನ್ನಗಿರಿ ಮೊದಲಾದ ಊರುಗಳ ನಿರ್ದಿಷ್ಟ ಜನರಿಂದ ಕಾಣಿಕೆ ಹಾಗೂ ಹುಮಚ ಸೀಮೆಯ ೩೦೦ ಗ್ರಾಮಗಳಿಂದ ಕಪ್ಪ ಕಾಣಿಕೆ ಪಡೆದುಕೊಳ್ಳುವಂತೆ ಕೆಳದಿ ಶಿವಪ್ಪನಾಯಕನು ಹಕ್ಕು ನೀಡಿದಂತೆ ತಿಳಿಸುತ್ತದೆ. ಆದರೆ ಆ ಹಕ್ಕನ್ನು ಸೋಮಶೇಖರನಾಯಕನು ಬಾಳೇಹೊನ್ನರು ಮಠದ ಮೇಲೆ ಅಪರಾಧವನ್ನು ತಂದು ಸಂಸ್ಥಾನವನ್ನೊಪ್ಪಿಸಿ ಅವರಿಂದ ಕಸಿದುಕೊಂಡು ಮೊದಲಿಂದಲೇ ಶೃಂಗೇರಿ ಮಠದ ಶೃಂಗಶಾಸ್ತ್ರಿಗೆ ಕೊಡಿಸಿದನೆಂದು ದಾಖಲಾಗಿದೆ. ಬಹುಶಃ ಶೃಂಗೇರಿ ಮಠಕ್ಕೂ ಮತ್ತು ಬಾಳೇಹೊನ್ನೂರ ಮಠಕ್ಕೂ ನಡುವೆ ಇದ್ದ ವಿರಸದ ಪ್ರಯೋಜನ ಪಡೆದು ಬಾಳೇಹೊನ್ನೂರು ಮಠದ ಮೇಲೆ ಆಪಾದನೆಗಳನ್ನು ಸೃಷ್ಟಿಸಿ ಮಠದ ಪೂಜಾ ಮತ್ತಿತರ ಸೇವಾ ಕೈಂಕರ್ಯಗಳಿಗೆ ತೊಂದರೆ ಮಾಡುವ ಉದ್ದೇಶದ ಜೊತೆಗೆ ಮಠಕ್ಕೆ ಬರುತ್ತಿದ್ದ ಉತ್ಪನ್ನಗಳಾದ ದಾನ, ದತ್ತಿಗಳನ್ನು ತಪ್ಪಿಸಿ ಶೃಂಗಶಾಸ್ತ್ರಿಗೆ ಕೊಡಿಸಿದಂತೆ ಕಾಣುತ್ತದೆ. ಆದರೆ ವೀರಶೈವರಾದ ಕೆಳದಿ ಅರಸರು ಮಠದ ಪೂರ್ವ ನಿಯೋಜಿತ ಹಕ್ಕನ್ನು ಕಿತ್ತುಕೊಂಡು ಮತ್ತೊಬ್ಬರಿಗೆ ಕೊಟ್ಟ ವಿಷಯವನ್ನು ಉಲ್ಲೇಖಿಸಿರುವುದರಿಂದ ಶಾಸನ ನಂಬಲರ್ಹವಲ್ಲ. ಶಾಸನ ಸಂಪುಟದ ಸಂಪಾದಕರು ಇದನ್ನು ಕೂಟ ಶಾಸನವೆಂದು ಉಲ್ಲೇಖಿಸಿರುವುದನ್ನು ಬಹುಶಃ ಒಪ್ಪಬಹುದಾಗಿದೆ.

೧೮ನೆಯ ಶತಮಾನಕ್ಕೆ ಸೇರಬಹುದಾದ ರಾಮಪುರದ ಶಾಸನವು (ಕ.೯೬) 'ಗರಜಿಗವಟಿಯ ನಿರಾಸಿಯ ಮಠದ ಹೊಲ' ಇದಿಷ್ಟನ್ನು ಮಾತ್ರ ಉಲ್ಲೇಖಿಸುತ್ತದೆ. ಇದು ರಾಮಪುರದ ಹೊಲದಲ್ಲಿನ ಲಿಂಗಮುದ್ರೆ ಕಲ್ಲಿನ ಮೇಲಿದ್ದು ವೀರಶೈವ ಪದ್ಧತಿಯ ಗಡಿ ನಿಷ್ಕರ್ಷೆಯ ಸಂಕೇತ ಸೂಚಕವಾಗಿದೆ. ಬಾಳೇಹಳ್ಳಿ ಗ್ರಾಮದ ಬಾಳೆಹೊನ್ನೂರು ಮಠದಲ್ಲಿರುವ ಕ್ರಿ.ಶ.೧೮೪೬ರ ತಾಮ್ರಶಾಸನ (ನ.ಪು.೨೬)ದಲ್ಲಿ 'ಭೂಕೈಲಾಸ ವಾರಾಣಾಸೀ ಪುಟಭೇದನಮಧ್ಯ ಮಹನೀಯ ಹರಿಕೇತನಂದನ ಪರಿಷ್ಕೃತ ಜಂಗಮವಾಟಮಠಾಧಿಷ್ಠಿತ ವಿಶ್ವಾರಾಧ್ಯ ಪರಂಪರಾನುಗತ ಸಿಂಹಾಸನರೂಢ ಪಟ್ಟಾಧ್ಯಕ್ಷ ಶ್ರೀಸಿದ್ಧಲಿಂಗಸ್ವಾಮಿಗಳ ಸನ್ನಿಧಿಗೆ' ಮೈಸೂರು ಅರಸರಾದ ಕೃಷ್ಣರಾಜ ಒಡೆಯರು ಬರಸಿದ ತಾಮ್ರಪತ್ರದಲ್ಲಿ 'ಶ್ರೀಕಾಶಿಕ್ಷೇತ್ರದಲ್ಲಿ ಮತ್ತು ನಿಮ್ಮ ಮಠದಲ್ಲಿ ನಿತ್ಯಗಟ್ಲೆ

ಹನ್ನೆರಡು ಜನಕ್ಕೆ ಗಣಾರಾಧನೆ ನಡೆಸಲು ತಿಂಗಳಿಗೆ ೫೦ ರೂ.ಗಳ ಕುಂಪಣಿ ಹಣದಂತೆ ವರ್ಷಕ್ಕೆ ೬೦೦ ರೂ.ಗಳ ಹುಂಡಿ ಕಳಿಸುವ ವ್ಯವಸ್ಥೆ ಮಾಡಿದರು ಅದರ ಜೊತೆಗೆ ದಿನದ ಗಣಾರಾಧನೆಗೆ ಬೇಕಾದ ತಕ್ಕ ಜಿನಿಸು, ಅಡಿಗೆಯವರು ವಗೈರೆಗೆ ಜನರನ್ನು ಗೊತ್ತುಮಾಡಿಕೊಂಡು ಈ ಧರ್ಮವನ್ನು ಆಚಂದ್ರಾರ್ಕವಾಗಿ ನಡೆಸುತ್ತಾ ನಮಗೆ ಆರ್ಶೀವಾದವನ್ನು ಮಾಡುತ್ತಾ ಬರುವುದು ಎಂದು ದಾಖಲಿಸಿದೆ. ಈ ಧರ್ಮವನ್ನು ಮಹಾರಾಜರ ವರ್ಧಂತಿ ದಿವಸ ಅರಮನೆಯ ಖಾಸ ಬೊಕ್ಕಸದಿಂದ ಹಣ ಸಂದಾಯ ಮಾಡುವಂತೆ ಹೇಳಲಾಗಿದೆ. ಇದರಿಂದ ವೀರಶೈವ ಮಠಾಧೀಶರ ಬಗ್ಗೆ, ಜಂಗಮವಾಟಿಮಠದ ಹಾಗೂ ಕಾಶೀಕ್ಷೇತ್ರ ಮಠದ ಬಗ್ಗೆ ಮೈಸೂರರಸರಿಗಿದ ಭಕ್ತಿ ಗೌರವವನ್ನು ವ್ಯಕ್ತಪಡಿಸುತ್ತದೆ.

ಶೃಂಗೇರಿ ಶಾರದಾಪೀಠ ಮತ್ತು ರಂಭಾಪುರಿಪೀಠಗಳ ಸಂಬಂಧ ಅನ್ಯೋನ್ಯತೆಯಿಂದ ಕೂಡಿತ್ತೆಂಬುದು ತಿಳಿಯುತ್ತದೆ. ದತ್ತಾತ್ರೇಯರು ಚಂದ್ರದ್ರೋಣಪರ್ವತಕ್ಕೆ ಬಂದಾಗ ಇಲ್ಲಿದ್ದ ವೀರಶೈವಮಠಗಳಾದ ಶ್ರೀಬಿಸಗ್ನಿ (ಕರ್ನಾಟಕದ ವೀರಶೈವ ಮಠಗಳು, ಲೇ.ಚಂದ್ರಶೇಖರ ನಾರಣಾಪುರ) ಮಠ ಮತ್ತು ಶ್ರೀಫಲಾಹಾರೇಶ್ವರ ಮಠವು ಆಶ್ರಯ ನೀಡಿ ದತ್ತಾತ್ರೇಯ ಗುರುಗಳು ಇಲ್ಲಿ ನೆಲೆಸಿ ತಪೋನಿರತರಾಗಲು ಸಹಾಯ ಮಾಡಿವೆ.

ಮೇಲಿನ ಶಾಸನಗಳ ಹಿನ್ನೆಲೆಯಲ್ಲಿ ಯೋಚಿಸಿದಾಗ ಹನ್ನೆರಡನೆ ಶತಮಾನಕ್ಕಿಂತ ಮೊದಲು ಈ ಪ್ರದೇಶದಲ್ಲಿ ವೀರಶೈವಧರ್ಮವು ಪ್ರಚಾರಕ್ಕೆ ಬಂತೆಂದು ತಿಳಿಯಬಹುದಾಗಿದೆ. ಬಾಳೆಹೊನ್ನೂರು ಪಟ್ಟಣದ ಉತ್ತರಭಾಗದಲ್ಲಿ ಜಗದ್ಗುರು ಶ್ರೀರಂಭಾಪುರಿಪೀಠವು ಸ್ಥಾಪನೆಯಾಗಿ ವೀರಶೈವರಿಗೆ ಪುಣ್ಯಸ್ಥಳವಾಗಿದೆ. ಈ ಮಠವು ಪ್ರಾಚೀನ ಕಾಲದಲ್ಲಿ ಸ್ಥಾಪನೆಯಾಗಿ ದೇಶದ ನಾನ ಭಾಗಗಳಲ್ಲಿ ಅನೇಕ ಶಾಖಾಮಠಗಳನ್ನು ಹೊಂದಿದೆ. ಈ ಪೀಠದ ಪರಂಪರೆಯು ಉಜ್ವಲವಾಗಿ ಬೆಳೆದು ಮೂಲಕರ್ತೃಗಳಾದ ಶ್ರೀ ಜಗದ್ಗುರು ರೇವಣ್ಣಸಿದ್ದ ಶಿವಾಚಾರ್ಯರಿಂದ ಹಿಡಿದು ಈಗಿನ ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರವರೆಗೆ ಅವಿರತವಾಗಿ ಧಾರ್ಮಿಕ ನೆಲೆಗಟ್ಟಿನಲ್ಲಿ 'ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ಧಾರ್ಮಿಕ ಘೋಷಣೆಯಂತೆ ಸಮಾಜವನ್ನು ಮುನ್ನಡೆಸುತ್ತಿದ್ದಾರೆ. ಇವರು ಸಾಹಿತ್ಯಪ್ರಿಯರಾಗಿದ್ದು ಕ್ರಿಯಾಶೀಲ ಪ್ರಗತಿಪರ ಚಿಂತಕರು. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯ, ಸಂಸ್ಕೃತಿಯ ವರ್ಧನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಧರ್ಮಪ್ರಸಾರ ಹಾಗೂ ಪೀಠದ ಅಭಿವೃದ್ಧಿಗಾಗಿ ಅವಿರತ ಶ್ರಮ ವಹಿಸುತ್ತಿದ್ದಾರೆ. ಪೀಠದಲ್ಲಿ ದಾಸೋಹ ನಿರಂತರವಾಗಿ ನಡೆಯುತ್ತಿದೆ.

ಗ್ರಂಥಋಣ

೧. ಎಪಿಗ್ರಾಫಿಯ ಕರ್ನಾಟಕ, ಸಂಪುಟ ೧೧ ಮತ್ತು ೧೨, (ಚಿ.ಮ.ಜಿಲ್ಲೆ) ಪರಿಷ್ಕೃತ ಆವೃತ್ತಿ ಪ್ರಸಾರಾಂಗ, ೨೦೦೩.

೨. ಸಾಂಸ್ಕೃತಿಕ ವೀರಶೈವ, ಎಂ.ಜಿ.ನಾಗರಾಜ್ ಶ್ರೀದೇಗುಲಮಠ.

೩. ಚಿಕ್ಕಮಗಳೂರು ಜಿಲ್ಲೆ ಗೆಜೆಟಿಯರ್

೪. ಕರ್ನಾಟಕದ ವೀರಶೈವ ಮಠಗಳು, ಲೇ: ಚಂದ್ರಶೇಖರ ನಾರಣಾಪುರ, ಗೆಳೆಯ ಪ್ರಕಾಶನ, ೨೦೦೨.
೫. ಶೃಂಗೇರಿ ಮಠದ ಶಾಸನಗಳು.
೬. ಕರ್ನಾಟಕದ ನಾಥಪಂಥ, ಲೇ. ರಹಮತ್ ತರೀಕೆರೆ, ಪ್ರಸಾರಾಂಗ, ಕ.ವಿ.ವಿ. ಹಂಪಿ.
೭. ಇತಿಹಾಸ ದರ್ಶನ, ಸಂ.೫, ಕರ್ನಾಟಕ ಇತಿಹಾಸ ಅಕಾಡೆಮಿ.
೮. ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ, ಡಾ.ಎಂ.ಚಿದಾನಂದಮೂರ್ತಿ, ಮಿಂಚು ಪ್ರಕಾಶನ, ೨೦೦೦.

ಬೆಳಗಾವಿ ಜಿಲ್ಲೆಯ ಐತಿಹಾಸಿಕ ಉತ್ಸವಗಳು

ದೇವಿ ಆರಾಧನೆಗಳು ಎಂದರೆ ಗ್ರಾಮದೇವತೆಯ ಆರಾಧನೆ ಎಂದು ಹೇಳಬಹುದು. ಗ್ರಾಮೀಣ ಜನತೆಯ ಬದುಕಿನ ಒಂದು ಅಂಗವೆಂಬಂತೆ ಅವರ ಬದುಕಿನಲ್ಲಿ ಬೆರೆತು ಪ್ರಧಾನ ಪಾತ್ರವಹಿಸಿವೆ. ಆ ಜನರ ಬದುಕನ್ನು ನಿಯಂತ್ರಿಸಿ ರೂಪಿಸುವ ವಿಶಿಷ್ಟ ಶಕ್ತಿಗಳು, ಆದಿಮಾನವ ಪ್ರಕೃತಿಯಲ್ಲಿ ಕಾಣಬರುವ ಪ್ರಾಣಿ, ಪಕ್ಷಿ, ಅಗ್ನಿ, ಮಳೆ, ಸಿಡಿಲು, ಗುಡುಗು, ಬಿರುಗಾಳಿ ಮೊದಲಾದ ಭೀಕರ ರುದ್ರಶಕ್ತಿಗೆ ಹೆದರಿ ದುರಂತಕ್ಕೆ ಸಿಲುಕಿದಾಗ ಆ ಶಕ್ತಿಗಳಿಗೆ ವ್ಯಕ್ತರೂಪ ಕೊಟ್ಟು ಪೂಜೆ ಬಲಿದಾನಗಳಿಂದ ಆ ಶಕ್ತಿಗಳನ್ನು ಸಂತುಷ್ಟಗೊಳಿಸಲು ಆರಂಭಿಸಿದ. ಹೀಗೆ ಆದಿಮಾನವನ ಭಯ ಆತಂಕಗಳ ನಡುವೆ ದೇವತೆಗಳ ಸೃಷ್ಟಿಯಾಯಿತೆಂಬ ನಂಬಿಕೆ ಇದೆ.

ಬೆಳಗಾವಿ ಜಿಲ್ಲೆ ಕನ್ನಡದ ವಿಶಿಷ್ಟ ಸಂಸ್ಕೃತಿಯ ಮಹತ್ವದ ಸ್ಥಾನ ಪಡೆದಿದೆ. ಈ ಜಿಲ್ಲೆಯ ಗ್ರಾಮದೇವತೆಗಳು ಸಹ ಸಾಂಸ್ಕೃತಿಕ ದೃಷ್ಟಿಯಿಂದ ಅಷ್ಟೇ ಮಹತ್ವದ ಸ್ಥಾನ ಪಡೆದಿದೆ. ಹಾಗೂ ಜಿಲ್ಲೆಯ ಐತಿಹಾಸಿಕ ಉತ್ಸವಗಳು ಅಥವಾ ದೇವಿ ಆರಾಧನೆಯ ಬಗ್ಗೆ ಪ್ರಸ್ತಾಸುವುದಕ್ಕೆ ಮುನ್ನ ಬೆಳಗಾವಿ ಜಿಲ್ಲೆ ಕರ್ನಾಟದ ಮಕುಟವಿದ್ದಂತೆ. ಅದಕ್ಕೆ ತನ್ನದೇ ಆದ ವೈಶಿಷ್ಟ್ಯತೆ ಮತ್ತು ವಿಶೇಷತೆ ಇದೆ. ಅಲ್ಲದೆ ಇದೂ ಗಡಿನಾಡಿನ ಜಿಲ್ಲಿಯೂ ಆಗಿದ್ದು ಕನ್ನಡ ಮತ್ತು ಮರಾಠಿ ಭಾಷೆಗಳೆರಡು ಪ್ರಚಲಿತದಲ್ಲಿವೆ. ಇಲ್ಲಿನ ಜನರು ಈ ಎರಡೂ ಭಾಷೆಗಳನ್ನು ಬಳಸಿ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ 'ಸಕ್ಕರೆ ಜಿಲ್ಲೆ' ಎಂದೇ ಪ್ರಸಿದ್ಧವಾಗಿರುವ ಮಂಡ್ಯ ಜಿಲ್ಲೆಯನ್ನು ಹಿಂದಕ್ಕೆ ಸರಿಸಿ ಆ ಸ್ಥಾನವನ್ನು ಬೆಳಗಾವಿ ಜಿಲ್ಲೆ ಪಡೆದುಕೊಂಡಿದೆ. ಈ ಜಿಲ್ಲೆ ಬೆಳಗಾವಿ, ಖಾನಾಪುರ, ಬೈಲಹೊಂಗಲ, ಸೌದತ್ತಿ, ರಾಮದುರ್ಗ, ಗೋಕಾಕ್, ಹುಕ್ಕೇರಿ, ರಾಯಭಾಗ್, ಚಿಕ್ಕೋಡಿ ಮತ್ತು ಅಥಣಿಯೂ ಸೇರಿದಂತೆ ಹತ್ತು ತಾಲುಕುಗಳನ್ನು ಹೊಂದಿದೆ. ಬೆಳಗಾವಿಯ 'ಕುಂದ', ಗೋಕಾಕಿನ 'ಕರದಂಟು' ವಿಶ್ವವಿಖ್ಯಾತಿಯನ್ನು ಪಡೆದಿದೆ. ಇಂತಹ ಒಂದು ಸುಂದರ ಜಿಲ್ಲೆ ಹಲವಾರು ದೇವಿ ಆರಾಧನೆಯಲ್ಲಿ (ಅಥವಾ ಜಾತ್ರೆ) ಪ್ರಸಿದ್ಧವಾಗಿದೆ. ಈ ಭಾಗದಲ್ಲಿ ನಡೆಯುವ ಎಲ್ಲಾ ಐತಿಹಾಸಿಕ ಉತ್ಸವ ಅಥವಾ ದೇವಿ ಆರಾಧನೆಯ ಬಗ್ಗೆ ಹೇಳಲು ಸಾಧ್ಯವಿಲ್ಲ. (೧) ಸೌದತ್ತಿ ರೇಣುಕಾದೇವಿ (ಅಥವಾ ಯಲ್ಲಮ್ಮ) (೨) ಶಿರಸಂಗಿ ಕಾಳಮ್ಮ (೩) ಗೋಕಾಕದ

ಲಕ್ಷ್ಮೀದೇವಿಯ ಉತ್ಸವ (೪) ಖಾನಾಪುರದ ಲಕ್ಷ್ಮೀ ದೇವಿ ಜಾತ್ರೆ (೫) ರಾ ಯಭಾಗದ ಚಿಂಚಲಿ ಮಾಯಾಕ್ಕದೇವಿಯ ವಿಶೇಷ ಉತ್ಸವಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

ಯಲ್ಲಮ್ಮದೇವಿ ಆರಾಧನೆ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಯಲ್ಲಮ್ಮ ದೇವಿಯ ಆರಾಧನೆ ವೈವಿಧ್ಯಮಯವಾದ ಆಚರಣೆಯಲ್ಲಿ ಪೂಜೆಗೊಳ್ಳುವ ಮತ್ತು ಪುರಾಣದ ಕಥೆಗಳನ್ನು ಒಳಗೊಂಡ ಪ್ರಸಿದ್ಧ ದೇವತೆ. ಯಲ್ಲಮ್ಮನ ಗುಡಿಯ ಪೌಳಿಯಲ್ಲಿ ದತ್ತಾತ್ರೇಯ, ಮಾರುತಿ, ಅನ್ನಪೂರ್ಣ, ನವಗ್ರಹಗಳು, ವೀರಭದ್ರೇಶ್ವರ, ಸಂಕೆಲ್ಲಮ್ಮನ ಮೂರ್ತಿಗಳಿವೆ ಸಂಕೆಲ್ಲಮ್ಮನು ರಾತ್ರಿ ಹೊತ್ತು ಒನಕೆ ಹಿಡಿದು ಯಲ್ಲಮ್ಮನ ಗುಡಿಯನ್ನು ಕಾಯುವ ಕಾವಲು ದೇವಿ. ಈ ಎಲ್ಲ ದೇವರನ್ನು ಪೂಜಿಸುವವರು ಆದಿ ಬಣಜಿಗ ವೀರ ಶೈವಪೂಜಾರಿಗಳು. ದೇವಾಲಯದ ಹೊರಗೆ ಪರಶುರಾಮ, ಗಣಪತಿ, ಮಲ್ಲಿಕಾರ್ಜುನ, ಸಿದ್ದರಗವಿ, ಏಕನಾಥ, ಜೋಗಿನಾಥ ಮಾತಂಗಿ, ಜಮದಗ್ನಿ, ಆಕಾಶ ಭರಮಪ್ಪ ಉಪನ ಬಸವನ ಗುಹೆ ಇದೆ.

ಯಲ್ಲಮ್ಮದೇವಿ ಆಭರಣಗಳನ್ನು ಧರಿಸಿರುತ್ತಾಳೆ. ಕಿರೀಟವಿದೆ. ಜಡೆ ಕಟ್ಟಿರುತ್ತಾಳೆ. ಎರಡೂ ಕೈಗಳಲ್ಲಿ ಅಕ್ಷಯಪಾತ್ರೆ ಇರುತ್ತದೆ. ಕೋರೆಮೀಸೆ ಇರುವುದೊಂದು ವಿಶೇಷ. ದೇವಿಗೆ ನಿತ್ಯವೂ ದಿನಕ್ಕೆರಡು ಸಾರಿ ಪೂಜೆ ಮಾಡುವುದರ ಜೊತೆ, ಸೀರೆಯನ್ನು ಬದಲಾಯಿಸುತ್ತಿರುತ್ತಾರೆ. ವತ್ಸಲ ಹುಣ್ಣಿಮೆಯಂದು ಗರ್ಭಗುಡಿಯ ಮುಂದಿರುವ ಯಲ್ಲಮ್ಮನ ಉತ್ಸವ ಮೂರ್ತಿಯನ್ನು ಅಲಂಕರಿಸಿ ಜಮದಗ್ನಿಯ ಗುಡಿಯ ಬಳಿ ತರುತ್ತಾರೆ. ಅಲ್ಲಿ ದೇವಿಯ ಕೈಯಬಳೆಗಳನ್ನು ಒಡೆದು ಹಣೆಗೆ ಹಚ್ಚಿರುವ ಕುಂಕುಮವನ್ನು ಅಳಿಸುತ್ತಾರೆ. ಹುಣ್ಣಿಮೆಯ ಮೊದಲದಿನ ಜೋಗತಿಯರು ಅಲ್ಲಿಗೆ ಬಂದು ತಮ್ಮ ಕೈಗಳಲ್ಲಿರುವ ಬಳೆಗಳನ್ನು ಒಡೆದುಕೊಳ್ಳುತ್ತಾರೆ. ಇದೊಂದು ಹಿಂದಿನಿಂದ ನಡೆದುಬಂದಿರುವ ಪದ್ಧತಿಯಾಗಿದೆ. ಉತ್ಸವ ಮೂರ್ತಿಗೆ ಪೂಜೆ ಮೊದಲಾದ ಕೆಲವು ಆಚರಣೆಗಳು ನಡೆದ ನಂತರ ಗುಡಿಗೆ ಮತ್ತೆ ತರುತ್ತಾರೆ. ನಂತರ ಗರ್ಭಗುಡಿಯ ಮುಂದೆ ಹೋಮ ನಡೆಯುತ್ತದೆ. ಅಂದಿನಿಂದ ಉತ್ಸವ ಮೂರ್ತಿಗೆ ೪ ತಿಂಗಳ ಕಾಲ ಕುಂಕುಮ ಧಾರಣೆ ಮಾಡುವುದಿಲ್ಲ. ಮುತ್ತೈದೆ ಅಥವಾ ದವನದ ಹುಣ್ಣಿಮೆಯ ದಿನ ದೇವಿಗೆ ದವನ ಎರಚಿ, ಹೋಮ ಮಾಡಿ ಕುಂಕುಮ ಇಡುತ್ತಾರೆ. ಈ ಎರಡೂ ಆಚರಣೆಗಳು ನಾಲ್ಕು ತಿಂಗಳ ಅಂತರದಲ್ಲಿ ನಡೆಯುತ್ತವೆ.

ಯಲ್ಲಮ್ಮನ ಗುಡಿಯಿಂದ ಒಂದೂವರೆ ಫರ್ಲಾಂಗ್ ದೂರದಲ್ಲಿ ಜಮದಗ್ನಿ ಗುಡಿ ಇದೆ. ಜಮದಗ್ನಿಯ ಕೆಳಗೆ ಕಾಮಧೇನು, ಎದುರಿನಲ್ಲಿ ಲಿಂಗವಿದೆ. ಪೂಜಾರಿ ಮಡಿಯಲ್ಲಿ ಜಮದಗ್ನಿಯನ್ನು ಪೂಜಿಸುತ್ತಾನೆ. ಈ ಗುಡಿಯ ಮುಂದೆ ಯಲ್ಲಮ್ಮನ ಕತ್ತರಿಸಿದ ತಲೆ, ಪರಶುರಾಮನ ಪರಶು (ಕೊಡಲಿ), ಹಾವಿನ ಸಿಂಬಿ ಇವೆ. ಕರೆಯವ್ವ ಕೊಡಗಣಪತಿ, ಕಾರ್ತಿಕಾರ್ಜುನ ವಿಗ್ರಹಗಳಿವೆ. ಇಲ್ಲಿ ಮಾತಂಗಿ ಗುಡಿಯು ಇದ್ದು, ಮಾತಂಗಿ ಮತ್ತು ಯಲ್ಲಮ್ಮ ಅಕ್ಕತಂಗಿಯರೆಂದು ಸ್ಥಳೀಯರು ಹೇಳುತ್ತಾರೆ. ಮಾತಂಗಿಗೆ ಬಲಿ ಕೊಡುವುದು ಅಥವಾ ಅಲ್ಲಿ ಮುತ್ತು ಕಟ್ಟುವ ಸಂಪ್ರದಾಯವಿಲ್ಲ. ಅನ್ಯ ಜಾತಿಯ ಇಬ್ಬರು ಪೂಜಾರಿಗಳಿಂದ ಪೂಜೆ ನಡೆಯುತ್ತದೆ. ನಾಲ್ಕು ದಿನಕ್ಕೆ ಒಬ್ಬರಂತೆ ಎರಡು ಉಪಜಾತಿಯ ಪೂಜಾರಿಗಳು ಬದಲಾಗುತ್ತಾರೆ. ಮಾತಂಗಿಗೆ ರೊಟ್ಟಿಯ ನೈವೇದ್ಯವನ್ನು ಎಲ್ಲಾ ಜಾತಿಯ ಭಕ್ತರು ಗುಡಿಯಲ್ಲಿರುವ ಪಡ್ಲಿಗೆ (ಬುಟ್ಟಿ) ಯಲ್ಲಿ ಹಾಕಿ ಒಪ್ಪಿಸುತ್ತಾರೆ.

ಪೂಜಾರಿ ಮಂತ್ರಗಳನ್ನು ಹೇಳದೆ ನಗಾರಿ ಮತ್ತು ಗಂಟೆ ಬಾರಿಸುತ್ತಾ ಮಾತಂಗಿಗೆ ಪೂಜೆ ನಡೆಯುತ್ತದೆ. ಅಲ್ಲದೆ ಆದಿ ಜಾಂಬವರು ಅವರ ಮದುವೆಯ ನಂತರ ಕಂಕಣ ಮತ್ತು ಬಾಸಿಂಗವನ್ನು ಇಲ್ಲಿ ಬಂದು ಬಿಚ್ಚಿಟ್ಟು ಹೊಳೆಯಲ್ಲಿ ತೇಲಿಬಿಡುತ್ತಾರೆ.

ಪೌರಾಣಿಕವಾಗಿ ರೇಣುಕೆ ಅಥವಾ ಯಲ್ಲಮ್ಮನ ಕಥೆ ಎಲ್ಲರಿಗೂ ತಿಳಿದ ವಿಷಯವಾದರು ಅದಕ್ಕೆ ಒತ್ತುಕೊಡದೆ ಸ್ಥಳೀಯರು ಹೇಳಿದ್ದನ್ನು ಮಾತ್ರ ಉಲ್ಲೇಖಿಸುತ್ತಿರುವೆ. ಜಮದಗ್ನಿಯ ಶಾಪಕ್ಕೆ ತುತ್ತಾದ ಯಲ್ಲಮ್ಮ ಕುಷ್ಠರೋಗ ಪೀಡಿತಳಾಗಿ ಬಂದವಳು ಅಲ್ಲಿದ್ದ ಬೋರ್ಷಾವಲಿ ದೇವರ ಬಳಿ ಆಶ್ರಯ ಕೇಳುತ್ತಾಳೆ. ಆತ ಒಂದು ನಿಂಬೆಹಣ್ಣನ್ನು ಎಸೆದು ಅದು ಬಿದ್ದ ಜಾಗಕ್ಕೆ ಹೋಗಿ ನೆಲಸು ಎಂದು ಹೇಳಿ ಕಳಿಸುತ್ತಾನೆ. ಯಲ್ಲಮ್ಮ ಹೋಗುತ್ತಿರುವಾಗ ಜೋರು ಮಳೆ ಬಂದು ಆಶ್ರಯಕ್ಕಾಗಿ ಒಂದು ಗುಡಿಸಿಲಲ್ಲಿ ನಿಲ್ಲುತ್ತಾಳೆ. ಆ ಗುಡಿಸಲ ಸೂರಿನಲ್ಲಿ ಸಿಕ್ಕಿಸಿದ್ದ ೨ ಜೊತೆ ಕಟ್ಟಿಗೆ ಚಪ್ಪಲಿಯ ಕೆಳಗೆ ನಿಂತಿರುವಾಗ ಮಳೆ ನೀರು ಆ ಚಪ್ಪಲಿಗಳ ಮೂಲಕ ಹರಿದು ಯಲ್ಲಮ್ಮನ ಮೈಮೇಲೆ ಬಿದ್ದು ಆಕೆಯ ಕುಷ್ಠರೋಗ ನಿವಾರಣೆಯಾಯಿತು. ಆ ಮರದ ಚಪ್ಪಲಿ ಮತ್ತು ಗುಡಿಸಲು ಯಕ್ಕಯ್ಯ ಮತ್ತು ಜೋಗಯ್ಯ ಎಂಬ ಅಣ್ಣತಮ್ಮಂದಿರದು. ಮತ್ತೊಂದು ಹೇಳಿಕೆಯಂತೆ ಯಲ್ಲಮ್ಮನ ಶೀಲವನ್ನು ಶಂಕಿಸಿ ಜಮದಗ್ನಿ ಆಕೆಯನ್ನು ಹೊರಗೆ ಹಾಕುತ್ತಾನೆ. ತನ್ನ ಶಿರಚ್ಛೇದವಾಗುವ ಭಯದಿಂದ ಹೊರಬಂದು ಮಾದಿಗರ ಮಾತಂಗಿಯ ಮನೆಯಲ್ಲಿ ಅಡಗಿಕೊಳ್ಳುತ್ತಾಳೆ. ಮಾತಂಗಿ ತನ್ನ ಸೋದರಮಾವ ಭರಮಪ್ಪನನ್ನು ಕಾವಲಿಗೆ ನೇಮಿಸುತ್ತಾಳೆ. ಹೀಗೆ ಹಲವಾರು ಕಥೆಗಳನ್ನು ಸ್ಥಳೀಯರು ಪ್ರಚಲಿತದಲ್ಲಿವೆಯೆಂದು ಹೇಳುತ್ತಾರೆ. ಆದರೆ ಯಲ್ಲಮ್ಮನ ಆರಾಧಿಸುವ ವತ್ಸಲ ಹುಣ್ಣಿಮೆಯಿಂದ ಮುತ್ತೈದೆ ಹುಣ್ಣಿಮೆಯವರೆಗೆ ನಡೆಯುವುದನ್ನು ಪರಿಗಣಿಸಬಹುದು.

ಖಾನಾಪುರದ ಲಕ್ಷ್ಮೀದೇವಿಯ ಉತ್ಸವ :

ಖಾನಪುರ ಲಕ್ಷ್ಮೀದೇವಿಯ ಉತ್ಸವವನ್ನು ನಡೆಸಬೇಕಾದ ದಿನವನ್ನು ಊರಿನ ಹಿರಿಯ ಪಂಚರು ಸೇರಿ ದಿನಾಂಕವನ್ನು ಗೊತ್ತುಪಡಿಸುತ್ತಾರೆ. ೧೮ ವರ್ಷಕ್ಕೊಮ್ಮೆ ನಡೆಯುವ ಈ ಉತ್ಸವವನ್ನು ೯ ದಿನಗಳ ಕಾಲ ಅದ್ದೂರಿಯಾಗಿ ನಡೆಸುತ್ತಾರೆ. ಈ ಉತ್ಸವಕ್ಕಾಗಿ ಹಣವನ್ನು ಸ್ಥಳೀಯರಿಂದ ಇತರ ಹೊರ ಊರಿನ ಭಕ್ತಾದಿಗಳಿಂದ ಸಂಗ್ರಹಿಸುತ್ತಾರೆ. ಅತೀ ಬಡಕುಟುಂಬ ದವರು ಸಹ ತಮ್ಮ ಮನೆತನದ ಬಂಧು,ಬಳಗ, ನೆಂಟರು, ಇಷ್ಟರು, ಸ್ನೇಹಿತರನ್ನು ಆಹ್ವಾನಿಸ ಬೇಕಾಗುತ್ತದೆ. ಆದರದಿಂದ ಅವರನ್ನು ಆದರಿಸಬೇಕಾದರೆ ಕನಿಷ್ಠ ೧೦-೧೫ಸಾವಿರ ರೂಗಳ ಖರ್ಚು ಬರುತ್ತದೆ ಎನ್ನುತ್ತಾರೆ. ಊರಿನ ಸಮಸ್ತರೂ ತಮ್ಮ ಮನೆ ಮತ್ತು ಬೀದಿಗಳನ್ನು ಸಾಮೂಹಿಕವಾಗಿ ಸುಣ್ಣ, ಬಣ್ಣ, ಸಾರಣಿ, ಕಾರಣಿ ಮಾಡಿ ಶೃಂಗರಿಸುತ್ತಾರೆ.

ದೇವಿಯನ್ನು ಪ್ರತಿ ೧೮ ವರ್ಷಕ್ಕೊಮ್ಮೆ ಉತ್ಸವ ಮಾಡುವಾಗ ಪ್ರತ್ಯೇಕವಾಗಿ ಮಣ್ಣಿನಿಂದ ತಯಾರಿಸುವರು. ಯುಗಾದಿ ಪಾಡ್ಯದ ದಿವಸ ಊರಿನ ಹಿರಿಯರು ನಿಗದಿತ ಸ್ಥಳದಿಂದ ಮಂಗಳವಾದ್ಯ ಸಹಿತ, ಗುಲಾಲ್ ಎರಚುತ್ತಾ ಮೆರವಣಿಗೆಯಲ್ಲಿ ಮಣ್ಣನ್ನು ಸಂಗ್ರಹಿಸಿ ತರುತ್ತಾರೆ. ತಂದ ಮಣ್ಣನ್ನು ೫ ಭಾಗ ಮಾಡಿಟ್ಟು ಪೂಜೆ ಮಾಡಿ ನೆನೆಹಾಕುತ್ತಾರೆ. ಮಣ್ಣು ನೆನೆದು ಹದಗೊಂಡ ಮೇಲೆ ಚಿತ್ರಗಾರ್ ಮನೆತನದ ಬಾಬುರಾವ್ ಎನ್ನುವ ಶಿಲ್ಪಿ ವಿಗ್ರಹವನ್ನು ತಯಾರಿಸುತ್ತಾರೆ. ದೇವಿ ವಿಗ್ರಹ ತಯಾರಿಕೆಗೆ ಸುಮಾರು ೨ ರಿಂದ ೩ ತಿಂಗಳ ಕಾಲ ಬೇಕಾಗುತ್ತದೆ. ಪ್ರತಿ ವರ್ಷವೂ ವಿಗ್ರಹದ

ತಯಾರಿಕೆಯಲ್ಲಿ ವಿನ್ಯಾಸ ಮತ್ತು ಹಚ್ಚುವ ವಿವಿಧ ಬಣ್ಣ ಹಾಗೂ ಆಭರಣಗಳಿಗಾಗಿ ಹಚ್ಚುವ ಬಣ್ಣಗಳಿಂದ ದೇವಿ ತುಂಬಾ ಆಕರ್ಷಕವಾಗಿರುತ್ತದೆ. ವಿಗ್ರಹ ೧೦ ಅಡಿ ಎತ್ತರವಿರುತ್ತದೆ. ಆ ಎತ್ತರಕ್ಕೆ ಅನುಗುಣವಾಗಿ ದೇವಿಯ ಪ್ರತಿ ಅಂಗಾಂಗಗಳು ರೂಪುಗೊಳ್ಳುತ್ತವೆ. ಸಿಂಹವಾಹಿನಿ ದೇವಿಗೆ ೧೦ ಕೈಗಳಿದ್ದು ಆ ಕೈಗಳಲ್ಲಿ ವಿವಿಧ ಆಯುಧಗಳನ್ನು ಧರಿಸಿರುತ್ತಾಳೆ. ದೇವಿ ಕಾಲಿನ ಬಳಿಯಲ್ಲಿ ಒಬ್ಬ ರಾಕ್ಷಸ ಕುಳಿತಂತೆ ಹಾಗೂ ಎಡಗಾಲು ಚಾಚಿರುವಂತೆ ಬಲಗಾಲು ಸ್ವಲ್ಪ ಮಡಿಚಿರುವಂತೆ, ಆತನ ಎಡಗೈ ನೆಲದ ಮೇಲೆ ಊರಿರುವಂತೆ, ಬಲಗೈಲಿ ಒಂದು ಕಿರುಗತ್ತಿ ಹಿಡಿದಿದ್ದು ಅದರಿಂದ ಆಕ್ರಮಣಕ್ಕೆ ಸಿದ್ದನಿರುವಂತೆ ಶಿಲ್ಪವಿರುತ್ತದೆ. ದೇವಿ ಬಲದ ಮೇಲು ಕೈಯ್ನಿಂದ ಹಾಗೂ ಎಡಭಾಗದ ಮೊದಲ ಕೈಯಿಂದ ರಾಕ್ಷಸನ ಎದೆಗೆ ಭರ್ಜಿಯಂತಿರುವ ಆಯುಧದಿಂದ ತಿವಿಯುವಂತೆ ಶಿಲ್ಪವನ್ನು ತಯಾರಿಸಿ ಸೂಕ್ತಬಣ್ಣಗಳಿಂದ ಅಲಂಕರಿಸಿ ಅಂದಗೊಳಿಸುತ್ತಾನೆ. ಈ ಸಿಂಹವಾಹಿನಿ ಲಕ್ಷ್ಮೀದೇವಿಗೆ ಉಡಿಸುವ ರೇಷ್ಮೆ ಸೀರೆಯನ್ನು ಪ್ರತ್ಯೇಕವಾಗಿ ೧೨ ಮೀಟರು ಉದ್ದ ಮತ್ತು ೪೫ ಇಂಚು ಅಗಲವಿರುವ ಸೀರೆಯನ್ನು ಹೊಸದಾಗಿ ನೇಯ್ಗೆಯರಿಂದ ನೇಯಿಸುತ್ತಾರೆ. ದೇವಿಯ ಎಲ್ಲಾ ಅಂಗಾಂಗಗಳನ್ನು ಶಿಲ್ಪಿ ನಾಜೂಕಾಗಿ ಬಿಡಿಸಿರುತ್ತಾನೆ. ಪೂರ್ಣ ರೀತಿಯಲ್ಲಿ ಶಿಲ್ಪ ತಯಾರಾದ ಮೇಲೆ ದೇವಿಯ ಮುಂದೆ ಒಂದು ಪರದೆಯನ್ನು ಇಳಿಬಿಡುತ್ತಾನೆ. ದೇವಿಯ ಕಣ್ಣಿಗೆ ದೃಷ್ಠಿಯನ್ನು ಕೊಡುವಾಗ ಶಿಲ್ಪಿ ಎದುರಿನಲ್ಲಿ ನಿಲ್ಲದೆ ಶಿಲ್ಪದ ಹಿಂಭಾಗದಲ್ಲಿ ನಿಂತು ಕನ್ನಡಿಯ ಸಹಾಯದಿಂದ ದೃಷ್ಠಿಯನ್ನು ಕೊಟ್ಟು ಕಣ್ಣಿಗೆ ಒಂದು ಬಿಳಿ ಬಟ್ಟೆಯನ್ನು ಕಟ್ಟುತ್ತಾನೆ.

ದೇವಿಯ ಉತ್ಸವ ಆರಂಭವಾಗುವಾಗ ಅವಳ ಹೆಸರಿನಲ್ಲಿ ಬಲಿಗೆ ಬಿಟ್ಟ ಕೋಣವನ್ನು ಹಾಗು ಭಕ್ತರು ಬಿಟ್ಟ ಮೇಕೆ, ಕುರಿ ಮೊದಲಾದ ಪ್ರಾಣಿಗಳನ್ನು ಬಲಿಕೊಟ್ಟು ರಕ್ತಧಾರೆ ಹರಿಯುತ್ತಿರುವಾಗ ದೇವಿಯ ಮುಂದೆ ಹಿಡಿದು ದೇವಿಯ ದೃಷ್ಟಿ ಬಲಿಕೊಟ್ಟ ಪ್ರಾಣಿ ಮೇಲೆ ಬಿದ್ದ ನಂತರ ಕಣ್ಣಿಗೆ ಕಟ್ಟಿರುವ ಬಟ್ಟೆಯನ್ನು ಬಿಚ್ಚುವರು. ಪ್ರಾಣಿ ಬಲಿ ನಿಷಿದ್ಧವೆಂದು ಸರ್ಕಾರ ಘೋಷಿಸಿರುವುದರಿಂದ ಈಗ ಬಲಿ ಕೊಡುವ ಪದ್ಧತಿ ನಿಂತಿದೆ ಎಂದರು ಸ್ಥಳೀಯರು. ಮೊದಲ ದಿನ (ಒಂದು ಕೋಣದ ಜತೆಯಲ್ಲಿ ಮದುವೆ ಮಾಡಿ ಅದನ್ನು ಕಡಿದು ಆ ರಕ್ತವನ್ನು ದೇವಿಯ ಕಣ್ಣಿಗೆ ಹಚ್ಚುವರು) ದೇವಿಗೆ ಮಾಂಗಲ್ಯಕಟ್ಟಿ ವಿವಾಹದ ಆಚರಣೆ ಮುಗಿದ ಮೇಲೆ ಮಂಚಾಪುರ ಓಣಿಯಲ್ಲಿರುವ ತೌರು ಮನೆಗೆ ಹೋಗಿ ಉಡಿ ತುಂಬಿಸಿಕೊಂಡು ಮಂಗಳವಾದ್ಯ ಸಹಿತ ಆರತಿಯನ್ನು ಹೊತ್ತ ಮುತ್ತೈದೆಯರು ಅವರ ಹಿಂದೆ ಊರಿನ ಭಕ್ತರೆಲ್ಲಾ ಸೇರಿಕೊಂಡು ಮನೆ-ಮನೆಗಳಲ್ಲಿ ಉಡಿ ತುಂಬಿಸಿಕೊಂಡು ಊರಿನ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಹೊನ್ನಾಟವಾಡುತ್ತಾ ಸಂಜೆಯ ಹೊತ್ತಿಗೆ ದೇವಿ ತನ್ನ ಗುಡಿಗೆ ಬಂದು ಆಸೀನಳಾಗುತ್ತಾಳೆ. ಎದುರಿಗೆ ತೆಂಗಿನ ಗರಿಯ ಗುಡಿಸಲು ಹಾಕುತ್ತಾರೆ. ಅದನ್ನು ಮಾತಂಗಿಯ ಗುಡಿ ಎನ್ನುತ್ತಾರೆ. ೮ ದಿನ ಒಂದೇ ಸ್ಥಳದಲ್ಲಿ ಪೂಜೆ, ನೈವೇದ್ಯಗಳನ್ನು ಸ್ವೀಕರಿಸುತ್ತಾಳೆ. ಮಾರನೆಯ ದಿನ ೯ನೇ ದಿನ ಮೊದಲ ದಿನದಂತೆ ಊರಿನ ಎಲ್ಲಾ ಮನೆಗಳಿಂದ ಪೂಜೆ ಸ್ವೀಕರಿಸಿ ಉಡಿ ತುಂಬಿಸಿಕೊಂಡು ಹೊನ್ನಾಟದ ಮೆರವಣಿಗೆಯಲ್ಲಿ ಊರಿನ ಗಡಿಯವರೆಗೆ ಬರುತ್ತಾಳೆ. ಅಲ್ಲಿ ಒಂದು ಕಾಲುವೆ ಹರಿಯುತ್ತಿರುತ್ತದೆ. ದೇವಿ ಅಲ್ಲಿಗೆ ತಲುಪಿದ ಮೇಲೆ ಊರಿನಿಂದ ಮೆರವಣಿಗೆಯಲ್ಲಿ ಬಂದ ಎಲ್ಲಾ ಭಕ್ತಜನರು (೫-೬ ಜನರನ್ನು ಬಿಟ್ಟು) ಪೂಜೆ ಮುಗಿಸಿ ಹಿಂದಿರುಗಿ ನೋಡದೆ ಊರಿಗೆ ಹೋಗಿ ದೇವಿಯ ಎದುರಿನಲ್ಲಿದ್ದ ಮಾತಂಗಿ ಗುಡಿಗೆ ಬೆಂಕಿ ಹಚ್ಚಿ ಸುಡುತ್ತಾರೆ. ಊರಿನ ಹೊರಭಾಗದ ಗಡಿಯ ಬಳಿ ಕರೆತಂದ

ದೇವಿಯನ್ನು ಹೊಳೆದಾಟಿಸಿ ಪ್ರತಿಸಾರಿ ಬಿಟ್ಟು ಬರುವ ಜಾಗದಲ್ಲಿ ದೇವಿಯನ್ನು ಬಿಟ್ಟು ಅವಳಿಗೆ ಅಲಂಕರಿಸಿದ್ದ ಒಡವೆ ತುಂಬಾ ಬೆಲೆಬಾಳುವ ಸೀರೆಯನ್ನು ತೆಗೆದುಕೊಂಡು ಹಿಂದಿರುಗಿ ನೋಡದೆ ಊರಿಗೆ ಮರಳಿ ಬರುತ್ತಾರೆ. ಮೂರು ದಿನದವರೆಗೆ ಆ ಕಡೆ ಯಾರು ತಲೆ ಹಾಕುವುದಿಲ್ಲ, ಹಾಗೂ ಹೋಗಿ ಯಾರೂ ದೇವಿಯ ದರ್ಶನ ಮಾಡುವುದಿಲ್ಲ. ಅಲ್ಲಿ ಬಿಟ್ಟು ಬಂದ ಮೇಲೆ ಆ ಮಣ್ಣಿನ ಲಕ್ಷ್ಮೀದೇವಿಯ ಶಿಲ್ಪ ಗಾಳಿ, ಮಳೆ, ಬಿಸಿಲುಗಳಿಗೆ ಸಿಲುಕಿ ಕ್ರಮೇಣ ಕರಗಿ ಹೋಗುತ್ತದೆ. ದೇವಿಗೆ ಉಡಿಸಿದ ಸೀರೆಯನ್ನು ಲಿಲಾವಿಗೆ ಹಾಕುತ್ತಾರೆ.

ಲಕ್ಷ್ಮೀದೇವಿಯ ಗುಡಿಯಲ್ಲಿ ಒಂದು ಫೋಟೊ ಇಟ್ಟು ಊರಿನ ಜನತೆ ಪೂಜೆ ಸಲ್ಲಿಸುವರು. ಈಗ ೨ ವರ್ಷದ ಹಿಂದೆ ನಡೆದ ಉತ್ಸವದಲ್ಲಿ ಮಾಡಿಸಿದ್ದ ಲಕ್ಷ್ಮೀದೇವಿಯ ಶಿಲ್ಪವನ್ನು ಹೋಗಿ ನೋಡಿಬಂದೆ. ಅವಳ ಮೈಮೇಲೆ ಒಂದು ಹಳೆಯ ಬಟ್ಟೆ ತುಂಡಿತ್ತು. ಶರೀರದ ಕೆಲವು ಭಾಗಗಳು ನೀರಿನಲ್ಲಿ ಕರಗಿ ಹೋಗಿದ್ದವು. ರಾಕ್ಷಸನ ಶಿಲ್ಪವೂ ಕೆಲವು ಭಾಗ ನಾಶವಾಗಿ, ಶಿರ ಅದರ ಮೇಲಿನ ಕಿರೀಟ ಉಳಿದಿತ್ತು. ಈ ಲಕ್ಷ್ಮೀದೇವಿ ಉತ್ಸವದಲ್ಲಿ ಊರಿನಲ್ಲಿರುವ ಎಲ್ಲಾ ದೇವರಿಗೂ ಪೂಜೆ ನಡೆಯುತ್ತದೆ.

ಮುಖ್ಯವಾಗಿ ಮತ್ತೊಂದು ವಿಷಯ ಸಾದರಪಡಿಸಬೇಕಾಗಿದೆ. ಖಾನಪುರದ ಜನತೆ ಈ ಮಣ್ಣಿನಲ್ಲಿ ದೇವಿಯನ್ನು ಮಾಡಿ ಪೂಜಿಸುವ ಮೊದಲು ಕಟ್ಟಿಗೆಯ ಲಕ್ಷ್ಮಿಯನ್ನು ಪೂಜಿಸುತ್ತಿದ್ದರಂತೆ. ೯ ದಿನಗಳ ಅದ್ದೂರಿ ಪೂಜೆಯನಂತರ ದೇವಿಯನ್ನು ಬಿಡಿಸಿ ಒಂದು ದೊಡ್ಡ ಪೆಟ್ಟಿಗೆಯಲ್ಲಿ ಬೀಗಹಾಕಿ ಇಡುತ್ತಿದ್ದರು. ಒಮ್ಮೆ ಕಳ್ಳರು ದೇವಾಲಯದಲ್ಲಿರಿಸಿದ್ದ ದೊಡ್ಡ ಪೆಟ್ಟಿಗೆಯನ್ನು ನೋಡಿ ಅದರಲ್ಲಿ ಬೆಲೆ ಬಾಳುವ ವಸ್ತುಗಳಿರಬೇಕೆಂದು ಭಾವಿಸಿ ಆ ಪೆಟ್ಟಿಗೆಯನ್ನು ಕದ್ದು ಸೂಳೆಬಾವಿ ಎನ್ನುವ ಊರ ಹೊರಗೆ ಬೀಗ ಒಡೆದು ನೋಡಿದಾಗ ಅದರಲ್ಲಿದ್ದ ಮರದ ತುಂಡುಗಳನ್ನು ನೋಡಿ ಅಲ್ಲಿಯೆ ಬಿಟ್ಟು ಹೋಗಿದ್ದರು. ಮರುದಿನ ಆ ಊರಿನವರ ಕಣ್ಣಿಗೆ ಬಿದ್ದ ದೇವಿಯ ಬಿಡಿ ಭಾಗಗಳನ್ನು ಜೋಡಿಸಿ ತಮ್ಮ ಊರಿಗೆ ಬಂದ ಲಕ್ಷ್ಮೀದೇವಿಗೆ ಪೂಜಾ ಕೈಂಕರ್ಯಗಳನ್ನು ಆರಂಭಿಸಿ ಇಂದಿಗೂ ಅಲ್ಲಿ ನೆಲಸಿ ಪೂಜೆ ಸ್ವೀಕರಿಸುತ್ತಿದ್ದಾಳೆ. ಇದು ಮೊದಲು ಖಾನಾಪುರದವರಿಗೆ ತಿಳಿಯದೆ ಮಣ್ಣಿನಿಂದ ಮಾಡಿ ಉತ್ಸವ ಮುಗಿದ ಮೇಲೆ ಊರ ಹೊರಗೆ ಬಿಟ್ಟು ಬರುವ ಪದ್ಧತಿ ಆಚರಣೆಗೆ ಬಂದಿದೆ ಎಂದರು. (ನಾನು ಕ್ಷೇತ್ರಕಾರ್ಯಕ್ಕೆ ಬೆಳಗಾವಿಯ ಸೋದರ ಶ್ರೀ ವೆಂಕಟೇಶ ದೇಶಪಾಂಡೆ ಖಾನಾಪುರಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ಹಿರಿಯರ ಭೇಟಿಯಾಗಿ ಈ ೨ ವರ್ಷದ ಕೆಳಗೆ ದೇವಿ ಉತ್ಸವ ಮಾಡಿ ಊರ ಹೊರಗೆ ನಿಲ್ಲಿಸಿ ಬಂದಿದ್ದ ವಿಗ್ರಹ, ಹಾಗೂ ಬರಿ ಫೋಟೋ ಇಟ್ಟು ಪೂಜೆ ಸಲ್ಲಿಸುತ್ತಿರುವ ಗುಡಿಯನ್ನು ಕಂಡು ಬಂದಿರುವೆ.)

ರಾಯಭಾಗದ ಚಿಂಚಲಿ ಮಾಯಕ್ಕದೇವಿ

ಬೆಳಗಾವಿ ಜಿಲ್ಲಾ ಕೇಂದ್ರದಿಂದ ಸುಮಾರು ೯೦ ಕಿ.ಮೀ. ದೂರದಲ್ಲಿ ರಾಯಭಾಗ ತಾಲೂಕು, ಅಲ್ಲಿಂದ ೧೦ ಕಿ.ಮೀ ದೂರದಲ್ಲಿರುವ ಚಿಂಚಲಿ ಗ್ರಾಮದ ಪ್ರಸಿದ್ಧ ದೇವತೆಯೆ ಮಾಯಕ್ಕ ದೇವಿ. ಈ ದೇವಿಯನ್ನು ಮಾಯವ್ವ, ಮಾಯಕ್ಕ, ಮಾಯಮ್ಮ, ಮಾಯಕಾರತಿ, ಮಾಯಿ ಮಹಾಕಾಳಿ ಎಂದೆಲ್ಲಾ ಕರೆಯುತ್ತಾರೆ. ಈ ಮಾಯಕ್ಕ ದೇವಿಗೆ ಕರ್ನಾಟಕದ ಎಲ್ಲಾ ಭಾಗದಿಂದಲೂ ಜನರು ಬಂದು ಭಕ್ತಿಯಿಂದ ನಡೆದುಕೊಳ್ಳುವುರಲ್ಲದೆ ನೆರೆರಾಜ್ಯದಿಂದ ಮಹಾರಾಷ್ಟ್ರದ ಕೊಲ್ಲಾಪುರ,

ಸಾಂಗಲಿ, ಸತಾರ, ಕರಾಡ, ಮುಂಬಯಿ, ಪುಣೆ, ನಾಗಪುರದಿಂದಲೂ ಬಂದು ದೇವಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದು ಹೋಗುತ್ತಾರೆ. ಚಿಂಚಲಿಯಲ್ಲಿ ಮಾಯಕ್ಕ ದೇವಿಯಲ್ಲದೆ ಹನುಮಂತ, ಮಹಾದೇವ, ವಿಠಲ, ದತ್ತಾತ್ರೇಯ, ಎಲ್ಲಮ್ಮ, ಮರಗವ್ವ ಮೊದಲಾದ ದೇವಾಲಯಗಳಿದ್ದರೂ ಮಾಯಕ್ಕ ದೇವಿಯಷ್ಟು ಪ್ರಖ್ಯಾತರಲ್ಲ. ಅಲ್ಲದೆ ಈಕೆಯನ್ನು 'ಶಕ್ತಿದೇವತೆ' ಎಂದೂ ಪಾರ್ವತಿಯ ಅವತಾರವೆಂದು ಭಕ್ತರು ನಂಬಿದ್ದಾರೆ.

ಈ ದೇವತೆ ತನ್ನ ಮೂಲಸ್ಥಳವಾದ ಮಾನದೇಶದಿಂದ ರಾಕ್ಷಸನನ್ನು ಬೆನ್ನಟ್ಟಿ ಚಿಂಚಲಿಗೆ ಬಂದು ರಾಕ್ಷಸನನ್ನು ಕೊಂದು, ಆ ಊರಿನ ಮೂಲದೇವತೆಯಾಗಿರು 'ಹಿರಿದೇವಿಯ' ಅನುಮತಿ ಪಡೆದು ಅಲ್ಲಿ ನೆನೆಸಿದರೂ, ಚಿಂಚಲಿ ಗ್ರಾಮಕ್ಕೂ ಮಾಯಕ್ಕ ದೇವಿಗೂ ಹಿಂದಿನ ಹಳೆಯ ನಂಟಿನಿಂದ ಕ್ಷೇತ್ರದೇವತೆಯಾಗಿ ಹೆಸರು ಪಡೆದಿದ್ದಾಳೆ. ಊರಿನ ಮೂಲದೇವತೆ ಹಿರಿದೇವಿಗೆ ಪ್ರಥಮ ಪೂಜೆ, ನಂತರದ ಪೂಜೆ ಮಾಯಕ್ಕದೇವಿಯದು. ಈಕೆ ನೆಲಸಿದ್ದ ಚಿಕ್ಕಗುಡಿಯನ್ನು ಸೇರಿಸಿಕಂಡು ಮೇಲಿನ ದೊಡ್ಡ ಶಿಖರ, ಪೂರ್ವಕ್ಕೆ ದೊಡ್ಡದಾದ ಮಹಾದ್ವಾರ, ಪೌಳೀಗೌಡೆಗಳನ್ನು ಹೊಂದಿದ್ದು ದೇವಸ್ಥಾನ ಆಕರ್ಷಕವಾಗಿದೆ. ದೇವಿಯ ಎಡಭಾಗದಲ್ಲಿ ವರ್ಷದಲ್ಲಿ ನಾಲ್ಕು ಸಾರಿ ಸ್ಥಾಪಿಸಲಾಗುವ ಸೆಂಗಾಡಿ (ಸಿಂಗು) ಸುಲತಾನು (ಬೀರು) ಇವರನ್ನು ಶಿವ ಮತ್ತು ಬ್ರಹ್ಮ ಎಂಬ ಪ್ರತೀತಿ ಇದೆ. ಸಿಂಗಾಡಿಯ ಕಿರೀಟದಲ್ಲಿ ಗಂಗೆಯ ಚಿತ್ರವಿದ್ದು ಇವನನ್ನು ಶಿವನೆಂದು ಸುಲತಾನನ್ನು ಬ್ರಹ್ಮನೆಂದು, ಮಾಯಕ್ಕದೇವಿ ವಿಷ್ಣುವಿನ ಅವತಾರವೆಂದು ಸ್ಥಳೀಯರು ತ್ರಿಮೂರ್ತಿಗಳ ಕಲ್ಪನೆ ವ್ಯಕ್ತಪಡಿಸುತ್ತಾರೆ.

ಪುರುಷರಿಂದ ಪೂಜೆಗೊಳ್ಳುವ ದೇವಿಯನ್ನು ಲಿಂಗಾಯತ ಮತ್ತು ಕುರುಬ ಜನಾಂಗದವರ ಪಾಲುಗಾರಿಕೆಯಲ್ಲಿ ಅನುವಂಶೀಯವಾಗಿ ಆದರಿಂದ ಸರಳ ಪೂಜೆಯನ್ನು ಸ್ವೀಕರಿಸುವಳು. ಮಾಂಸಾಹಾರ ನಿಷಿದ್ಧ. ಹೋಳಿಗೆ, ಹುಗ್ಗಿ, ಬಾಳೆಹಣ್ಣಿನ ನೈವೇದ್ಯ ಮಾಡುವರು. ದೇವಿ ಸಂಹಾರ ಮಾಡಿದ ಕೀಲಕಟ್ಟರ ಜಾತ್ರೆಯಲ್ಲಿ ಹರಮರಿ ಬಲಿ ಅರ್ಪಿಸುತ್ತಾರೆ. ಇದು ಮೂರು ವರ್ಷಕ್ಕೊಮ್ಮೆ ಮೂರು ದಿನಗಳು ನಡೆಯುತ್ತದೆ.

ಮಾಯಕ್ಕದೇವಿಗೆ ಮುಖ್ಯವಾಗಿ ೪ ಸಂದರ್ಭಗಳಲ್ಲಿ ಅಂದರೆ ದೀಪಾವಳಿ, ಕಾರಹುಣ್ಣಿಮೆ, ನೂಲಹುಣ್ಣಿಮೆ ಹಾಗೂ ಭಾರತ ಹುಣ್ಣಿಮೆಯಲ್ಲಿ ಆರಾಧನೆ ಮತ್ತು ಜಾತ್ರೆಗಳು ನಡೆಯುತ್ತವೆ. ಕಾರಹುಣ್ಣಿಮೆಯ ರಾತ್ರಿ ಹನ್ನೆರಡು ಗಂಟೆಗೆ ಮಾಯಕ್ಕನ ಪಲ್ಲಕ್ಕಿ, ಅವಳ ಕುದುರೆ ಹಾಗೂ ಭಕ್ತರು ದೀವಟಿಗೆಗಳನ್ನು ಹಿಡಿದು ಮೆರವಣಿಗೆಯಲ್ಲಿ ಡೊಳ್ಳು, ಕರಡಿಮಜಲು, ಶಹನಾಯಿ ವಾದನ, ಬಾಣ ಬಿರುಸು, ಮದ್ದು ಪಟಾಕಿ ಸದ್ದುಗಳ ನಡುವೆ ಆಕೆಗೆ ಭಂಡಾರವನ್ನು ಎರಚುತ್ತಾ ಬಂದು ದೇವಿಯ ಪಲ್ಲಕ್ಕಿ ಕಿಲಕಟ್ಟೆಯಲ್ಲಿ ನಿಲ್ಲುತ್ತದೆ. ಗೊಂದಲಿಗರು ಮಾಯಕ್ಕನ ಕಥೆ ಹೇಳುತ್ತಾರೆ. ದೀವಟಿಗೆಯವರು ಕುಳಿತು ಕಥೆ ಕೇಳುತ್ತಾರೆ. ಬೆಳಗಾದ ಮೇಲೆ ದೇವಿಯ ಪಲ್ಲಕ್ಕಿ ಗುಡಿ ಸೇರುತ್ತದೆ. ಬೆಳಗ್ಗೆ ೧೦ ಗಂಟೆಯ ನಂತರ ಪಲ್ಲಕ್ಕಿಯಲ್ಲಿ ಮತ್ತೆ ದೇವಿ ಮೆರವಣಿಗೆಯಲ್ಲಿ ಕುದುರೆ, ಜೊತೆಯಲ್ಲಿ ಭಕ್ತರ ಗುಂಪು ಹಾಲಹಳ್ಳಕ್ಕೆ ಸಾಗುತ್ತದೆ. ಹಾಲಹಳ್ಳದಲ್ಲಿ ದೇವಿಯ ಸ್ನಾನವಾಗುತ್ತದೆ. ನಂತರ ಎಲ್ಲರೂ ಮೆರವಣಿಗೆಯಲ್ಲಿ ಹೊರಟು ದೇವಿ ಕುಳಿತಿರುವ ಪಲ್ಲಕ್ಕಿಯ ಮೇಲೆ ಭಂಡಾರ, ಕೊಬ್ಬರಿ, ಉತ್ತತ್ತಿಗಳನ್ನು ಎರಚುತ್ತಾ ಗುಡಿಗೆ ಕರೆತಂದು ಕುಳ್ಳರಿಸುತ್ತಾರೆ. ಸಂಜೆ ವೇಳೆಗೆ ಊರಿನ ಎತ್ತುಗಳನ್ನು ಶೃಂಗರಿಸಿ ಮೆರವಣಿಗೆಯ ನಂತರ ಕಾರ ಹುಣ್ಣಿಮೆಯ ಕರಿ ಹರಿಯುತ್ತದೆಂದು ನಂಬುತ್ತಾರೆ.

ದೇವಿಯ ಮುಖ್ಯವಾಹನ ಕುದುರೆ. ಅವಳ ವಿಗ್ರಹಗಳು, ಪಲ್ಲಕ್ಕಿಯ ಉತ್ಸವಮೂರ್ತಿ ಸಹ ಅಶ್ವರೂಢವಾಗಿರುತ್ತವೆ.

ಭಾರತ ಹುಣ್ಣಿಮೆಯಂದು ಮಾಯಕ್ಕನ ಬೃಹತ್ ಜಾತ್ರೆ ೫ ದಿನಗಳಿಂದ ಒಂದು ತಿಂಗಳಿನವರೆಗೆ ನಡೆಯುತ್ತದೆ. ಕರ್ನಾಟಕದ ಬಿಜಾಪುರ, ಗುಲ್ಬರ್ಗ, ರಾಯಚೂರು, ಧಾರವಾಡ, ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ ಹಾಗೂ ಮಹಾರಾಷ್ಟ್ರದಿಂದ ಲಕ್ಷಾಂತರ ಭಕ್ತರು ಎತ್ತಿನ ಗಾಡಿಯಲ್ಲಿ ಸಂಸಾರ ಸಮೇತ ಬರುತ್ತಾರೆ. ಕೃಷ್ಣಾನದಿ ಮತ್ತು ಹಾಲುಹಳ್ಳಿಗಳಲ್ಲಿ ಸ್ನಾನ ಮುಗಿಸಿ, ಹೋಳಿಗೆ ನೈವೇದ್ಯ ಮಾಡಿಕೊಂಡು ಕರಿಯ ಕಸೂತಿಯುಳ್ಳ ಕಂಚಣಿಕೆ ಹಾಕಿಕೊಂಡು ಡೊಳ್ಳು ಬಾರಿಸುತ್ತಾ ಶಹನಾಯಿ ಊದುತ್ತಾ 'ಹೊಕ ಬರೋ ಚಾಂಗ ಭಲೋ ಎಂದು ಕೂಗಿ ಕುಣಿಯುತ್ತಾ ಗುಡಿಗೆ ಬಂದು ಕಾಣಿಕೆ ಹರಕೆಗಳನ್ನು ಅರ್ಪಿಸುತ್ತಾರೆ. ಜಾತ್ರೆಯಲ್ಲಿ ದೇವಿಗೆ ನಿಲುವಂಗಿ ಧರಿಸಿ ಪೂಜಿಸುತ್ತಾರೆ. ಪೂಜಾರಿಯು ನಿಲುವಂಗಿ ಧರಿಸಿ ಪೂಜಿಸುತ್ತಾನೆ. ಹುಣ್ಣಿಮೆಯ ಹಸ್ತ ಮೂಹೂರ್ತದಲ್ಲಿ ರಾತ್ರಿ ೧೨ ಗಂಟೆಗೆ ಪಲ್ಲಕ್ಕಿ, ಗುಡಿಯನ್ನು ಐದು ಸುತ್ತು ಹಾಕಿ ಒಳಬಂದಾಗ ಶಾಸ್ತ್ರೋಕ್ತವಾಗಿ ಜಾತ್ರೆ ಮುಗಿದಂತೆ.

ಮಾಯಕ್ಕದೇವಿ ದೈತ್ಯರೊಡನೆ ಹೋರಾಡಲು ಗ್ರಾಮ ಸೇವಕರಾದ ಈರಗಾರ ವೀರರ ಸಹಾಯ ಪಡೆದಿರುತ್ತಾಳೆ. ಈ ಈರಗಾರರು ಕಾರಹುಣ್ಣಿಮೆಯಲ್ಲಿ ದೀಪಾವಳಿಯಲ್ಲಿ ಹಾಗೂ ಮಹಾನವಮಿಯಲಿ ಹರಿತವಾದ ಜೋಡಿ ಅಲಗ (ಖಡ್ಗ)ಗಳಿಂದ ಪಲ್ಲಕ್ಕಿಯಲ್ಲಿ ಕುಳಿತ ದೇವಿ ಮೆರವಣಿಗೆಯಲ್ಲಿ ವೀರಾವೇಶದಿಂದ ತಮ್ಮ ಹೊಟ್ಟೆಗೆ ಇರಿದುಕೊಳ್ಳುತ್ತಾರೆ. ಆಗ ಪೂಜಾರಿ ಮಾಯಕ್ಕನ ಭಂಡಾರವನ್ನು ಹಣೆಗೆ ಮತ್ತು ಹೊಟ್ಟೆಗೆ ಹಚ್ಚುತ್ತಾನೆ. ಉಳಿದಂತೆ ಇವರು ಸಾಮಾನ್ಯ ಜೀವನ ಸಾಗಿಸುತ್ತಾರೆ. ಇನ್ನು ಈ ಮಾಯಕ್ಕ ದೇವಿಯ ಹೆಸರಿನಲ್ಲಿ ಅನೇಕ ಐತಿಹ್ಯಗಳು ಪ್ರಚಲಿತದಲ್ಲಿವೆ.

ಗೋಕಾಕ ಲಕ್ಷ್ಮೀದೇವಿ ಉತ್ಸವ :

ಗೋಕಾಕ ಊರಿನಲ್ಲಿ ಎರಡು ಲಕ್ಷ್ಮೀದೇವಿ ಗುಡಿಗಳಿವೆ. ಒಂದು ಊರಿನಲ್ಲಿರುವ ಲಕ್ಷ್ಮೀದೇವಿ, ಮತ್ತೊಂದು ಊರ ಹೊರಗಿರುವ ಲಕ್ಷ್ಮೀದೇವಿ ಅಮ್ಮನವರಿಗೆ ಮೆರಕನಟ್ಟಿ ಲಕ್ಷ್ಮೀ ಅನ್ನುತ್ತಾರೆ. ಊರಿನಲ್ಲಿರುವ ಲಕ್ಷ್ಮಿಗೆ ಮೊದಲು ಒಂಬತ್ತು ವರ್ಷಕ್ಕೆ ಒಮ್ಮೆ ಉತ್ಸವ ಅಥವಾ ಜಾತ್ರೆ ನಡೆಯುವ ಪದ್ಧತಿ ಇತ್ತು. ಈಗ ಊರಿನ ಹಿರಿಯರು ನಾಗರೀಕರು ಸೇರಿ ಚಿಂತನೆ ನಡೆಸಿ, ದೇವಿಯ ಉತ್ಸವವನ್ನು ೫ ವರ್ಷಕ್ಕೊಮ್ಮೆ ನಡೆಸಲು ತೀರ್ಮಾನಿಸಿ ಅದರಂತೆ ಇತ್ತೀಚೆಗೆ ೫ ವರ್ಷಕ್ಕೊಮ್ಮೆ ನಡೆಸುತ್ತಿದ್ದಾರೆ. ಮೆರಕನಟ್ಟಿ ಲಕ್ಷ್ಮೀ ದೇವಿಗೆ ೫ ವರ್ಷಕ್ಕೊಮ್ಮೆ ಸಾಧಾರಣವಾಗಿ ಜೂನ್, ಜುಲೈ ತಿಂಗಳಲ್ಲಿ ಉತ್ಸವ ಮಾಡುವ ಸಂಪ್ರದಾಯವಿದೆ. ಇಲ್ಲಿ ೨ ತೇರುಗಳಿವೆ. ಪಲ್ಲಕ್ಕಿ ಇದೆ. ಊರ ಮಧ್ಯಭಾಗದಲ್ಲಿ ದುರ್ಗಾದೇವಿಯ ದೇವಸ್ಥಾನವಿದೆ. ಆ ದೇವಾಲಯದಲ್ಲಿ ಕಟ್ಟಿಗೆಯಿಂದ ಮಾಡಿದ ದುರ್ಗಾದೇವಿಯ ಮೂರ್ತಿಗಳಿವೆ. ಲಕ್ಷ್ಮೀದೇವಿ ಉತ್ಸವಕ್ಕೆ ಮುನ್ನ ಕಟ್ಟಿಗೆಯಿಂದ ಮಾಡಿದ ದುರ್ಗಾದೇವಿಗೆ ಅಂಬಿಗೇರ ಓಣಿಯಲ್ಲಿ ಕೆಂಪು ಬಣ್ಣವನ್ನು ಕೂಡಿಸಿ ತಯಾರು ಮಾಡುವ ಪದ್ಧತಿ ನಡೆದು ಬಂದಿದೆ.

ದೇವಿಯ ಉತ್ಸವದ ಮೊದಲದಿನ ಅಂಬೀಗೇರ ಓಣಿಯಿಂದ ಮೆರವಣಿಗೆಯಲ್ಲಿ ಹೊನ್ನಾಟ

ಇತರ ಆಕರ್ಷಕ ಜಾನಪದ ಕಲಾವಿದರಿಂದ ಕುಣಿತ ಹಾಗೂ ಮಂಗಳ ವಾದ್ಯದೊಂದಿಗೆ ದೇವಿಗುಡಿಗೆ ಆಗಮಿಸುತ್ತಾರೆ. ಮೆರವಣಿಗೆ ಹೊರಟಮೇಲೆ ಮೊದಲು ದೊಡ್ಡ ದೇಶಪಾಂಡೆ ಯವರು ವಾಸಮಾಡುವ ಕಿಲ್ಲೆಯಲ್ಲಿರುವ ಮನೆಗೆ ಭೇಟಿ ನೀಡಿ ಅವರಿಂದ ಉಡಿ ತುಂಬಿಸಿಕೊಂಡು ಹೊರಡುತ್ತಾಳೆ. ಮುಂದೆ ಊರಿನ ಹಿರಿಯರ ಮನೆಗಳಿಗೂ ತೆರಳಿ ಉಡಿತುಂಬಿಸಿಕೊಂಡು ಹೊನ್ನಾಟ ಆಡುತ್ತಾ ಗುಡಿಗೆ ಆಗಮಿಸುತ್ತಾಳೆ. ಪಲ್ಲಕ್ಕಿಯಲ್ಲಿ ಲಕ್ಷ್ಮೀದೇವಿಯ ಮೆರೆಗ್ರಹಗಳನ್ನು ಇಟ್ಟು ಮೆರವಣಿಗೆಯಲ್ಲಿ ಬರುತ್ತಾರೆ. ಭಕ್ತಾದಿಗಳು ಪೂಜೆ, ಮಾಡಿಸಿ ತಮ್ಮ ಹರಕೆ ಒಪ್ಪಿಸುತ್ತಾರೆ. ನಂತರ ಊರಲ್ಲಿರುವ ಲಕ್ಷ್ಮೀದೇವಿಯ ತೇರನ್ನು ಎರಡು ದಿನಗಳು ಊರಲ್ಲಿ ಹರಿಸುತ್ತಾರೆ.

ಇದೇ ರೀತಿ ಬೆಳಗಾವಿ ಜಿಲ್ಲೆಯ ಎಲ್ಲಾ ತಾಲೂಕು ಹೋಬಳಿಗಳಲ್ಲೂ ವಿವಿಧ ದೇವ, ದೇವಿಯರ ಉತ್ಸವಗಳು ನಡೆಯುತ್ತವೆ. ಆದರೆ ಆ ಎಲ್ಲ ದೇವರ ಉತ್ಸವ ಅಥವಾ ಆರಾಧನೆಯ ವಿಧಾನ ಮತ್ತು ಪದ್ಧತಿಯು ಹೆಚ್ಚು ಕಡಿಮೆ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಒಂದೇ ರೀತಿಯಲ್ಲಿ ನಡೆಯುತ್ತದೆ. ನಾನು ಸಂಗ್ರಹಿಸಲು ಸಾಧ್ಯವಾದ ವಿವರಗಳನ್ನು ಇಲ್ಲಿ ದಾಖಲಿಸಿದ್ದೇನೆ.

ಶಿಲ್ಪದ ಕಣ್ಣುಗುಡ್ಡೆಗಳು ಈಚೆಗೆ ಬಂದಂತೆ ಇದ್ದು ಕೈಗಳು ಅದರಲ್ಲೂ ಹಿಂದಿನ ಕೈಗಳು ಭುಜದ ಬಳಿಯಿಂದ ಮೂಡದೆ ತೋಳಿನ ಬಳಿ ಮೂಡಿದ್ದು ಲಂಬ ರೀತಿಯಲ್ಲಿ ನೇರವಾಗಿ ಮೇಲಕ್ಕೆ ಹೋಗಿವೆ. ಆಯುಧಗಳನ್ನು ಹಿಡಿದಿರುವ ರೀತಿ ವಸ್ತುವೊಂದನ್ನು ಬಿಗಿಯಾಗಿ ಹಿಡಿದಿರುವ ರೀತಿಯಂತಿದೆ. ವರದ ಹಸ್ತವಂತೂ ಮಾಮೂಲಿ ಶಿಲ್ಪಗಳಲ್ಲಿರುವಂತೆ ಹಸ್ತವು ಮುಂದಕ್ಕೆ ಬಂದು ಕೆಳಕ್ಕೆ ಚಾಚಿಲ್ಲ. ನೇರವಾಗಿ ಕೈಯನ್ನು ಅಗಲವಾಗಿ ನೀಡಿದಂತೆ ಇದೆ. ಗದೆಯಂತೂ ದಂಡದಂತಿದ್ದು ಅಂತ್ಯದಲ್ಲಿ ಸ್ವಲ್ಪ ಗುಂಡಗಿದೆ.

ಇವೆಲ್ಲಕ್ಕಿಂತ ಹೆಚ್ಚು ಗಮನ ಸೆಳೆಯುವಂತಹದು ಇದರಲ್ಲಿರುವ ಶಿವಲಿಂಗ ಬಲಗಡೆ ತಿರುಗಿರುವುದರಿಂದ ಇದು ಬ್ರಹ್ಮಲಿಂಗ. ಅಂದರೆ ಶೈವರ ಪ್ರಭಾವದ ಹಿನ್ನೆಲೆಯಲ್ಲಿ ಈ ವಿಷ್ಣು ಶಿಲ್ಪ ಮೂಡಿರುವುದರಿಂದ ಇಲ್ಲಿ ಶಿವಲಿಂಗದ ಶಿಲ್ಪ ಬಂದಿದೆ. ಸ್ಮಾರ್ತ ಬ್ರಾಹ್ಮಣರು ಪೂಜಿಸುತ್ತಿದ್ದ ವಿಷ್ಣು ಶಿಲ್ಪವೂ ಇದಾಗಿರಬಹುದು.

ಈ ಶಿಲ್ಪದ ಕೆತ್ತನೆಯ ರೀತಿಯಿಂದಾಗಿ ಇದರ ಕಾಲವನ್ನು ಸುಮಾರು ಕ್ರಿ.ಶ.೧೭-೧೮ನೆಯ ಶತಮಾನಕ್ಕೆ ಹಾಕಬಹುದಾಗಿದೆ. ಬಹುಶಃ ಮರಾಠರ ಕಾಲದಲ್ಲಿ ಈ ಶಿಲ್ಪವನ್ನು ಕೆತ್ತಿರಬೇಕು.

ಈ ಶಿಲ್ಪ ಕುರಿತಂತೆ ಸ್ಥಳೀಯ ಕಥೆ ಹೀಗಿದೆ-

ಶಿಂದಿಹಟ್ಟಿ ಗ್ರಾಮದ ಶ್ರೀ ಗಣಪತಿ ಹುದ್ದಾರ ಅವರ ಅಜ್ಜ ತಿರುಪತಿ ತಿಮ್ಮಪ್ಪನ ಅಪ್ರತಿಮ ಭಕ್ತರು. ವಾಹನ ಸೌಕರ್ಯವಿಲ್ಲದೆ ಪ್ರತಿವರ್ಷ ತಿಮ್ಮಪ್ಪನ ದರ್ಶನಕ್ಕೆ ಕಾಲುನಡಿಗೆಯಲ್ಲಿ ಹೋಗಿ ಬರುತ್ತಿದ್ದರು ಕ್ರಮೇಣ ವಯಸ್ಸಾಗಿ ಶಕ್ತಿಗುಂದಿ ನಡೆಯಲು ಅಸಮರ್ಥರಾಗಿ ದೇವರದರ್ಶನ ಹೇಗೆ ಸಾಧ್ಯ ಎಂದು ಪರಿತಪಿಸುತ್ತಿದ್ದರು. ಅಂತಹ ಒಂದು ದಿನ ತಮ್ಮ ಹೊಲದಲ್ಲಿ ಓಡಾಡುತ್ತಾ ಚಿಂತಿಸುತ್ತಿದ್ದಾಗ ಹಿಂದಿನಿಂದ ಒಂದು ಧ್ವನಿ ಕೇಳಿಸಿತು. 'ನೀನು ಅಲ್ಲಿಗೆ ಬಂದು ನನ್ನ ದರ್ಶನ ಪಡೆಯಲು ಸಾಧ್ಯವಾಗದಿದ್ದರೆ ನಾನೇ ನಿನ್ನ ಬಳಿ ಬಂದು ದರ್ಶನ ಕೊಡುತ್ತೇನೆ. ಆದರೆ ನೀನು ಹಿಂದೆ ತಿರುಗಿ ನೋಡದೆ ಮುಂದೆ ಹೋಗು' ಎಂದು. ಸ್ವಲ್ಪ ದೂರ ನಡೆದು ಬಂದ ನಂತರ ಕುತೂಹಲ ತಡೆಯಲಾರದೆ ಹಿಂದಿರುಗಿ ನೋಡಿದಾಗ ಮಿಂಚು ಹೊಳೆದಂತೆ ಬೆಳಕು ಬಂದು ಒಂದು ಗಳಿಗೆ ಕಣ್ಣು ಮುಚ್ಚಿ ಬಿಟ್ಟಾಗ ಈಗ ಇರುವ ಜಾಗದಲ್ಲಿ ವಿಷ್ಣು ಶಿಲ್ಪ ಕಾಣಬಂತು, ಎಂಬ ಕಥೆಯೂ ಅವರ ಮನೆತನದಲ್ಲಿ ಪ್ರಚಲಿತದಲ್ಲಿದೆ. ಅಂದಿನಿಂದ ಈ ಶಿಲ್ಪವನ್ನು 'ತಿರುಗಿನಿಂತ ತಿಮ್ಮಪ್ಪ' -ವೆಂಕಟೇಶ್ವರ ನನಗಾಗಿ ದರ್ಶನ ಕೊಡಲು ಬಂದಾಗ ನನ್ನ ಆತುರದಿಂದ ಶಿಲೆಯ ರೂಪದಲ್ಲಿ ನೋಡಬೇಕಾಯಿತು ಎಂದು ಕೊರಗಿ ಪ್ರತಿ ವರ್ಷ ಪೂಜೆ, ಸೇವೆ ಮಾಡುತ್ತಾ ಊರಿನವರಿಗೆ ಈ ಅಜ್ಜ ಅನ್ನ ಸಂತರ್ಪಣೆ ಮಾಡುತ್ತಿದ್ದರಂತೆ. ಅದರಂತೆ ಇಂದಿಗೂ ಆ ಮನೆತನದವರು ಸಹ ಅವರಂತೆಯೆ ನಡೆಸಿಕೊಂಡು ಬರುತ್ತಿದ್ದಾರೆ. ಎಂದು ಹೇಳಿದರು. ಈ ಕಥೆ ಶಿಂದಿಹಟ್ಟಿ ಗ್ರಾಮದಲ್ಲಿ ಪ್ರಚಲಿತವಿದ್ದರೂ ಈ ಶಿಲ್ಪ ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ ಕೂಡಿದ್ದು ಗಮನ ಸೆಳೆಯುವಂತಹದ್ದಾಗಿದೆ.

---

೧ ವಿಷ್ಣುವಿನ ಅಭಿಷೇಕ ಹಸ್ತವೆಂದು ಪರಿಭಾವಿಸಲು ಸಾಧ್ಯವಿದೆಯೇ? ಎಂಬುದನ್ನು ಇಮ್ಮಡಿ ಕೆಂಪೇಗೌಡನು ಮಾಗಡಿಯ ಕೋಟೆ ರಾಮೇಶ್ವರನನ್ನು 'ಶ್ರೀ ರಾಮಚಂದ್ರ ಪರಿಪೂಜಿತ ಶ್ರೀ ರಾಮೇಶ್ವರಾಯ ನಮಃ' ಎಂದು ಸ್ತುತಿಸಿರುವುದು ಶಾಸನೋಕ್ತವಾಗಿರುವ ಹಿನ್ನೆಲೆಯಲ್ಲಿ ಇದರ ತೌಲನಿಕ ಸಾಧ್ಯತೆಗಳನ್ನು ಪರಿಶೀಲಿಸಬಹುದು, (ಸಂ)

ಎಳತ್ತೂರಿನ ಅವಶೇಷಗಳು

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕು, ಕಿನ್ನಿಗೋಳಿ ಸಮೀಪದಲ್ಲಿ ಎಳತ್ತೂರು ಗ್ರಾಮದಲ್ಲಿ ಶ್ರೀಮಹಾಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಮೊದಲು ಮುಳಿಹುಲ್ಲಿನಿಂದ ನಿರ್ಮಿಸಲಾಗಿತ್ತು. ಆದರೆ ಒಂದು ರಾತ್ರಿ ಈ ಮುಳಿ ಹುಲ್ಲಿನಿಂದ ನಿರ್ಮಿತವಾದ ದೇವಾಲಯಕ್ಕೆ ಬೆಂಕಿ ಬಿದ್ದು ಸುಟ್ಟು ಹೋದ ನಂತರ ಊರಿನವರೆಲ್ಲರ ಸಹಕಾರದಿಂದ ದೇವಸ್ಥಾನದ ಜೀರ್ಣೋದ್ಧಾರವಾಗಿದೆ ಎಂದು ಆ ಊರಿನ ಹಿರಿಯರು ತಿಳಿಸಿದರು. ಬೆಂಕಿ ಬಿದ್ದ ಕಾಲವನ್ನು ಯಾರು ನಿಖರವಾಗಿ ತಿಳಿಸಲಿಲ್ಲ.

ದೇವಾಲಯಕ್ಕೆ ಸೇರಿದ ಗರ್ಭಗುಡಿಯಲ್ಲಿ ಎರಡು ಕೋಣೆಯಿದೆ. ಹಿಂದಿನ ಕೋಣೆಯಲ್ಲಿ ಶ್ರೀ ಮಹಾಲಿಂಗೇಶ್ವರ ಸ್ವಾಮಿಯ ಲಿಂಗ ಪ್ರತಿಷ್ಠಾಪಿಸಲಾಗಿದೆ. ಲಿಂಗವು ಸುಮಾರು ೩ ೧/೨ ಅಡಿ ಎತ್ತರವಾಗಿದೆ. ಲಿಂಗದ ಭಾಗವು ವೃತ್ತಾಕಾರವಾಗಿದ್ದು ಬ್ರಹ್ಮಸೂತ್ರವೂ ಪ್ರಾಚೀನ ಲಿಂಗಗಳಲ್ಲಿರುವಂತೆ ಬಾಣದಾಕಾರದಲ್ಲಿದೆ. ಪೀಠ ಚೌಕಾಕಾರವಾಗಿದೆ. ಅಧೋ ಕಮಲ, ಚೌಕಾಕಾರದ ವಿಷ್ಣು ಭಾಗ, ಅನಂತರ ಊರ್ಧ್ವಮುಖ ಕಮಲಾಕಾರವಾಗಿದೆ. ಮುಂದಿನ ಕೋಣೆಯಲ್ಲಿ ಪೂಜಾ ಸಾಮಾನುಗಳನ್ನಿಡುತ್ತಾರೆ.

ದೇವಾಲಯದ ಬಳಿಯಲ್ಲಿ ಗಣೇಶನ ಗುಡಿಯೂ ಇತ್ತಂತೆ. ದೇವಾಲಯಕ್ಕೆ ಬೆಂಕಿ ಬಿದ್ದ ಸಂದರ್ಭದಲ್ಲಿ ಭಗ್ನಗೊಂಡ ಗಣೇಶನ ವಿಗ್ರಹವನ್ನು ಸಮುದ್ರದಲ್ಲಿ ಹಾಕಿದರಂತೆ. ಈಗ ಶಿವಲಿಂಗದ ಮುಂದೆ ಎರಡು ಚಿಕ್ಕದಾಗಿರುವ ಗಣೇಶನ ವಿಗ್ರಹಗಳಿವೆ. ಅವುಗಳಲ್ಲಿ ಒಂದು ಪ್ರಾಚೀನ ಶಿಲ್ಪವಾಗಿದ್ದು ಕ್ರಿ.ಶ ಸುಮಾರು ೯ನೆಯ ಶತಮಾನಕ್ಕೆ ಸೇರಿದೆ. ಮತ್ತೊಂದು ಗಣೇಶನ ಮೂರ್ತಿ ಕ್ರಿ.ಶ.ಸುಮಾರು ೧೪ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಪಾಣಿ ಪೀಠದ ಬಳಿ ಸಾಲಿಗ್ರಾಮವೂ ಇದೆ. ದೇವಾಲಾಯದ ಮುಂದೆ ಇರುವ ನಂದಿ ಮಂಟಪ ಇತ್ತೀಚಿನದಾಗಿದ್ದು ನಂದಿ ಶಿಲ್ಪವನ್ನು ಸುಮಾರು ೧೯೩೫ರಲ್ಲಿ ಪ್ರತಿಷ್ಠಾಪಿಸಲಾಗಿದೆ.

ಅನತಿ ದೂರದಲ್ಲಿ ಪ್ರತ್ಯೇಕವಾಗಿ ತೀರ್ಥ ಮಂಟಪವಿದೆ. ನಾಲ್ಕು ಕಂಬಗಳ ಚೌಕಾಕಾರದ ಒಂದು ಮಾಡು ಇದೆ. ಗರ್ಭಗುಡಿ ಮತ್ತು ತೀರ್ಥಮಂಟಪಕ್ಕೆ ನಡುವೆ ಪ್ರಧಕ್ಷಿಣಾ ಪಥ ವಿಶಾಲವಾಗಿದೆ. ಪ್ರದಕ್ಷಿಣೆ ಬರುವ ಈ ಜಾಗದಲ್ಲಿ ಅಂದರೆ ದೇವಾಲಯದ ಬಲಭಾಗದಲ್ಲಿ ಒಂದು

ಶಿಲ್ಪದ ಕಣ್ಣುಗುಡ್ಡೆಗಳು ಈಚೆಗೆ ಬಂದಂತೆ ಇದ್ದು ಕೈಗಳು ಅದರಲ್ಲೂ ಹಿಂದಿನ ಕೈಗಳು ಭುಜದ ಬಳಿಯಿಂದ ಮೂಡದೆ ತೋಳಿನ ಬಳಿ ಮೂಡಿದ್ದು ಲಂಬ ರೀತಿಯಲ್ಲಿ ನೇರವಾಗಿ ಮೇಲಕ್ಕೆ ಹೋಗಿವೆ. ಆಯುಧಗಳನ್ನು ಹಿಡಿದಿರುವ ರೀತಿ ವಸ್ತುವೊಂದನ್ನು ಬಿಗಿಯಾಗಿ ಹಿಡಿದಿರುವ ರೀತಿಯಂತಿದೆ. ವರದ ಹಸ್ತವಂತೂ ಮಾಮೂಲಿ ಶಿಲ್ಪಗಳಲ್ಲಿರುವಂತೆ ಹಸ್ತವು ಮುಂದಕ್ಕೆ ಬಂದು ಕೆಳಕ್ಕೆ ಚಾಚಿಲ್ಲ. ನೇರವಾಗಿ ಕೈಯನ್ನು ಅಗಲವಾಗಿ ನೀಡಿದಂತೆ ಇದೆ. ಗದೆಯಂತೂ ದಂಡದಂತಿದ್ದು ಅಂತ್ಯದಲ್ಲಿ ಸ್ವಲ್ಪ ಗುಂಡಗಿದೆ.

ಇವೆಲ್ಲಕ್ಕಿಂತ ಹೆಚ್ಚು ಗಮನ ಸೆಳೆಯುವಂತಹದು ಇದರಲ್ಲಿರುವ ಶಿವಲಿಂಗ ಬಲಗಡೆ ತಿರುಗಿರುವುದರಿಂದ ಇದು ಬ್ರಹ್ಮಲಿಂಗ. ಅಂದರೆ ಶೈವರ ಪ್ರಭಾವದ ಹಿನ್ನೆಲೆಯಲ್ಲಿ ಈ ವಿಷ್ಣು ಶಿಲ್ಪ ಮೂಡಿರುವುದರಿಂದ ಇಲ್ಲಿ ಶಿವಲಿಂಗದ ಶಿಲ್ಪ ಬಂದಿದೆ. ಸ್ಮಾರ್ತ ಬ್ರಾಹ್ಮಣರು ಪೂಜಿಸುತ್ತಿದ್ದ ವಿಷ್ಣು ಶಿಲ್ಪವೂ ಇದಾಗಿರಬಹುದು.

ಈ ಶಿಲ್ಪದ ಕೆತ್ತನೆಯ ರೀತಿಯಿಂದಾಗಿ ಇದರ ಕಾಲವನ್ನು ಸುಮಾರು ಕ್ರಿ.ಶ.೧೭-೧೮ನೆಯ ಶತಮಾನಕ್ಕೆ ಹಾಕಬಹುದಾಗಿದೆ. ಬಹುಶಃ ಮರಾಠರ ಕಾಲದಲ್ಲಿ ಈ ಶಿಲ್ಪವನ್ನು ಕೆತ್ತಿರಬೇಕು.

ಈ ಶಿಲ್ಪ ಕುರಿತಂತೆ ಸ್ಥಳೀಯ ಕಥೆ ಹೀಗಿದೆ-

ಶಿಂದಿಹಟ್ಟಿ ಗ್ರಾಮದ ಶ್ರೀ ಗಣಪತಿ ಹುದ್ದಾರ ಅವರ ಅಜ್ಜ ತಿರುಪತಿ ತಿಮ್ಮಪ್ಪನ ಅಪ್ರತಿಮ ಭಕ್ತರು. ವಾಹನ ಸೌಕರ್ಯವಿಲ್ಲದೆ ಪ್ರತಿವರ್ಷ ತಿಮ್ಮಪ್ಪನ ದರ್ಶನಕ್ಕೆ ಕಾಲುನಡಿಗೆಯಲ್ಲಿ ಹೋಗಿ ಬರುತ್ತಿದ್ದರು ಕ್ರಮೇಣ ವಯಸ್ಸಾಗಿ ಶಕ್ತಿಗುಂದಿ ನಡೆಯಲು ಅಸಮರ್ಥರಾಗಿ ದೇವರದರ್ಶನ ಹೇಗೆ ಸಾಧ್ಯ ಎಂದು ಪರಿತಪಿಸುತ್ತಿದ್ದರು. ಅಂತಹ ಒಂದು ದಿನ ತಮ್ಮ ಹೊಲದಲ್ಲಿ ಓಡಾಡುತ್ತಾ ಚಿಂತಿಸುತ್ತಿದ್ದಾಗ ಹಿಂದಿನಿಂದ ಒಂದು ಧ್ವನಿ ಕೇಳಿಸಿತು. 'ನೀನು ಅಲ್ಲಿಗೆ ಬಂದು ನನ್ನ ದರ್ಶನ ಪಡೆಯಲು ಸಾಧ್ಯವಾಗದಿದ್ದರೆ ನಾನೇ ನಿನ್ನ ಬಳಿ ಬಂದು ದರ್ಶನ ಕೊಡುತ್ತೇನೆ. ಆದರೆ ನೀನು ಹಿಂದೆ ತಿರುಗಿ ನೋಡದೆ ಮುಂದೆ ಹೋಗು' ಎಂದು. ಸ್ವಲ್ಪ ದೂರ ನಡೆದು ಬಂದ ನಂತರ ಕುತೂಹಲ ತಡೆಯಲಾರದೆ ಹಿಂದಿರುಗಿ ನೋಡಿದಾಗ ಮಿಂಚು ಹೊಳೆದಂತೆ ಬೆಳಕು ಬಂದು ಒಂದು ಗಳಿಗೆ ಕಣ್ಣು ಮುಚ್ಚಿ ಬಿಟ್ಟಾಗ ಈಗ ಇರುವ ಜಾಗದಲ್ಲಿ ವಿಷ್ಣು ಶಿಲ್ಪ ಕಾಣಬಂತು, ಎಂಬ ಕಥೆಯೂ ಅವರ ಮನೆತನದಲ್ಲಿ ಪ್ರಚಲಿತದಲ್ಲಿದೆ. ಅಂದಿನಿಂದ ಈ ಶಿಲ್ಪವನ್ನು 'ತಿರುಗಿನಿಂತ ತಿಮ್ಮಪ್ಪ' - ವೆಂಕಟೇಶ್ವರ ನನಗಾಗಿ ದರ್ಶನ ಕೊಡಲು ಬಂದಾಗ ನನ್ನ ಆತುರದಿಂದ ಶಿಲೆಯ ರೂಪದಲ್ಲಿ ನೋಡಬೇಕಾಯಿತು ಎಂದು ಕೊರಗಿ ಪ್ರತಿ ವರ್ಷ ಪೂಜೆ, ಸೇವೆ ಮಾಡುತ್ತಾ ಊರಿನವರಿಗೆ ಈ ಅಜ್ಜ ಅನ್ನ ಸಂತರ್ಪಣೆ ಮಾಡುತ್ತಿದ್ದರಂತೆ. ಅದರಂತೆ ಇಂದಿಗೂ ಆ ಮನೆತನದವರು ಸಹ ಅವರಂತೆಯೆ ನಡೆಸಿಕೊಂಡು ಬರುತ್ತಿದ್ದಾರೆ. ಎಂದು ಹೇಳಿದರು. ಈ ಕಥೆ ಶಿಂದಿಹಟ್ಟಿ ಗ್ರಾಮದಲ್ಲಿ ಪ್ರಚಲಿತವಿದ್ದರೂ ಈ ಶಿಲ್ಪ ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ ಕೂಡಿದ್ದು ಗಮನ ಸೆಳೆಯುವಂತಹದ್ದಾಗಿದೆ.

---

೧ ವಿಷ್ಣುವಿನ ಅಭಿಷೇಕ ಹಸ್ತವೆಂದು ಪರಿಭಾವಿಸಲು ಸಾಧ್ಯವಿದೆಯೇ? ಎಂಬುದನ್ನು ಇಮ್ಮಡಿ ಕೆಂಪೇಗೌಡನು ಮಾಗಡಿಯ ಕೋಟೆ ರಾಮೇಶ್ವರನನ್ನು 'ಶ್ರೀ ರಾಮಚಂದ್ರ ಪರಿಪೂಜಿತ ಶ್ರೀ ರಾಮೇಶ್ವರಾಯ ನಮಃ' ಎಂದು ಸ್ತುತಿಸಿರುವುದು ಶಾಸನೋಕ್ತವಾಗಿರುವ ಹಿನ್ನೆಲೆಯಲ್ಲಿ ಇದರ ತೌಲನಿಕ ಸಾಧ್ಯತೆಗಳನ್ನು ಪರಿಶೀಲಿಸಬಹುದು, (ಸಂ)

ಎಳತ್ತೂರಿನ ಅವಶೇಷಗಳು

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕು, ಕಿನ್ನಿಗೋಳಿ ಸಮೀಪದಲ್ಲಿ ಎಳತ್ತೂರು ಗ್ರಾಮದಲ್ಲಿ ಶ್ರೀಮಹಾಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಮೊದಲು ಮುಳಿಹುಲ್ಲಿನಿಂದ ನಿರ್ಮಿಸಲಾಗಿತ್ತು. ಆದರೆ ಒಂದು ರಾತ್ರಿ ಈ ಮುಳಿ ಹುಲ್ಲಿನಿಂದ ನಿರ್ಮಿತವಾದ ದೇವಾಲಯಕ್ಕೆ ಬೆಂಕಿ ಬಿದ್ದು ಸುಟ್ಟುಹೋದ ನಂತರ ಊರಿನವರೆಲ್ಲರ ಸಹಕಾರದಿಂದ ದೇವಸ್ಥಾನದ ಜೀರ್ಣೋದ್ಧಾರವಾಗಿದೆ ಎಂದು ಆ ಊರಿನ ಹಿರಿಯರು ತಿಳಿಸಿದರು. ಬೆಂಕಿ ಬಿದ್ದ ಕಾಲವನ್ನು ಯಾರು ನಿಖರವಾಗಿ ತಿಳಿಸಲಿಲ್ಲ.

ದೇವಾಲಯಕ್ಕೆ ಸೇರಿದ ಗರ್ಭಗುಡಿಯಲ್ಲಿ ಎರಡು ಕೋಣೆಯಿದೆ. ಹಿಂದಿನ ಕೋಣೆಯಲ್ಲಿ ಶ್ರೀ ಮಹಾಲಿಂಗೇಶ್ವರ ಸ್ವಾಮಿಯ ಲಿಂಗ ಪ್ರತಿಷ್ಠಾಪಿಸಲಾಗಿದೆ. ಲಿಂಗವು ಸುಮಾರು ೩ ೧/೨ ಅಡಿ ಎತ್ತರವಾಗಿದೆ. ಲಿಂಗದ ಭಾಗವು ವೃತ್ತಾಕಾರವಾಗಿದ್ದು ಬ್ರಹ್ಮಸೂತ್ರವೂ ಪ್ರಾಚೀನ ಲಿಂಗಗಳಲ್ಲಿರುವಂತೆ ಬಾಣದಾಕಾರದಲ್ಲಿದೆ. ಪೀಠ ಚೌಕಾಕಾರವಾಗಿದೆ. ಅಧೋ ಕಮಲ, ಚೌಕಾಕಾರದ ವಿಷ್ಣು ಭಾಗ, ಅನಂತರ ಊರ್ಧ್ವಮುಖ ಕಮಲಾಕಾರವಾಗಿದೆ. ಮುಂದಿನ ಕೋಣೆಯಲ್ಲಿ ಪೂಜಾ ಸಾಮಾನುಗಳನ್ನಿಡುತ್ತಾರೆ.

ದೇವಾಲಯದ ಬಳಿಯಲ್ಲಿ ಗಣೇಶನ ಗುಡಿಯೂ ಇತ್ತಂತೆ. ದೇವಾಲಯಕ್ಕೆ ಬೆಂಕಿ ಬಿದ್ದ ಸಂದರ್ಭದಲ್ಲಿ ಭಗ್ನಗೊಂಡ ಗಣೇಶನ ವಿಗ್ರಹವನ್ನು ಸಮುದ್ರದಲ್ಲಿ ಹಾಕಿದರಂತೆ. ಈಗ ಶಿವಲಿಂಗದ ಮುಂದೆ ಎರಡು ಚಿಕ್ಕದಾಗಿರುವ ಗಣೇಶನ ವಿಗ್ರಹಗಳಿವೆ. ಅವುಗಳಲ್ಲಿ ಒಂದು ಪ್ರಾಚೀನ ಶಿಲ್ಪವಾಗಿದ್ದು ಕ್ರಿ.ಶ ಸುಮಾರು ೯ನೆಯ ಶತಮಾನಕ್ಕೆ ಸೇರಿದೆ. ಮತ್ತೊಂದು ಗಣೇಶನ ಮೂರ್ತಿ ಕ್ರಿ.ಶ.ಸುಮಾರು ೧೪ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಪಾಣಿ ಪೀಠದ ಬಳಿ ಸಾಲಿಗ್ರಾಮವೂ ಇದೆ. ದೇವಾಲಾಯದ ಮುಂದೆ ಇರುವ ನಂದಿ ಮಂಟಪ ಇತ್ತೀಚಿನದಾಗಿದ್ದು ನಂದಿ ಶಿಲ್ಪವನ್ನು ಸುಮಾರು ೧೯೩೫ರಲ್ಲಿ ಪ್ರತಿಷ್ಠಾಪಿಸಲಾಗಿದೆ.

ಅನತಿ ದೂರದಲ್ಲಿ ಪ್ರತ್ಯೇಕವಾಗಿ ತೀರ್ಥ ಮಂಟಪವಿದೆ. ನಾಲ್ಕು ಕಂಬಗಳ ಚೌಕಾಕಾರದ ಒಂದು ಮಾಡು ಇದೆ. ಗರ್ಭಗುಡಿ ಮತ್ತು ತೀರ್ಥಮಂಟಪಕ್ಕೆ ನಡುವೆ ಪ್ರಾದಕ್ಷಿಣಾ ಪಥ ವಿಶಾಲವಾಗಿದೆ. ಪ್ರದಕ್ಷಿಣೆ ಬರುವ ಈ ಜಾಗದಲ್ಲಿ ಅಂದರೆ ದೇವಾಲಯದ ಬಲಭಾಗದಲ್ಲಿ ಒಂದು

ಎಡಭಾಗದಲ್ಲಿ ಒಂದು ಲಿಂಗವಿದೆ. ಗುಡಿಗೆ ಸುಮಾರು ೧೫ ಅಡಿ ದೂರದಲ್ಲಿ, ಒಳಪ್ರಕಾರವೂ; ದೇವಾಲಯದ ಮುಂದೆ ಸುಮಾರು ೨೦-೩೦ ಅಡಿ ಅಂತರದಲ್ಲಿ ಉತ್ತರ-ದಕ್ಷಿಣಕ್ಕೆ ಹೊರ ಪ್ರಕಾರವಿದೆ. ಇವೆರಡರ ನಡುವೆ ಬೃಹದಾಕಾರದ ದಂಬೆ ಕಲ್ಲಿನ ಮೇಲೆ ಧ್ವಜಸ್ತಂಭವಿದ್ದು ಅದಕ್ಕೆ ತಾಮ್ರದ ತಗಡನ್ನು ಹೊದಿಸಲಾಗಿದೆ. ಪೂರ್ವಾಭಿಮುಖವಾಗಿರುವ ಶ್ರೀಮಹಾಲಿಂಗೇಶ್ವರ ದೇವಾಲಯದ ಬಲಭಾಗದಲ್ಲಿ ಒಂದು ಕನ್ನಡ ಲಿಪಿ ಮತ್ತು ಭಾಷೆಯ ಶಾಸನ ಕಲ್ಲನ್ನು ನಿಲ್ಲಿಸಿದ್ದಾರೆ. ೨೦ ಸಾಲನ್ನು ಹೊಂದಿರುವ ಈ ಶಾಸನದಲ್ಲಿ ಸಾಲಿನಿಂದ ಸಾಲಿಗೆ ಅಡ್ಡಗೆರೆಗಳನ್ನು ಆಳವಾಗಿ ಕೊರೆದಿದ್ದು, ಆ ಅಡ್ಡಗೆರೆಗಳು ಉಳಿದುಕೊಂಡಿವೆ. ಆದರೆ ವಾತಾವರಣದ ನೇರ ಹೊಡೆತಕ್ಕೆ ಸಿಲುಕಿ ಶಾಸನದ ಅಕ್ಷರಗಳು ಹಾಳಾಗಿವೆ. ಪೂರ್ಣವಾಗಿ ಶಾಸನದ ಪಾಠ ಲಭ್ಯವಿಲ್ಲ. ಎಳತೂರ ಪಾಂಡೇಶ್ವರ ಸ್ವಾಮಿ, ತಾಲಪಾಡಿ, ಮಂಗಳಪುರ, ಸಖರಾಯ ಹಾಗೂ ೧೦೧ ಅಡಕೆಯ ಧರ್ಮದ ಉಲ್ಲೇಖವಿದೆ. ಸಖರಾಯ ಎಂಬುವನು ಅರಸನೋ ಅಥವಾ ಪಾಳೆಯಗಾರನೋ ತಿಳಿದು ಬರುವುದಿಲ್ಲವಾದರೂ ಈತನು ದೇವಾಲಯಕ್ಕೆ ದಾನಕೊಟ್ಟಿರುವಂತೆ ಊಹಿಸಬಹುದು.

ಎಳತ್ತೂರಿನ ಶಾಸನ ಪಾಠ

೧. ಶ್ರೀನಮಸ್ತುಂಗ....
೨. ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಸಂಭ...
೩. ವೇ॥ ಸ್ವಸ್ತಿ ಶಕವರುಷ ೧...ನೆಯ..ಸಂವತ್ಸರದ....
೪. ಸೋಮಗ್ರಹಣದೊಳು..ಯ..ಶ್ರೀ...
೫. ದಲೂ....
೬. ....
೭. ....
೮. .....ಮಂಗಳಪುರವನೂ ಆನಂದ.........
೯.
೧೦. ....ಗಾಗೆ.....
೧೧. ....ಶ್ರೀ ಪಾ.......ಗಂ....
೧೨. ....ಅಂತು ಆವ ನಾನೂ..........
೧೩. ....ಗೆ ಯಿ ೧೦೧...ಅಡಕೆಯ ಧರ್ಮ...
೧೪. ವನೂ....ಕೊಟ್ಟಮಾದರ ಸಲುವ ಮಂಗಳ ಪು
೧೫. ರದ ಶ್ರೀ ಸಖರಾಯ, ನೂ....ಗ್ರಾಮ ಎಳತೂರಾ
೧೬. ಶ್ರೀ ಪಾಂಡ್ಯೇಶ್ವರ ಸ್ವಾಮಿ
೧೭. ....ಯಿಂದ.....ಯಿಂತೀ ಪಾಣಂ.....ತಾಲಪಾಡಿ
೧೮. ನಿ
೧೯.
೨೦.

ಎಳತ್ತೂರಿನಿಂದ ಸುಮಾರು ೩ ಕಿಲೋ. ಮೀಟರ್ ದೂರದಲ್ಲಿ ತಾಳಪಾಡಿ ಗ್ರಾಮವಿದ್ದು ಅಲ್ಲಿ ಮತ್ತೊಂದು ಶಾಸನ ಕಲ್ಲಿದೆ. ಈ ಕಲ್ಲಿನ ಅರ್ಧಭಾಗ ಭೂಮಿಯಲ್ಲಿ ಹೂತು ಹೋಗಿದೆ. ಲಭ್ಯವಾದ ಪಾಠದ ಪ್ರಕಾರ ತಳಭಾಗದಲ್ಲಿ ಅಕ್ಷರಗಳು ತ್ರುಟಿತವಾಗಿದ್ದು ಪೂರ್ಣಪಾಠ ಲಭ್ಯವಿಲ್ಲ.

ಈ ಶಾಸನದಲ್ಲಿ ಶಕ ವರುಷ ೧೫೨೮ ವಿಶ್ವಾವಸು, ಧನುರ್ಮಾಸ ೯, ಆದಿತ್ಯವಾರವೆಂದಿದ್ದು ಇದು ಕ್ರಿ.ಶ ೮-೧೨-೧೬೦೫ರ ಭಾನುವಾರಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ಉಕ್ತನಾದ ಅರಸ ಬಂಕಿದೇವಾಳುಪೇಂದ್ರನಾಗಿದ್ದು ರಾಜಧಾನಿ ಮಂಗಳಾಪುರದ ಆಚಾರ್ಯರಿಗೆ ದಾನ ನೀಡಿದಂತೆ ತಿಳಿದು ಬರುತ್ತದೆ.

ಕರ್ನಾಟಕ ರಾಜ್ಯ ಗ್ಯಾಜೆಟಿಯರ್ 'ದಕ್ಷಿಣ ಕನ್ನಡ ಜಿಲ್ಲೆ' ಪುಟ ೪೮.ರಲ್ಲಿ ಇಮ್ಮಡಿ ವೀರಪಾಡ್ಯದೇವನೇ (ಕ್ರಿ.ಶ.ಸುಮಾರು ೧೩೯೦-೧೪೦೦) ಕೊನೆಯ ಆಳುಪ ರಾಜನೆಂದು ತಿಳಿಸಿರುತ್ತಾರೆ. ಆದಾದ ನಂತರ ಕ್ರಿ.ಶ ೧೪೦೫ರ ಶಾಸನದಲ್ಲಿ ಕೊಮ್ಮ ಎಂಬುವನು ಆಳುಪ ವಂಶದ ಅರಸನಾಗಿ ಇತ್ತಲ ಮಹಾದೇವ ದೇವಸ್ಥಾನಕ್ಕೆ ದಾನ ನೀಡಿರುವಂತೆ ತಿಳಿಯುತ್ತದೆ. ಮುಂದೆ ಕ್ರಿ.ಶ.೧೫೨೪ರ ವರೆಗೆ ಮಾತ್ರ ಇವನ ಪೀಳಿಗೆಯವರ ಶಾಸನಗಳು ದೊರೆಯುತ್ತವೆ. ಹೀಗಾಗಿ ಈಗ ದೊರೆತಿರುವ ಶಾಸನ ಕ್ರಿ.ಶ.೧೬೦೫ ರ ದಾಗಿದ್ದು ಬಹುಶಃ ಮೂಲ ಆಳುಪ ವಂಶದ (ಪಾಂಡ್ಯ) ಮುಂದುವರಿಕೆಯ ಭಾಗವಿರುವಂತೆ ತೋರುತ್ತದೆ. ಇವರು ರಾಜಧಾನಿಯನ್ನು ಮಂಗಳಪುರವೆಂದು ಹೇಳಿಕೊಂಡಿರುವುದರಿಂದ ಮೂಲ ಆಳುಪರಸರ ಗುಂಪಿಗೆ ಸೇರಿದವರೆಂದು ಹೇಳಬಹುದಾಗಿದೆ.

ತಾಳಪಾಡಿ ಶಾಸನ ಪಾಠ

೧. ಸ್ವಸ್ತಿ ಶ್ರೀಮತು ಪಾಂಡ್ಯ....ಮುತ್ತರಾಯ ಗಜಾಂ
೨. ಕುಷ ಬಂಕಿದೇವಾ (ಳು?)ಪೇಂದ್ರ ದೇವರ ವಿಜಯ ರಾಜ್ಯ
೩. ಮುತ್ತರೋತ ಭಿ ವೃದ್ಧಿ ಪ್ರವರ್ಧಮಾ ಚಂದ್ರರ್ಕತಾರ
೪. ಂಬರಂ ಸಲುತ್ತಮಿರೆ...ಪ್ರತಿ......ಕರಾಗಿ ಸುಖ
೫. ಸಂಕತಾ ವಿನೋದದಿಂ ರಾಜ್ಯಂಗೆಯುತ್ತಮಿರ್ದು
೬. .....ಶಕ ವರಿಷ ೧೫೨೮ನೆಯ ವಿಶ್ವಾವಸು
೭. ಸಂವತ್ಸರದ ಧನುರ್ಮಾಸ ೯ನೆಯ ಆ ಶ್ರೀ ಮತು
೮. ರಾಜಧಾನಿ ಮಂಗಳಾಪುರದ ಚಾರ್ಯರ ಮನೆ
೯. ಯ ಭುವನಾ ಮಾ....ಧವೊಮಿಸಾ ಆಯಿತು ಮ
೧೦. ....ಂಗ್ರಂದಾ ಊರಲು ಕುಳ..ಮಹರಿ
೧೧. ....ಅಳಿಯಂದಿರು ಕೊಟ್ಟ...
೧೨. ...ಸಮಸ್ತ ಪ್ರಧಾನರು
೧೩. ....ಧಾರಾಪೂರ್ವಕ....
(ಭೂಮಿಯಲ್ಲಿ ಸೇರಿದೆ)

ಕರ್ನಾಟಕದ ಪ್ರಾಚೀನ ಮೈಲಾರ ದೇವಾಲಯಗಳು ಮತ್ತು ನೊಳಂಬರು

ಕರ್ನಾಟಕದಲ್ಲಿ ಉಳಿದಿರುವ ಪ್ರಮುಖವಾದ ಪ್ರಾಚೀನ ಸಂಪ್ರದಾಯಗಳಲ್ಲಿ ಒಂದು ಎಲ್ಲಮ್ಮನ ಸಂಪ್ರದಾಯ ಮತ್ತೊಂದು ಮೈಲಾರನ ಸಂಪ್ರದಾಯಗಳಾಗಿವೆ. ಹಾಗೂ ಈ ಎರಡೂ ವಿಶಿಷ್ಟ ಆಚರಣೆಗಳುಳ್ಳ ಪೂಜಾ ಸಂಪ್ರದಾಯಗಳಾಗಿವೆ. ಅನೇಕ ಕನ್ನಡ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ ಮೈಲಾರ ದೇವರ ಉಲ್ಲೇಖ ಬಂದಿದೆ. ಈ ಪ್ರಬಂಧದಲ್ಲಿ ಮೈಲಾರನ ಸಂಪ್ರದಾಯ ನಡೆದು ಬಂದಿರುವ ಹಾದಿಯನ್ನಾಗಲಿ ಅಥವಾ ಜಾನಪದೀಯವಾಗಿ ಪ್ರಚಲಿತವಿರುವ ವಿಷಯಕ್ಕಾಗಲಿ ಒತ್ತು ಕೊಡದೆ ನೇರವಾಗಿ ಮೈಲಾರ ದೇವಾಲಯಗಳ ಪ್ರಾಚೀನತೆ ಮತ್ತು ಉಗಮದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಲಾಗಿದೆ.

ಡಾ||ಎಂ.ಚಿದಾನಂದಮೂರ್ತಿಯವರು ''ಕನ್ನಡ ಕಾವ್ಯ ಶಾಸನಗಳಲ್ಲಿ ಮೈಲಾರ-ಮಾಳಚಿ'' (ಸಂಶೋಧನಾ ತರಂಗ) ಎಂಬ ಲೇಖನದಲ್ಲಿ ಚರ್ಚಿಸುತ್ತ, ಮೈಲಾರನನ್ನು ಕುರಿತ ಕ್ರಿ.ಶ.೧೧೧೨ರಲ್ಲಿ ನಯಸೇನನ ಧರ್ಮಾಮೃತದಲ್ಲಿ ಬರುವ ಉಲ್ಲೇಖವೇ ಪ್ರಾಚೀನವಾದುದು ಮತ್ತು ಮೈಲ ಎಂಬ ಹೆಸರು ಕ್ರಿ.ಶ.೧೦೩೨ರಲ್ಲಿ ಉಲ್ಲೇಖಿತವಾಗಿದೆ ಎಂದಿದ್ದಾರೆ. ಡಾ||ನೇಗಿನಾಹಾಳರು ''ಮೈಲಾರಲಿಂಗ - ಖಂಡೋಬಾ'' ಕೃತಿಯಲ್ಲಿ ಕರ್ನಾಟಕದಲ್ಲಿ ಸುಮಾರು ಮೈಲಾರನ ಹದಿನಾಲ್ಕು ದೇವಾಲಯಗಳನ್ನು ಗುರುತಿಸಿ ಅವುಗಳ ಬಗ್ಗೆ ವಿಸ್ತೃತವಾದ ಚರ್ಚೆ ನಡೆಸಿದ್ದಾರೆ. ಅವರು ಹೂವಿನಹಡಗಲಿ ತಾಲೂಕಿನ ಹಿರೇ ಮೈಲಾರ; ರಾಣೆಬೆನ್ನೂರು ತಾಲೂಕಿನ ದೇವರಗುಡ್ಡ; ಸೌದತ್ತಿ ತಾಲೂಕಿನ ಬೀಳಗಿ; ಗುಲ್ಬರ್ಗಾ ತಾಲೂಕಿನ ಯಾತಗಿರಿ ಅಥವಾ ಯಾದಗಿರಿ; ಶಿರಹಟ್ಟಿ ತಾಲೂಕಿನ ಕಪ್ಪತಗುಡ್ಡ; ಹೊಸಪೇಟೆ ತಾಲೂಕಿನ ಆನೆಗೊಂದಿ, ನಾಗಮಂಗಲ ತಾಲೂಕಿನ ಮೈಲಾರ ಪಟ್ಟಣ; ಮೈಸೂರು ಬಳಿಯ ಮುಡುಕುತೊರೆ; ಕನಕಪುರದ ಹೊನ್ನಾವರ; ಹಾಸನದ ಸಿದ್ಧೇಶ್ವರ ಮುಂತಾದ ಕ್ಷೇತ್ರಗಳು ಮೈಲಾರನ ಕ್ಷೇತ್ರಗಳೆಂದು ಗುರುತಿಸಿದ್ದಾರೆ.

ಇನ್ನು ಹಿರೇಮೈಲಾರದ ಸುತ್ತಲಿನ ೮-೧೦ ತಾಲೂಕುಗಳಲ್ಲಿ ಚಿಕ್ಕಪುಟ್ಟ ದೇವಾಲಯಗಳು ಸಾಕಷ್ಟಿವೆ. ಹೀಗೆ ಕರ್ನಾಕದಲ್ಲಿ ಈ ಸಂಪ್ರದಾಯಕ್ಕೆ ಸೇರಿದ ೩೦೦ಕ್ಕೂ ಹೆಚ್ಚು ಸಣ್ಣ, ದೊಡ್ಡ

ರೌದ್ರ-ಶಾಂತಗಳ ವಿಶಿಷ್ಟ ಭಾವವನ್ನು ಏಕಕಾಲದಲ್ಲಿ ಹೊರಸೂಸುವ ಕಲಾಕೃತಿಯಾಗಿದೆ. ಇವೆಲ್ಲವನ್ನು ಮಣ್ಣಿನಿಂದಲೇ ಮಾಡಿರುವುದರಿಂದ ಇದು ಮಣ್-ಮೈಲಾರ ಕ್ಷೇತ್ರವೆಂದೇ ಪ್ರಖ್ಯಾತವಾಗಿದೆ. ಅಲ್ಲದೆ ಇದನ್ನು ಮಣ್-ಮೈಲಾರಲಿಂಗ, ಮಾರ್ತಾಂಡ, ಭೈರವ ಮಲ್ಲಯ್ಯನೆಂದು ಕರೆಯುತ್ತಾರೆ. ಶಿವನು ಕೈಲಾಸದಿಂದ ರಾಕ್ಷಸ ನಿಗ್ರಹಕ್ಕಾಗಿ ಮೈಲಾರ ಕ್ಷೇತ್ರದಲ್ಲಿ ಸ್ವಯಂಭೂಲಿಂಗ ರೂಪದಿಂದ ಹುತ್ತದಲ್ಲಿ ಒಡಮೂಡಿದ್ದನ್ನು ಅರಿತ ಕಪಿಲಮುನಿ ಮೀನಗೊಂದಿಯಿಂದ ಇಲ್ಲಿಗೆ ಬಂದು ಹುತ್ತವನ್ನು ಒಡೆದು ಒಳಗಿದ್ದ ಈ ಸ್ವಯಂಭೂ ಲಿಂಗವನ್ನು ಭಂಡಾರ ಮುಂತಾದ ಪವಿತ್ರ ದ್ರವ್ಯಗಳಿಂದ ಪೂಜಿಸಿ ಲೋಕಕ್ಕೆ ಪೂಜಾ ವಿಧಾನವನ್ನು ತಿಳಿಸಿಕೊಟ್ಟನೆಂದು ಪರಂಪರೆಯಿಂದ ನಂಬಿಕೆ ಹರಿದುಬಂದಿದೆ.

ಈ ಕ್ಷೇತ್ರವನ್ನು ಹಿರೇಮೈಲಾರ, ಆದಿಮೈಲಾರ, ಮಣ್‌ಮೈಲಾರ ಅಥವಾ ಉಂಗ್ಲಾರಕ್ಷೇತ್ರವೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಕರ್ನಾಟಕದ ತುಂಬೆಲ್ಲಾ ವ್ಯಾಪಿಸಿರುವ ಈ ದೇವರ ಕ್ಷೇತ್ರಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದ ಮತ್ತು ಮೂಲ ಮೈಲಾರ ಎಂಬ ನಂಬಿಕೆ ಕರ್ನಾಟಕದ ಉದ್ದಗಲಕ್ಕೂ ಹರಡಿದೆ.

ರಾಣಿಬೆನ್ನೂರಿನ ದೇವರಗುಡ್ಡ ಎರಡನೇ ಅತಿ ಮಹತ್ವದ ದೇವಾಲಯ. ಇದನ್ನು ಶ್ರೀಕ್ಷೇತ್ರಗುಡ್ಡ, ಗುಡ್ಡಾಪುರ ಎಂದು ಕರೆಯುವುದು ವಾಡಿಕೆ. ಇದು ಹಿರೇಮೈಲಾರದಿಂದ ನೇರ ಪಶ್ಚಿಮಕ್ಕೆ ಸುಮಾರು ೯ ಮೈಲಿ ದೂರದಲ್ಲಿದೆ. ಮುಖ್ಯ ದೇವಸ್ಥಾನ ನೈಋತ್ಯ-ಈಶಾನ್ಯ ದಿಕ್ಕುಗಳಲ್ಲಿ ಸುಮಾರು ೧.೫ ಕಿ.ಮೀ. ಉದ್ದಕ್ಕೆ ಹರಡಿರುವ ಗುಡ್ಡದ ದಕ್ಷಿಣ ತುದಿಗೆ ಅತ್ಯಂತ ಎತ್ತರವಾದ ಶಿಖರವೊಂದರ ಮೇಲೆ ಪೂರ್ವಾಭಿಮುಖವಾಗಿದೆ. ಪ್ರಸ್ತುತ ದೇವಾಲಯ ಗರ್ಭಗೃಹ, ಅದಕ್ಕೆ ಹೊಂದಿಕೊಂಡಂತೆ ಹೊರ ಗರ್ಭಗೃಹ, ಸುಖನಾಸಿನಿಯ ಭಾಗ, ರಂಗಮಂಟಪ, ವಿಸ್ತಾರವಾದ ಮುಖಮಂಟಪವಿದೆ. ಪೂರ್ವ-ಪಶ್ಚಿಮ ಮತ್ತು ಉತ್ತರ ದಿಕ್ಕುಗಳಿಂದ ಪ್ರವೇಶ ದ್ವಾರಗಳಿವೆ. ಒಳ ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದೆ. ಹಿಂಬದಿಯಲ್ಲಿ ಸುಮಾರು ೧ ಮೀಟರ್ ಎತ್ತರದ ಪೀಠದ ಮೇಲೆ ಮೈಲಾರಲಿಂಗನ ಚತುರ್ಭುಜ ಮೂರ್ತಿಯನ್ನು ಕೂಡಿಸಿದೆ. ನಾಲ್ಕು ಕೈಗಳಲ್ಲಿ ಕ್ರಮವಾಗಿ ಖಡ್ಗ, ತ್ರಿಶೂಲ, ಡಮರು ಮತ್ತು ಬಟ್ಟಲುಗಳಿವೆ. ಮೂರ್ತಿ ಆನಂದಾಸನದಲ್ಲಿದ್ದು ಹಣೆಯಲ್ಲಿ ಉರಿಗಣ್ಣು ತೋರಿಸಲಾಗಿದೆ. ಮೂರ್ತಿ ಶಿಲ್ಪದಿಂದ ಪ್ರತ್ಯೇಕವಾದ ದೊಡ್ಡ ಗಾತ್ರದ ಕಟ್ಟಿಗೆಯ ಖಡ್ಗವೂ ಹಲವು ನಮೂನೆಯ ೫-೬ ಬಾಣಗಳೂ ಎಡಬದಿಯಲ್ಲಿವೆ. ಬದಿಯಲ್ಲಿ ಪಂಚಲೋಹದಿಂದಾದ ಪೀಠಸ್ಥ ಚತುರ್ಭುಜ ಹೊಂದಿರುವ 'ಖಂಡೇರಾಯ'ನೆಂದು ಕರೆಯಲಾಗುವ ಮೂರ್ತಿಯೊಂದಿದೆ. ಇದೂ ಮೈಲಾರಲಿಂಗನ ಮೂರ್ತಿಯೆ.

ಸವದತ್ತಿ ತಾಲೂಕಿನ ಮುರಗೊಡಿನಿಂದ ದಕ್ಷಿಣಕ್ಕೆ ೪ ಕಿ.ಮೀ ಅಂತರದಲ್ಲಿ ಕಾರೀಮನಿ ಇದೆ. ಊರಿನ ಉತ್ತರ, ಪೂರ್ವ ಮತ್ತು ದಕ್ಷಿಣದಲ್ಲಿ ಸೋಗಲಗುಡ್ಡದ ಸಾಲುಗಳು ಹಬ್ಬಿದ್ದು ಇದು ಒಂದು ಕಿ.ಮೀ. ಅಂತರದಲ್ಲಿ ಸಂಧಿಸಿದೆ. ಈ ಸಂಧಿಸಿದ ಭಾಗದ ಇಳಿಜಾರಿನಲ್ಲಿ ಮೈಲಾರಲಿಂಗನ ಕ್ಷೇತ್ರವಿದೆ. ಬೆಳಗಾವಿ ಜಿಲ್ಲೆಯ ಭಕ್ತರು ಈ ದೇವರನ್ನು 'ಮಲ್ಲಯ್ಯ' 'ಮಲ್ಲಿಕಾರ್ಜುನ' ಎಂದು ಕರೆಯುತ್ತಾರೆ.

ಮುಖ್ಯ ದೇವಾಲಯದ ದಕ್ಷಿಣ ಭಾಗದ ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದೆ. ಇದು ೧೫-೨೦ ಸೆಂ.ಮೀ.ಗಳಷ್ಟು ಎತ್ತರವಾಗಿದ್ದು ಸುಮಾರು ೨೫ ಸೆಂ.ಮೀ.ಗಳಷ್ಟು ವ್ಯಾಸ ಉಳ್ಳದಾಗಿದೆ.

ಇದರ ಸುತ್ತಲೂ ಪಾಣಿ ಪೀಠವನ್ನು ಕೂಡಿಸಿರುವುದಿಲ್ಲ. ನೈಸರ್ಗಿಕವಾದ ಬಂಡೆಗಲ್ಲು ಹೊರಗೆ ಸ್ಪಷ್ಟವಾಗಿ ಕಾಣುತ್ತದೆ. ಈ ಬಂಡೆಗಲ್ಲಿನ ಮೇಲೆ ಕೊಂಬಿನಂತೆ ಸ್ವಯಂಭೂ ಲಿಂಗ ಮೂಡಿದೆ. ಇದರ ಹಿಂಭಾಗದಲ್ಲಿ ಒಂದು ಶಿಲಾಫಲಕ ಸ್ಥಾಪಿಸಲಾಗಿದ್ದು ಅದರ ಮೇಲೆ ಅಶ್ವಾರೋಹಿಯಾದ ಮೈಲಾರನ ಉಬ್ಬುಶಿಲ್ಪ ಕೆತ್ತಲಾಗಿದೆ. ಈ ಶಿಲಾಫಲಕದ ಎತ್ತರ ಸುಮಾರು ೬೨ ಸೆಂ.ಮೀ. ಈ ದೇವಾಲಯಗಳ ಸಮುದಾಯದ ಹೊರ ಬದಿಯ ಉತ್ತರ ಗೋಡೆಗೆ ಹೊಂದಿದಂತೆ ಮೈಲಾರ ದೇವರ ಉಲ್ಲೇಖವಿರುವ ಕ್ರಿ.ಶ.೧೫೭೩ರ ಶಿಲಾ ಶಾಸನವೊಂದಿದೆ. ಶಾಸನ ಅಪ್ರಕಟಿತವೆಂದು ನೇಗಿನಹಾಳ ಅವರು ಹೇಳಿದ್ದಾರೆ.

ಗುಡೂರು ಹುಲ್ಲಪ್ಪನ ದೇವಾಲಯ, ಬಾದಾಮಿಯಿಂದ ಹುನಗುಂದಕ್ಕೆ ಹೋಗುವ ದಾರಿಯಲ್ಲಿ ಸುಮಾರು ೩೫ ಕಿ.ಮೀ. ಅಂತರದಲ್ಲಿದೆ. ಈ ದೇವಾಲಯದ ಬಾಗಿಲಿಗೆ ಹೊಂದಿದಂತೆ ಪೂರ್ವಬದಿಯಲ್ಲಿ ಅಶ್ವಾರೋಹಿಯಾದ ಮೈಲಾರಲಿಂಗನ ಉಬ್ಬು ಮೂರ್ತಿಯೊಂದಿದೆ. ಈ ದೇವರ ಉತ್ಸವದ ವೇಳೆಯಲ್ಲಿ ಕಂಚವೀರರು ವಡಬು ಹೇಳುವಾಗ ಮೈಲಾರ ದೇವರು ಮೈಲಾರದಿಂದ ಇಲ್ಲಿಗೆ ಬಂದನೆಂದು ಹೇಳುತ್ತಾರೆ.

ಹಿಪ್ಪರಿಗಿಯ ಮಲ್ಲಯ್ಯನನ್ನು ದೇವರಹಿಪ್ಪರಗಿ ಎಂದು ಜನ ಸಾಮಾನ್ಯರು ಗುರುತಿಸುತ್ತಾರೆ. ಧಾರವಾಡ ಜಿಲ್ಲೆಯ ಗೆಜೆಟಿಯರ್‌ನಲ್ಲಿ ಸಹ ಇಲ್ಲಿಯ ದೇವರನ್ನು ಮಾರ್ತಂಡ ಎಂದು ಕರೆಯಲಾಗಿದೆ. ಯಾತಗಿರಿ ಮಲ್ಲಯ್ಯ, ಪ್ರೇಮಪುರ ಮೈಲಾರ; ಪಾಲಿ ಪೇಂಬರನ ಖಂಡೋಬಾ; ಜೆಜೂರಿ ಖಂಡೋಬಾ; ಮಂಗಸೂಳಿ ಮಲ್ಲಯ್ಯ - ಹೀಗೆ ಮೈಲಾರ ಇರುವ ಸ್ಥಳ ಮತ್ತು ಹೆಸರುಗಳ ಬಗ್ಗೆ ಅನೇಕ ಹೇಳಿಕೆಗಳಿವೆ.

ಮಯಿರಾಲು - ಮೈಲಾರ ಎಂದು ಕರೆಯುವ ಈ ದೇವರ ಹೆಸರು ಹೇಗೆ ಬಂದಿರಬಹುದು? ಊಹಿಸಿದಾಗ ಈ ಪದವು ಎರಡು ಪದಗಳ ಸಂಯುಕ್ತ ಪದವಾಗಿದ್ದು ಮಯಿಲ+ಅರ ಎಂದಿದೆ. ಮಯಿಲ ಎಂದರೆ ದ್ರಾವಿಡ ಭಾಷೆಯಲ್ಲಿ ಊದಾ ಅಥವಾ ನೀಲ ವರ್ಣವೆಂದರ್ಥ. ಬಹುಶಃ ಕಾಳಾಮುಖರು ಪೂಜಿಸುತ್ತಿದ್ದ ದೇವರು ಎಂದರ್ಥವಿರಬಹುದೆ? 'ಅರ' ಶಬ್ದದ ಅರ್ಥ ಸ್ಪಷ್ಟವಿಲ್ಲ. ಇನ್ನೊಂದು ಅರ್ಥ ಮೈಲಾರ-ಭೈರವನ ರೂಪದಲ್ಲಿದ್ದು ಭೈರವನಿಗೆ ಮಯಿಲ ಎಂದು ದ್ರಾವಿಡ ಭಾಷೆಯಲ್ಲಿ ಕರೆಯುತ್ತಿದ್ದರೆ? ಈ ದೇವರ ಗೊರವರು ಇಂದಿಗೂ ಕರಿ ಕಂಬಳಿ ಹೆಗಲ ಮೇಲೆ ಹಾಕಿಕೊಳ್ಳುವರು. ಇದರಿಂದ ಈ ಹೆಸರು ಬಂದಿರಬಹುದೆ? (ಮೈಲ=ನೀಲಿ ಅಥವಾ ಕಪ್ಪು ಮತ್ತು ಮಯಿಲ ಎಂಬುದು ಪ್ರಾಕೃತ ಶಬ್ದ ಎಂದು ಕನ್ನಡ ನಿಘಂಟಿನಲ್ಲಿ ಹೇಳಿದೆ)

ಈ ಹಿನ್ನೆಲೆಯಲ್ಲಿ ಮೈಲಾರ ದೇವಾಲಯದ ಪ್ರಾಚೀನತೆಯಾದರೂ ಏನು!

ಮಡಕಶಿರಾ ತಾಲೂಕಿನ ಹೇಮಾವತಿ ನೊಳಂಬರ ರಾಜಧಾನಿಯಾಗಿತ್ತು. ನೊಳಂಬರ ಆರಾಧ್ಯ ದೈವ ಸಿದ್ಧೇಶ್ವರ. ಸಿದ್ಧೇಶ್ವರನನ್ನು ಅಲ್ಲಿಯ ಸ್ಥಳೀಯರು ಹೆಂಜೇರು ಹೆಂಜೇರು ಸಿದ್ಧಪ್ಪನೆಂದೇ ಕರೆಯುತ್ತಾರೆ. ರಾಜಕೀಯ ಸ್ಥಿತ್ಯಂತರದಿಂದ ಮುಂದೆ ನೊಳಂಬರು ತಮ್ಮ ರಾಜಧಾನಿ ಹೇಮಾವತಿಯಿಂದ ಉತ್ತರದ ಕಂಪ್ಲಿಗೆ ಸ್ಥಳಾಂತರಿಸಿದರು. ಆಗ ತಮ್ಮ ಇಷ್ಟ ದೈವವನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಬಂದರು, ಕಂಪ್ಲಿಯಲ್ಲಿ ಅವರು ಕಟ್ಟಿಸಿದ ದೇವಾಲಯದ ಕುರುಹಾಗಿ ಸೋಮೇಶ್ವರ ದೇವಸ್ಥಾನವಿದೆ. ಈ ದೇವರನ್ನು ಸೋಮೇಶ್ವರ ಎಂದು ಕರೆದರೂ ಅದು ಭೈರವನ ಬಿಂಬ. ಈ ಭೈರವನ ಪೀಠದಲ್ಲಿ ಕುದುರೆಯನ್ನು ಬಿಡಿಸಿದ್ದಾರೆ. ಇದು ಭೈರವನ ಅರ್ಥಾತ್

ಮೈಲಾರ ಬಿಂಬ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಶಾಸನೋಕ್ತ ಆಧಾರವಿಲ್ಲ. ಆದರೆ ದೇವಾಲಯದ ರಚನಾದೃಷ್ಟಿಯಿಂದ ಕ್ರಿ.ಶ.೧೦ನೇ ಶತಮಾನದ ಉತ್ತರಾರ್ಧಕ್ಕೆ ಹಾಕಬಹುದಾಗಿದೆ.

ಇದೇ ಕಂಪ್ಲಿಯ ಸಮೀಪದ ತೆಕ್ಕಲಕೋಟೆಯ ಬಳಿ ಇರುವ ಹರವಿನ ಮಲ್ಲಯ್ಯನ ಗುಡ್ಡದಲ್ಲಿ ದೊರೆತಿರುವ ಶಾಸನವು ಮೈಲಾರನ ಆರಾಧನೆ ಬಗ್ಗೆ ಮಹತ್ವದ ಸುಳಿವೊಂದನ್ನು ನೀಡುತ್ತದೆ. ಕ್ರಿ.ಶ.೧೦೧೭ರಲ್ಲಿ ನೊಳಂಬ ಅರಸ ಜಗದೇಕಮಲ್ಲ ಉದಯಾದಿತ್ಯನ ಕಾಲದಲ್ಲಿ ಈಗಿನ ಮಲ್ಲಯ್ಯನ ಗುಡ್ಡದಲ್ಲಿ ಮೈಲಾರ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಹಗರಿ ನದಿಯ ದಡದಲ್ಲಿದ್ದ ಸಿರಿಯನೂರು ಎಂಬ ಒಂದು ಗ್ರಾಮವನ್ನು ದಾನ ನೀಡಿದಂತೆ ಶಾಸನದಲ್ಲಿ ಉಲ್ಲೇಖವಿದೆ.

ಶಾಸನ ಪಾಠ

ಸ್ವಸ್ತಿ ಸಮಸ್ತ ಭುವನಾಶ್ರಯ ಪ್ರಥುವಿ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳ ತಿಳಕ ಚಾಳುಕ್ಯಾಭರ್ರಣಂ ಶ್ರೀ ಮಜ್ಜಗದೇಕ ಮಲ್ಲದೇವರ ರಾಜ್ಯ ಮುತ್ತರೊತ್ತರಾಭಿವೃದ್ಧಿ ಸಲುತ್ತಿರೆ ಸಮಧಿಗತ ಪಂಚಮಹಾಶಬ್ದ ಪಲ್ಲವಾನ್ವಯ ಶ್ರೀ ಪ್ರಥುವಿ ವಲ್ಲಭ ಪಲ್ಲವ ಕುಳತಿಳಕನಮೋಘನೇಕವಾಕ್ಯ ಕಾಂಚಿ ಪುರವೇಶ್ವರ ಶ್ರೀ ಮಜ್ಜಗದೇಕ ಮಲ್ಲ ನೋಟಿಂಬ ಪಲ್ಲವ ಪೆರ್ಮ್ಮಾನಡಿಗಳ್ ನೊಟಂಬವಾಡಿ ಮೂವತ್ತಿರ್ಚಾಸಿರವುಮುಂ ಕದಂಬಳಿಕೆ ಸಾಯಿರವುಮುಂ ಕೋಗಳಿ ಐನೂಱುಮುಂ ಬಲ್ಲಕುಂದೆ ಮೂನೂಱುಮುಂ ಕುದಿಯಿಪ್ಪರವಿಯಿಪುತ್ತುಮಂ ಕರಿವಿಡಿ ಮೂವತ್ತುಮುಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನಂ ಗೆಯ್ಯುತ್ತುಮಿರೆ ಸಕವರ್ಷ ೯೩೯ನೆಯ ಪಿಂಗಳ ಸಂವತ್ಸರದ ಚೈತ್ರ ಬಹುಳ ೧೩ ಬೃಹಸ್ಪತಿ ವಾರದಂದು ಶ್ರೀಮತ್ ಮೈಲಾರದ ದೇವಜ್ಗ ಬಲ್ಲಕುಂದೆ ಮೂನೂಱರೊಳಗಣ ಪಗರೆ ತಡಿಯ ಸಿಱಿಯನೂರಂ ಸರ್ವ್ವಾಭ್ಯನ್ತ ಸಿದ್ಧಿಯಾಗೆ ಕೊಟ್ಟರೀಧರ್ಮ್ಮಮಂ ಪ್ರತಿಪಾಳಿಸಿದ....(ಇಲ್ಲ). ಯಾನೆಯ ಲಿಲೊಳು ವಿರ್ವ್ವಾಸ್ಸಿನ....ಗದಾಹ ಸಾವಿರ ಬ್ರಾಹ್ಮಣರ್ಗ್ಗೆ ಸಾಯಿರ ಕವಿಲೆಯುಮಂ ಸಾಯಿರ ಗದ್ಯಾಣ ಹೊನ್ನಮಂ ದಾನಂಗೊಟ್ಟ ಪಲಮಕ್ಕುಂ ಈ ಧರ್ಮ್ಮಮಂ ನಟುದಾತಂಗೆ ಈ ಪೇಟ್ದಿ ತೀರ್ಥಂಗಳೊ....

ಈ ಶಾಸನದ ಹಿನ್ನೆಲೆಯಲ್ಲಿ ಪ್ರಸ್ತುತ ದೇವಾಲಯವನ್ನು ಪರಿಶೀಲಿಸಲಾಗಿ ದೇವಾಲಯದ ಒಳರಚನೆ ಕ್ರಿ.ಶ.೧೧ನೇ ಶತಮಾನದ ಪೂರ್ವಾರ್ಧಕ್ಕೆ ಸೇರಿದ್ದಾಗಿದೆ. ದೇವಾಲಯದ ಸ್ವರೂಪ ಹೀಗಿದೆ; ಗರ್ಭಗೃಹ, ತೆರದ ಅಂತರಾಳ ಮತ್ತು ನವರಂಗಗಳನ್ನು ಒಳಗೊಂಡಿದೆ. ಈ ದೇವಾಲಯದಲ್ಲಿ ಈಗಿರುವ ಬಿಂಬಗಳು ಕ್ರಿ.ಶ. ಸುಮಾರು ೧೫-೧೬ನೆಯ ಶತಮಾನಕ್ಕೆ ಸೇರಿದವು. ಗರ್ಭಗೃಹದ ಪೀಠದ ಮೇಲೆ ಈಗ ಮೂರು ದೇವತೆಗಳಿದ್ದು ಮಧ್ಯದಲ್ಲಿ ಭೈರವ ಮೂರ್ತಿಯೂ ಎಡಭಾಗದಲ್ಲಿ ಕಾಳಿಕಾದೇವಿಯ ಶಿಲ್ಪವಿದೆ. ಬಲಭಾಗದಲ್ಲಿ ಕುಮಾರಸ್ವಾಮಿಯ ಶಿಲ್ಪವಿದೆ. ಮೂರು ವಿಗ್ರಹಗಳ ಮುಂದೆ ಮೂರು ಶಿವಲಿಂಗಗಳಿವೆ. ಬಹುಶಃ ಈ ಶಿವಲಿಂಗಗಳನ್ನು ಕಾಲಾಂತರದಲ್ಲಿ ಇರಿಸಿರಬಹುದು.

ಹರವಿನಮಲ್ಲಯ್ಯ ದೇವಾಲಯದ ಮೂಲ ಬಿಂಬದ ಬಗ್ಗೆ ಹುಡುಕಾಟ ನಡೆಸಿದಾಗ ಅದೇ ದೇವಾಲಯದ ನೈರುತ್ಯ ದಿಕ್ಕಿನಲ್ಲಿ ನವರಂಗದ ಗೋಡೆಗೆ ಸೇರಿಸಿರುವ ಸ್ಥಳದಲ್ಲಿ ಭಗ್ನ ಭೈರವ ಶಿಲ್ಪವೊಂದು ಇದ್ದು ಎದೆಯ ಮೇಲ್ಭಾಗ ಮಾತ್ರ ಉಳಿದು ಬಂದಿದೆ. ಈ ಬಿಂಬವು ಮೂರ್ತಿಶಿಲ್ಪ

ಲಕ್ಷಣಗಳಿಂದ ಕ್ರಿ.ಶ.ಸು.೧೧ನೇ ಶತಮಾನದ ಪೂರ್ವಾರ್ಧಕ್ಕೆ ಸೇರುತ್ತದೆ. ಶಿಲ್ಪಕ್ಕೆ ಜಟಾಭಾರವಿದೆ. ಶಿರೋಭಾಗದಲ್ಲಿ ಹಣೆಗಣ್ಣು, ಕೋರೆ ಹಲ್ಲುಗಳು ಇವೆ. ಬಲ ಕಿವಿಯಲ್ಲಿ ಪತ್ರಕುಂಡಲ, ಎಡಗಿವಿಯಲ್ಲಿ ಶಂಖ ಕುಂಡಲವಿದೆ. ಕತ್ತಿನಲ್ಲಿರುವ ಆಭರಣ ಅಡ್ಡಿಕೆಯಂತೆ ಕಾಣುತ್ತದೆ. ಭುಜಕೀರ್ತಿ ಇದೆ. ನಾಲ್ಕು ಕೈಗಳಿದ್ದು ಒಂದರಲ್ಲಿ ಅಕ್ಷಮಾಲೆ, ಇನ್ನೊಂದರಲ್ಲಿ ಶೂಲ, ಮತ್ತೊಂದರಲ್ಲಿ ಡಮರು ಇದೆ. ಇನ್ನೊಂದು ಕೈ ಭಿನ್ನವಾಗಿದ್ದು ಏನಿದೆಯೆಂದು ಕಾಣಬರುವುದಿಲ್ಲ. ಈ ಭಗ್ನಗೊಂಡ ಶಿಲ್ಪ ಯಾವುದೇ ಅನುಮಾನವಿಲ್ಲದೇ ನೊಳಂಬರ ಕಾಲದಲ್ಲಿ ಪ್ರತಿಷ್ಠಾಪಿತವಾಗಿದ್ದ ಮೈಲಾರನ ಬಿಂಬವೇ ಆಗಿದ್ದಿರಬೇಕು. ಇದೇ ಆವರಣದಲ್ಲಿ ಭಗ್ನಗೊಂಡ ಪ್ರಾಚೀನ ಕಾಳಿಕಾದೇವಿಯ ಬಿಂಬವೂ ದೊರಕಿದೆ. ಆದರೆ ರುಂಡದ ಭಾಗ ಭಗ್ನಗೊಂಡಿದೆ.

ಭಗ್ನ ಭೈರವ ಅಥವಾ ಮೈಲಾರನ ಮೂರ್ತಿಯ ದೇವಾಲಯದ ಮುಂಭಾಗದ ಮಂಟಪದಲ್ಲಿ ಬೃಹತ್ತಾದ ಏಕಶಿಲಾ ನಂದಿ ವಿಗ್ರಹವಿದೆ. ಈ ನಂದಿಯ ಶಿಲ್ಪವೂ ದೇವಾಲಯ ನಿರ್ಮಾಣ ಕಾಲದ್ದೇ ಆಗಿರುತ್ತದೆ. ಹುಟ್ಟುಗಲ್ಲಿನಲ್ಲಿ ಕಡೆದಿರುವ ಈ ಶಿಲ್ಪದ ಅವಯವಗಳನ್ನು ಬಿಡಿ ಬಿಡಿಯಾಗಿ ಬಿಡಿಸಿದ್ದು ಸುಂದರವಾಗಿದೆ. ನಂದಿಯು ತಲೆಯನ್ನು ಸ್ವಲ್ಪ ಬಾಗಿಸಿದಂತೆ ಇದೆ. ನಂದಿ ಮಂಟಪದ ಕಂಬಗಳು ಸಹ ದೇವಾಲಯದ ನಿರ್ಮಾಣ ಕಾಲದ್ದೇ ಆಗಿರುತ್ತದೆ. ನಂದಿಯ ಎತ್ತರ ಸುಮಾರು ೧.೯ ಮೀ. ಉದ್ದ ಸುಮಾರು ೩.೬೫ ಮೀ. ಇದೆ. ಕತ್ತಿನಲ್ಲಿ ಗಗ್ಗರದ ಸರ ಹಾಕಿದೆ.

ಈ ಹಿನ್ನೆಲೆಯಲ್ಲಿ ಈಗಿರುವ ಹೂವಿನ ಹಡಗಲಿ ತಾಲೂಕಿನ ಮೈಲಾರ ಕ್ಷೇತ್ರಕ್ಕಿಂತ ಇದೇ ಪ್ರಾಚೀನವಾದ ಹಾಗೂ ಮೈಲಾರನ ಸಂಪ್ರದಾಯದ ಮೂಲ ಸ್ಥಳ. ಮೈಲಾರ ಎಂಬುದು ಸ್ಥಳದ ಹೆಸರಲ್ಲ, ಅದು ದೇವತೆಯ ಹೆಸರಿರಬೇಕು. ಮುಂದೆ ಈ ದೇವತೆ ನೆಲೆಗೊಂಡ ಸ್ಥಳಗಳನ್ನು ಬೇರೆ ಬೇರೆ ವಿಶೇಷಣಗಳೊಂದಿಗೆ ಮೂಲಮೈಲಾರ, ಮಣ್-ಮೈಲಾರ, ಮಲ್ಲಾರಿ, ಮಾರ್ತಾಂಡ ಭೈರವ, ಖಂಡೋಬಾ ಮುಂತಾದ ಹೆಸರುಗಳಿಂದ ಕರೆದಿರುತ್ತಾರೆ.

ಈ ಮೈಲಾರನ ಪೂಜಾ ಉಗಮ ನೊಳಂಬರ ಕಾಲದಲ್ಲಿ ಆರಂಭವಾಗಿ ನೊಳಂಬರ ರಾಜಕೀಯ ಸ್ಥಿತ್ಯಂತರಗಳೊಂದಿಗೆ ಕರ್ನಾಟಕದ ಉದ್ದಗಲಕ್ಕೆ ಹರಡಿದೆ ಎಂದು ಹೇಳಬಹುದು. ಹೇಮಾವತಿಯಿಂದ ಕಂಪ್ಲಿ ಮತ್ತು ಅಲ್ಲಿಂದ ಬೇರೆ ಬೇರೆ ಸ್ಥಳಗಳಿಗೆ ನೊಳಂಬರು ರಾಜರಾಗಿ, ಅಧಿಕಾರಿಗಳಾಗಿ ವಲಸೆ ಹೋದಾಗ ತಮ್ಮ ಇಷ್ಟ ದೈವವನ್ನು ತಾವು ನೆಲೆಗೊಂಡ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿರಬಹುದು. ಅವೇ ಇಂದಿನ ಮೈಲಾರ ಕ್ಷೇತ್ರಗಳಾಗಿರಬಹುದು. ಮೈಲಾರನ ಸಂಪ್ರದಾಯಕ್ಕೆ ಸೇರಿದ ಬ್ರಾಹ್ಮಣ ಕುಟುಂಬಗಳು ಮತ್ತು ಒಕ್ಕಲುಗಳು ಇದ್ದು, ಈ ಕುಟುಂಬಗಳ ವಲಸೆಯೊಂದಿಗೆ ಮೈಲಾರ ಸಂಪ್ರದಾಯ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹರಡಲು ಕಾರಣವಾಗಿರಬೇಕು.

ಮೈಲಾರನ ಬಗ್ಗೆ ಹೇಳುವಾಗ ಹಾಸನದ ಸಿದ್ಧೇಶ್ವರನ ಬಗ್ಗೆ ಹೇಳಬೇಕಾಗುತ್ತದೆ. ಶ್ರೀಮತಿ ವಸಂತಲಕ್ಷ್ಮಿಯವರು ಇದರ ಬಗ್ಗೆ ಲೇಖನ ಬರೆದಿದ್ದಾರೆ. ಇದು ಶಿಲ್ಪ ಲಕ್ಷಣದಿಂದ ಕ್ರಿ.ಶ ೮ನೆಯ ಶತಮಾನಕ್ಕೆ ಸೇರಿದುದಾಗಿದೆ. ಈ ಶಿಲ್ಪದಲ್ಲಿ ಸಿದ್ಧೇಶ್ವರ, ನಾಯಿ ಮತ್ತು ಕುದುರೆಯನ್ನೂ ಬಿಡಿಸಿದೆ. ಅಂದರೆ ಭೈರವನ ವಾಹನಗಳಲ್ಲಿ ಕುದುರೆಯೂ ಒಂದೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಮೈಲಾರ ಎಂದು ಕರೆದಿರುವ ಶಾಸನಗಳಾವೂ ಇಲ್ಲದಿದ್ದರೂ ಇದು ಮೈಲಾರನೆಂಬುದರಲ್ಲಿ ಸಂದೇಹವಿಲ್ಲ. ಹಾಗೆಯೇ ಹೇಮಾವತಿಯ ಸಿದ್ಧೇಶ್ವರ ಬಿಂಬವೂ ಸಹ ಭೈರವನ ಶಿಲ್ಪವೇ ಆಗಿದೆ. ಹೀಗಾಗಿ

ಮೈಲಾರ ಎಂದು ಕರೆಯದಿದ್ದರೂ ಆ ಸಂಪ್ರದಾಯದ ಭೈರವಶಿಲ್ಪಿಗಳು ಅಲ್ಲಲ್ಲಿ ಪ್ರತಿಷ್ಠಾಪಿತಗೊಂಡು ಪೂಜೆಗೊಳ್ಳುತ್ತಿದ್ದವು. ಕ್ರಿ.ಶ.೧೦೧೭ರ ನಂತರ ಈ ಬಿಂಬಗಳನ್ನು ಕೆಲವೆಡೆ ಮೈಲಾರ ಎಂದು ಕರೆಯಲಾರಂಭಿಸಿದರು. ಹೀಗೆ ಮೈಲಾರನ ಸಂಪ್ರದಾಯ ನೊಳಂಬವಾಡಿಯಿಂದ ನೊಳಂಬರ ಆಡಳಿತದೊಂದಿಗೆ ಬೇರೆ ಬೇರೆ ಸ್ಥಳಗಳಲ್ಲಿ ಹರಡಿರುವುದು ಸ್ಪಷ್ಟವಾಗುತ್ತದೆ. ನೊಳಂಬರ ಉಲ್ಲೇಖವಿರುವ ಶಾಸನವೊಂದು ಮಹಾರಾಷ್ಟ್ರದ ದಕ್ಷಿಣ ಜಿಲ್ಲೆಯೊಂದರಲ್ಲಿ ದೊರೆತಿರುವುದು ಮೇಲಿನ ನನ್ನ ವಾದವನ್ನು ಪುಷ್ಟೀಕರಿಸುತ್ತದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೨
೨. ಡಾ|| ಎಂ.ಚಿದಾನಂದ ಮೂರ್ತಿ, ಸಂಶೋಧನಾ ತರಂಗ-೨
೩. ನೇಗಿನಹಾಳರ ಪ್ರಬಂಧಗಳು.

ಹಲಸುಬಾಳು ಫಲಹಾರ ಮಠದ ನಾಲ್ಕು ತಾಮ್ರಶಾಸನಗಳು

ಚಿಕ್ಕಮಗಳೂರು ತಾಲೂಕಿನ ಶಾಸನ ಸಂಪುಟಗಳನ್ನು ಪರೀಶೀಲಿಸುತ್ತಿದ್ದಾಗ ಹಲಸುಬಾಳುವಿನ ಫಳಾಮಠದ ಶಾಸನಗಳಲ್ಲಿ ಬರುವ ಆದಿಗದ್ದಿಗೆ, ಶ್ರೀಗುರು ದತ್ತಾತ್ರೇಯ, ಗಾಳಿಪೂಜೆ, ಶ್ರೀಶೈಲ ಪಂಚಮಠ, ಶ್ರೀಗಿರಿ ಸೂರ್ಯಸಿಂಹಾಸನ ಮುಂತಾದ ಪದಪುಂಜಗಳು ಗಮನ ಸೆಳೆದವು. ಈ ಹಿನ್ನೆಲೆಯಲ್ಲಿ ಆ ಮಠಕ್ಕೆ ಸಂಬಂಧಿಸಿದ ನಾಲ್ಕು ತಾಮ್ರ ಶಾಸನಗಳ ಪರಿಚಯ ಮಾಡಲಾಗಿದೆ.

ಶ್ರೀ ಶೈಲ ಪರ್ವತದ ವೀರಭಿಕ್ಷವೃತ್ತಿಗಳ ಮಠದ ಪಟ್ಟದ ಉದನೆಸ್ವಾಮಿಯವರು ಘಾಳಿಪೂಜೆ ಚಂದ್ರದ್ರೋಣ ಪರ್ವತದ ಫಲಹಾರದ ಸ್ವಾಮಿಯವರ ಮಠದ ಪಟ್ಟದ ದೊಡ್ಡ ಸ್ವಾಮಿಯವರಿಗೆ ಮಾಡುವ ಶರಣಾರ್ತಿ. ಈಶ್ವರ ಸಂವತ್ಸರದ ಮಾರ್ಗ ಶುದ್ಧ ದದವರೆಗೆ ನಾವು ಶಿವಯೋಗ ಆನಂದಲು ಇದ್ದೇವೆ. ನಿಮ್ಮ ಶಿವಯೋಗ ಆನಂದಗಳಿಗೆ ಆಗಾಗ್ಗೆ ನಮ್ಮ ಮೇಲಣ ಪ್ರೀತಿಯಿಂದ ವಿಚಾರಿಸಬಹುದು. ಈ ಮಠಕ್ಕೆ ಆ ಮಠಕ್ಕೆ ನಮ್ಮ ಶಿಷ್ಯರು ತಮ್ಮ ಶಿಷ್ಯರಿಗೂ ಮಾಡಿಕೊಂಡ ಪರಂಪರ್ರಿಕೆ ಉಂಟಷ್ಟೆ. ಈ ಎರಡೂ ಮಠಗಳು ಸಮಾನತೆಯಲ್ಲಿ ದಾನಧರ್ಮ ಹಾಗೂ ಕಾಣಿಕೆ ಪಡೆಯುವ ವಿಷಯದಲ್ಲಿ ಮಾಡಿಕೊಂಡಿರುವ ಹಿಂದಿನ ಒಪ್ಪಂದದಂತೆ ಸುಡುಗಾಡ ಸಿದ್ಧರು, ಗೋಲು ಕೊಂಡೆಯವರು, ಎಕಾನಟ್ಟ ಜೂಹಂಜಿಕಂ ಕಳರು ಮೊದಲಾದ ಶಿಷ್ಯರು, ಪೂರ್ವ ಮೇರೆಗೆ ಕಾಣಿಕೆ ತೆಗೆದುಕೊಂಡು ರೂಪಾಯಿ ಹನ್ನೆರಡರಲ್ಲಿ, ಎಂಟು ಸಿಂಹಸನಕ್ಕೆ ಕೊಡುವುದು. ಕೊಡುವುದಿಲ್ಲ ಎಂದು ಹೇಳುವ ಈ ಶಿಷ್ಯನು ಕಾಶಿಗೆ, ರಾಮೇಶ್ವರಕ್ಕೆ ಮತ್ತು ಗುರುವಿಗೆ ಹೊರತು ಎಂದು ಹೇಳಿರುವ ದಾನ ಶಾಸನದ ಕಾಲ ಕ್ರಿ.ಶ.೧೬೬೮ಕ್ಕೆ ಸೇರುತ್ತದೆ.

ಇದೇ ಫಲಹಾರ ಮಠಕ್ಕೆ ಸೇರಿದ ಕ್ರಿ.ಶ.೧೭೦೨ರ ಶಾಸನ ಶ್ರೀ ಪರ್ವತ, ಸ್ವಯಂಭು ಶ್ರೀಲಿಂಗ ಚಕ್ರವರ್ತಿ ಶ್ರೀ ಮನ್ಮಹಾಮಲ್ಲಿಕಾರ್ಜುನ ದೇವರ ಸಂಪ್ರದಾಯಕ್ಕೆ ಸೇರಿದ ಶ್ರೀ ಕೈಲಾಸದ ಮೇಲಣ ದೇವ ಮಹಾಮಹಂತು ಮುಖ್ಯವಾದ ಪೃಥ್ವಿಗೆ ಭೂಕೈಲಾಸ ನಿವಾಸರಾದ ಶ್ರೀಶೈಲ ಪಂಚಮಠ ಪಂಚಗೃಹಕ್ಕೆ ಮುಖ್ಯರಾದ, ಶ್ರೀನಂದಿನಾಥ, ಶ್ರೀಭೃಂಗಿನಾಥ ಶ್ರೀವೀರಭದ್ರ ದೇವರು ಮುಖ್ಯರಾದ ಶ್ರೀ ಗಿರಿಸೂರ್ಯ ಸಿಂಹಾಸನಕ್ಕೆ ಕಾರಣಕರ್ತರಾದ ಶ್ರೀವೀರಶೈವ ಪ್ರಸನ್ನ ವಿರುಪಾಕ್ಷವರ್ತಿ ಪಟ್ಟದ ಉದಾನ ಸ್ವಾಮಿಯವರು, ಸಮಸ್ತ ಭುವನರಜತ ಚಲಸ್ಥಾಪನಾಚಾರ್ಯ

ಪ್ರಮಥಾದಿ ನಾಯಕ ಉಭಯ ಸಮಯ ಹರಿಯಜಸುರ ಇಂದ್ರಾದಿ ದೇವಗಣ, ಋಷಿಗಣ, ರಾಜಗಣ, ರಾಕ್ಷಸಗಣ ಮುಂತಾದ ಗಣಸಮೂಹ ರಾರಾಜಿಸುತ್ತಾ ಚತುರಾಚಾರ್ಯ ಪೀಠಸಿಂಹಾಸನ ರೂಢರಾದ ಘಾಳಿಪೂಜೆ ೧೨ ಯೋಜನ ಪರ್ವತದ ಮಧ್ಯದಲ್ಲಿ ಉದ್ಭವಿಸಿದ ವಿರುಪಾಕ್ಷಲಿಂಗಕ್ಕೆ ಆದಿಗದ್ದಿಗೆ ಶ್ರೀಗುರು ದತ್ತಾತ್ರೇಯ ಶ್ರೀ ಫಳಾರಮಠದ ಸ್ವಾಮಿಯವರಿಗೆ (ಚಿತ್ರಭಾನು ಸಂಸ್ವತದ ಅಶ್ವೀಜ ಬ.೫ ಗುರುವಾರ) ಬರೆಸಿಕೊಟ್ಟ ದಾನಶಾಸನ ಹೇಳುವುದು, ಆ ಮಠ, ಈ ಮಠ, ಕೂಡಿ ನಡೆಸುವ ಧರ್ಮದಾಸೋಹದ ರೀತಿಯನ್ನು ಹೀಗೆ ತಿಳಿಸುತ್ತದೆ. ಹಿರೆಹೊಳೆಯಿಂದ ದಕ್ಷಿಣ, ಪಶ್ಚಿಮ, ಉತ್ತರದಿಕ್ಕು ಸೇರಿದಂತೆ ಈ ಮೂರು ದಿಕ್ಕಿನಲ್ಲಿರುವ ಸುಡುಗಾಡುಸಿದ್ಧರು, ಪಾಕನಾಟವರು, ಜೆಡೆಜೋಗಿಗಳು, ಗೋಲುಕೊಂಡೇರು, ಜಂಗಲರು, ಉಪ್ಪಿನ ಕಂಗಳರು ಇಂತಿವರು ಕೊಡುವ ಕಪ್ಪವನ್ನು ನೀವು ತೆಗೆದುಕೊಂಡು ದಾಸೋಹ. ದೀಪಾರಾಧನೆಯನ್ನು ನಡೆಸುವುದು ಮುಂದೆ ಇವರಲ್ಲಿ ಯಾರಾದರೂ ಕಾಣಿಕೆ ತೆಗೆದುಕೊಂಡರೆ ನಮ್ಮ ಶ್ರೀಶೈಲ ಸೂರ್ಯಸಿಂಹಾಸನಕ್ಕೆ ದೂರಾದವರು. ಮತ್ತು ಕಾಶಿಯಲ್ಲಿ ಗೋಹತ್ಯೆ, ಬ್ರಹ್ಮಹತ್ಯ, ಸ್ತ್ರೀಹತ್ಯ ಮಾಡಿದ ಹಾಗೆಂದು, ಲಿಂಗಸಮ್ಮತಿಯಿಂದ ತ್ರಿಮೂರ್ತಿಗಳು, ಸೂರ್ಯಚಂದ್ರರು ಮತ್ತು ಅಷ್ಟದಿಕ್ಪಾಲಕರ ಸಾಕ್ಷಿಯಾಗಿ ಬರೆದು ಕೊಟ್ಟ ದಾನ ಶಾಸನ ಎಂದು ಹೇಳಿದೆ.

ಇದೇ ಫಲಹಾರ ಮಠಕ್ಕೆ ಸಂಬಂಧಿಸಿದ ಕ್ರಿ.ಶ.೧೭೦೭ಕ್ಕೆ ಸೇರಿದ ತಾಮ್ರಶಾಸನದಲ್ಲಿ: ೫೬ ಮಹಾನಾಡ ಪ್ರಜೆಗಳು ಫಲಹಾರದ ಮಠದ ಘಾಳಿಪೂಜೆ ಚನ್ನವೀರದೇವರ ಮಠಕ್ಕೆ ಹೊಯ್ಸಳ (ವೀರ) ಬಲ್ಲಾಳದೇವನು ಕಾಣಿಕೆಯಾಗಿ ಕೊಟ್ಟ ದಾನ ಶಾಸನ, ಈ ಶಾಸನ ರಾಜನನ್ನು ಮಲೆಯ ಪೂವಿನ ದಂಡ, ಅಸಹಾಯಶೂರ, ಗಿರಿದುರ್ಗಮಲ್ಲ, ಛಲದಂಕವೀರ, ಸಪ್ತಕ್ಷೋಣಿ ವಿಷ್ಣುವರ್ಧನ, ಅರಿರಾಯ ಗಿರಿವ್ರಜ, ಗಜಪತಿ ಗಂಡಭೇರುಂಡ, ಅಶ್ವಪತಿ ಅನಂಗ ಮಹಾರುದ್ರ, ನೂರೆಂಟುಘಟೆ ಆನೆಯ ತುಳಿದ ಹುಲಿರಾಯ, ಎಂದು ಹೊಗಳಿರುವ ವೀರಬಲ್ಲಾಳರಾಯರಿಗೆ ಪ್ರಸನ್ನನಾದಂಥ ಶ್ರೀರಾಮನ ಸೇವಕನಾಗಿದ್ದ ಹನುಮಂತ ಸ್ಥಾಪಿಸಿದ ಪರ್ವತ ಎಂದು ಹೊಗಳಿದೆ. ಈ ಪರ್ವತದಲ್ಲಿ ಸಂಜೀವಿನಿ, ಸಿದ್ಧರಸ, ಸುವರ್ಣಮಯವಾದ ಚಂದ್ರದ್ರೋಣಿ ವೇದಪರ್ವತದಲ್ಲಿ ಅಚಲ, ಜರಿ, ಗೂಹೆ, ಗಹ್ವರ, ಮಹಾಕಾನನ ಮತ್ತು ಭೂತ ಬೇತಾಳ, ಭಯಂಕರವಾದ ಮೃಗ, ವ್ಯಾಘ್ರ, ಘಠಸರ್ಪಗಳು ವಾಸವಾಗಿದ್ದವು. ಅಲ್ಲಿ ಮುನಿಜನಸ್ತೋಮವು ಸಹ ವಾಸ ಮಾಡುತ್ತಿದ್ದಿತು. ಆ ಪರ್ವತದಲ್ಲಿ ಮೂಲಿಕೆ, ಮಾಂಸವೇಧಿ, ಮಹಾಔಷಧ, ಮುಂತಾದ ಔಷಧಯುಕ್ತ ಮೂಲಿಕೆಗಳು ದೊರಕುತ್ತಿದ್ದವು. ಇಷ್ಟು ಮಾತ್ರವಲ್ಲದೆ ಅಷ್ಟಭೈರವ ಗಣೇಶ್ವರ, ಮಹಂಕಾಳಿ, ವೀರಭದ್ರ, ನರಸಿಂಹ, ನವದುರ್ಗಿ, ನವನಾಥ ಸಿಧಾರಕ್ಷಾ ಮೊದಲಾದ ದೇವತೆಗಳು, ಬುದ್ಬುದ ಜಲ, ಮಹಾಉ್ರಷಾ। ಕಾರ್ಮುಗಿಲ ಕಾವಳ, ತುಷಾರ ತುಂಬಿ ಸಮೃದ್ಧಿಯಾಗಿತ್ತು.

ಇಂತಹ ಸಮೃದ್ಧಿಯಿಂದ ಕೂಡಿ, ಫಲವತ್ತಾಗಿದ್ದ ಪರ್ವತದಲ್ಲಿ ಘಾಳಿಪೂಜೆಯ ಶ್ರೀವಿರುಪಾಕ್ಷ ಸ್ವಾಮಿಯವರ ಪ್ರೀತಿ ಪ್ರೇಮದ, ಸುಜನ, ಶುದ್ಧ ಶಿವಾಚಾರ ಸಂಪನ್ನರಾದ, ರಾಜಮಾನ್ಯ ಶ್ರೀ ಘಾಳಿಪೂಜೆಯ ಪುರಾಣದ ಬಗೆಯ ಫಲಹಾರ ದೇವರ ಶಿಷ್ಯರಾದ ಚೆನ್ನವೀರದೇವರ ಮಠಕೆ ವ್ಯಯನಾಮ ಸಂವತ್ಸರದಲ್ಲಿ ಚಪ್ಪನ್ನಯಿವತ್ತಾರು ದೇಶಭಾಗದ ಮಹಾನಾಡುಗಳಲ್ಲಿರುತ್ತಿದ್ದ ಮೊಸೆಗೆ ಸೀಮೆಗೆ ಶಂಕರ ದೇವರ ಸಂಗನ ಬಸವಪ್ಪ, ನಾಗಲವಟ್ಟರಾಚಪ್ಪ, ಉಪ್ಪಿನ ರಾಚಪ್ಪ, ರಾಯಭಾನಿಮಾರ್ಗಕೆ ವೊಡೇರ ಬಸವಪ್ಪ, ಗೋದಿಯಡಪ್ಪ, ಜವಳಕೋಟೆ ಸ್ವಾಂತಸೆಟ್ಟಿ,

ಹಂಪಸಾಗರಕ್ಕೆ ನೀಲಿಹಳಿ ವೀರಪ್ಪ, ಹಿರೇತುಂಬಳದ ಸೀಮೆಗೆ ಬದನೆಹಾಳ ರಾಯಿಸೆಟ್ಟಿ, ಕರಕಂಠ್ಯೆಯ ಅಬಚಿನೀಲಪ್ಪ, ಹೊಸಪೇಟೆ ಬೆಂಡೆ ಬೆಂಬಳಿ ಸೀಮೆಗೆ ಹುಗ್ಗಿ ರಾಚಪ್ಪ, ಗುರುಶರಣ ಯೇಚರಡಿಬಸವಪ್ಪ, ಹರವಿ ಶಿವಣ್ಣ, ಸಿಂಧುನೂರ ಸೀಮೆಗೆ ಪಡುವನಾಡು ಹೆಡೆಯಪ್ಪ, ಜವಳಿ ಬಸವಪ್ಪ, ಬಂಕಾಪುರದ ಸೀಮೆಗೆ ಹಿಡಿಪುಳಿ ಚೆನ್ನಬಸವಪ್ಪ, ಮಹಾದೇವಿ ಚೆನ್ನಬಸವಪ್ಪ, ಸಾವುನೂರ ಸೋಮಣ್ಣ, ಕೂರಿ ಬಸವಪ್ಪ, ಗದುಗಿನ ಸೀಮೆಗೆ ಗೋದಿ ನೀಲಪ್ಪ, ಅನವಟ್ಟಿ ಚೆನ್ನಬಸೆಟ್ಟಿ, ಕಲುಮೇಶ್ವರ ಸೀಮೆಗೆ-ನಂದಿ-ವಡೇರು, ಗಡದಲಕ್ಕಿಸೆಟ್ಟಿ, ಹುಬ್ಬಳ್ಳಿ ಸೀಮೆಗೆ ಪಟೆದನಾಗಣ್ಣ, ಬಸವಾಪಟ್ಟದ ಸೀಮೆಗೆ ಹೊಲಿಕೇರಿ ಚೆನ್ನಪ್ಪ, ಆಯರ ಬಸೆಟ್ಟಿ, ರಬಳಿಗೆ ಲಿಂಗಣ್ಣ, ಗೊಳೂರ ಸೀಮೆಗೆ ಹೊಟ್ಟೆ ಹುಚ್ಚಪ್ಪ, ಚಿಕ್ಕಿ(ಕ) ನಾಯಕನಹಳ್ಳಿ ಸೀಮೆಗೆ ಕಂದಿಕೆರೆ ಚೆನಮಲ್ಲಪ್ಪನ ಚೆನ್ನಣ್ಣ, ವಸ್ತಾರೆ ಬೇಲೂರ ಸೀಮೆಗೆ ಪಟ್ಟದ ಸೆಟ್ಟಿಗಳು, ಸಾಮಿಸೆಟ್ಟಿ, ಮಲೆಯಪ್ಪ, ಹಂಪೆ ಚನ್ನಪ್ಪ, ದುಮ್ಮಿ ವಿರಕ್ತೈಯ, ಹಾಸನದ ಸೀಮೆಗೆ ಅವಿಸೆಟ್ಟಿ, ಕೆಂಪಣ್ಣಸೆಟ್ಟಿ, ದೇಪಿಸೆಟ್ಟಿ, ಪದುಮಣ್ಣ, ನರಸಿಂಹಪುರದ ಸೀಮೆಗೆ ಕಂಕಣದ ಗೋಲುಪ, ನಿಖರದ ಕೋಟುರಸೆಟ್ಟಿ, ಕೊಡಲಿಪೇಟೆಗೆ ಹೆಮ್ಮಲ ರೇವಣ್ಣ, ಬಾಳೇಕಾಯಿ ಬಸಪ್ಪ, ಕಲ್ಲಹಳಿ (ಕಲ್ಲಹಳ್ಳಿ) ಪರುವಿಸೆಟಿ, ಜಾವಣಿಗೆ ಸ್ಥಳಕ್ಕೆ ಮೊರಲೆ ಚಿಕ್ಕಣ್ಣ, ಗೌರಸೆಟ್ಟಿ ಸಿದ್ಧಣ್ಣ, ದೊಡೋಡೇರು ಕಳಸ್ಯೆಯನ ಬಗೆ ಶಿವಣ್ಣನ ಚೆನ್ನಯ್ಯ ಹಚಗುಳದ ಲೋಕ್ಕಿಸ್ಥಳಕ್ಕೆ ವೀರದಿಮ್ಮಗೌಡ, ಬೆಂಡಗದ ಸ್ಥಳಕ್ಕೆ ಗೌಡಗಳೂ ಮಗಣ ಮೆನೆಮೇಲಂಣ ಕೊತ್ತಿಬಸವಪ್ಪ, ಗೋಣಕಲಸೀಮೆಗೆ ತಂಮ್ಮಿಯಕ್ಕನ ಲಿಂಗಣಗೌಡ ಮಲ್ಲಣ್ಣ, ತೊಗರಿಹಂಕಲ ಚೆನ್ನಣ್ಣ ಮುಂತಾದ ಮಹಾನಾಡುಗಳ ಗೌಡುಗಳು ಕೂಡಿ ಬರೆಸಿಕೊಟ್ಟ ದಾನಪಟ್ಟೆ ಕ್ರಮ ಏನೆಂದರೆ - ಲೊಕ್ಕಿ ಕಟ್ಟೆಗೆ ಬಂದಂಥಾ ಉಭಯ ಮಾರ್ಗದಲ್ಲಿ(ಬರುವ-ಹೋಗುವ)ಹೇರು ಗಡುಚು (ಭಾರವಾದ) ಬದಿಸ್ತನ ನಡೆವೊಂದಕ್ಕೆ ೧....ವೀಸ (ಧಾನ್ಯ ಮುಂತಾದ ವಸ್ತುಗಳಿರಬಹುದೆ?) ಭೂಸ ಬದ್ದಿಸಿದ ನಡೆವೊಂದಕ್ಕೆ ಅರೆ ವೀಸದಂತೆ ಪಾರಂಪರ್ಯವಾಗಿ ಸೂರ್ಯಚಂದ್ರಾದಿಗಳಿರುವ ತನಕ ಫಾಳಿಪೂಜೆಮಠಕ್ಕೆ ಮಿರಾಸಿಯ (ಭತ್ಯ) ಮಾಡಿ ಕೊಟ್ಟ ದಾನಪತ್ರದ ಸಾರವನ್ನು ಹೇಳಬಹುದಾಗಿದೆ.

ಅದೇ ಮಠಕ್ಕೆ ಸಂಬಂಧಿಸಿದ ಮತ್ತೊಂದು ಶಾಸನದ ಕಾಲ ಕ್ರಿ.ಶ.೧೭೧೭. ಆ ತಾಮ್ರ ಶಾಸನದಲ್ಲಿ ಶ್ರೀಶೈಲ ಅಥವಾ ಶ್ರೀಪರ್ವತದ ವೀರಭಿಕ್ಷಾವೃತ್ತಿ ಮಠದ ಉದಾನ ಸ್ವಾಮಿಯವರು ಫಾಳಿಪೂಜೆ ಫಲಹಾರ ಮಠದ ಸ್ವಾಮಿಯವರಿಗೆ ಬರೆದ ಪತ್ರ ಹೀಗಿದೆ. ಸಮಸ್ತಭುವನ್ನಾ-ರಾಜರಕ್ತಾಚಲ ಸ್ಥಾಪನಾಚಾರ್ಯರು, ಇಂದ್ರಾದಿ ದೇವಗಣ, ಶ್ರೀಗಣ ರಾಜಗಣ, ರಾಕ್ಷಸಗಣ ಮುಂತಾದ ಗಣಗಳ ಗುಂಪಿನಿಂದ ಕೂಡಿದ ಚತುರಾಚಾರ್ಯ ಪಟ್ಟಸಿಂಹಾಸನ ರೂಢರಾದ, ಹನ್ನೆರಡು ಯೋಜನ ಪರ್ವತದ ಮಧ್ಯೆ ಉದ್ಭವಿಸಿದ ಶ್ರೀವಿರುಪಾಕ್ಷಲಿಂಗಕ್ಕೆ ಸಮಯಾಚಾರ ಮೂರ್ತಿಗಳು, ಆದಿಗದ್ದಿಗೆ ಶ್ರೀಗುರು ದತ್ತಾತ್ರೇಯ ಪಳಾರ ಮಠದ ಸ್ವಾಮಿಯವರಿಗೆ, ಶ್ರೀ ಸ್ವಯಂಭು ಮಹಾಮಲ್ಲಿಕಾರ್ಜುನ ದೇವರ ಸಂಪ್ರದಾಯಕರಾದ, ಪೃಥ್ವಿಗೆ ಭೂಕೈಲಾಸದಂತಿರುವ ಶ್ರೀಶೈಲ ಪಂಚಮಠ ಪಂಚಗೃಹಕ್ಕೆ ಮುಖ್ಯರಾದ ಶ್ರೀ ನಂದಿನಾಥ, ಶ್ರೀ ಭೃಂಗಿನಾಥ ಶ್ರೀವೀರಭದ್ರ ದೇವರು ಮುಖ್ಯರಾದ ಶ್ರೀಗಿರಿಸೂರ್ಯಸಿಂಹಾಸನಕ್ಕೆ ಕಾರಣಕರ್ತರಾದ ಶ್ರೀ ವೀರಶೈವ ಪ್ರಸನ್ನಾ ಶ್ರೀವೀರಭಿಕ್ಷಾವೃತ್ತಿ ಉದಾನ ಸ್ವಾಮಿಯವರು ಶಾಲಿವಾಹನ ಶಕೆ ೧೬೪೦ರ ಹೇವಿಳಂಬಿ ಸಂವತ್ಸರ ಚೈತ್ರ ಶುದ್ಧ೧೦ ಗುರುವಾರ ಕನ್ನುಲ್ಲಾ ಬಾಬಾನ ದೊರೆಗಳು ಮತ್ತು ಉದಾನೆ ವೀರಾಭಿಕ್ಷವೃತ್ತಿಗಳು

ಬರೆಸಿಕೊಟ್ಟ ತಾಮ್ರದ ದಾನಪತ್ರದ ಕ್ರಮ - ಏನೆಂದರೆ ಪರ್ವತದ ಸಿಂಹಾಸನ ಗಾಳಿ ಪೂಜೆ ಮಠ ಕೂಡಿ, ಗಾಳಿಪೂಜೆಮಠ ಪರ್ವತವೆ ಕೂಡಿ ಇವರು ಅವರು ದೇಹಾನುಬಂದಿಗಳಾದ ಕಾರಣ, ಹಿರೇಹೊಳೆ ಕೃಷ್ಣಾನದಿಯಿಂದ ದಕ್ಷಿಣದಿಕ್ಕಿನ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿರುವ ಪರ್ವತವನ್ನು ಹೊಂದಿರುವಂಥ, ಸೂತ್ರಧಾರಿಗಳಾದಂತಾ ಪೀಠದವರಾದ ಚರಂತಿಗಳು, ಅರರ್ರಿರ್ರು, ಶೆಟ್ಟಿ ವರ್ತಕರು, ಗೌಡರುಗಳು, ರೆಡ್ಡಿ ವಕ್ಕಲತನದವರು, ಕುಂಚ್ಚಿಗರು, ಕಡಿವೆುಂಜನ ಸಹ ನೆಡಕೊಳ್ಳುವಂತಹವರು ಗಾಳಿಪೂಜೆ ಗಿರಿಪಟ್ಟದ ಸ್ವಾಮಿಯವರಿಗೆ ಕಾಣಿಕೆ, ಕಪ್ಪ ಕೊಡತಕ್ಕದು. ಶ್ರೀ ಪರ್ವತಕ್ಕೆ ಕೊಡುವ ಕೆಲಸವಿಲ್ಲ. ಸದರಿ ಈ ಮೂರು ದಿಕ್ಕಿನಲ್ಲಿರುವ ಸುಡುಗಾಡು ಸಿದ್ಧರು, ಜೆಡೆಜೋಗಿಗಳು, ಜಂಗಲ್ಲೆರ್ರು, ಪಾಕನಾಟ್ಟಿಮರಿನ ಗೊಲ್ಲರು, ಹೆಳವರು, ಉಪಿನಾತ್ರಂಗಳರು, ಮಾರ್ರಿಯವರು, ಹಾಲುವಕ್ಕಿಯವರು, ಪಂಡರು, ಗಣಾಯಿತ್ತಾದವರು, ಕಾಡಶಿದ್ದರು, ಗಾರ್ದಪ ಗೊಲ್ಲರು, ಮುಂತಾದವರು ಗಾಳಿಪೂಜೆಪೀಠದ ಸ್ವಾಮಿಯವರಿಗೆ ಕಪ್ಪ ಕಾಣಿಕೆ ಕೊಟ್ಟು ಎಲ್ಲೆದಾನೂಹಾ ದೀಪಾರಾಧನೆ ನಡೆಸಿಕೊಂಡು ಹೋಗತಕ್ಕದ್ದು. ಇವರಿಂದ ಇವರ ಜಾಗಗಳಲ್ಲಿ ಕಾಣ್ಕೆ ತೆಗೆದುಕೊಂಡರೆ ಶ್ರೀಶೈಲ ಸೂರ್ಯಸಿಂಹಾಸನಕ್ಕೆ ದೂರವಾದಂತೆಯೆ ಸರಿ. ಗಾಳಿಪೂಜೆ ಪೀಠದ ಸ್ವಾಮಿಯವರಿಗೆ ನಮಸ್ಕರಿಸಿ, ವೀರಭಿಕ್ಷವೃತ್ತಿ ಉದಾನೆ ಸ್ವಾಮಿಯವರು ಬೆಳ್ಳಿ ಪಾಲಿಕೆ, ಮುತ್ತಿನ ಕಂಠಿ, ಬಂಗಾರದ ಕೊಡೆ, ವೊಟಬೆಯ (?) ಚಾಮರಗಳು, ಮಕರತೋರಣ ಪಾಯಿಮ್ರುತ್ತುಪು,ಮುಕ್ಕಂಣ ವೈಜ್ಯ ಬಸವನಡ್ಯೆಕ್ಕ, ನಂದಿಧ್ವಜ, ಭೇರಿಡ್ಯೆಂಕ ಪಂಚವಾದ್ಯ ಮುಂತಾದವುಗಳನ್ನು ದಾನವಾಗಿ ನೀಡಿದುದನ್ನು ಚಪ್ಪೊಗೊಂಡಿನ ಪ್ರಕಾರ (ತಾಮ್ರ ಪತ್ರದ ಪ್ರಕಾರ) ಬರೆಸಿಕೊಟ್ಟಿರುವುದಾಗಿ ಹೇಳಿದೆ. ಅಲ್ಲದೆ ಕಪ್ಪ, ಕಾಣಿಕೆ ತೆಗೆದುಕೊಂಡರೆ ಸೂರ್ಯಸಿಂಹಾಸನಕ್ಕೆ ದೂರವಾದಂತೆ - ಶ್ರೀ ಮಲ್ಲಿಕಾರ್ಜುನ ದೇವರಿಗೆ ತಪ್ಪಿ ನಡೆದಹಾಗೆ, ಕಾಶಿಯಲ್ಲಿ ಗೋಹತ್ಯೆ, ಶಿಶುಹತ್ಯೆ, ಬ್ರಹ್ಮಹತ್ಯೆ, ಸ್ತ್ರೀಹತ್ಯೆ, ಅಶ್ವಹತ್ಯ ಮಾಡಿದ ಹಾಗೆ ಎಂದು ಎಲ್ಲರ ಸಮ್ಮತಿಯಿಂದ ಬರೆಸಿಕೊಟ್ಟ ದಾನ ಪತ್ರದ ವಿವರವನ್ನು ಹೇಳಿದೆ.

ಇದಲ್ಲದೆ ಈ ಪತ್ರಕ್ಕೆ ತ್ರಿಮೂರ್ತಿಗಳು, ಸೂರ್ಯಚಂದ್ರರು, ಅಷ್ಟದಿಕ್ಪಾಲಕರು ಸಾಕ್ಷಿಗಳು ಎಂದು ಹೇಳಿದೆ. ಈ ದಾನಕ್ಕೆ ಕಂನುಲ್ಲು ಪೇಟೆ ಮಲ್ಲಪ್ಪ ಶೆಟ್ಟರ ವನವೀರಪ ಶೆಟ್ಟರ, ನಂಜಪ್ಪ ಶೆಟ್ಟರ ಮತ್ತು ರೆಡ್ಡಿಮಲ್ಲಪ್ಪ ಇವರ ಸಮ್ಮತಿ ಸಾಕ್ಷಿಯಿಂದ ದಾನ ಮಾಡಿದೆ. ಈ ದಾನ ಶಾಸನವನ್ನು ಕಂಡರಿಸಿದವನು ಮಲ್ಲಪನ ಮಗ ವೀರಪ್ಪ ಎಂದು ವಿವರ ಇದೆ.

ಮೇಲಿನ ನಾಲ್ಕು ಶಾಸನಗಳ ಹಿನ್ನೆಲೆಯಲ್ಲಿ ಈ ಫಲಹಾರ ಮಠವು, ೧೬೯೮ರ ಶಾಸನ ಪರಮಹಂಸ ಪರಿವ್ರಾಜಕಾಚಾರ್ಯ ಮುಂತಾದ ವಿಶೇಷಣಗಳಿಂದ ಶ್ರೀಶೈಲ ಪರ್ವತದ ವೀರಭಿಕ್ಷಾವೃತ್ತಿಗಳ ಮಠದ ಪಟ್ಟದ ಉದಾನ ಸ್ವಾಮಿಯವರನ್ನು ಉಲ್ಲೇಖಿಸಿದೆ. ಘಾಳಿಪೂಜೆ, ಚಂದ್ರದ್ರೋಣ ಪರ್ವತದ ಉಲ್ಲೇಖವೂ ಬಂದಿದೆ.ಈ ಫಲಹಾರ ಮಠವು ೧೭೦೭ರಲ್ಲಿ ಚೆನ್ನವೀರದೇವರ ಮಠ ಹಾಗೂ ಗಾಳೀಪೂಜೆ ಮಠ ಎಂಬ ಎರಡು ಹೆಸರುಗಳಿಂದಲೂ ಗುರುತಿಸಿ ಕೊಂಡಿತ್ತು. ಅಲ್ಲಿನ ದೇವರನ್ನು ಫಲಹಾರ ದೇವರು ಎಂದು ಗುರುತಿಸಲಾಗಿತ್ತು. ಕ್ರಿ.ಶ.೧೭೦೨ರ ಶಾಸನ ಶ್ರೀ ಶೈಲ ಪಂಚಮಠದ ಸೂರ್ಯ ಸಿಂಹಾಸನವನ್ನು ಹಸರಿಸಿದೆ. ಗಾಳಿಪೂಜೆ ಹನ್ನೆರಡು ಯೋಜನ ಪರ್ವತವೆಂದು ಹೇಳಿದೆ. ಇದರಲ್ಲಿ ಆದಿಗದ್ದಿಗೆ ಶ್ರೀಗುರುದತ್ತಾತ್ರೇಯ ಫಳಹಾರ ಮಠವೆಂದು ಕರೆಯಲಾಗಿದೆ. ಹಾಗೂ ಫಲಹಾರ ಮಠಕ್ಕೂ ಗಾಳಿಪೂಜೆ ಮಠಕ್ಕೂ ಯಾವ

ವ್ಯತ್ಯಾಸವೂ ಇಲ್ಲವೆಂದೂ ಎರಡು ಒಂದೇ ಎಂದು ಹೇಳಿರುವುದು ಗಮನಾರ್ಹ. ಕ್ರಿ.ಶ.೧೭೧೭ರ ಶಾಸನ ಗಾಳಿಪೂಜೆ ಗಿರಿಪಟ್ಟದ ದೇವರೆಂದು ಗಾಳಿಪೂಜೆಪೀಠ ಎಂಧು ಕರೆಯಲಾಗಿದೆ. ಈ ದೇವರಿಗೆ ಮತ್ತು ಮಠಕ್ಕೆ ನಡೆದುಕೊಳ್ಳಬೇಕಾದ ಒಕ್ಕಲುಗಳು ಉತ್ತರದಲ್ಲಿ ಕೃಷ್ಣಾನದಿಯಿಂದ ದಕ್ಷಿಣಕ್ಕೆ ಇರುವ ಪ್ರಾಂತ್ಯಗಳ ಚರಂತರು, ಶೆಟ್ಟಿ ವರ್ತಕರು, ಗೌಡರು, ರೆಡ್ಡಿಗಳು, ಕುಂಚ್ಟಿಗರು ಮೊದಲಾದವರನ್ನು ಹೆಸರಿಸಿಧೆ.

ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಹಲಸುಬಾಳುವಿನ ಈ ನಾಲ್ಕು ತಾಮ್ರಶಾಸನಗಳಲ್ಲಿ ಉಭಯ ಮಠಗಳು ಒಂದಾಗಿರುವುದನ್ನು ಉಲ್ಲೇಖಿಸುತ್ತವೆ. ಆದರೆ ಈ ಎರಡೂ ಮಠಗಳು ಯಾವ ಸಂದರ್ಭದಲ್ಲಿ ಒಂದುಗೂಡಿ ನಡೆಯುವಂತೆ ಮಾಡಿದ ಸಂದರ್ಭ ಮತ್ತು ಆದಕ್ಕೆ ಕಾರಣಗಳೇನು ಎಂಬುದನ್ನು ತಿಳಿಸುವ ಉಲ್ಲೇಖವಿಲ್ಲ.

ಈ ಅಂಶಗಳನ್ನು ಗಮನಿಸಿದಾಗ ಶ್ರೀ ಶೈಲ ಪೀಠಕ್ಕೆ ಸೇರಿದ ಈ ಶಾಖಾ ಮಠವು ಅವಧೂತ ಸಂಪ್ರದಾಯದ ಪ್ರಭಾವವನ್ನೂ ಮೇಳೈಸಿಕೊಂಡು ಬಾಬಾಬುಡನ್ ಗಿರಿಯ ದತ್ತ ಪೀಠದೊಂದಿಗೆ ಸಂಬಂಧವನ್ನು ಹೊಂದಿದ್ದು ಅವಧೂತ ಸಂಪ್ರದಾಯದ ಕಾರ್ಯನಿರ್ವಹಿಸುತ್ತದೆ. ಇದೊಂದು ಗಮನಾರ್ಹ ಬೆಳೆವಣಿಗೆ. ಆ ಕಾಲಕ್ಕೆ ಚಂದ್ರದ್ರೋಣ ಪರ್ವತದಲ್ಲಿ ದತ್ತಾತ್ರೇಯ ಪೀಠವಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ನೊಳಂಬ ದೇವಾಲಯಗಳು ಮತ್ತು ಶಾಸನೋಕ್ತದಾನ ದತ್ತಿಗಳು

ನೊಳಂಬರು ಆರಂಭದಲ್ಲಿ ಬಾದಾಮಿ ಚಾಲುಕ್ಯರ ಮತ್ತು ಗಂಗರ ಸಾಮಂತರಾಗಿ ಆಳ್ವಿಕೆ ಆರಂಭಿಸಿದರು. ಮುಂದೆ ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ ನಿಷ್ಠಾವಂತ ಮಾಂಡಲೀಕರಾಗಿ ತಮ್ಮ ಅಧಿರಾಜರ ಅನೇಕ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ಅನುಸರಿಸಿದ್ದಾರೆ. ನೊಳಂಬರು ತಾವು ನಿರ್ಮಿಸಿದ ದೇವಾಲಯಗಳನ್ನು ರಚಿಸಲು ಆ ಕಾಲದ ವಾಸ್ತು ಶೈಲಿಯನ್ನು ಅನುಸರಿಸಿದ್ದರೂ ಸಹ ತಮ್ಮದೇ ಆದ ನೊಳಂಬ ಶೈಲಿಯನ್ನು ಗುರುತಿಸಿಕೊಂಡಿದ್ದಾರೆ.

ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಸುಮಾರು ನೂರಕ್ಕೂ ಹೆಚ್ಚು ನೊಳಂಬರ ಶಾಸನಗಳು ದೊರತಿವೆ. ಅವುಗಳಲ್ಲಿ ಶೇಕಡ ೩೫ರಿಂದ ೪೦ರಷ್ಟು ಶಾಸನಗಳು ವೀರಗಲ್ಲು, ತುರುಗಾಳಗ, ಪೆಂಡಿರುಡೆಯಚ್ಚು, ಊರಳಿವುಗಳಿಗೆ ಸಂಬಂಧಿಸಿದ ಶಾಸನಗಳಾಗಿವೆ. ಇನ್ನುಳಿದವುಗಳಲ್ಲಿ ಸುಮಾರು ಹತ್ತರಷ್ಟು ಯತಿಗಳಿಗೆ, ಕೆರೆಗಳಿಗೆ ಸಂಬಂಧಿಸಿದ ಶಾಸನಗಳು. ಮತ್ತೆ ಕೆಲವು ಶಾಸನಗಳು ಬಿಸಿಲು, ಗಾಳಿ, ಮಳೆಗೆ ಸಿಲುಕಿ ಶಿಥಿಲವಾಗಿ ನಶಿಸಿವೆ ಅಥವಾ ಅಪೂರ್ಣ ಶಾಸನಗಳಾಗಿವೆ. ಉಳಿದವು ದಾನ ಶಾಸನಗಳು. ಈ ದಾನ ಶಾಸನಗಳು ದೇವಾಲಯ ರಚನೆಗಳನ್ನು ಉಲ್ಲೇಖಿಸಿವೆ. ಆದರೆ ಆ ಶಾಸನಗಳನ್ನು ಸ್ಪಷ್ಟವಾಗಿ ಇಂತಹುದೇ ವಿಷಯದ ಗುಂಪಿಗೆ ಸೇರುತ್ತವೆಂದು ವಿಂಗಡಿಸುವುದು ಕಷ್ಟ. ಒಂದೇ ಶಾಸನದಲ್ಲಿ ದೇವಾಲಯ ನಿರ್ಮಾಣದ ವಿಷಯವನ್ನೂ ಕೆರೆ ಕಟ್ಟಿಸಿದುದನ್ನೂ, ಸ್ಥಾನಿಕರಾಗಿದ್ದ ಯತಿಗಳ ಬಗ್ಗೆ ಮತ್ತು ಭಟಾರರು ಮೊದಲಾದ ವಿಷಯಗಳ ಉಲ್ಲೇಖವಾಗಿರುವುದುಂಟು.

ನೊಳಂಬರ ಶಾಸನಗಳಲ್ಲಿ ಇತರ ರಾಜ ವಂಶೀಯರ ಶಾಸನಗಳಂತೆ ರಾಜರ ಪ್ರಶಸ್ತಿ, ಶೌರ್ಯ, ಬಿರುದು, ಪರಾಕ್ರಮ ಮುಂತಾದ ಗುಣ ವಿಶೇಷಗಳ ಪರಿಚಯದ ನಂತರ ದೇವಾಲಯದ ರಚನೆ, ಮೂರ್ತಿಶಿಲ್ಪಕ್ಕೆ ಸಂಬಂಧಿಸಿದ ವಿವರಗಳು ಉಲ್ಲೇಖಿತವಾಗಿವೆ. ಕೆಲವು ಶಾಸನಗಳಲ್ಲಿ ದೇವಾಲಯದ ರಚನೆಯ ಕಾಲದ ವಿವರ ತಿಳಿಯದಿದ್ದರೂ ಲಿಪಿಯ ಸ್ವರೂಪದ ಆಧಾರದ ಮೇಲೆ ಸರಿ ಸುಮಾರು ಕಾಲವನ್ನು ಗುರುತಿಸಬಹುದು. ನೊಳಂಬರ ಆರಂಭದ

ರಾಜ್ಯದಲ್ಲಿ ಒಬ್ಬನಾದ ಸಿಂಹಪೋತನಿಂದ ಹಿಡಿದು ಮುಂದೆ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಜಯಸಿಂಹನ ಕಾಲದವರೆಗೆ ದೇವಾಲಯದ ರಚನೆಗಳ ವಿಷಯ ಅವ್ಯಾಹತವಾಗಿ ದೊರೆಯುತ್ತವೆ.

ನೊಳಂಬರ ದೇವಾಲಯಗಳ ವಾಸ್ತು ರಚನೆಯಲ್ಲಿ ಗಂಗ ಮತ್ತು ರಾಷ್ಟ್ರಕೂಟರ ಪ್ರಭಾವವಿದ್ದರೂ, ದೇವಾಲಯದ ರಚನೆಗಳನ್ನು, ಶಿಲ್ಪಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಗಂಗರ ರಚನೆಗಳಿಗಿಂತ, ಶಿಲ್ಪಗಳಿಗಿಂತ ಭಿನ್ನವಾಗಿರುವುದನ್ನು ಗಮನಿಸಬಹುದು. ೧೯೩೦ ಎಂ.ಎ.ಆರ್. ವರದಿಯಲ್ಲಿ ಅದರ ಸಂಪಾದಕರು ಆವನಿಯ ರಾಮೇಶ್ವರ ದೇವಾಲಯವನ್ನು ದೀವಬ್ಬರಿಸಿ ಕಟ್ಟಿಸಿರಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಹಾಗೇ ಬೆಟ್ಟದ ಮೇಲಿರುವ ಸೀತಾ ದೇವಾಲಯದ ವಾಸ್ತು ವಿವರಗಳನ್ನೂ ನೀಡಿ ದೇವಾಲಯದ ಬಾಗಿಲವಾಡ ನೊಳಂಬರ ಕಾಲದ್ದೆಂದು ಹೇಳಿರುತ್ತಾರೆ. ೧೯೩೨ರ ಎಂ.ಎ.ಆರ್ ವರದಿಯಲ್ಲಿನಂದಿಯಭೋಗ ನಂದೀಶ್ವರ ದೇವಾಲಯದ ಆವರಣದಲ್ಲಿರುವ ಅರುಣಾಚಲೇಶ್ವರ ದೇವಾಲಯವನ್ನು ನೊಳಂಬರು ಭೋಗ ನಂದಿ ದೇವಾಲಯದ ಅನುಕರಣ ರೀತಿಯಲ್ಲಿ ಕಟ್ಟಿದ್ದಾರೆಂಬ ಅಭಿಪ್ರಾಯಪಟ್ಟಿದ್ದಾರೆ. ೧೯೩೫ರ ಎಂ.ಎ.ಆರ್. ವರದಿಯಲ್ಲಿ ಆವನಿಯ ಶತ್ರುಘ್ನೇಶ್ವರ, ಲಕ್ಷ್ಮಣೇಶ್ವರ, ಮಾನಸ್ತಂಭ ಇವು ನೊಳಂಬರ ರಚನೆಗಳೆಂದು ಶಾಸನಾಧಾರಗಳನ್ನು ಕೊಟ್ಟಿರುತ್ತಾರೆ.

ನೊಳಂಬರು ನಿರ್ಮಿಸಿದ ದೇವಾಲಯಗಳ ವಾಸ್ತು ರಚನೆಗಳ ಬಗ್ಗೆ ಹೇಳುವುದಾದರೆ ಆವನಿಯ ಲಕ್ಷ್ಮಣೇಶ್ವರ ದೇವಾಲಯ ವಿಶಾಲವಾದ ಗರ್ಭಗೃಹದ ಒಳಗೋಡೆಗೆ ಹೊಂದಿಕೊಂಡಂತೆ ಹಾಗೂ ಮೇಲಿನ ಶಿಖರದ ಭಾರವನ್ನು ಹೊರಲು ಅನುಕೂಲವಾಗುವಂತೆ ನಾಲ್ಕು ಮೂಲೆ ಕಂಬಗಳ ಜೊತೆಗೆ ಮಧ್ಯದಲ್ಲಿ ಮೂರು ಕಂಬಗಳನ್ನು ಪ್ರತ್ಯೇಕವಾಗಿ ಬಳಸಲಾಗಿದೆ. ದೇವಾಲಯದ ಹೊರ ಭಾಗಗಳಲ್ಲಿ ಪ್ರಮುಖವಾದದ್ದು ಅಧಿಷ್ಠಾನ. ನೊಳಂಬರ ಬಹುತೇಕ ದೇವಾಲಯದ ಅಧಿಷ್ಠಾನಗಳು ಸರಳ ನೇರವಾಗಿರದೆ ಸಂಕೀರ್ಣವಾಗಿವೆ ಅಂದರೆ ಶಿಕರದಲ್ಲಿ ಬಂದಿರುವ ಕೂಟ, ಶಾಲ, ಪಂಜರಗಳಿಗನುಗುಣವಾಗಿ ಅಧಿಷ್ಠಾನವೂ ಸಹ ಹಿಂದೆ ಮುಂದೆ ಸರಿದಿದೆ. ಈ ಅಧಿಷ್ಠಾನಗಳು ಎತ್ತರವಾಗಿದ್ದು ಬೇರೆ ಬೇರೆ ಭಾಗಗಳನ್ನು ಹೊಂದಿವೆ. ಬಾದಾಮಿ ಚಾಲುಕ್ಯರಂತೆ ಪೂರ್ಣ ಕಪೋತ ಬಂಧ ಅಧಿಷ್ಠಾನಗಳನ್ನು ಬಳಸಿರುವುದಿಲ್ಲ. ಇವರು ಸಮಿಶ್ರ ಅಧಿ ಷ್ಠಾನವನ್ನು ಬಳಸಿರುತ್ತಾರೆ. ನಂದಿಯ ಭೋಗನಂದೀಶ್ವರ ದೇವಾಯವನ್ನು ಅನುಕರಿಸಿ ಕಟ್ಟಲಾಗಿರುವ ಅರುಣಾಚಲೇಶ್ವರ ದೇವಾಲಯದ ಅಧಿಷ್ಠಾನದಲ್ಲಿ ವೃತ್ತಕುಮುದ ಹಾಗೂ ಕಪೋತವನ್ನು ಬಳಸಲಾಗಿದೆ. ಲಕ್ಷ್ಮಣೇಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳಲ್ಲಿ ಎರಡು ಉಬ್ಬು ಕಂಬಗಳ ಮಧ್ಯೆ ಚಿಕ್ಕ ಕೋಷ್ಠಗಳನ್ನು ಬಿಡಿಸಿದ್ದು ಅವುಗಳ ಮೇಲೆ ದೇವಾಲಯದ ಶಿಖರದ ಮಾದರಿಗಳನ್ನು ಬಿಡಿಸಲಾಗಿದೆ. ಕೋಷ್ಠಗಳಲ್ಲಿ ಮೂರ್ತಿಗಳನ್ನಿಡುವ ಬದಲಿಗೆ ಕೆಲವು ದೇವಾಲಯಗಳಲ್ಲಿ ವಾತಾಯನ, ಬಳ್ಳಿ ಅಲಂಕಾರ ಹಾಗೂ ದೇವವಿಗ್ರಹಗಳನ್ನು ಸ್ಥಾಪಿಸಿರುತ್ತಾರೆ.

ನೊಳಂಬರ ಅನೇಕ ದೇವಾಲಯಗಳ ಪ್ರವೇಶ ದ್ವಾರದ ಎರಡೂ ಬದಿಯಲ್ಲಿ ಒಂದು ಕಡೆ ಗಂಗಾ ಮತ್ತೊಂದು ಕಡೆ ಯಮುನಾ ಶಿಲ್ಪಗಳು ಬಿಡಿಸಿರುವುದನ್ನು ಕಾಣುತ್ತೇವೆ. ಎದ್ದು ಕಾಣುವ ಶಂಕನಿಧಿ, ಪದ್ಮನಿಧಿ, ಶಿಲ್ಪಗಳು ನೊಳಂಬರ ಕಲಾವಂತಿಕೆಗೆ ಸಾಕ್ಷಿಯಾಗಿದೆ. ನವರಂಗದ ಪ್ರವೇಶ ದ್ವಾರವನ್ನು ಅನೇಕ ಬಗೆಯ ದ್ವಾರ ಶಾಖೆಗಳಿಂದ ಅಲಂಕರಿಸಿದ್ದಾರೆ. ಆವನಿಯ ಕೆಲವು

ದೇವಾಲಯಗಳ ಬಾಗಿಲವಾಡ ಸರಳವಾಗಿದ್ದು ಸ್ತಂಭ ಶಾಕೆ, ಸಿಂಹ ಶಾಕೆ, ಬಳ್ಳಿ ಶಾಕೆಯಂತಹ ಮೂರು ಶಾಖೆಗಳು ಮಾತ್ರ ಇವೆ.

ನೊಳಂಬರ ದೇವಾಲಯಗಳೊಳಗಿನ ಕಂಬಗಳು, ಬ್ರಹ್ಮಕಾಂತ, ವಿಷ್ಣುಕಾಂತ ಮತ್ತು ರುದ್ರಕಾಂತವೆಂಬ ಮೂರು ಮಾದರಿಗಳಲ್ಲಿ ಇವೆ. ಆದರೆ ವಿದ್ವಾಂಸರು ನಾಲ್ಕು ವಿಭಾಗ ಮಾಡಿರುತ್ತಾರೆ. ಬ್ರಹ್ಮಕಾಂತ ರೀತಿಯ ಕಂಬಗಳನ್ನು ನಂದಿಯ ಭೋಗನಂದಿ, ಹೇಮಾವತಿಯ ಸಿದ್ಧೇಶ್ವರ, ದೊಡ್ಡೇಶ್ವರ, ಆವನಿಯ ಲಕ್ಷ್ಮಣೇಶ್ವರ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಇವಿಷ್ಟು ನೊಳಂಬರ ದೇವಾಲಯಗಳಿಗೆ ಸಂಬಂಧಿಸಿದ ಸಂಕ್ಷಿಪ್ತ ವಿವರಗಳು.

ಕೊಡುಗೆ ಮತ್ತು ದಾನ ದತ್ತಿಗಳು

ದೇವಾಲಯಗಳು ಜನ ಜೀವನದ ಒಂದು ಸಾಮಾಜಿಕ ಸಂಸ್ಥೆ. ದೇವಾಲಯಗಳನ್ನು ಕಟ್ಟಿಸುವುದು, ಕಟ್ಟಿಸಿದ ದೇವಾಲಯಗಳ ಜೀರ್ಣೋದ್ಧಾರ, ದೇವಾಲಯಗಳಲ್ಲಿ ನಡೆಯಬೇಕಾದ ಪೂಜೆ, ಪುನಸ್ಕಾರಕ್ಕೆ ಅರಸರು, ರಾಣಿಯರು, ಅವರ ಕೈಕೆಳಗಿನ ಅಧಿಕಾರಿಗಳು, ಹಾಗೂ ಪ್ರಜೆಗಳು ದಾನ ದತ್ತಿಗಳನ್ನು ನೀಡಿ ಧಾರ್ಮಿಕತೆಯನ್ನು ಘೋಷಿಸಿಕೊಂಡು ಬಂದಿದ್ದಾರೆ. ಅಲ್ಲದೆ ಕೆರೆ ಕೊಳ ಕಟ್ಟಿಸುವುದು ಮತ್ತು ದುರಸ್ತಿ ಮುಂತಾದ ನಿರ್ವಹಣೆಗಾಗಿಯೂ, ಕಾಳಗ, ಊರಳಿವಿನಲ್ಲಿ, ತುರುಗಾಳಗದಲ್ಲಿ ಜೀವ ತೆತ್ತವರ ನೆನಪಿಗಾಗಿಯೂ ದಾನ ದತ್ತಿಗಳನ್ನು ನೀಡಿರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಇಲ್ಲಿ ಗುರುತಿಸಲಾಗಿದೆ.

ಆವನಿಯ ಕ್ರಿ.ಶ.ಸು.೯೫೦ಕ್ಕೆ ಸೇರಿದ ಶಾಸನ ಏಕವಾಕ್ಯ ಇರುವ ನೊಳಂಬನ ಆಳ್ವಿಕೆಯಲ್ಲಿ ಪೆರ್ಗಡೆ ಬಸವಯ್ಯನಂಕ ಭಟ್ಟನು ಮಾನಸ್ತಂಭ ಮಾಡಿಸಿರುವುದನ್ನು ಹೇಳುತ್ತದೆ (EC X Mb ೫೯) ಕುರುಬೂರಿನ ಕ್ರಿ.ಶ.೯೫೧ರಲ್ಲಿ ಇದೇ ಅರಸನ ಆಳ್ವಿಕೆಯಲ್ಲಿ ರಾಮ್ಯಯನ ಮಗ ಭೀಮಯ್ಯನು ತಾನು ಕಟ್ಟಿಸಿದ ಭೀಮೇಶ್ವರ ದೇವಾಲಯಕ್ಕೆ ದೇವಭೋಗವಾಗಿ ಖಂಡುಗ ಬೆಳೆಯುವ ಗದ್ದೆಯನ್ನು ದಾನವಾಗಿ ಕೊಟ್ಟ ಉಲ್ಲೇಖ ಶಾಸನದಲ್ಲಿದೆ (EC X Cm 49) ಮಧೂಡಿಯ ಕ್ರಿ.ಶ ೯೫೯ರ ಶಾಸನ ದಿಲೀಪರಸನ ಆಳ್ವಿಕೆಯಲ್ಲಿ ಚಟ್ಟಯ್ಯ ಮತ್ತು ಚಾಮಯ್ಯ ಎಂಬುವವರು ಸತ್ಯಾಗ ವಿಷ್ಣು ಗೃಹಕ್ಕೆ ಕೆಲವು ದಾನ ಕೊಟ್ಟಿದ್ದನ್ನು ಹೇಳುತ್ತದೆ. (SII IX Pt. I. 128)

ಕೋಲಾರ ತಾಲೂಕಿನ ಶಿವಾರ ಪಟ್ಟಣದ ಶಾಸನ ತೊಮ್ಮುವ್ವೋಯನ ಮಕ್ಕಳಾದ ನಾಗಯ್ಯನು, ಕೊಣ್ಡಯ್ಯನು ಶ್ರೀ ಮಣ್ಣಿಮಂಗಲದ ಮಹಾಜನರಿಗೆ ಪದಿನಾಱು ಗದ್ಯಾಣ ಪೊಜ್ಗೊಟ್ಟು ಕೊಂಡದ್ದನ್ನು ಇಬ್ಬರು ಬ್ರಾಹ್ಮಣರಿಗೆ ದಾನ ಮಾಡಿದನ್ನು ಉಲ್ಲೇಖಿಸಿದೆ. (EC X Pt, 2, Kl. 9). ಕ್ಯಾಲನೂರು ಗ್ರಾಮದ ಶಾಸನ 'ಪತ್ಮಂಗೆಱೆಯೊಡೆಯ ವಚ್ಚಗೋತ್ರದ ಕಣ್ಣಮ್ಮಯನ ಮಗ ನಿರುಗಮ್ಮಯ್ಯನುಂ, ಅಕ್ಕನೂ, ಕೆರೆನೂರ ೫೨ ಮಹಾಜನರಿಗೆ ಇಪ್ಪತ್ತು ಗದ್ಯಾಣ ಪೊನ್ಗೊಟ್ಟು ಪಡೆದು ದಾನ ಮಾಡಿದ್ದನ್ನು ಉಲ್ಲೇಖಿಸಿದೆ. (EC X Kl.57) ಇದೇ ತಾಲೂಕಿನ ಮಡಿವಾಳ ಗ್ರಾಮದ ಶಾಸನ ನೊಳಂಬಾಧಿರಾಜನು ಗಂಗರು ಸಾಸಿರವನ್ನಾಳುತ್ತಿರುವಾಗ, ಸತ್ಯ ಶೀಲಾಚಾರ ಸಂಪನ್ನ ಬೆಂಗಡನಾಥ ಶ್ರೀಮಪೊಮ್ಮಲ್ಲವೊಡೆಯ ದುರ್ಗೆಪಾಡಿಯಲ್ಲಿ ಬಾಣ ಅರಸರ ಮೇಲೆ ಯುದ್ಧ ಮಾಡಿ ಹಲವರನ್ನು ಇಱಿದು ಕೊಂದು ಬಿಟ್ಟು ಸತ್ತವನನ್ನು ಮೆಚ್ಚಿ ನೊಳಂಬಾಧಿರಾಜನ ಬಿನ್ನಪದಂತೆ ನೀತಿಮಾರ್ಗ ಪೆರ್ಮಾನಡಿಗಳು

'ಸೂಱೂರನ್ನು ಬಾಳ್ಗಚ್ಚನ್ನಾಗಿ ಕೊಟ್ಟ ವಿಷಯ ಹೇಳುತ್ತದೆ. (EC X Kl.179) ಗಾಂಡ್ಲಹಳ್ಳಿ ಶಾಸನ ಏಕವಾಕ್ಯ ನೊಳಂಬಾಧಿ ರಾಜ ಇರಿವ ನೊಳಂಬ ನೊಲಿಪಯ್ಯನು ಆಳ್ವಿಕೆ ಮಾಡುತ್ತಿದ್ದಾಗ ಶ್ರೀಮತ್ ವಿಕ್ರಮಾದಿತ್ಯ ತಿರುವಯ್ಯನು ಗಂಗರು ಸಾಸಿರವನ್ನಾಳುತ್ತಿರುವಾಗ ಬಜ್ಜವಾಡಿ ಕೆರೆಗೆ ಬಿತ್ತುಕಟ್ಟ ಬಿಟ್ಟಿದ್ದನ್ನು ತಿಳಿಸುತ್ತದೆ (EC X Kl.198) ಮೆದುತಂಬಿಹಳ್ಳಿ ಶಾಸನ, ಪುತ್ತೂರ 'ತುರುಗೊಳೊಳ್ ಸೆತ್ತೊಮ್' ಬಲಿಯಣ್ಣನು ಆ ಸೆಟ್ಟಿಯವರ ಮಗ ನರಪಳ್ಳಜಗ್ಗಟ್ಟಿ (?) ಅರಸು ಊರುಂ ಇಟ್ಟು ಆಯ್ಗುಳ ಕಳನಿಯನ್ನು ದಾನವಾಗಿ ಕೊಟ್ಟ ವಿಷಯ ತಿಳಿಸುತ್ತದೆ (ECX Kl.233).

ಕ್ರಿ.ಶ.೯೫೦ರ ಆವನಿ ಶಾಸನ ದಿಲಿಪರಸನು ಆವನ್ಯಸ್ಥಾನದ ಪನ್ನೆರಡು ಕಿಱುದೆಱೆಯಂ (ತೆರಿಗೆ) ಮಹಾದೇವರಿಗೆ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ (EC X Mb 51) ಕ್ರಿ.ಶ.೯೩೧ ಕುರುಬೂರು ಶಾಸನ ವೀರ ನೊಳಂಬನು ೧೦೮ ಮಹಾಜನರಿಗೆ ೧೫ ಗದ್ಯಾಣ ಹೊನ್ನು ದಾನ ಮಾಡಿದ್ದನ್ನು; ಕ್ರಿ.ಸ.೯೫೦ ಮತ್ತು ೯೫೧ ರ ಇದೇ ಊರಿನ ಶಾಸನಗಳು ಇರಿವ ನೊಳಂಬನು 'ಐಗೊಳ ಪನ್ನಸು' ಬಿಟ್ಟಿದ್ದನ್ನು; ಭೀಮೇಶ್ವರ ದೇವಾಲಯಕ್ಕೆ ದೇವಭೋಗ ನೀಡಿದಂತೆಯೂ ಹೇಳುತ್ತದೆ. ಯಲ್ದೂರು ಶಾಸನದಲ್ಲಿ ಇದೇ ಅರಸನ ಆಳ್ವಿಕೆಯಲ್ಲಿ ಗಾಮುಣ್ಡಸ್ವಾಮಿಯ ಮಗ ಮತ್ತು ತಮ್ಮ ವಾಮಯ್ಯ ದೇವರ್ಗೆ ಖಂಡುಗ ಬೆಳೆಯುವ ಭೂಮಿ ದಾನ ಮಾಡಿದಂತೆ ಉಲ್ಲೇಖಿಸಿದೆ (EC X Mb 108) ಕ್ರಿ.ಶ.೯೬೮ರಲ್ಲಿ ನನ್ನಿ ನೊಳಂಬನ ಆಳ್ವಿಕೆಯಲ್ಲಿ ಉತ್ತನೂರು ಶಾಸನ ಪರಮೇಶ್ವರನ ನಿತ್ಯ ನೈವೇದ್ಯಕ್ಕೆ ಹಾಗೂ ನನ್ದಾ ದೀವಿಗೆಯನ್ನು ಬೆಳಗಲು ನಾಲ್ವತ್ತು ಗದ್ಯಾಣವನ್ನು ಕೊಟ್ಟುಕೊಂಡು ದಾನ ಮಾಡಿದ ಭೂಮಿಯ ಬಗ್ಗೆ ಹೇಳುತ್ತದೆ. (EC X Mb.127) ಕ್ರಿ.ಶ. ೯೬೧ರಲ್ಲಿ ಇರಿವ ನೊಳಂಬನ ಆಳ್ವಿಕೆಯಲ್ಲಿ 'ಶ್ರೀಮತ್ಸಂಬಯ್ಯ ಎಂಬುವವನು ಬಿದಿರೂರ ಕೆರೆಗೆ ಬಿತ್ತುಕಟ್ಟು ಬಿಟ್ಟುದುದನ್ನು (EC X Mb 126); ಕಾಲದ ಉಲ್ಲೇಖವಿಲ್ಲದ ದಿಲೀಪನ ಆಳ್ವಿಕೆಯಲ್ಲಿ ತಿರುವಯ್ಯನ ಮಗ ಚನ್ದ್ರಸೇಕರನು ಮಣ್ಡಿಗಲ್ಲ ಕೆರೆಗೆ ಬಿತ್ತುಕಟ್ಟು ಬಿಟ್ಟಿದ್ದನ್ನು ಕುರುಬರ ಹಳ್ಳಿ ಶಾಸನ ಹೇಳುತ್ತದೆ (EC X MB 198) ಹೆಬ್ಬಣಿಗ್ರಾಮದ ಶಾನಸ 'ಶ್ರೀಮತ್ಪಡೆಯಂಕಕಾರ ನೊಱಂಬಾಧಿರಾಜಂ ಪೆರ್ಬ್ಬಣ್ಣಯಂತಾ.... ಸೂಱೆಕಾಱ ಕಾದಿಯಣ್ಣಂಗೆ ಕೊಟ್ಟೊಡೆ ಪಿರಿಯ ಕೆಱೆ ಒಡವು....ಡೆ ಮಣ್ಡಿಯ ಗಾಮುಣ್ಡನ ಮಗಂ ಪೃಥುವೀರಾವ ಸೆಟ್ಟಿ ಒಡೆವಂ ಕಟ್ಟಿಸಿದೊಡೆ ಮೆಚ್ಚಿ ನೊಳಂಬನ ಬೆಸದೊಳೆ ಪೆರ್ಬ್ಬಣ್ಣಯ ಪೂರ್ಬ್ಬಸಿದ್ಧಾಯ ಪತ್ತು ಗದ್ಯಾಣ ಪೊನ್ನುಂ ಇಟ್ಟೊಱು ಭತ್ತವುಂ ತಿರುವನ್ತಗೆ ಕಾದಿಯಣ್ಣಂ ಕೊಟ್ಟಂ ಒಗ್ಗೆ ಮೂಗಣ್ಡುಗಂ ಗಟ್ದಿ ಕೊಟ್ಟಂಗೆ ಸಲ್ವದು ಎಲ್ಲಾ ಕಾಲಕ್ಕಂ ಹೆಬ್ಬಣಿ ಇನ್ತೀ ಪ್ರವಾಹ ತಪ್ಪ ಸಲ್ಲ -ಕೆಱೆಗೆ ಬಿತ್ತುಕಟ್ಟು ನಡೆವುದು' ಎಂಬುದನ್ನ ತಿಳಿಸುತ್ತದೆ (EC X Mb 208).

ಆವನಿಯ ಕ್ರಿ.ಶ ೯೮೨ ರ ಶಾಸನ ಇಮ್ಮಡಿ ಪೊಳಲ್ಚೋರನ ಮಡದಿ ದೀವಬ್ಬರಿಸಿ ತನ್ನ ಪತಿಯ ಹೆಸರಿನಲ್ಲಿ ಯಶೋರ್ಜ್ಜಿತಮೆನಿಪ ಅಗ್ರಹಾರವನ್ನು ವಿನ್ಯಾಸ ಮಾಡಿಸಿ ತೀರಿಕೊಂಡ ಮಗ ಮಹೇಂದ್ರನ ಹೆಸರಿನಲ್ಲಿ ಕೊಳವನ್ನು, ತನ್ನ ಹೆಸರಿನಲ್ಲಿ ತಟಾಕ, ಈಶಭವನ, ಮುಕುನ್ದಭವನ(ವಿಷ್ಣು)ಗಳನ್ನು ಮಾಡಿಸಿ ಧರ್ಮದಿಂದ ರಾಜ್ಯವಾಳುತ್ತಾ ತನ್ನ ಕಿರಿಯ ಮಗನ ಆಳ್ವಿಕೆಯ ಕಾಲವನ್ನು ನಿರೀಕ್ಷಿಸುತ್ತಾ ಕೃತ್ವಾದೇವಾಯತ ನಮ್ಮಹೇಶ್ವರಾರ್ಪ್ಪಣ ಯಿ ದೇವರ್ಗ್ಗಳೆ ನಗರವನ್ನು ಸರ್ವಬಾಧಾಪರಿಹಾರವಾಗಿ ಕೊಟ್ಟದ್ದನ್ನು ಉಲ್ಲೇಖಿಸಿದೆ (EC X Mb 38,50), ಪದ್ಯ ರೂಪದಲ್ಲಿ ರಚಿತವಾಗಿರುವ ಈ ದೀವಬ್ಬರಸಿಯ ಶಾಸನ ತನ್ನ ಕಾವ್ಯಗುಣದಿಂದ ಮನ ಸೆಳೆಯುತ್ತದೆ. ಇರಿವ ನೊಳಂಬಾಧಿ ರಾಜ ನುಲಿಪಯ್ಯನ ಆಳ್ವಿಕೆಯಲ್ಲಿ ವಿಜಯಾದಿತ್ಯಮಂಗಲದ

ಪಿರಿಯ ಕೆರೆಗೆ ಬಿತ್ತುಕಟ್ಟು ಕೊಟ್ಟಿದ್ದನ್ನು ಬೇತಮಂಗಲದ ಶಾಸನ ಉಲ್ಲೇಖಿಸುತ್ತದೆ (EC X) (ಬೌರಿಂಗ್ ಪೇಟೆ ೪).

ಶ್ರೀ ಅಯ್ಯಪದೇವನ ಆಳ್ವಿಕೆಯಲ್ಲಿನ ಬೌರಿಂಗ್‌ಪೇಟೆ ಶಾಸನ 'ಪೊಜ್ಕುನ್ದ ಬೆಳ್ಮಾದಜ್ಜುಂ ಶ್ರೀ ಕಂಚಿಕಾಯಿ ನರಸಿಗಮಜ್ಜಲದ ತುರುಗೊಳ್ಸತ್ತ ಆ ಮೂವತಿಬ್ಬಿರುಂ ನಾಲ್ಗೊಳ ಕಟಿನಿ ಕೊಟ್ಟರ್' ಎಂಬುದನ್ನು ತಿಳಿಸುತ್ತದೆ (EC X Bp42), ಬೌರಿಂಗ್ ಪೇಟೆ ತಾಲೂಕಿನ ಶಾಸನ 'ಶ್ರೀವಮ್ಮಗಚಱಿಸೆಟ್ಟಿ ದೇಗುಲದ ಮಾಡಿಸಿ ಲಿಂಗ ಪ್ರತಿಷ್ಠೆಗೆಯ್ಸಿ ದೇವರಿಗೆ ಮೂಗಣಿಂಗ' ಬೆಳೆಯುವ ಗದ್ದೆ ದಾನ ಮಾಡಿದ್ದನ್ನು ಹೇಳುತ್ತದೆ (EC XVII Suppl) ದಿಲೀಪಯ್ಯನ ಆಳ್ವಿಕೆಯ ಹುಲಿಕುಂದ ಶಾಸನ ತಗಡೂರ ಕಡೆಯ ಕಾಳಗದಲ್ಲಿ ಸತ್ತ ಪೊಕುನ್ದದ ಬಾರಾನ್ದರವಯ್ಯನಿಗೆ' ಅಯ್ಗೊಳ ಕಟಿನಿ' ದಾನ ಕೊಟ್ಟಿದ್ದನ್ನು ತಿಳಿಸುತ್ತದೆ (EC X BP 44), ಶಿಡ್ಲಘಟ್ಟ ತಾಲೂಕಿನ ಭಕ್ತರ ಹಳ್ಳಿ ಶಾಸನ 'ಎಪ್ಪತ್ತನಾಲ್ವರು ಕೊಟ್ಟುದು' (೭೪) ಆಯ್ಗೊಳ ಭೂಮಿಯನ್ನು ಆಯ್ಗೊಳ ಪಾಟು ನೀಡಿದ್ದನ್ನು ಉಲ್ಲೇಖಿಸಿದೆ (EC X CB 45) ಅಣ್ಣಿಗ ಬೀರ ನೊಳಂಬನ ಆಳ್ವಿಕೆಯಲ್ಲಿ 'ಶಾಂತರ ಮೇಲೆ ಕಾಳೆಗದೊಳ್ಸಾನ್ತರನ ತಾಳ್ದಿಱುದು ತಲೆಯುಮಂ ಒಱೆಯುಮನೊಡಗೊಣ್ಡು ಅಳ್ದೊಂಗೊಪ್ಪಿಸಿ ಗಂಗ' ಎಂಬ ವೀರ ಸತ್ತ ಬೀರ ನೊಳಂಬ ಮೆಚ್ಚಿ ಕಿಟ್ಕಲ್ನಾಡ ಪಿರಿಯ ಬಿದಿರೂರ ಕಲ್ಕಡು ಗೊಟ್ಟಂ ಗಂಗನ ಮಕ್ಕಳ ಮಕ್ಕಳ್ವೆರೆಗಂ ಸಲ್ಗುಂ' ಎಂಬುದನ್ನು ತಿಳಿಸುತ್ತದೆ (EC X Gb 4)

ಚಿಂತಾಮಣಿ ಶಾಸನ 'ಕಾಳಗದಲ್ಲಿ ಹಲವರನ್ನು ಕೊಂದು ಸತ್ತ ವೀರನಿಗೆ ಆಯ್ಗೊಳ ಕಟಿನಿಯನ್ನು ಅರಸಕೊಟ್ಟಿದ್ದನು (EC X Cm 36); ಕುರುಬೂರು ಶಾಸನ ಬೀರನೊಳಂಬನ ಆಳ್ವಿಕೆಯಲ್ಲಿನಾಗಮಯ್ಯನ ಮಗ ಕಣ್ಣಯ್ಯನು, ಸಂಕರಯ್ಯನು ಕುರುಂಬೂರ ೧೦೮ ಮಹಾಜನರಿಗೆ 'ಪದಿನಯ್ದು ಗದ್ಯಾಣ ಪೊನ್ನ' ಕೊಟ್ಟಿದ್ದನ್ನು (EC X CM 43); ಇದೇ ಊರಿನ ಇನ್ನೊಂದು ಶಾಸನ 'ಕೊಮರಮಂಗಲ ವೊಡೆಯ ನಾಗಮಯ್ಯನ ಮಗಂ ಚನ್ದಯ್ಯನುಂ ಸಿರಿಯಣ್ಣನು ಕುರುಬೂರ ಮಹಾಜನ್‌ನೊಱೆಣ್ಬರ್ಗ್ಗೆ ಪೊನ್ನ ಕೊಟ್ಟರ್ ಎಂಬುದನ್ನು ತಿಳಿಸುತ್ತದೆ (EC X Cm 44), ಇರಿವ ನೊಳಂಬಾಧಿರಾಜನ ಆಳ್ವಿಕೆಯ ಅನೂರು ಗ್ರಾಮದ ಶಾಸನ ರಾಜಮಯ್ಯನ ಮಗ ಭೀಮಯ್ಯ ಭೀಮೇಶ್ವರಕ್ಕೆ ನೊಳಂಬ ತಿರುವಯ್ಯನು ಆನೆ ಊರೊಳ್ಕಟ್ಟ ದೇವಭೋಗ ಕಣ್ಡುಗ ಗಟ್ದೆಯು ಪದಿರ್ಕ್ಕೊಳಂ ಪಾಟು ಕೊಟ್ಟಿದ್ದನ್ನು; ಮತ್ತೊಂದು ಶಾಸನ ಆಯ್ಗೊಳ ಕಟಿನಿ ಪನ್ನಸು ಬಿಟ್ಟಿದ್ದನ್ನು ಹೇಳುತ್ತವೆ (EC X Cm 49;50).

ಚಿಂತಾಮಣಿ ತಾಲೂಕಿನ ಮಾದಿಗೆರೆ ಶಾಸನ 'ನಾಗಮಯ್ಯ ಎಂಬುವವನು ಕಾಮೇಶ್ವರಕ್ಕೆ ದೇವ - ಭೋಗ ಖಂಡುಗ ಗಲ್ದೆ' ದಾನ ಮಾಡಿದ್ದನ್ನು; ಕಲ್ಲಹಳ್ಳಿ ಶಾಸನ ಯುದ್ಧದಲ್ಲಿ ಹಲವರನ್ನು ಕೊಂದು ಸತ್ತವನಿಗೆ ಎಟ್ಪಿಪಿರುಂ ಕೊಟ್ಟುದು ಅಸ್ರಾಳಂ ಕಟಿನಿ ಮೂಗೊಳೆ ಪಾಟುಂ ಕೊಟ್ಟಿದ್ದನ್ನು (EC X Cm 124); ದಿಲೀಪ ನೊಳಂಬನ ಕಾಲದಲ್ಲಿ ಹೆಬಟ ಗ್ರಾಮದ ಶಾಸನ ಶ್ರೀ ಕೊಣ್ಡಲ ಗಾಮುಣ್ಡರ ಮಗಳ್ ಅನ್ಮಾರಿಯು ತೊಮ್ಬು ಮಾಡಿಸಿದ್ದನ್ನು ಹೇಳುತ್ತದೆ (EC X Sp 25) ಶ್ರೀನಿವಾಸಪುರದ ತಿನ್ನಲಿ ಗ್ರಾಮದ ಶಾಸನ 'ಶ್ರೀ ಕಣ್ಡೆಯ್ಯ ತುರುಗೊಣ್ಡಲ್ಲಿ ಪೊತ್ತಲ್ಗಿತೂಱೂ ಅಟ್ಟಿಸತ್ತ' ಅವನಿಗೆ ಒಕ್ಕಣ್ಡುಗ ಕಟಿನಿ ಅಯ್ಗೊಳಮ್ಪಟು ದಾನ ಕೊಟ್ಟಿದ್ದನ್ನು (EC X Sp 50), ಹೆಬಟ ಗ್ರಾಮದ ಶಾಸನ 'ಶರಣ ಶ್ರೀಮಬ್ರಹ್ಮಾಶಿವಾಚಾರ್ಯರ್ನ್, ನೆನಟ್ಟ ಪೆರ್ಬ್ಬಟ್ಟಿಕ್ಕಂ ಬಿದರೂರ ಅಗ್ಗಳಮಿಳಿವಲ್ಲಿ ಅಜ್ಜಕೆ ಕಾದಿದ ಬಿದೆಯಿತ ಸತ್ತನಾತಜ್ಗೆ ಬಟಾರರು ಇಜ್ಜಣಮೆ. ನೊಳಿವಕುಳಂ

ಕಟಿನಿ' ಯನ್ನು ಸರ್ವಪರಿಹಾರವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ.

೯ನೇ ಶತಮಾನದ ಮತ್ತು ಅದರ ಪೂರ್ವದ ನೊಳಂಬರ ಕನ್ನಡ ಶಾಸನಗಳ ಭಾಷೆಯಲ್ಲಿ ಪೂರ್ವದ ಹಳಗನ್ನಡ ಪ್ರಯೋಗಗಳು ಮತ್ತು ಅಪಪ್ರಯೋಗಗಳು ಕಂಡು ಬರುತ್ತವೆ. ಸಂಪೂರ್ಣ ವಾಕ್ಯರೂಪಗಳು ಇಲ್ಲದಿರುವುದು ಒಂದು ಕಾರಣವಾದರೆ ಅಪೂರ್ಣವಾದ ಅನೇಕ ಶಾಸನಗಳು ವೀರಗಲ್ಲು ನಿಲ್ಲಿಸಿದ, ಕರೆಕಟ್ಟಿಸಿ ದಾನಕೊಟ್ಟ, ತುರುಗೋಳ್ ಮುಂತಾದ ಕಾಳಗದಲ್ಲಿ ಸತ್ತ ವೀರರಿಗೆ ದಾನ ಕೊಟ್ಟ ವಿಷಯಗಳನ್ನು ಹೇಳುತ್ತವೆಯಾದರೂ ಯಾರು ಯಾರಿಗೆ ನೀಡಿದರೆಂಬ ಮಾಹಿತಿ ಸ್ಪಷ್ಟವಿಲ್ಲ. ಆದ್ದರಿಂದ ದೊರಕಿದ ಶಾಸನಗಳ ಪೂರ್ಣಪಾಠದ ಪ್ರಯೋಜನವನ್ನು ಅನೇಕ ಸಂದರ್ಭಗಳಲ್ಲಿ ಪಡೆಯಲು ಸಾಧ್ಯವಾಗುವುದಿಲ್ಲ.

ಚಿತ್ರದುರ್ಗ ಜಿಲ್ಲೆ ಮತ್ತು ನೊಳಂಬ ಪಲ್ಲವರು

ಚಿತ್ರದುರ್ಗ ಜಿಲ್ಲೆಯು ನೊಳಂಬರ ಆರಂಭದ ಆಳ್ವಿಕೆಯ ಪ್ರದೇಶಗಳಲ್ಲಿ ಒಂದಾದರೂ, ಇವರ ಶಾಸನಗಳು ಇಲ್ಲಿ ದೊರೆತಿರುವುದು ಕಡಿಮೆ. ಇವರು ಕ್ರಿ.ಶ ೮ನೆಯ ಶತಮಾನದಲ್ಲಿ ನೊಳಂಬಳಿಗೆ ಸಾಸಿರ ಎಂಬ ಚಿಕ್ಕ ಪ್ರಾಂತ್ಯದ ಅಧಿಪತಿಗಳಾಗಿ ಆಳ್ವಿಕೆ ಪ್ರಾರಂಭಿಸಿದರು. ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ಆಂದ್ರಪ್ರದೇಶದ ಅನಂತಪುರ ಜಿಲ್ಲೆ, ಆಗ್ನೇಯದಲ್ಲಿ ತುಮಕೂರು ಜಿಲ್ಲೆ, ನೈರುತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ ಇವುಗಳ ನಡುವೆ ಚಿತ್ರದುರ್ಗ, ಹಿರಿಯೂರು, ಜಗಳೂರು, ಮೊಳಕಾಲ್ಮೂರು, ಚಳ್ಳಕೆರೆ ತಾಲೂಕುಗಳನ್ನು ಒಳಗೊಂಡು ಈ ನೊಳಂಬ ಪ್ರಾಂತ್ಯವಿತ್ತು.

ನೊಳಂಬಳಿಗೆ ನಾಡಿನ ಉತ್ತರದ ಬಹುಭಾಗ ಕದಂಬಳಿಗೆ ೧೦೦೦ದಲ್ಲಿ ಸೇರಿತ್ತು. ನೊಳಂಬಳಿಗೆ ೧೦೦೦ವನ್ನು ಆಳ್ವಿಕೆ ಮಾಡಲಾರಂಭಿಸಿದ ಮುಖ್ಯವಾದ ರಾಜಮನೆತನವೆಂದರೆ ನೊಳಂಬ ಪಲ್ಲವರದು. ಇವರ ರಾಜಧಾನಿ ಪೆಂಜೇರು ಅಥವಾ ಹೆಂಜೇರು. ಮೊದಲು ನೊಳಂಬಳಿಗೆ ಸಾವಿರವಾಗಿದ್ದ ಇವರ ರಾಜ್ಯ ಮುಂದೆ ನೊಳಂಬವಾಡಿ ೩೨,೦೦೦ ರಾಜ್ಯವಾಯಿತು. ನೊಳಂಬರು ಕೆಲವು ಕಾಲ ಗಂಗರ ಸಾಮಂತರಾಗಿಯೂ ಮತ್ತೆ ಕೆಲವು ಕಾಲ ರಾಷ್ಟ್ರಕೂಟರ ಸಾಮಂತರಾಗಿಯೂ, ಸ್ವತಂತ್ರರಾಜರಂತೆಯೂ ಆಳ್ವಿಕೆ ಮಾಡಿದರು. ಈ ಜಿಲ್ಲೆಗೆ ತೀರ ದಕ್ಷಿಣಕ್ಕಿದ್ದ ನೀರ್ಗುಂದ ೩೦೦ರ ಪ್ರಾಂತ್ಯವೂ ನೊಳಂಬರ ಅಧೀನದಲ್ಲಿತ್ತು. ಚಳ್ಳಕೆರೆ ತಾಲೂಕಿಗೆ ಸೇರಿದ ಹಿರೇಮಧುರೆ ಮತ್ತು ಚಿಕ್ಕ ಮಧುರೆ ಇವರ ಕಾಲದ ಪ್ರಮುಖ ಊರುಗಳಾಗಿದ್ದವು.

ಆರಂಭದಲ್ಲಿ ಹೆಂಜೇರನ್ನು ರಾಜಧಾನಿಯನ್ನಾಗಿಸಿಕೊಂಡು ಗಂಗರ ಸಾಮಂತರಾಗಿ ಆಳ್ವಿಕೆ ಮಾಡುತ್ತಿದ್ದವರು. ಮುಂದೆ ತಮ್ಮ ರಾಜಧಾನಿಯನ್ನು ಬಳ್ಳಾರಿ ಜಿಲ್ಲೆಗೆ ಸೇರಿದ ಕಂಪಿಲಿಗೆ ಬದಲಾಯಿಸಿದರು. ಆದರೂ ಈ ಪ್ರದೇಶದ ಕೆಲವು ಭಾಗಗಳಲ್ಲಿ ನೊಳಂಬರ ಆಳ್ವಿಕೆ ಮುಂದುವರಿಯುತ್ತಿತ್ತು. ಹೀಗಾಗಿ ನೊಳಂಬ ಪಲ್ಲವರ ಸುಮಾರು ೩೫೦ ವರ್ಷಗಳ ಕಾಲದ ಆಳ್ವಿಕೆಯಲ್ಲಿ ಈ ಜಿಲ್ಲೆಯೂ ಅವರ ಒಡೆತನಕ್ಕೆ ಸೇರಿತ್ತೆಂದು ಹೇಳಬಹುದು. ನೊಳಂಬರು ತಮ್ಮನ್ನು ನೊಳಂಬ ಪಲ್ಲವರೆಂದು ಕರೆದುಕೊಂಡಿದ್ದಾರೆ. ಇದರಿಂದ ತಾವು ಪಲ್ಲವರಿಗಿಂತ ಭಿನ್ನ ವಂಶೀಯರೆಂದು ಗುರುತಿಸಿಕೊಂಡಿದ್ದಾರೆಂದು ವಿದ್ವಾಂಸರು ಹೇಳಿದ್ದಾರೆ. ಈ ಪ್ರಬಂಧದಲ್ಲಿ ನೊಳಂಬರ ಆಳ್ವಿಕೆಯಲ್ಲಿ ಶಾಸನಗಳಲ್ಲಿ ಉಲ್ಲೇಖಿಸಿರುವ ದಾನ ದತ್ತಿಗಳು, ಅವರು ಕಟ್ಟಿಸಿದ ದೇವಾಲಯಗಳು ಹಾಗೂ ಮತ್ತಿತರ ದಾಖಲೆಗಳ ಆಧಾರಗಳಿಂದ ಸಂಗ್ರಹಿಸಿ ವಿವರಿಸಲು ಪ್ರಯತ್ನಿಸಲಾಗಿದೆ.

ಕ್ರಿ.ಶ.೯೨೦ರ ಹೇಮಾವತಿಯ ಶಾಸನದಲ್ಲಿ ಉಲ್ಲೇಖಿಸಿರುವ ನೊಳಂಬರ ವಂಶಾವಳಿಯು

ಅತ್ಯಂತ ಪ್ರಾಚೀನವೆಂದು ತಿಳಿಯಲಾಗಿದೆ. ಆದರೆ ಚಿತ್ರದುರ್ಗ ಜಿಲ್ಲೆಗೆ ಸೇರಿದ ಪುರಾತನ ಗ್ರಾಮವಾದ ಮಹದೇವಪುರದ ಈಶ್ವರ ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ವಿಗ್ರಹದ ಹಿಂಬದಿಯ ಮಣ್ಣಿನ ದಿಬ್ಬದಲ್ಲಿ ದೊರೆತ ತಾಮ್ರಶಾಸನ ಪ್ರಾರಂಭದ ನೊಳಂಬ ಅರಸರ ಬಗ್ಗೆ ಮಾಹಿತಿ ನೀಡುತ್ತದೆ. ಈ ಪ್ರಭುರಾಮ ಮಂಗಲದ ತಾಮ್ರ ಶಾಸನವನ್ನು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಪಾದಿಸಿ ಪ್ರಕಟಿಸಿದ್ದಾರೆ. ''ಸ್ವಸ್ತಿ ಸಮಧಿಗತ ಪಂಚ-ಮಹಾಶಬ್ದ ಪಲ್ಲವಾನ್ವಯ ಕುಲತಿಲಕ ಲಲಾಟನಯನ ವಂಶೋದ್ಭವ ಕಟ್ವಾಂಗಧ್ವಜ। ಕಡುವ ಪಱೆಗೋಷಣ ಕಾಂಚಿಪುರ ಪರಮೇ।ಶ್ವರ ಶ್ರೀಮತೆ ಮುತ್ತರೇಯರ ಪ್ರಿಯಾತ್ಮಜಂ। ಪೋರ್ಮುಖ ರಾಮರ ಮಗಂ ಶ್ರೀಮುಖರಾ। ಮಸ್ಯ ಪುತ್ರಂ ಸಿಂಗಪೋತತ್ತಿಯರಸರ ಪು। ತ್ರಂ ಪೊನ್ನೇಱ ನೊಟಿಂಬಾಧಿರಾಜರಾ। ಜ್ಯಾಭಿವೃದ್ಧಿಯುತ್ತರೋತ್ತರಂ ಸಲುತ್ತಿರೆ ಧರ್ಮ।ವೊಳಲೊಳಿಟ್ಟು ಪೋಟಿಲ್ಯೋರನ ಜಾತಕ। ರ್ಮ್ಮಮಂ ಬೆಳ್ದ ದಕ್ಷಿಣೆಯುಂ ಆದಿತ್ಯನ ಪ್ರ। ತಿಷ್ಠೆಗೆಯ್ದಲ್ಲಿ ಅರಸರಿವರಗೊಣ ವಿಶೇಷ ಮಿ। ರ್ಮಚ್ಚಿ ನಿರ್ಗುನ್ದ ವಿಷಯದ ಗೋರವೂರೆಂಬುದಂ। ಪ್ರಬುರಾಮ ಮಂಗಲಮೆನ್ದು ಆಂಗಿರಸ ಬಾ। ರೆಹಸ್ಪತ್ಯ ಭಾರದ್ವಾಜ ಗೋತ್ರ ರಿಗ್ವೇದನಾರ।ಣ ಸೋಮಾಜಿಯ ಕಾಲಂ ತಾಂ ಕಚ್ಚಿ ರೇವಕ ನಿರ್ಮ್ಮ।ಡಿ ಕರಗಮೆತ್ತಿ ದಾರೆಯೆಱೆದು ಬ್ರಹ್ಮದಾ। ಯಂ ನಮಸ್ಯ ಸರ್ಬ ಬಾದಾ ಪರಿಹಾರ ಮಿತ್ತುದರ್ಕೆ ಸಾಕ್ಷಿ ಷಣ್ಣವ ಸಹಸ್ರವರ್। ಆದಿ ಸೀಮಾನ್ದಕ್ಷಿಣ ಸ್ಯಾನ್ದಿಸೆ ಕೂಱಿಂಗೆ। ವಳ್ಳಂ ಪಶ್ಚಿಮಾದಿಸೇ ಕೂಱುವಾಂಗೊ।ಲಲಿ ಪಳ್ಳಂ ನಿರ್ವರಿಯೆ ಉತ್ತರಸ್ಯಾನ್ದಿಸೇ ಕೋವನೆ। ಕಟ್ಟ ವಟವೃಕ್ಷಮೇ ಪರ್ಚಿಯಡು ಪೂರ್ವಸ್ಯಾನ್ದಿಸೇ ಮಾಗಾಣಿ ಮೊಱಡಿಯೇ। ಯ್ವೞ ಪಳ್ಳಮೇ ನೀರ್ವರಿಯೆ ಕೂಱುಂಗೆ ಪಳ್ಳದೋ। ಳ್ಕೊಡಿತ್ತು ಮುಂದೆ ಶಾಪಾಶಯದ ಒಕ್ಕಣೆ ದಾಖಲಾಗಿದೆ. (ಪ್ರಬುದ್ಧ ಕರ್ನಾಟಕ ೩೪-೨)

ಈ ತಾಮ್ರಪಟದಲ್ಲಿ ನೊಳಂಬರ ಪಾರಂಪರಿಕ ಬಿರುದುಗಳ ಜೊತೆ ''ಲಲಾಟ ನಯನ ವಂಶೋದ್ಭವ, ಕಟ್ವಾಂಗಧ್ವಜ, ಕಡುವಪರೆ ಘೋಷಣ, ಕಾಂಚೀಪುರ ಪರಮೇಶ್ವರ'' ಇತ್ಯಾದಿ ಬಿರುದಾಂಕಿತ ಮುತ್ತರೇಯನ ಮಗ ಪೇ (ಪೋ) ರ್ಮುಖರಾಮ; ಇವನ ಮಗ ಶ್ರೀಮುಖರಾಮ; ಇವನ ಮಗ ಸಿಂಗಪೋತತ್ತಿಯರಸ; ಇವನ ಮಗ ಪೊನ್ನೇರ ನೊಳಂಬಾಧಿ ರಾಜನು ಧರ್ಮವೊಳಲಲ್ಲಿ ರಾಜ್ಯವಾಳುತ್ತಿದ್ದನು. ಆಗ ಪೊಳಲ್ಚೋರನ ಜಾತಕರ್ಮ ನೆರವೇರಿಸುವ ಸಲುವಾಗಿ ಧರ್ಮವೊಳಲಿಗೆ ಬಂದು ದಕ್ಷಿಣೆಗಾಗಿಯೂ, ಆದಿತ್ಯದೇವರ ಪ್ರತಿಷ್ಠೆಗಾಗಿ ನೀರ್ಗುಂದ ವಿಷಯದ ಗೊರವೂರನ್ನು ಪ್ರಭುರಾಮಮಂಗಲವೆಂದು ಹೆಸರನ್ನಿಟ್ಟು ಅಂಗಿರಸ ಬಾರ್ಹಸ್ಪತ್ಯ (ಬೃಹಸ್ಪತಿ) ಭಾರದ್ವಾಜ ಗೋತ್ರದ ಋಗ್ವೇದ ನಾರಾಯಣ ಸೋಮಯಾಜಿಯ ಕಾಲನ್ನು ತೊಳೆದು ರೇವಕ ನಿರ್ಮಡಿಯು ಧಾರೆಯೆರೆದು ಬ್ರಹ್ಮದೇಯವಾಗಿ ೯೬೦೦೦ ಗ್ರಾಮಗಳ ಪ್ರಜೆಗಳ ಸಾಕ್ಷಿಯಾಗಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಶಾಸನವನ್ನು ಕಂಚಿಯೋಗ ಜ... ಯ್ಯನ ಮಗ ಖಗದ ದೇಮಣ್ಣ ಎಂಬುವನು ಕಂಡರಿಸಿದ್ದುದ್ದನ್ನು ಉಲ್ಲೇಖಿಸಿದೆ.

ಈ ತಾಮ್ರಶಾಸನ ಹೇಮಾವತಿಯ ಸ್ತಂಭ ಶಾಸನದಲ್ಲಿ ಹೇಳಿರುವ ದಕ್ಕಿಂತ ಸ್ವಲ್ಪ ಭಿನ್ನವಾಗಿ ಪ್ರಾರಂಭದ ಅರಸರ ಬಗ್ಗೆ ಬೆಳಕು ಚೆಲ್ಲುತ್ತದೆ. ಸ್ತಂಭ ಶಾಸನ ಸಿಂಹಪೋತನ ತಂದೆಯನ್ನು ನೊಳಂಬಾಧಿರಾಜ ಮಂಗಳನೆಂದು ಹೆಸರಿಸಿದರೆ ತಾಮ್ರ ಶಾಸನ ಶ್ರೀಮುಖರಾಮನೆಂದೂ, ಇವನ ಹಿಂದಿನ ಎರಡು ತಲೆಮಾರಿನ ಅಂದರೆ ಶ್ರೀಮುಖರಾಮನ ತಂದೆಯನ್ನು ಪೇರ್ಮುಖ

ರಾಮನೆಂದೂ, ಇವನ ತಂದೆಯನ್ನು ಮುತ್ತರೇಯನೆಂದು ಹೇಳಿದೆ. ಈ ತಾಮ್ರ ಶಾಸನದ ಪ್ರಕಾರ ನೊಳಂಬ ಪಲ್ಲವರಲ್ಲಿ ಬರುವ ಹಿರಿಯ ಅಥವಾ ಮೊದಲು ಬರುವ ಅರಸು ಮುತ್ತರೇಯ.

ಚಳ್ಳಕೆರೆ ತಾಲೂಕು ತಳುಕು ಹೋಬಳಿ ದೊಡ್ಡ ಉಳ್ವರ್ತೆ ಗ್ರಾಮದ ಕ್ರಿ.ಶ.೭೨೫ರ ಶಾಸನ, ಕಟ್ಟಾನೆಮಲ್ಲ ಛಲದಂಕರಾಮನೆಂಬ ಬಿರುದುಳ್ಳ ಗಂಗರಾಜನು ಗಂಗ ೬೦೦೦ ಪ್ರದೇಶವನ್ನು ಆಳುತ್ತಿರುವಾಗ ದೇಚ ಗಾವುಂಡನ ಮಗ ನೊಳಂಬ ಗಾವುಂಡನು 'ಸೋಸಾಸ' ನೀಡಿದನ್ನು ಉಲ್ಲೇಖಿಸಿದೆ. ಈ ಶಾಸನದ ಕಲ್ಲನ್ನು ಮಾಡಿಸಿದವನು ಮದರಿಕಲ್ಲು ಗಾವುಂಡಸ್ವಾಮಿ ಬೆನಯ್ಯನು, ಕೆತ್ತಿದವನು ನಾಗೋಜ ಎಂಬ ಶಿಲ್ಪಿ. ನೊಳಂಬರ ಮೊದಲ ಉಲ್ಲೇಖ ಇದಾಗಿದೆ (ಎಂ.ಎ.ಆರ್.ನಂ.೧೦)

ಇದೇ ಸ್ಥಳದಲ್ಲಿರುವ ಮತ್ತೊಂದು ವೀರಗಲ್ಲು ಸಿಂಘಪೊತ್ತ ಕಲಿ ನೊಳಂಬಾಧಿರಾಜ ಆಳ್ವಿಕೆ ಮಾಡುತ್ತಿದ್ದಾಗ ಊರಿಗೆ ಮುತ್ತಿಗೆ ಹಾಕಿದವರನ್ನು ಸದೆ ಬಡಿದು ಓಡಿಸಲು (ಸು.೯೫ ಜನ) ರಾಜನಿಂದ ಅಪ್ಪಣೆ ಪಡೆದ ಪರಾಮನ್, ನಿಜದಂಡಿ, ಗಜರಿಪು, ವಿಕ್ರಮ, ಎಂಬುವವರು ಮುತ್ತಿಗೆಯ ಕಾಳಗದಲ್ಲಿ ಸತ್ತಾಗ ಅವನ (ರ) ಹೆಸರಿನಲ್ಲಿ ದೇವಾಲಯ (ಅಂಬಲಂ) ಶ್ವೇತಛತ್ರಿ, ಮೂಳಿಟ್ಟಿಗೆ ಪಡೆದು ಸ್ವರ್ಗಸ್ಥರಾದುದನ್ನು ಉಲ್ಲೇಖಿಸುತ್ತದೆ. (ಎ.ಕ.೧೧ ಚಳ್ಳ.೫).

ಚಳ್ಳಕೆರೆ ತಾಲೂಕು ಹಿರೇಮದರಿ ಗ್ರಾಮದ ಕ್ರಿ.ಶ.೮೫೦ಕ್ಕೆ ಸೇರಬಹುದಾದ ಶಿಥಿಲವಾದ ದಾನ ಶಾಸನ ಕೆರೆಯ ಉಸ್ತುವಾರಿಯನ್ನು ನೋಡಿಕೊಳ್ಳಲು ನಾಗಯ್ಯ, ಬದಿಯಮ್ಮ, ಶೆಟ್ಟಿ (ಮತ್ತೊಂದು ಹೆಸರು ಸ್ಪಷ್ಟವಿಲ್ಲ) ಕೊಂಡ ಭೂಮಿಯನ್ನು ನನ್ನಿಗಾವುಂಡ, ನಾಗಗಾವುಂಡ, ಎಳವರಿ ಗಾವುಂಡ, ಎರೆಮಾರ, ಎರೆಯಮ್ಮ ಗಾವುಂಡ, ನೊಳಂಬ ಗಾವುಂಡನ ಮಗ ಅಣ್ಣಿಗ ಇವರುಗಳನ್ನು ಸಾಕ್ಷಿಯಾಗಿ ದಾನ ಮಾಡಿ ರಕ್ಷಿಸುವಂತೆ ಹೇಳಿದೆ (EC.11.Ch.31)

ತಳಕು ಹೋಬಳಿ ದೊಡ್ಡ ಉಳ್ವರ್ತೆ ಗ್ರಾಮದ ಕ್ರಿ.ಶ.ಸು ೯೭೪ರ ಶಾಸನ ಒಕ್ಕಲ ಮಗ ಕಂಭಯ್ಯ, ನಾಗಬ್ಬೆಯ ಮಗ ಮಾರಯ್ಯ 'ಕೊಜ್ಗರ ತುರು ಕಾಳಗ' ದಲ್ಲಿ (ಬಹುಶಃ ತಮಿಳು ಪಲ್ಲವರ ದಂಡು ಬಂದಿರಬೇಕು ಅಥವಾ ನಿಡುಗಲ್ಲು ಚೋಳರನ್ನು ಕೊಂಗರು ಎಂದು ಇಲ್ಲಿ ಕರೆದಿರಬೇಕು) ಸತ್ತವರಿಗೆ ಹೊನ್ನರೂವ ಮಾಡಿಸಿ ದಾನ ಮಾಡಿದ್ದನ್ನು ತಿಳಿಸುತ್ತದೆ (ಎ.ಕ.೧೧, ಚಳ್ಳ ೪), ಆರಂಭದ ತಮಟುಗಳಲ್ಲಿನ ವೀರಗಲ್ಲುಗಳನ್ನು ಬಿಟ್ಟರೆ ನೊಳಂಬರ ವೀರಗಲ್ಲುಗಳೇ ಪ್ರಾಚೀನ. ಅದೇ ಸ್ಥಳದಲ್ಲಿ ನೊಳಂಬ ಅರಸ ಅಮರಾಲಯಕ್ಕೆ ರೂಪಗಳನ್ನು ಮಾಡಿಸಿದ ಉಲ್ಲೇಖವಿದೆ (ಎ.ಕ.೧೧, ಚಳ್ಳ೭)

ಚಳ್ಳಕೆರೆ ತಾಲೂಕು, ಚಿಕ್ಕಮಧುರೆ ಗ್ರಾಮದ ಕಂಬ ಶಾಸನ ಸಿಂಘಮುತ್ತರಸನ ಮಗಳು ಶ್ರೀ ಮಹಾದೇವಿ, ಪೆರ್ಮಾನಡಿ ಅರಸಿಯರ ತಾಯಿ ನೋಳಂಬ ಮಾದವೆಯರು ಮದರಿಕಲ್ಲಿನಲ್ಲಿ ಆಳ್ವಿಕೆ ಮಾಡುತ್ತಿರುವಾಗ ಬಿಸಮನೆಂಬ ಹೆಸರಿನ ಮನೆಮಗ ನೆಟ್ಟಕಲ್ಲಿನಲ್ಲಿ ದಾನವಾಗಿ ಕೊಟ್ಟ ಮತ್ತರು ಭೂಮಿಯ ಬಗ್ಗೆ ಮತ್ತು ಆ ದಾನವನ್ನು ಸಾಕ್ಷಿ ಸಹಿತವಾಗಿ ನೀಡಿರುವುದನ್ನು ಉಲ್ಲೇಖಿಸುತ್ತದೆ ಇದೇ ಶಾಸನ ಮುಂದುವರಿದು ಈ ಶಾಸನ ಬರೆದವನಿಗೆ ಗಾವುಂಡನ ಪ್ರಜೆಗಳು ಒಕ್ಕಲುತನ ಮಾಡುವ ಕಟ್ಟಳೆಯಲ್ಲಿ ಒರ್ಮೊರ ಭತ್ತವನ್ನು ದಾನ ಮಾಡಿದುದನ್ನು ತಿಳಿಸುತ್ತದೆ. ಅದೇ ಶಾಸನ ಮುಂದುವರಿದು ಶ್ರೀಬೇವಿಗೆ ಮುತ್ತರಸರ ಮಗ ಪೊಲೆಯಮ್ಮ ಮದರಿಕಲ್ಲನ್ನು ಅಳುತ್ತಿರುವಾಗ ವಿಸಮೆರಸರ ದೇಗುಲಕ್ಕೆ ಪನ್ನಿರ್ಮ್ಮತ್ತರು ಭೂಮಿಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ (ಎ.ಕ.೧೧, ಚಳ್ಳ.೩೩).

ಅದೇ ಕಂಬದ ದಕ್ಷಿಣ ದಿಕ್ಕಿನ ಶಾಸನ ರಾಷ್ಟ್ರಕೂಟ ಅರಸು ಪ್ರಭೂತವರ್ಷ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತ ಸಿಂಘಮುತ್ತರಸನ ಮಗ ಚಾರುಪೊನ್ನೇರನು ನೊಳಂಬಳಿಗೆ-೧೦೦೦, ನೀರ್ಗುಂದ ನಾಡು-೩೦೦, ಆಳುತ್ತಿರುವಾಗ ಅವನ ಪ್ರಿಯಪತ್ನಿ ಗವಗಣಬ್ಬೆ ಮದರಿಕಲ್ಲನ್ನು ಆಳುತ್ತಿದ್ದಳು. ಆಗ ನಾಗಮಾರಬ್ಬೆ ಎಂಬುವವಳು ಶಿವಾಲಯವನ್ನು ಮಾಡಿಸಿ, ಶಿವಾಲಯಕ್ಕೆ ೧೪ ಮತ್ತರು ಹೊಲವನ್ನು, ಗೋಮಗೆರೆಯ ಹೊಲವನ್ನು ದಾನ ಮಾಡಿದ್ದನ್ನು ಅದಕ್ಕೆ ಸಾಕ್ಷಿಯಾಗಿ ಕೆಲವರ ಹೆಸರನ್ನು ಉಲ್ಲೇಖಿಸಿದೆ (ಎ.ಕ.೧೧, ಚಳ್ಳ ೩೩). ಈಗ ಶಿಥಿಲಾವಸ್ಥೆಯಲ್ಲಿರುವ ಸರಳವಾದ ಈ ದೇವಾಲಯದಲ್ಲಿ ಚೌಕವಾದ ಕಂಬಗಳೂ, ಉಬ್ಬುಶಿಲ್ಪದ ಸಪ್ತಮಾತೃಕೆಯರು, ಸೂರ್ಯಶಿಲ್ಪ ಹಾಗೂ ಚಿಕ್ಕ ಚಿಕ್ಕಮೂರ್ತಿಗಳೂ ಇವೆ. ಚಿಕ್ಕಮಧುರೆ ಮತ್ತು ಹಿರೇಮಧುರೆಗಳಲ್ಲಿ ನೊಳಂಬರ ಕಾಲದ ಹಲವು ವೀರಗಲ್ಲುಗಳಿವೆ. ಕತ್ತಿ ಗುರಾಣಿಗಳನ್ನು ಹಿಡಿದು ನಿಂತ ಭವ್ಯಾಕೃತಿಗಳನ್ನು ಅವುಗಳಲ್ಲಿ ಕಂಡರಿಸಿದೆ.

ಚಿತ್ರದುರ್ಗದ ಬಳಿ ಗೋವನೂರು ಎಂಬಲ್ಲಿ ದೊರೆತ, ಈಗ ಚಿತ್ರದುರ್ಗದ ವಸ್ತು ಸಂಗ್ರಹಾಲಯದಲ್ಲಿಟ್ಟಿರುವ ಸಪ್ತಮಾತೃಕೆಯರ ಮೂರ್ತಿಗಳು ಗವಗಣೇಶ್ವರ ದೇವಾಲಯದ ಶಿಲ್ಪದ ಮಾದರಿಯಲ್ಲಿದೆ. ಇವು ನೊಳಂಬ ಶಿಲ್ಪಕ್ಕೆ ಮಾದರಿಗಳಾಗಿವೆ. ಅದೇ ಕಂಬದಲ್ಲಿರುವ ಮತ್ತೊಂದು ಶಾಸನ ರಾಷ್ಟ್ರಕೂಟ ದೊರೆಯ ಆಳ್ವಿಕೆಯ ಅವನ ಸಾಮಂತ ಸಮಸ್ತ ಭುವನ ವಿಖ್ಯಾತ ಪಞ್ಚಮಹಾಶಬ್ದ ಶ್ರೀಪೃಥಿವೀವಲ್ಲಭ ಪಲ್ಲವಾಧಿರಾಜ ಪೊನ್ನೇರನು ನೊಳಂಬಳಿಗೆ ೧೦೦೦, ನೀರ್ಗುಂದ ನಾಡು-೩೦೦, ಇರುಗಲ್ವಾಡಿ-೩೦೦, ಗಂಗವೂರು-೩೦, ನೆಲ್ಲಿಗುಂಡು-೧೨, ಆಳುತ್ತಿರುವಾಗ ಅವನ ಪ್ರಿಯಾತ್ಮಜ (ಮಗ) ಪಲ್ಲವ ಮಲ್ಲನು ಮದಕರಿಕಲ್ಲು, ತೊಣ್ಣೂರು, ಮಾಲ್ದೆ-೧೨, ಅಮ್ಮವಳ್ಳಿ-೧೨,ಕೋಳೂರು-೧೨, ಗಂಗವೂರು-೩೦ ಆಳುತ್ತಿದ್ದ. ಆತನ ತಾಯಿ ಗವಗಣಬ್ಬೆ, ಮದರಿಕಲ್ಲಿನ ಗವಗಣೇಶ್ವರ ಎಂಬ ಶಿವಾಲಯವನ್ನು ಮಾಡಿಸಿ ಆ ದೇವಾಲಯಕ್ಕೆ ಕಿರಿಯ ಮದಕರಿ ಕಲ್ಲಿನ ೧೨ ಮತ್ತರ ಸಾಗುವಳಿ ಭೂಮಿಯನ್ನು ಎಂಟು ಮತ್ತರ ಭೂಮಿಯನ್ನು ದಾನ ಮಾಡಿರುವುದನ್ನು ಉಲ್ಲೇಖಿಸಿದೆ (ಎ.ಕ.೧೧, ಚಳ್ಳ ೩೪).

ಚಿತ್ರದುರ್ಗ, ಹಿರಿಯೂರು ತಾಲೂಕಿನ ನಖ್ರಿ ಗ್ರಾಮದ ಸು.ಕ್ರಿ.ಶ.೬೦೦ರ ಶಾಸನವು ಮಹೇಂದ್ರನು ಪ್ರಿಥುವಿ ರಾಜ್ಯವಾಳುತ್ತಿರುವಾಗ ಮರುಗೆರೆಯ ಚಿತ್ತಪ್ಪ ಎಂಬುವನು ಕೆರೆಯನ್ನು ಕಟ್ಟಿಸಿ ನಾಲ್ಕುಳವೆಯ ಭಾಗವನ್ನು ಬಿತ್ತುವಾಟವನ್ನಾಗಿ ಕೆರೆಗೆ ಕೊಡಬೇಕೆಂದು ತಿಳಿಸುತ್ತದೆ (ಎ.ಕ.೧೧, ಹಿರಿ ೩೩).

ಚಳ್ಳಕೆರೆ ತಾಲೂಕಿನ ದೊಡ್ಡ ಉಳ್ಳರ್ತಿ ಗ್ರಾಮದ ಕ್ರಿ.ಶ.ಸು.೯೬೦ರ ಶಾಸನ ಅಣ್ಣಯ್ಯ ಬೀರನೊಳಂಬನ ಆಳ್ವಿಕೆಯಲ್ಲಿ ದಂಡನಾಯಕ ಮಗ ಗೊಗ್ಗಿ ಎಂಬುವನು ಆಳ್ ಕಾಳಳ್ಮರಿಯನ್ನು ಆಳುತ್ತಿದ್ದಾಗ ಶತ್ರು ಬಂದು ಊರನ್ನು ಮುತ್ತಿದಾಗ ಶತ್ರುವನ್ನು ಎದುರಿಸಿ ನಿ೦ ು ಹೋರಾಡಿ ಅವರನ್ನು ಓಡಿಸಿ ಸತ್ತ ಈ ವೀರನಿಗೆ ಕಲ್ಲು ನೆಟ್ಟಿದ್ದನ್ನು, ಅದೇ ಶಾಸನ ಪೊರಗುಂದದ ದಂಡನಾಯಕ ನಿಕ್ಕಪ್ಪಯ್ಯನ ಮಗ ಕಾನ್ತದ ಗೊಗ್ಗಿ ಎಂಬುವವನು ಊರಳಿವನಲ್ಲಿ ¬ತ್ತಾಗ ಅವನಿಗೆ ಸ್ಮಾರಕ ಶಿಲೆಯನ್ನು ನಿಲ್ಲಿಸಿ ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ (ಎ.ಕ.೧೧, ಚಳ್ಳ ೬). ಸಾಯ್ಗೊಂಡನ ಹಳ್ಳಿ ಶಾಸನ ನೊಳಂಬ ಅಣ್ಣಯ್ಯನ ಕಾಲದಲ್ಲಿ ನಡೆದ 'ಊರಳಿವಿನ' ಹಾಗೂ 'ಪೆಂಡಿರುಡೆಯುಚ್ಚಿದ' ವಿವರವನ್ನು ನೀಡುತ್ತದೆ (ಎ.ಕ.೧೧, ಚಳ್ಳ.೫೬)

ಹಿರಿಯೂರು ತಾಲೂಕಿನ ಐಮಂಗಲದ ಕ್ರಿ.ಶ.೯೬೭ರ ಶಾಸನವು ಆಯ್ಯಪದೇವನ ಮಗ ನನ್ನಿ ನೊಳಂಬನು ಐಯ್ಯಪಮಂಗಲಕ್ಕೆ ಬ್ರಹ್ಮಾದೇಯವನ್ನು ಬಿಟ್ಟಿರುತ್ತಾನೆ. ಈ ಬ್ರಹ್ಮಾದೇಯದ ಪೂರ್ವಮರ್ಯಾದೆ ತಪ್ಪಿಸಿದ್ದನ್ನು ತಿಳಿದು ಇದಕ್ಕೆ ಕಾರಣನಾದ ಶ್ರೀವತ್ಸಗೋತ್ರದ ಮಾರಯ್ಯನ ಮಗ ಎಚಯ್ಯನನ್ನು ಶಿಕ್ಷಿಸಲು ನನ್ನಿನೊಳಂಬನ ಸಾಮಂತಾಧಿಪತಿ ಪಂಚಲದೇವನ ಪೆರ್ಗ್ಗಡೆ, ಪಡುವಗೆರೆಯ ೫೦೦ರ ಭೋಗಪತಿ ಗುಂಡಯ್ಯನು ಹೋಗುತ್ತಾನೆ. ಆಗ ಏಚಯ್ಯನಿಗೆ ತನ್ನ ತಪ್ಪಿನ ಅರಿವಾಗಿ ತನ್ನ ದೇಹವನ್ನೇ ದಂಡಿಸಿಕೊಂಡು ಪೆರ್ಗ್ಗಡೆ ಗುಂಡಯ್ಯನ ಕ್ಷಮೆ ಯಾಚಿಸುತ್ತಾನೆ, ಕ್ಷಮೆಕೊಟ್ಟ ಗುಂಡಯ್ಯ ಅಯ್ಯಪಮಂಗಲದ ಪೂರ್ವಮರ್ಯಾದೆಯನ್ನು ಉಳಿಸಿ ಅದನ್ನು ಮುಂದುವರಿಸಿಕೊಂಡು ಹೋಗುವಂತೆ ಹೇಳಿದುದನ್ನು ತಿಳಿಸುತ್ತದೆ (ಎ.ಕ.೧೧, ಹಿರಿ.೧)

ಮೊಳಕಾಲ್ಮೂರು ತಾಲೂಕು ದೇವಸಮುದ್ರದ ಕ್ರಿ.ಶ.೧೦೨೨ರ ದಾನಶಾಸನ ಜಗದೇಕಮಲ್ಲ ನೊಳಂಬನು ಕಂಪಿಲಿಯಿಂದ ರಾಜ್ಯವಾಳುತ್ತಿದ್ದುದನ್ನು ತಿಳಿಸುತ್ತದೆ. ಮಧ್ಯೆ ಮಧ್ಯೆ ಶಾಸನದ ಅಕ್ಷರಗಳು ಶಿಥಿಲವಾಗಿ ಯಾರು ಯಾರಿಗೆ ದಾನ ಕೊಟ್ಟರು ಎಂಬುದು ಸ್ಪಷ್ಟವಾಗಿಲ್ಲ (ಎ.ಕ.೧೧, ಮೊಳ ೧೦).

ಮೊಳಕಾಲ್ಮೂರಿನ ರಾಮಸಾಗರ ಗ್ರಾಮದ ಕ್ರಿ.ಶ.೧೦೭೧ರ ಶಾಸನ ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗದೇವನು ಗೊಂದವಾಡಿಯ ಹೊರಗಿನ ಬೀಡಿನಿಂದ ರಾಜ್ಯವಾಳುತ್ತಿದ್ದಾಗ ಬಲ್ಗೊಡಿಯ ತೀರ್ಥಸ್ಥಾನದ ರಾಮೇಶ್ವರ ದೇವರಿಗೆ ಕಣಿಕಲ್ಲು-೩೦೦ರ ಬಳಿಯ ಬಾಡ (ಗ್ರಾಮ) ಮತ್ತು ಒಣ್ಣೆಕಲ್ಲನ್ನು ಅಮೃತರಾಸಿ ಪಂಡಿತರಿಗೆ (ಜೀಯರ್ಗ್ಗೆ) ದಾನ ಮಾಡಿದ್ದನ್ನು ತಿಳಿಸುತ್ತದೆ. ಬಲ್ಗೊಡಿ ತೀರ್ಥದ ರಾಮೇಶ್ವರ ದೇವಾಲಯವು ಮೊದಲು ಇಟ್ಟಿಗೆಯ ರಚನೆಯಾಗಿದ್ದಂತೆಯೂ ಮಂದೆ ಕಲ್ಲಿನಲ್ಲಿ ಕಟ್ಟಿದಂತೆಯೂ ಶಾಸನವೊಂದು ಉಲ್ಲೇಖಿಸುತ್ತದೆ (ಎ.ಕ.೧೧, ಮೊಳ ೨೮).

ಚಿತ್ರದುರ್ಗ ತಾಲುಕಿನ ಹುಲೇಗುಂದಿ ಸಿದ್ಧೇಶ್ವರ ದೇವಾಲಯದ ಕ್ರಿ.ಶ.೧೦೭೩ರ ಶಾಸನ ತ್ರೈಳೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾಡಿ ಜಯಸಿಂಗದೇವನ ಆಳ್ವಿಕೆಯಲ್ಲಿ ಇವನ ಸಾಮಂತ ಕೆರೆಯೂರ ಮಂಗಿಯೇಚಯ್ಯನನ್ನು ಕದನ ಪ್ರಚಂಡ, ಕದಳೀವನ ಕುಂಜರಂ, ಪರಮಂಡಳ ಸೂರೆಕಾರ, ವೈರಿ ಬಂಗಾರ, ವೀರಾಗ್ರಣಿ, ಕವಿ, ಗಮಕವಾದಿ, ವಾಗ್ಮಿ ಸಂವರಣ, ದುರಿತ, ಸಂಹರಣ, ಧರ್ಮ್ಮಾವತಾರ, ಚತುಸ್ಸಮಯಾಧಾರ, ಸೋಮೇಶ್ವರ ದೇವ ಪಾದ ಪಂಕಜ ಭ್ರಮರ ನಾಮಾದಿ ಸಮಸ್ತ ಪ್ರಶಸ್ತಿ ಸಹಿತ ಬಿರುದುಗಳಿಂದ ಸೂಳ್ಗಲ್-೭೦ನ್ನು ಆಳುತ್ತಿದ್ದನೆಂದು ಹೊಗಳಿದೆ. ಈತನು ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣ, ಅನುಷ್ಠಾನ, ಜಪ, ಸಮಾಧಿ ಸಂಪನ್ನರಾದ ಕೆರೆಯೂರ 'ಜ್ಞಾನಸಿವ ದೇವಮೌನಿ ಮುನಿಯ' ಕಾಲನ್ನು ತೊಳೆದು ಸೂಳ್ಗಲ್ಲಿನ ಏಕಾರ್ಥದ ಭೀಮೇಶ್ವರ, ಹಿಡಿಂಬೇಶ್ವರ ಹಾಗೂ ಅಲ್ಲಿನ ಎಲ್ಲಾ ದೇವರಿಗೆ ಕೋಟೆಯ ಪಶ್ಚಿಮ ದಿಕ್ಕಿನಲ್ಲಿನ ೬೦ ಮತ್ತರು ಭೂಮಿಯನ್ನು ದಾನವಾಗಿ ಕೊಡುತ್ತಾನೆ. ಇವನ ಕೈಕೆಳಗಿನ ಬಿಮ್ಮಗಾವುಂಡನು ಸಹ ಭೀಮೇಶ್ವರ ದೇವರಿಗೆ ಕೆರೆಯೂರ ಗಟ್ಟಿ ಕಮ್ಮಂ೧೦೦ನ್ನು ದಾನವಾಗಿ ಬಿಟ್ಟಿದ್ದನ್ನು ಮತ್ತು ಈ ಶಿಲಾ ಲೇಖವನ್ನು ಮಂಗಿಯೇಚಯ್ಯನ ಸಂಧಿ ವಿಗ್ರಹಿ ಬಮ್ಮಯ್ಯ ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ (ಎ.ಕ.೧೧, ಚಿತ್ರ ೮೨).

ಈ ಜಿಲ್ಲೆಗೆ ಸಂಬಂಧಿಸಿದ ಇನ್ನು ಕೆಲವು ಶಾಸನಗಳು ಶಿಥಿಲವಾಗಿದ್ದು ಅವುಗಳಲ್ಲಿರುವ ವಿಷಯಗಳ ಸ್ಪಷ್ಟತೆ ದೊರೆಯುವುದಿಲ್ಲ.

ನೊಳಂಬರ ಕಾಲದ ನೀರಾವರಿ ವ್ಯವಸ್ಥೆ

ಪ್ರಾಚೀನ ಕರ್ನಾಟಕದಲ್ಲಿ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ 'ನೀರಾವರಿ ವ್ಯವಸ್ಥೆ' ಬಹಳ ಮಹತ್ವದ ಪಾತ್ರವನ್ನು ವಹಿಸಿದೆ. ಜಗತ್ತಿನ ಎಲ್ಲಾ ಜೀವಿಗಳಿಗೂ ನೀರಿನ ಅವಶ್ಯಕತೆ ಇದೆ. ಭಾನು ಸುರಿಸಿದ ಮಳೆನೀರು ಭೂಮಿಯ ಮೇಲೆ ಬಿದ್ದು ಹಳ್ಳ, ದಿಣ್ಣೆ, ತಗ್ಗು ಪ್ರದೇಶಗಳಲ್ಲಿ ನಿಂತು ಕೆರೆ, ಕಟ್ಟೆಗಳಾಗಿ, ಸಮತಟ್ಟಾದ ಭೂಮಿಯ ಮೇಲೆ ಹರಿದ ನೀರು ನದಿಯಾಗಿ ರೂಪುಗೊಂಡು ಸಮುದ್ರವನ್ನು ಸೇರುತ್ತದೆ. ಜನವಸತಿ ಈ ನೀರನ್ನು ಕೆರೆ, ಕಟ್ಟೆ, ಬಾವಿ ಮೊದಲಾದ ಹಂತಗಳಲ್ಲಿ ಸಂಗ್ರಹಿಸಿ ಜೀವನದ ಹಲವಾರು ಮಜಲುಗಳಿಗೆ ಬಳಕೆಯಾಗುತ್ತದೆ.

ಈಗಿನಂತೆ ನದಿಗಳಿಗೆ ಅಣೆಕಟ್ಟು ಕಟ್ಟಿ ನೀರನ್ನು ಸಂಗ್ರಹಿಸಿ ಸಾವಿರಾರು ಎಕರೆ ಭೂಮಿಯ ಸಾಗುವಳಿಗೆ ನೆರವಾಗುವ ವ್ಯವಸ್ಥೆ ಹಿಂದೆ ಇಲ್ಲದ್ದಿದರೂ ಊರು ಅಥವಾ ಗ್ರಾಮಕ್ಕೊಂದಾದರು ಕೆರೆ ಇದ್ದು ಅಲ್ಲಿ ಸಂಗ್ರಹವಾದ ನೀರಿನಿಂದ ವ್ಯವಸಾಯ ಹಾಗೂ ಇನ್ನಿತರ ಕೆಲಸಗಳಿಗೆ ಬಳಸಲಾಗುತ್ತಿತ್ತು. ದೊಡ್ಡ ದೊಡ್ಡ ಕೆರೆಗಳನ್ನು ರಾಜರು, ಸಾಮಂತರು, ಅಧಿಕಾರಿಗಳೂ ಗಾವುಂಡರೂ ಹಾಗೂ ಪುರಜನರು ಕಟ್ಟಿಸಿ ಸಾಮಾಜಿಕ ಕಾರ್ಯಗಳಿಗೆ ನೆರವು ನೀಡುತ್ತಿದ್ದರು. ರಾಣಿಯರು ಹಾಗೂ ಸಾಮಾನ್ಯ ಮಹಿಳೆಯರು 'ಕೆರೆ ಕಟ್ಟಿಸುವ' 'ತೂಬು ಇಡಿಸುವ' ಕೆಲಸಗಳನ್ನು ಮಾಡಿದ ಅನೇಕ ಉದಾಹರಣೆಗಳನ್ನು ಶಾಸನಗಳು ಉಲ್ಲೇಖಿಸಿವೆ. ಅಲ್ಲದೆ ಹಿಂದೆ ತಾಯಿಯಾದವಳು ತನ್ನ ಕಂದನಿಗೆ ಹಾಲೂಡಿಸುತ್ತಿರುವಾಗ ತೊಡೆಯ ಮೇಲಿರುವ ಶಿಶುವಿನ ಕಿವಿಯಲ್ಲಿ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ಮಾಡಿಸು ಎಂದು ಹೇಳುತ್ತಿದ್ದಳು. ತಾಯಿ ಹೀಗೆ ಮಗುವಿಗೆ ಬಾಲ್ಯದಿಂದಲೇ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಪ್ರಚೋದಿಸುತ್ತಿದ್ದಳು. ಇಂತಹ ಧಾರ್ಮಿಕ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದರೆ ದೇವತೆಗಳು ಸಂಪ್ರೀತರಾಗುವರೆಂಬ ನಂಬಿಕೆ ಜನಮನದಲ್ಲಿ ಬೇರೂರಿತ್ತು.

ಹೀಗೆ ನೀರಾವರಿಯ ಪ್ರಯೋಜನಗಳನ್ನು ಜನತೆಗೆ ತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ ನೀಡಿದ ಮಹಾಸಾಮಂತ ರಾಜರಾದ ನೊಳಂಬರ ಬಗ್ಗೆ ತಿಳಿಯುವ ಪ್ರಯತ್ನ ಮಾಡಲಾಗಿದೆ. ಕೃಷಿಯ ಭೂಮಿಗಳನ್ನು ದೇವಮಾತೃಕಗಳೆಂದು ಮತ್ತು ನದೀ ಮಾತೃಕಗಳೆಂದು ವಿಂಗಡಿಸುತ್ತಿದ್ದರು. ಮಳೆನೀರನ್ನು ಅವಲಂಭಿಸಿ ವ್ಯವಸಾಯ ಮಾಡುತ್ತಿದ್ದ ಭೂಮಿಗಳನ್ನು ದೇವಮಾತೃಕಗಳೆಂದು, ನದಿ

ನೀರನ್ನು ಕಾಲುವೆಗಳ ಮೂಲಕ ಹರಿಸಿ ವ್ಯವಸಾಯ ಮಾಡುತ್ತಿದ್ದ ಭೂಮಿಯನ್ನು ನದೀ ಮಾತೃಕಗಳೆಂದು ಕರೆಯುತ್ತಿದ್ದರು. ನೊಳಂಬರು ಈಗಿನ ಕರ್ನಾಟಕದ ತುಮಕೂರು, ಚಿತ್ರದುರ್ಗ, ಬಳ್ಳಾರಿ, ಕೋಲಾರ, ಬೆಂಗಳೂರು ಜಿಲ್ಲೆಗಳನ್ನು ಮತ್ತು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಕೆಲವು ಭಾಗಗಳನ್ನು ಆಳಿದವರು. ನೊಳಂಬರು ಆಳುತ್ತಿದ್ದ ನೊಳಂಬ ವಾಡಿಯು ಬಯಲು ಸೀಮೆಯ ಪ್ರದೇಶವಾಗಿದ್ದು ಕಡಿಮೆ ಪ್ರಮಾಣದ ಮಳೆ ಬೀಳುತ್ತಿತ್ತು. ಬೀಳುವ ಮಳೆಯನ್ನು ಆಧರಿಸಿ ವ್ಯವಸಾಯ ಮಾಡುವುದು ಕಷ್ಟವಾಗಿತ್ತು. ಆದ್ದರಿಂದ ಮಳೆ ನೀರನ್ನು ಸಂಗ್ರಹಿಸಿ/ಶೇಖರಿಸಿ ಸದುಪಯೋಗ ಮಾಡಿಕೊಳ್ಳುವ ಅಗತ್ಯವಿತ್ತು. ಆದ್ದರಿಂದ ನೊಳಂಬರು ಕೆರೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ, ಪ್ರೋತ್ಸಾಹ ನೀಡುತ್ತಿದ್ದರು. ಕೆರೆಗಳನ್ನು ರಾಜ, ಮಹಾರಾಜರಲ್ಲದೆ ಇತರರೂ ಕಟ್ಟಿಸುತ್ತಿದ್ದರು. ಕಟ್ಟಿಸಿ, ನೀರಾವರಿಯಿಂದ ಬರಬಹುದಾದ ಉತ್ಪತ್ತಿಯ ಕೆಲ ಅಂಶವನ್ನು ಕೆರೆ ಕಟ್ಟಿಸಿದವನಿಗೆ ರಾಜನು ಕೊಡುಗೆಯಾಗಿ ನೀಡುತ್ತಿದ್ದ. ಕೆರೆಗಳನ್ನು ಕಟ್ಟಿಸಿದ ಮಾತ್ರಕ್ಕೆ ಕೆಲಸ ಮುಗಿಯುತ್ತಿರಲಿಲ್ಲ. ಕಾಲಕಾಲಕ್ಕೆ ಕೆರೆಗಳಲ್ಲಿ ಹೂಳು ತುಂಬಿಕೊಳ್ಳದಂತೆ ಹೂಳು ತೆಗೆಸುವುದು, ಹಾಗೂ ಒಡೆದು ಹೋದ ಕೆರೆಯನ್ನು ಪುನರ್‌ನಿರ್ಮಿಸುವುದು, ಹಾಗೂ ಜೀರ್ಣೋದ್ಧಾರದ ಕಾರ್ಯಗಳು ಮುಖ್ಯವಾಗಿರುತ್ತಿದ್ದವು. ನೊಳಂಬರು ಮಾಡಿದ ನೀರಾವರಿ ವ್ಯವಸ್ಥೆಯನ್ನು ಶಾಸನಗಳು ಉಲ್ಲೇಖಿಸಿರುವ ಮಾಹಿತಿಯನ್ನು ಆದರಿಸಿ ಈ ಲೇಖನ ಮಾಡಲಾಗುತ್ತಿದೆ.

ಕಂಬದೂರಿನ ಕ್ರಿ.ಶ. ಸು.೮೦೦ರ ಶಾಸನ ವೀರನೊಳಂಬಾಧಿರಾಜ ರಾಜಪರಮೇಶ್ವರನು ಬೆದ್ದುಗೊನ್ದೆಯ ಕೆರೆಯನ್ನು ಕಟ್ಟಿಸಿದವನಿಗೆ ಅಜ್ಜಪರ್ವರ ಭಿದಿಯೆಱಿಯರ ನೊಳಂಬ ದೊಡ್ಡನೆಂದು, ಕಡಗವಿಟ್ಟು ಗೌರವಿಸಿದ್ದನ್ನು, ಮತ್ತೊಬ್ಬ ನೊಳಂಬ ಅರಸ ಶ್ರೀಮುಖರಾಮರ್ ಎಂಬುವನು ಶ್ರೀಮುಖ ದೊಡ್ಡನೆಂದು, ಸಿಂಗಪೋತರಸರು, ಪೊನ್ನೇಱರಸರು ಮತ್ತು ಧರ್ಮಮಹಾದೇವಿ ಈ ಮೂರು ಜನರು ಸೇರಿ ಪೊನ್ನೇರದೊಡ್ಡನೆಂದು ಬಿರುದನ್ನು ದಯಪಾಲಿಸಿ ಕಡಗವಿಟ್ಟು ಗೌರವಿಸಿದನ್ನು ಉಲ್ಲೇಖಿಸಿದೆ. ಈ ಅರಸರು ತಮ್ಮ ಹೆಸರಿನಲ್ಲಿ ಕಡಗವನ್ನು ಇಟ್ಟು ಗೌರವಿಸಿದ ವಿಷಯ ತಿಳಿಯುತ್ತದೆ. ಇದೇ ಊರಿನ ಕ್ರಿ.ಶ.೯೬೫ರ ಶಾಸನ ಬೆಟ್ಟುಗುನ್ದೆಯ ಕೆರೆಯ ಬಿತ್ತುವಾಟವನ್ನು ನೂರಾರು ಗಾವುಂಡರು ಕೆರೆಗೆ ಕೊಟ್ಟು ಅದನ್ನು ಸಂರಕ್ಷಿಸುತ್ತಿದ್ದ ವಿಷಯವನ್ನು ಹಾಗೂ ಪೊಳಲ್ಚೋರನ ಅಮಾತ್ಯ ಶ್ರೀ ಚಾವುಂಡರಾಯ 'ಬಿತ್ತುವಾಟ' ಬಿಟ್ಟುದುದನ್ನ ದಾವಣಗೆರೆ, ಚಳ್ಳಕೆರೆ, ಸಿರುಗುಪ್ಪ ತಾಲೂಕಿನ ಶಾಸನಗಳು ಉಲ್ಲೇಖಿಸಿವೆ.

ಧರ್ಮಪುರಿ ಗ್ರಾಮದ ಕ್ರಿ.ಶ. ೮೭೮ರ ಶಾಸನ ಮಹೇಂದ್ರ ನೊಳಂಬನ ಆಳ್ವಿಕೆಯಲ್ಲಿ ಪೊನ್ನೇರ ಗೊರವನು ಆರು ಕೆರೆಯನ್ನು ಕಟ್ಟಿಸಿ ಊರಿಗೆ ದಾನ ಮಾಡ್ದಿದನ್ನು ಉಲ್ಲೇಖಿಸಿದೆ. ಬೇಡಕೂರಿನಲ್ಲಿ ಛಲದಂಕಕಾರ ಚೋರಿಗನು ಕೆರೆಯನ್ನು ಕಟ್ಟಿದ 'ಪಳ್ಳಿ ಸಾಂಬವಯ್ಯ'ನಿಗೆ ಮೂರು ಖಂಡುಗ ಬೆಳೆ ಬೆಳೆಯುವ ಗದ್ದೆಯನ್ನು ದಾನ ಮಾಡಿ ಇದು ಎಲ್ಲಾ ಕಾಲಕ್ಕೆ ಸಲ್ಲುವುದೆಂದು ಹೇಳಿದ್ದಾನೆ. ಸಖ್ರಿ ಗ್ರಾಮದಲ್ಲಿ 'ಮಱುಗರೆಯರ್ ಚಿತ್ತಪ್ಪ'ಚ್ಕೆರೆಯಿಂ ಕಟ್ಟಿಸಿ ನಾಲ್ಕಳವೆಯ ಟಾಗಂ ಬಿತ್ತುವಾಟಂ ಎಲ್ಲರೂ ಕೆರೆಗೆ ಕೊಡುವುದು. ಕೊಡದೆ ತಪ್ಪಿಸಿಕೊಂಡವರಿಗೆ ಪ್ರತ್ಯೇಕ ಶಾಪಾಶಯದ ವಿವರವಿದೆ. ಮನೆಪಲ್ಲೆಯ ಪುರಸಯ್ಯನ ಮಗ ಚೋರಯ್ಯನ ಮತ್ತು ಎರಡು ಮುರ ಗ್ರಾಮುಣ್ಣರು, ಪನ್ನಸಿಗರು ಅರಸ ಅಯ್ಯಪದೇವನಿಂದ ಕೆರೆಗೆ ಬಿತ್ತುವಾಟ ಪಡೆದು ಕೆರೆಯನ್ನು ರಕ್ಷಿಸಿದ್ದಾರೆ. ಬೇತಮಂಗಲದ ಕ್ರಿ.ಶ.ಸು.೯೨೦ರ ಶಾಸನ ವಿಜಯಾದಿತ್ಯಮಂಗಲದ ಪಿರಿಯ ಕೆರೆಯ ಭಿನ್ನ

ಪ್ರತಿಸನ್ದಾನಜ್ಞೆಯ್ದು ಸ್ವೀಕರಿಸಿ ಬಿತ್ತುಕಟ್ಟು ನೀಡಿದ್ದನ್ನು ಹೇಳುತ್ತದೆ. ಗುಣಿಮೊರುಬಾಗಲಿನ ಶಾಸನ ಊರ ಮಹಾಜನರು, ವರುಣಶಿವಬಟಾರರು ಸೇರಿ ಅಲ್ಲಿನ ಕೆರೆಗೆ 'ಬಿತ್ತುವಟ' ಕೊಟ್ಟದ್ದನ್ನು ಹೇಳಿದೆ. ಕೊಡವಳ್ಳಿ ಶಾಸನ 'ತನ್ನ ಕಯ್ವರನಾಡ ನೆಕ್ಕುನ್ದಿನಾಡ ಊರಳಿಯ ದೇವಭೋಗ ತೋರೋವೆಲ್ಲ ಸಲ್ಲುದು, ಕೆರೆಗೆ ಕೊಡದಾತ ಭರನಾಸಿಯು' ಎಂದು ಹೇಳಿದೆ. ಮಡಕಸಿರಾ ಶಾಸನ 'ಮಲ್ಲಣಸಿವರಿಯೊಳೆ ಒಳಗೆರೆಯ ಕಟ್ಟಡಕ್ಕೆ ನಾಲ್ಕೂರು ಸೇರಿ ಕಾಡಿಯಣ್ಣ, ಪಳ್ಳಿಕಾರ ತುವಣ್ಣ ಗಾವುಂಡರು, ಚಿರಪಿಯ ಚಿನ್ತಕುಂಟೆಯನ್ನು ಪಡೆಯುತ್ತಾರೆ ಎಂದಿದೆ. ಕಲ್ಲೂರಿನ ಶಾಸನ 'ಕಲ್ಲಳೊರ ಕೆರೆಯ ಕವಿಗುಟ್ಟ ಬಿತ್ತಲಣ್ಡೆಯಂ ಕೆರೆಗೆ' ಇಟ್ಟದ್ದನ್ನು ಕುರುಬರಹಳ್ಳಿ ಶಾಸನ 'ಮಣಿಗಲ್ಲ ಕೆರೆಗೆ ಬಿತ್ತುಕಟ್ಟ ಬಿಟ್ಟದ್ದನ್ನು ಹೇಳಿದೆ. ಹಿಂದೂಪುರದ ಶಾಸನ ಕೆಂಗೂರ ೩೦೦ ಮಹಾಜನರು ತೂಬು ಮಾಡಿಸಿದ ದುಗ್ಗಶೆಟ್ಟಿ ಎಂಬುವನಿಗೆ ಒಂದು ಖಂಡುಗ ಭತ್ತ ಬೆಳೆಯುವ ಗದ್ದೆಯನ್ನು ಕೊಡುತ್ತಾರೆ ಎಂಬುದನ್ನು, ಹೆಬಟ ಗ್ರಾಮದ ಶಾಸನ ಒಬ್ಬ ಮಹಿಳೆ ಕೆರೆಗೆ ತೂಬು ಮಾಡಿಸಿದ್ದನ್ನು, ಮತ್ತೊಬ್ಬಳು ಕೊಣ್ಡಲಗಾಮುಣ್ಡರ ಮಗಳನ್ಮಾರಿಯರ್ ತೂಮ್ಬು ಮಾಡಿಸಿದ್ದನ್ನು ಹೇಳುತ್ತದೆ.

ಕೆರೆಹಳ್ಳಿ ಶಾಸನ ನೊಳಂಬರಸನ ಪೆರ್ಗಡೆ ತ್ರಿಭುವನಯ್ಯ ಎಂಬುವನು ಪೆರ್ಮಾಡಿಯನ್ನು ಓಲೈಸಿ ಸಿವಯ್ಯನ ಕೆರೆಗೆ, ಉತ್ತನೂರಿನ ಶಾಸನ ಸಾಂಬಯ್ಯನ ಬಿದಿರೂರ ಕೆರೆಗೆ ಬಿತ್ತುವಾಟ ಬಿಟ್ಟದ್ದನ್ನು ಹಾಗೂ ಕರ್ಷನಪಲ್ಲೆ ಶಾಸನ ಕೀರ್ತಿಗಾಮುಂಡನ ಮಗನಿಗೆ ಪಟ್ಟವನ್ನು ಕಟ್ಟಿ ಪುಲ್ಲಿನಾಟ್ಟ ಕೆರೆಯ ಬೆಳಗಟೂರನ್ನು ದಾನವಾಗಿ ನೀಡಿದ್ದನ್ನು ತಿಳಿಸುತ್ತದೆ. ಆವನಿಯ ಕ್ರಿ.ಶ.ಸು.೯೮೨ರ ಶಾಸನ, ಇಮ್ಮಡಿ ಪೊಳಲ್ಚೋರಿನ ಪತ್ನಿ ದೀವಳಬ್ಬರಿಸಿ ಕಟ್ಟಿಸಿದ ಕೆರೆಯನ್ನು ಶಾಸನ ಕವಿ ಹೀಗೆ ವರ್ಣಿಸಿದ್ದಾನೆ.

'ವಿದಿತಂ ಲೋಕಕ್ಕೆ ಮುನ್ನಂ ರಘುಕುಳದ ಹನೋಗ್ರಷುವಿಂಕಾಯ್ದು ತಿಣ್ಣಂ
ಕುದಿಗೊಣ್ಣಮ್ಕಿತ್ತಗಸ್ತ್ಯಂ ಕುಡಿಯುತಗುಟ್ದನಿಂ ಕಟ್ಟು ಪಟ್ಟಿಟ್ಟುದಿನ್ತ
ಪ್ಪದು ಪೆಂಪನ್ತಾಳ್ದಿತೆನ್ದಡ್ಡುಯರೆಲವಣಾಂಬೋಧಿಯಂ ಪೋಲಿಸಲ್ವೇ
ಡಿದು ವೆತ್ತಾನೆತ್ತಳೆಂಬನ್ತತಿ ಬಹಳ ಜಳನ್ದೀವಳಬ್ಬಾ ಸಮುದ್ರಂ ॥

ಪದೆದಾಯಸಕ್ಕೆ ಪಕ್ಕಾಗಿರೆ ಗಡಪಿರಿದು ಬಾನ್ತಿನಿಂಪೋಂ ದೊನ್ದ
ಬ್ದದೊಳಿನ್ತೆನ್ತಾನುಮೆಯ್ದುತ್ತಿರದಮರನದೀ ಕಾನ್ತೆಯಂ ಕಾಣ್ಬರೀ..
ದೇಸರ್ಸಿಯ್ವಿದೇಂ ಸಂಭವಿಸಿತೋ ನಮಗಪ್ಪಟ್ಕಿಯುಂ ಗಂಗೆ ತೆಂಕ
ಣ್ಗೆದಿರಂ ಬನ್ದಿಟ್ಟುದೆಂಬನ್ತತಿ ಬಹಳ ಜಳನ್ದೀವಳಬ್ಬಾ ಸಮುದ್ರಂ''

ದೀವಬ್ಬರಸಿಯು ತನ್ನ ಹೆಸರಿನಲ್ಲಿ ದೀವಳಬ್ಬಾಸಮುದ್ರವೆಂಬ ತಟಾಕವನ್ನೂ, ತನ್ನ ಅಳಿದ ಹಿರಿಯ ಮಗ ಇಮ್ಮಡಿ ಮಹೇಂದ್ರನ ಹೆಸರಿನಲ್ಲಿ ಕೊಳವನ್ನು ಮಾಡಿಸಿ ದಾನ ಮಾಡಿದನ್ನು ನಿರೂಪಿಸಿದೆ.

ಹೆಬ್ಬಣಿ ಗ್ರಾಮದ ಶಾಸನ, ಮುಮ್ಮಡಿ ಚೋಳನ ಪಟ್ಟ ಕಟ್ಟಿದ ೧೬ನೆಯ ವರ್ಷದಲ್ಲಿ ಮೊದಲಿದ್ದ ಪಿರಿಯಕೆರೆ ಹಾಳಾಗಿದ್ದುದನ್ನು ಜೀರ್ಣೋದ್ಧಾರ ಮಾಡಿದ ಮಣ್ಣೆಯ ಗಾವುಂಡನ ಮಗ ಪೃಥುವೀರಾವ ಸೆಟ್ಟಿಗೆ ಪೂರ್ವ ಸಿದ್ಧಾಯದಂತೆ ಹತ್ತು ಗದ್ಯಾಣ ಪೊನ್ನು, ಮೂರು ಖಂಡುಗ ಭತ್ತ ಬೆಳೆಯುವ ಗದ್ದೆಯನ್ನು ಘಟೆಯಂಕಕಾರ ನೊಳಂಬಾದಿ ರಾಜನು ದಾನ ಮಾಡಿ ಎಲ್ಲಾ ಕಾಲದಲ್ಲೂ ಬಿತ್ತುಕಟ್ಟು ನಡೆಸುವ ಬಗ್ಗೆ ಉಲ್ಲೇಖವಿದೆ. ಬಲ್ಲಕುಂದೆ ಗ್ರಾಮದ ಕ್ರಿ.ಶ. ೧೦೧೭ರ ಶಾಸನ ಅಲ್ಲಿದ್ದ

ಕೆರೆಯಿದ್ದ ಸ್ಥಿತಿಯನ್ನು ಹೇಳುತ್ತಾ ಅದನ್ನು ಜೀರ್ಣೋದ್ಧಾರ ಮಾಡಿ 'ಬಿತ್ತುವಟ್ಟ ಬಿಟ್ಟದ್ದನ್ನು ಹೇಳಿದೆ. ಬಾಗಳಿಯ ಕ್ರಿ.ಶ. ೧೦೧೮ರ ಶಾಸನ ನಾರಣೋರ್ಝರ ಕೆರೆ ಮತ್ತು ಶಂಕರೋರ್ಝರ ಕೆರೆಗಳು ಬಿಕ್ಕಿನೆಳ್ವತ್ತರ ಪ್ರಾಂತ್ಯದಲ್ಲಿದ್ದು, ಆ ಎರಡೂ ಕೆರೆಗಳು ಇಂದಿಗೂ ಕಟ್ಟಿಸಿದ ವ್ಯಕ್ತಿಗಳ ಹೆಸರಿನಲ್ಲಿ ಪ್ರಸಿದ್ಧವಾಗಿರುವುದನ್ನು ತಿಳಿಸುತ್ತದೆ. ಮೊರಗೇರಿಯ ಶಾಸನ ದೇವರಕೆರೆಯಲ್ಲಿದ್ದ ಕೆರೆಯ ಬಗ್ಗೆ ವಿವರ ನೀಡುತ್ತದೆ. ದೊಡ್ಡ ಬಾಣಗೆರೆಯ ಕ್ರಿ.ಶ. ೧೦೭೩ರ ಶಾಸನ ಬಾಣಗೆರೆಯ ಕೆರೆಗೆ ಬಿತ್ತುವಟ್ಟು ಮಾಡಿಸಿದ ಚಿಲ್ಲುಕ ಗಾವುಂಡನಿಗೆ ಮತ್ತು ಇದನ್ನು ಕಟ್ಟಿದ ಚಿಲ್ಲುಕ ಬೋವನಿಗೆ ಬಿತ್ತುವಾಟದಲ್ಲಿ ಕೆಲವು ಪಾಲನ್ನು ಬಿಟ್ಟಿರುವುದನ್ನು ದಾಖಲಿಸುತ್ತದೆ. ಅಲ್ಲದೆ ಈ ಚಿಲ್ಲುಕ ಭಟಾರನು ಐದು ಕೆರೆಗಳನ್ನು ಕಟ್ಟಿಸಿ ಅವುಗಳ ನಿರ್ವಹಣೆಗೆ ತಕ್ಕ ಏರ್ಪಾಟು ಮಾಡಿರುವುದನ್ನು ಉಲ್ಲೇಖಿಸುತ್ತದೆ. ಈತ ಬಹುಶಃ ಅಲ್ಲಿಯ ಸ್ಥಾನಪತಿಯಾಗಿದ್ದಿರಬೇಕು. ಅಲ್ಲದೆ ಈತ ಐದು ಕೆರೆಗಳನ್ನು ಕಟ್ಟಿಸಿ ಅವುಗಳ ನಿರ್ವಹಣೆಗೆ ತಕ್ಕ ಏರ್ಪಾಟು ಮಾಡಿರುವುದನ್ನು ಗಮನಿಸಿದರೆ ಧರ್ಮದ ರಕ್ಷಣೆಯ ಜೊತೆಗೆ ಸಾರ್ವಜನಿಕ ಜನಜೀವನಕ್ಕೆ ಸಹ ಸ್ಪಂದಿಸುತ್ತಿದ್ದುದನ್ನು ತಿಳಿಯಬಹುದು. ಹುಲೇಗುಂದಿಯ ಇದೇ ಕಾಲದ ಶಾಸನ ಕೆರೆಯೂರ ಮಂಗಿ ಏಚಯ್ಯನು ಕೆರೆಯೊಂದನ್ನು ಕಟ್ಟಿಸಿ ಆ ಕೆರೆಯಿಂದ ಬರುವ ಆದಾಯದಲ್ಲಿ ಸೂಳ್ಗಲ್ಲಿನ ಭೀಮೇಶ್ವರ ದೇವರಿಗೆ ಭೂದಾನ ಮಾಡಿರುವುದನ್ನು ತಿಳಿಸುತ್ತದೆ.

ತಳಕಲ್ಲುವಿನ ಕ್ರಿ.ಶ. ೧೦೫೨ರ ಶಾಸನ ತ್ರೈಲೋಕ್ಯಮಲ್ಲ ನೊಳಂಬನು ಆಳ್ವಿಕೆ ಮಾಡುತ್ತಿರುವಾಗ ತೊಣಕಲಿಯೂರ ಚಾಮುಂಡಯ್ಯನು ಗುಂಡಿಗೆರೆಯ ಕೆರೆಯು ಅನೇಕ ವರ್ಷಗಳ ಕಾಲ ಭಂಗವಾಗಿದ್ದುದನ್ನು ಪುನಃ ಆ ಕೆರೆಯನ್ನು ಕಟ್ಟಿಸಿದನೆಂದು ಹೇಳುತ್ತದೆ. ಅದೇ ಕೆರೆಯಲ್ಲಿ ಹೂಳು ತುಂಬಿಕೊಂಡು ಊರಿನ ಜನರ ಉಪಯೋಗಕ್ಕೆ ಬಾರದೆ ಇದ್ದಾಗ ಚಾವುಂಡಯ್ಯನು ಹೂಳು ತೆಗೆಸಿ ಜೀರ್ಣೋದ್ಧಾರ ಮಾಡಿಸಿ ಜನರು ಆ ಕೆರೆಯ ನೀರಿನ ಪ್ರಯೋಜನ ಪಡೆದುಕೊಳ್ಳಲು ನೆರವಾಗಿದ್ದಾನೆ. ಅಸಗೋಡುವಿನ ಕ್ರಿ.ಶ. ೯೫೮ರ ಶಾಸನ, ಚರ್ವನಕೆರೆ, ಗನ್ನನಕೆರೆ, ಗದಿಗಿನಕೆರೆ, ಪಿರಿಯಕೆರೆ ಮತ್ತು ಕುಂಟೆಯ ಉಲ್ಲೇಖವೂ ಬಂದಿದೆ. ಅಂದರೆ ಕೆರೆಗಳ ನಿರ್ಮಾಣವಲ್ಲದೆ ಸಣ್ಣ ನಿರ್ಮಾಣದ ಕುಂಟೆಗಳ ನಿರ್ಮಾಣದಿಂದ ದನಕರುಗಳ ಮೈತೊಳೆಯಲು, ಅವುಗಳ ದಾಹ ನಿವಾರಣೆಗಾಗಿ ಪ್ರಯೋಜನವಾಗುತ್ತಿತ್ತು. ಅಂತೂ ಒಟ್ಟಿನಲ್ಲಿ ಈ ಕುಂಟೆಗಳು ಗ್ರಾಮದ ಜನತೆಗೆ ಪ್ರಯೋಜನಕಾರಿಗಳಾಗಿದ್ದವೆಂದು ತಿಳಿದುಬರುತ್ತದೆ. ಉಚ್ಚಂಗಿ ದುರ್ಗದ ಕ್ರಿ.ಶ. ೧೦೭೦ರ ಶಾಸನ ನೊಳಂಬಪಲ್ಲವ ಪೆರ್ಮಾಡಿ ಜಯಸಿಂಘದೇವನು ಉಚ್ಚಂಗಿ ಕೋಟೆಯ ಮೇಗಣ ತ್ರೈಲೇಶ್ವರದೇವರ ಭೋಗಕ್ಕೆ ಗಂಟಿಗನ ಕೆರೆಯನ್ನು ದತ್ತಿಯಾಗಿ ಬಿಟ್ಟದ್ದನ್ನು ತಿಳಿಸುತ್ತದೆ. ಮೊರಬದ ಕ್ರಿ.ಶ. ೧೦೭೭ರ ಶಾಸನ ಹೇರಿಲಾಳ ಕನ್ನಡ ಸಂಧಿವಿಗ್ರಹಿ ಸಂಕರಯ್ಯ ನಾಯಕ ಮತ್ತು ದಂಡನಾಯಕ ಮಧುವಪ್ಪನಾಯಕರ ಬಿನ್ನಪದಿಂದ ಬೆಳವಲನಾಡ ಬಳಿಯ ಮೊರಬದ ೧೨ ಜನ ಗಾವುಂಡಗಳು ಊರ ಪಡುವಣದಲ್ಲಿ ಭೂದಾನ ಮಾಡಿರುವುದನ್ನು ತಿಳಿಸುತ್ತದೆ. ಇದೇ ಕಾಲದ ಕಂದವರದ ಶಾಸನ ಊರ ಕೆರೆಗೆ ಬಹುಶಃ ಅದರ ನಿರ್ವಹಣೆಗಾಗಿ ಬಿಟ್ಟ ಗದ್ಯಾಣದ ಉಲ್ಲೇಖವಿದ್ದು ಯಾರು ದಾನ ನೀಡಿದರೆಂಬ ಮಾಹಿತಿ ತಿಳಿಯುವುದಿಲ್ಲ.

ಕ್ರಿ.ಶ. ೧೦೮೦ರ ಬನ್ನಿಯೂರ ಶಾಸನ ಒಂದು ವಿಶೇಷ ವಿಷಯವನ್ನು ತಿಳಿಸುತ್ತದೆ. ಆ ಅಗ್ರಹಾರದ ಕೆರೆಯು ರಿಪೇರಿ ಮಾಡಿಸುತ್ತಿದ್ದರೂ ಪದೇ ಪದೇ ಒಡೆದು ಹೋಗುತ್ತಿದ್ದು ದುರಸ್ತಿ ಮಾಡಿಸುವುದೇ ಒಂದು ದೊಡ್ಡ ಸಮಸ್ಯೆಯಾಗಿ ಊರಿನವರನ್ನು ಕಾಡುತ್ತಿತ್ತು. ಆಗ ಅಗ್ರಹಾರದ

ಮಹಾಜನರೆಲ್ಲಾ ಒಟ್ಟಾಗಿಸೇರಿ ರಾಜನ ಆಸ್ಥಾನಕ್ಕೆ ಹೋಗಿ ಈ ರೀತಿ ತಮ್ಮ ಬೇಡಿಕೆಯನ್ನು ಮುಂದಿಡುತ್ತಾರೆ. 'ಅರಸನೇ ಹಿಂದಿನ ಹಲವು ರಾಜರು ಎಷ್ಟೋ ಸಾರಿ ಕಟ್ಟಿಸಿದ್ದಾರೆ. ಆದರೆ ಕೆರೆ ಒಡೆದು ಹೋಗುವುದು ಮುಂದುವರಿಯುತ್ತಲೇ ಇದೆ. ಅರಸನೇ ಅದು ಒಡೆಯದೆ ನಿಲ್ಲಬೇಕಾದರೆ ಧರ್ಮರಾಜನಾದ ನಿನ್ನ ಹೆಸರಿನಲ್ಲಿ ಕಟ್ಟಿಸಬೇಕು. ಕೆರೆ ಒಡೆಯದೆ ನೀರಿನಿಂದ ತುಂಬಿದ್ದರೆ ಊರಿನ ಜನರು ನೆಮ್ಮದಿಯಾಗಿ, ಸುಖದಿಂದ ಬದುಕುತ್ತಾರೆ. ಆ ಪುಣ್ಯ ನಿನಗೆ ಸಲ್ಲುತ್ತದೆ' ಎಂಬ ಅಹವಾಲನ್ನು ಮಂಡಿಸುತ್ತಾರೆ. ಅರಸ ಅದೇನು ಮಹಾ ದೊಡ್ಡ ವಿಷಯವಲ್ಲವೆಂದು ಹೇಳಿ ಜಕ್ಕಗೋಸಿ ಎಂಬುವವನನ್ನು ಕರೆದು ಅವನ ಕೈಲಿ ಹಣವನ್ನು ಕೊಟ್ಟು ಕೆರೆಯನ್ನು ಕಟ್ಟಿಸಿ 'ತುಂಬ ಸಮುದ್ರ'ವೆಂದು ಹೆಸರಿಡಿಸುತ್ತಾನೆ. ಶಾಸನ ಈ ಪೂರ್ಣ ವಿವರವನ್ನು ಉಲ್ಲೇಖಿಸಿದೆ.

ಕುರ್ತುಕೋಟಿಯ ಕ್ರಿ.ಶ. ೧೦೮೨ರ ಶಾಸನ, ಬೀರನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗದೇವನು ಆಳುತ್ತಿದ್ದಾಗ ಆ ಊರಿನ ಪ್ರಮುಖರಾದ ೨೦೦ ಮಹಾಜನರು ಮತ್ತು ಮನೆವೆರ್ಗ್ಗಡೆ ದಂಡನಾಯಕ ವಾಮದೇವಯ್ಯನು'' ಕಡಲಗೆರೆಗೆ ಪೂರ್ವದೊಳ್ನಡೆವ ದಣ್ಡದೋಷ... ಕೊಳ ಜೋಳಮುಮಂ ಪುನರ್ದತ್ತಿಮಾಡಿ ಬಿಟ್ಟು ಇಱದೆಡೆ ಪನ್ನೆರಡು ಪಣಂ ಕಟ್ಟು ಬನ್ದು ಪೊಯ್ದದಾಱು ಪಣಮು ದಂಡು ನೆಱಬಯ್ದಡೆ ಮೂಱು ಪಣಂ ಕಱದನ್ದುಂ ದಣ್ಡಮಾಗಿ ನಡೆವುದು ನಿಯತ ಎನಿತೊನ್ದು ಕೊಳಧಾನ್ಯಮದನಿತುಂ ತಱಯಿ... ವಾರಿಧಿಯಂ ಧಿಕ್ಕರಿಸುವದೆನೆ ನೆಗ್‌ಟ್ದೀ ಕಡಲೆಗೆರೆಗೆ ನಡೆವುದೆದೆನ್ದುಂ 'ನಾಲ್ಕು ಗೇಣಕೊಲೊಳ್ಬಿಟ್ಟ' ಅಳತೆಕೋಲಿನಿಂದ ಅಳೆದು ಭೂದಾನ ಮಾಡಿ ದ್ರವ್ಯವನ್ನು ಕೊಟ್ಟು 'ಪ್ರತಿಪಾಳಿಸುವರಾ ತಟಾಕಮಂ' ಎಂದು ಶಾಸನ ಉಲ್ಲೇಖಿಸಿದೆ. ಈ ಶಾಸನದಿಂದ ಕೆರೆಯನ್ನು ರಕ್ಷಿಸುವವರಿಗೆ ಮತ್ತು ಹಾಳು ಮಾಡಬಯಸಿದವರಿಗೆ ವಿಧಿ, ನಿಷೇಧ, ಹೇರಿರುವುದು ತಿಳಿಯುತ್ತದೆ. ಭೂದಾನ ಮಾಡಿದ, ದ್ರವ್ಯದಾನ ಮಾಡಿದಂತಹವನ್ನು ಆ ತಟಾಕವೇ ರಕ್ಷಿಸುವುದೆಂದು ಜನಸಾಮಾನ್ಯರ ನಂಬಿಕೆಯಾಗಿದೆ. ಕವಿ ಈ ಕಡಲಗೆರೆಯನ್ನು

''ಅತಿಮಧುರಂ ಪ್ರಸನ್ನ ಕವಿ ನಿರ್ಮಿಸಿದುನ್ನತ
ಕಾವ್ಯದನ್ತ ಸನ್ತಮತಿ ನಿರ್ಮ್ಮಳಂ ಪೆಱಸಿ
ನ್ದುಮಪೇಕ್ಷಿಸುತಿರ್ಪ್ಪನನ್ತ ತಾನತಿ ಲಘುವೆನ್ನ
ದೀ ಚಣಕದುದ್ದ ತಟಾಕಮನಾರೊ ಬಣ್ಣಿಸರೆ''

ಬಾವಿಸಮೂರ್ತಿ ಸೋಮ ಕಳೆಯನ್ದದೆ ಸೋಭಿಸುತ್ತಿರ್ಪ್ಪದೀ ಜಗ
ತ್ಪಾವನಮಂಬುಜೋದರ ಪಯೋನಿಧಿಯನ್ತೇ ತೀವಿಸೇ
ವ್ಯಾವಹಮಾಗಿ ರಂಜಿಪುದು ಜೀವನುಂ ನರಜೀವರಾಶಿಗಳ್ಗೀ
ವಪುವೆಂದತುನ್ನತಿಯ ನಾರ್ಪ್ಪೊಗಳರ್ಧ್ಬರಣೀತಳಾಗ್ರದೊಳ್''

ಪೊಡವಿಪತಿ ಕಾವೇರಿಯ
ತಡಿಯೊಳ್ಬಿಟ್ಟಿರ್ದ್ದ ತನ್ನದೀ ಜಳಮುಮನೀ
ಕಡಗೆಱಯಮೃತ ಜಳಮುಮ
ನೋಡಮೊಯ್ಕನೆ ತೂಗಿ ನೋರ್ಪ್ಪನಭಿವರ್ಣ್ಣಿಸಿದ

ರಂಗತ್ತರಂಗಮಾಳಾ
ಭಂಗರದಿನ್ದೆಸೆವ ಕಡಲಗೆಱೆನ್ದೋರ್ಪ ಜನ
ಕ್ಕಿಂಗಡಲಂ ದಿಕ್ಕರಿಪುದ
ದಂ ಗಡ ಪೊಗಳಲ್ಕೆ ಕಮಳ ಭವನಂ ನೆಱೆಯ''

ಜನರಿಗೆ ಜೀವನಾಧಾರವಾಗಿರುವ ಕೆರೆಯನ್ನು ಕವಿ ಕೃತಜ್ಞತೆಯನ್ನು ಅಭಿವ್ಯಕ್ತಿಸಿದ್ದಾನೆ. ಈ ಕೆರೆಯನ್ನು ರಕ್ಷಿಸಿದರೆ ವಾರಣಾಸಿ, ಕುರುಕ್ಷೇತ್ರ, ಪ್ರಯಾಗತೀರ್ಥ, ಗಂಗೆ, ಗಂಗಾಸಾಗರ ಶ್ರೀ ಪರ್ವತಯೆಂಬ ಪುಣ್ಯತೀರ್ಥಗಳಲ್ಲಿ ಸಾವಿರ ಕವಿಲೆಯ ಕೋಡು ಕೊಳಗ ಪಂಚರತ್ನಂಗಳಲ್ಲಿ ಕಟ್ಟಿಸಿ ಮಹಾರಿತ್ವಿಜರ್ಗ್ಗಭಯ ಮುಖಿಗೊಟ್ಟ ಫಲ ದೊರೆಯುವುದೆಂದು, ಇದನ್ನು ಹಾಳು ಮಾಡಿದವನಿಗೆ ನರಕವೆಂಬ ಪಂಚಮಹಾಪಾತಕ ಸಿಕ್ಕಲಿ ಎಂಬ ಶಾಪದ ಬಗ್ಗೆಯೂ ಹೇಳಿದೆ.

ಕೆರೆಗಳ ಜೊತೆಗೆ ನೊಳಂಬರ ಕಾಲದಲ್ಲಿ ಧರ್ಮದೇವತೆಗಳ ಮೂಲಕ ಸಾರ್ವಜನಿಕರಿಗೆ ಪ್ರಾಣಿಪಕ್ಷಿಗಳ ಉಪಯೋಗಕ್ಕಾಗಿ ದಾನಿಗಳು ಬಾವಿಗಳನ್ನು ತೋಡಿಸಿ ಅಂತರ್ಜಲವನ್ನು ಮೇಲಕ್ಕೆತ್ತಿ ಬಳಸುತ್ತಿದ್ದ ಪದ್ಧತಿ ತಿಳಿದುಬರುತ್ತದೆ. ಈ ಪದ್ಧತಿ ಅಶೋಕನ ಕಾಲದಿಂದಲೂ ನಡೆದು ಬಂದಿರುವುದು ಶಾಸನಗಳಲ್ಲಿ ಉಕ್ತವಾಗಿದೆ. ಭೂಮಿಯಲ್ಲಿ ತೋಡಿದ ಬಾವಿಯಿಂದ ನೀರನ್ನು ಪಡೆಯಲು ಮೆಟ್ಟಿಲುಗಳನ್ನು ಇಟ್ಟು ಆ ಮೂಲಕ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಮೆಟ್ಟಲುಗಳಿಲ್ಲದೆ ಕಡೆ ನೀರನ್ನು ಮೇಲೆತ್ತಲು ಏತಗಳನ್ನು ಅಳವಡಿಸುತ್ತಿದ್ದರು. ಏತದ ಬಗ್ಗೆ ಹೇಳುವ ಒಂದೆರಡು ಶಾಸನಗಳು ಸಿಕ್ಕಿರುವುದನ್ನು ಪ್ರಸ್ತಾಪ ಮಾಡಲಾಗಿದೆ. ಸಿಂದಿಗೆರೆ ಗ್ರಾಮದ ಕ್ರಿ.ಸ ಸು. ೧೦೪೫ರ ಶಾಸನ ತ್ರೈಲೋಕ್ಯಮಲ್ಲ ಇಱುವ ನೊಳಬಂ ನಾರಸಿಂಘದೇವನ ಕಾಲದಲ್ಲಿ ವೈದುಂಬ ವಂಶದ ಮಣಿಬೇತಮಹಾರಾಜನು ಬಲ್ಲ ಕುಂದೆಯ ಮೂನಾಱಱೊಳಗಣ ಪಟ್ಟಣದಲ್ಲಿ ಧರ್ಮದೇತಕ್ಕೆ ಬಿಟ್ಟ ಮತ್ತರು ಪನ್ನೆರಡು ಎಂದು ಹೇಳಿದೆ. ಮತ್ತೊಂದು ಬದನೆಹಾಳು ಗ್ರಾಮದ ಕ್ರಿ.ಶ. ೧೦೫೫ರ ಶಾಸನ ವೀರನೊಳಂಬ ಪಲ್ಲವ ಪೆರ್ಮಾನಡಿಗಳ ಕಾಲದಲ್ಲಿ ಪೆರ್ಗ್ಗಡೆ ವೀರರಾಕ್ಷಸ ಹೀರಾಯನ ಬಿನ್ನಪದಿಂದ ಕವತಾಳು ಪನ್ನೆರಡರ ಬಳಿಯ ನೇಱುಲ ಬದಲಪಾಳ 'ಧರ್ಮದೇತದ' ಬಾವಿಪರದಕ್ಕಂ ಬಿಟ್ಟ ಭೂದಾನ ಉಲ್ಲೇಖವಿದೆ. ಹೀಗೆ ನೊಳಂಬ ಅರಸರ ಕಾಲದಲ್ಲಿ ಕೆರೆ ಕಟ್ಟಿಸಿ, ತೂಬು ಇಡಿಸುವ ಹಾಗೂ ಅವುಗಳ ರಕ್ಷಣೆ ಜೀರ್ಣೋದ್ಧಾರ ಮಾಡಿರುವ ಶಾಸನಗಳ ಪರಿಚಯ ಮಾಡಿಕೊಡಲಾಗಿದೆ.

ಮೈಸೂರು ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು

ಪ್ರಾಚೀನ ಕಾಲದಲ್ಲಿ ಶಿಕ್ಷಣ ಗುರುಕುಲಗಳಲ್ಲಿ ನಡೆಯುತ್ತಿತ್ತು. ಕ್ರಮೇಣ ಅಗ್ರಹಾರ, ದೇವಸ್ಥಾನ ಅಥವಾ ಮಠ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನಗಳಲ್ಲಿ ವಿದ್ಯಾದಾನವು ನಡೆಸಲಾಗುತ್ತಿತ್ತು. ಅಗ್ರಹಾರಗಳನ್ನು ವಿಶೇಷವಾಗಿ ವೇದಾಂಗಪಾರಂಗತರಾದ ಷಟ್ಕರ್ಮ ನಿರತರಾದ ಮತ್ತು ಗೃಹಸ್ಥಾಶ್ರಮದ ನೀತಿ ನಿಯಮಗಳಾದ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಸ್ಮೃತಿ ಸಮ್ಮತವಾದ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗುವಂತಹ ಬ್ರಾಹ್ಮಣರಿಗೆ ರಾಜರು ಮತ್ತು ಅಧಿಕಾರಿಗಳಾಗಿದ್ದವರು ದಾನವಾಗಿ ಕೊಡುತ್ತಿದ್ದರು. ರಾಜರು ದಾನ ಕೊಡುತ್ತಿದ್ದ ಊರು ಅಥವಾ ಗ್ರಾಮಗಳನ್ನು ರಾಜನ ಅಥವಾ ರಾಣಿಯರ ಹೆಸರಿನಲ್ಲಿ ಕೆಲವು ಸಾರಿ ದೇವರ ಹೆಸರಿನಲ್ಲಿ ಪ್ರತಿನಾಮದೇಯವನ್ನಿಟ್ಟು ಅಗ್ರಹಾರಗಳೆಂದು ಕರೆಯುತ್ತಿದ್ದರು. ಅಗ್ರಹಾರಗಳಲ್ಲಿ ವಾಸಮಾಡುತ್ತಿದ್ದ ಬ್ರಾಹ್ಮಣರನ್ನು ಮಹಾಜನರೆಂದು ಕರೆಯುತ್ತಿದ್ದರು. ಈ ಮಹಾಜನರ ವಾಸಕ್ಕಾಗಿ ಮೀಸಲಿರಿಸಿದ್ದ ಗ್ರಾಮವನ್ನು ಅಗ್ರಹಾರವೆಂದು ಕರೆದರೆ, ನಗರ, ಪಟ್ಟಣಗಳಲ್ಲಿ ಇವರಿಗಾಗಿ ಮೀಸಲಿರಿಸಿದ್ದ ಕೇರಿಗಳನ್ನು ಬ್ರಹ್ಮಪುರಿ ಎಂದು ಕರೆಯುತ್ತಿದ್ದರು. ಅಲ್ಲದೆ ಶೈವಧರ್ಮಿಯರಾದ ವೀರಶೈವರ ವಾಸಕ್ಕೆ ನೀಡುತ್ತಿದ್ದ ಊರುಗಳನ್ನು ಶಿವಪುರ, ಪುರವರ್ಗಗಳೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಅಗ್ರಹಾರಗಳಲ್ಲಿ ಬ್ರಾಹ್ಮಣೇತರರು ಸಹ ಅವರಿಗೆ ಮೀಸಲಿರಿಸಿದ್ದ ಕೇರಿಗಳಲ್ಲಿ, ತಮ್ಮ ಪರಂಪರಾಗತ ಕಸುಬುದಾರರು ವಾಸಮಾಡುತ್ತಿದ್ದರು. ಆದರೆ ಗ್ರಾಮಗಳ ಮೇಲಿನ ಅಧಿಕಾರವೆಲ್ಲ ಮಹಾಜನರದ್ದೆ ಆಗಿರುತ್ತಿತ್ತು. ಅಗ್ರಹಾರದ ಅಂದರೆ ಅಲ್ಲಿಗೆ ಸಂಬಂಧಿಸಿದ ಎಲ್ಲಾ ಆಡಳಿತ ವ್ಯವಹಾರ ನಿರ್ವಹಣಾ ಸೂತ್ರವೆಲ್ಲಾ ಮಹಾಜನರ ಕೈಲಿತ್ತು. ಅಗ್ರಹಾರಗಳಲ್ಲಿನ ಮಹಾಜನರ ವರ್ಣನೆಗಳು ಕರ್ನಾಟಕದ ಅನೇಕ ಶಾಸನಗಳಲ್ಲಿ ಕಾಣಸಿಗುತ್ತವೆ. ಮಹಾಜನರು ಆಚರಿಸಬೇಕಿದ್ದ ಷಟ್ಕರ್ಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳು ಮುಖ್ಯವಾಗಿದ್ದುದರಿಂದ ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ವಿದ್ಯಾಕೇಂದ್ರಗಳನ್ನೇ ಸ್ಥಾಪಿಸಿದಂತಾಗಿ ವಿದ್ಯಾಪ್ರಸಾರ ಸುಗಮವಾಗಿ ನಡೆಯುತ್ತಿತ್ತು. ಈ ಮಹಾಜನರು ದೇವಸ್ಥಾನದಲ್ಲಿ ಸಭೆ ಸೇರಿ ಗ್ರಾಮಾಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುತ್ತಿದ್ದರು. ಆ ಊರುಗಳ ಅಭಿವೃದ್ಧಿಗಾಗಿ ಕೆರೆ, ಕಟ್ಟೆ, ಕಾಲುವೆಗಳ

ನಿರ್ಮಾಣ, ವ್ಯವಸಾಯದ ಅಭಿವೃದ್ಧಿ, ಮಠ, ದೇವಸ್ಥಾನಗಳ ನಿರ್ಮಾಣ ಮತ್ತು ದೇವರಿಗೆ ನಡೆಸಬೇಕಾಗಿದ್ದ ಉತ್ಸವ ಮೊದಲಾದ ಆಚರಣೆಗಳು ಕ್ರಮಬದ್ಧವಾಗಿ ನಡೆಯುವಂತೆ ಗಮನ ಕೊಡುತ್ತಿದ್ದರು. ದೇವರ ಸೇವಾ ಕಾರ್ಯಗಳಿಗೆಂದು ದಾನಿಗಳು ನೀಡುವ ಭೂಮಿ, ಕಾಣಿಕೆ, ಧನ, ಸಂಪತ್ತುಗಳನ್ನು ರಕ್ಷಿಸಿ ಧಾರ್ಮಿಕ ಸೇವೆಗಳನ್ನು ನಡೆಸುವುದು ಅಗ್ರಹಾರದ ಮಹಾಜನಗಳ ಕರ್ತವ್ಯವಾಗಿದ್ದಿತು. ಅಲ್ಲದೆ ಗ್ರಾಮ/ ಊರುಗಳಲ್ಲಿ ತಂಟೆ, ತಕರಾರು, ವಿವಾದ ತಲೆದೋರಿದಾಗ ಮಹಾಜನರ ಸಮಕ್ಷಮದಲ್ಲಿ ನ್ಯಾಯ ತೀರ್ಮಾನವಾಗುತ್ತಿತ್ತು.

ಅಗ್ರಹಾರಗಳನ್ನು ರಚಿಸಿ ವ್ರಿತ್ತಿಗಳನ್ನಾಗಿ ವಿಂಗಡಿಸಿ, ಆವ್ರಿತ್ತಿಗಳನ್ನು ಅನುಭವಿಸುವ ವ್ಯಕ್ತಿಗಳು ಅನುಸರಿಸಬೇಕಾದ ರೀತಿನೀತಿಗಳನ್ನು ಕೆಲವು ಶಾಸನಗಳು ಉಲ್ಲೇಖಿಸಿವೆ. ಮೈಸೂರು ಜಿಲ್ಲೆಯ ಅಗ್ರಹಾರಗಳ ಬಗ್ಗೆ ಪ್ರಸ್ತಾಪಿಸುತ್ತಿರುವುದರ ಜೊತೆಯಲ್ಲಿ ಬ್ರಾಹ್ಮಣೇತರಿಗೆ ನೀಡುತ್ತಿದ್ದ ಪುರವರ್ಗ, ಕೊಡುಗೆ, ಉಂಬಳಿ ದಾನದ ಬಗ್ಗೆಯು ಕೆಲವು ಶಾಸನಗಳು ಉಲ್ಲೇಖಿಸಿರುವುದನ್ನು ಪ್ರಸ್ತಾಪ ಮಾಡಲಾಗಿದೆ. ಅಲ್ಲದೆ ಪಿರಿಯಾಪಟ್ಟಣ ತಾಲ್ಲೂಕಿನ ಹಿಟ್ಲ ಹೆಬ್ಬಾಗಿಲು ಗ್ರಾಮದಲ್ಲಿ ವಾಸವಿದ್ದವರ ಬಳಿಯಲ್ಲಿದ್ದ ತಾಮ್ರ ಶಾಸನವು ಕದಂಬ ಅರಸ ಶ್ರೀವಿಜಯ ಶಿವಮೃಗೇಶವರ್ಮನ ಆಳ್ವಿಕೆಯ ೭ನೇ ವರ್ಷದಲ್ಲಿ ''ಕಿರುನೀರಿನಲ್ಲಿ ಗ್ರಾಮವನ್ನು ಬ್ರಹ್ಮದೇಯವನ್ನಾಗಿಸಿ ಅಥರ್ವಣ ಶಾಖೆಗೆ ಸೇರಿದ ಔಪಗಹನಿಸ ಗೋತ್ರದ ಬ್ರಾಹ್ಮಣ ಪಿಂಗಳ ಸ್ವಾಮಿಯ ಮಗ ಸರ್ವಸ್ವಾಮಿಗೆ ದಾನ ನೀಡಿದ್ದನ್ನ'' ಉಲ್ಲೇಖಿಸಿದೆ. ಸಂಸ್ಕೃತದಲ್ಲಿರುವ ಶಾಸನದ ಕಾಲ ಕ್ರಿ.ಶ. ೪೬೨-೬೩ರ ಬಗ್ಗೆ E.C.Vol.4 ಸಂಪುಟ ಸಂಪಾದಕರು ಮುನ್ನುಡಿಯಲ್ಲಿ ಕದಂಬರಾಜ್ಯದಿಂದ ಬಹುದೂರವಿರುವ ಗ್ರಾಮದಲ್ಲಿ ಈ ಶಾಸನ ಲಭ್ಯವಾಗಿರುವುದರಿಂದ ಮೂಲತಃ ತುಂಗಭದ್ರಾ ಪ್ರದೇಶದ ಸುತ್ತ-ಮುತ್ತಲಿನ ಯಾವುದೊ ಸ್ಥಳದಿಂದ ಇಲ್ಲಿಗೆ ಬಂದಿರುವ ಸಾಧ್ಯತೆ ಇದೆ ಅಥವಾ ಗಂಗ ಪಲ್ಲವರೊಂದಿಗೆ ಕದಂಬ ಮೃಗೇಶವರ್ಮನು ಯುದ್ಧನಿರತನಾಗಿ ಗಂಗರಾಜ್ಯದಲ್ಲಿ ಮುನ್ನಡೆಯುತ್ತಿದ್ದಾಗ ಈ ದಾನ ನೀಡಿರಬಹುದೆಂದು ಊಹಿಸಬಹುದೆ ಎಂದು ಪ್ರಶ್ನೆ ಮಾಡಿದ್ದಾರೆ. (ಪಿರಿಯಾಪಟ್ಟಣ-೪೯) ಕೆ.ಆರ್.ನಗರ ತಾಲ್ಲೂಕಿನ ಗಳಿಗೇಕೆರೆ ಗ್ರಾಮದಲ್ಲಿ ದೊರೆತ ೯ನೇ ಶತಮಾನಕ್ಕೆ ಸೇರಿದ ರಣವಿಕ್ರಮನು ಕೊಳನೆಲ್ಲೂರನ್ನು ಆರೀತ ಗೋತ್ರದ ಪರಪದಿ ಭಟ್ಟರಿಗೆ ಬ್ರಹ್ಮದೇವನ್ನಾಗಿ ನೀಡಿದ್ದನ್ನು ಸಂಗಮದ ಪೆರ್ಮಾನಡಿ ಗಾಮುಂಡರ ಸಾಕ್ಷಿಯಾಗಿ ಕೊಟ್ಟು, ದಾನಕೊಟ್ಟ ಗ್ರಾಮದ ಎಲ್ಲೆಕಟ್ಟನ್ನು ನಿರ್ದೇಶಿಸಲಾಗಿದೆ. (ಕೃಷ್ಣರಾಜನಗರ ೧೦೫)

ಇದೇ ಕಾಲಕ್ಕೆ ಸೇರಿದ ಸಂಪಿಗೆಪುರ ಅರ್ಕೇಶ್ವರ ದೇವಾಲಯದಲ್ಲಿನ ಕಮ್ಮವಳ್ಳಿ ಗ್ರಾಮದ ಮಹಾಜನರು ಸೇರಿ ಕೊಣ್ಣಗಾಲಕ್ಕೆ, ಪುಡಿಗಾರೆ, ಕೊನವೂರ ಮತ್ತು ತಮ್ಮ ಸ್ವಂತ ಗ್ರಾಮದಿಂದ ದಾನವಾಗಿ ಬರುತ್ತಿದ್ದ ಹಣದಿಂದ ಕೆರೆ, ದೇವಸ್ಥಾನ, ಬಸದಿ, ಅತಿಥಿಗಳಾಗಿ ಮತ್ತು ಸಾರ್ವಜನಿಕರಿಗಾಗಿ ಕಟ್ಟಿದ ಸಭಾಂಗಣದ ನಿರ್ವಹಣೆಗೆ ಉಪಯೋಗಿಸಲಾಗುತ್ತಿದೆ. ಇದನ್ನು ಹಾಳು ಮಾಡಿದಂತಹವರನ್ನು ಅಗ್ರಹಾರದಿಂದ ಹೊರಹಾಕಲಾಗುವುದು ಎಂದಿದೆ (ಗುಂಡ್ಲುಪೇಟೆ-೯೨). ಹಿರೇಮಳಲಿ ಗ್ರಾಮದ ಬಸವನಗುಡಿಯಲ್ಲಿರುವ ಶಾಸನ ಕ್ರಿ.ಶ. ೯೭೬ರಲ್ಲಿ ಸತ್ಯವಾಕ್ಯ ಪೆರ್ಮಾನಡಿ ಗಂಗವಾಡಿ ೩೨೦೦೦ವನ್ನು ಆಳುತ್ತಿದ್ದಾಗ ಕುಪ್ಪೆನಾಡಿನ ಮಣಲೂರನ್ನು ಅಗ್ರಹಾರವನ್ನಾಗಿ ಮಾಡಿ ಮಯ್ದನ ಗೊಮ್ಮಯ್ಯನು ದಾನಮಾಡಿದ್ದನ್ನು ಉಲ್ಲೇಖಿಸಿದೆ. ಆದರೆ ದಾನ ಸ್ವೀಕರಿಸಿದವನ ಹೆಸರಿನ ಭಾಗ ತ್ರುಟಿತವಾಗಿದ್ದು, ದಾನಪಡೆದವರು ಯಾರೆಂದು ತಿಳಿಯುತ್ತಿಲ್ಲ.

(ಪಿರಿಯಾಪಟ್ಟಣ ೧೩೩) ಚಿಕ್ಕಕವಲಂದೆಯ ಸೋಮೇಶ್ವರ ದೇವಾಲಯದಲ್ಲಿನ ೧೦ನೇ ಶತಮಾನದ ಶಾಸನದಲ್ಲಿ ಬಹುಮುಖ್ಯ ಭಾಗಗಳು ಹಾಳಾಗಿದ್ದು, ಕಿರಿಯರವಿಲನ್ದಿಯತ್ತಿ... ಮಭಟ್ಟರ್ಗ್ಗೆ ಅಗ್ರಹಾ...ದ ಕಿಱುಯ ಕಮಿನ್ದಿ... ಎಂದಿದೆ. (ನಂಜನಗೂಡು ೩೦೭) ಹೊಯ್ಸಳ ವಿಷ್ಣುವರ್ಧನ ಬಿಟ್ಟಿಗದೇವನ ಆಳ್ವಿಕೆಯ ಕ್ರಿ.ಶ. ೧೧೧೬ರಲ್ಲಿ ದಂಡನಾಯಕ ಹುಣಿಸಮಯ್ಯನು ನಾಡಾಳ್ವನುಂ ಬೆಟ್ಟವಾಣಿನುಂ ಕಱಿಕಣ್ಠಜೀಯರ್ಗ್ಗೇ ಧಾರಾಪೂರ್ವಕ ಎರೆದು ಕೊಟ್ಟ ದೇವದಾನ ದೇಗುಲದ ತೆಂಗಲು ಗಱ್ದೆ ಇಕ್ಕಣ್ಡುಗ ಬೆದ್ದಲ್ ದೇಗುಲದ ಪಡುವಣ ಹುಣಿಸೆಯಿನ್ದ ಬಡಗಲ್ ಆ ಎಱ್ರಗದ ಓಣಿ ನುಗುಲುಣಿಯಿಂ ಬಡಗಲೇರಿನಲಿ ಕಲ್ಲಸಾಸನದಿಂ ಮೂಡಲಿಳಿದು ಹಳ್ಳದ ಹುಣಿಸೆಯಿನ್ ತೆಂಕಲೇರಿ ಬಗರ ಹಳ್ಳದಿಂ ಗೆದ್ದೆಯ ಪೆವರ್ವ್ವಿಡಿದು ಹಡುವಲೇರಿ ದೇಗುಲದಲು ಕೂಡಿತು... ಕುನ್ದಾಚಾರಿಯ ಬರಪಂ (ಕೃಷ್ಣರಾಜ ನಗರ ೧೧೮)

ತಮಿಳ್‌ನಲ್ಲಿರುವ ೧೨ನೇ ಶತಮಾನಕ್ಕೆ ಸೇರಿದ refers to the lake Tannineri hall (ಅಂಬಲಂ) in the agrahara which are caused to be made by ಪರದೇಶಿ. ಮಲಯರಸನ್ ಸಿರುಮಯನ್ ಕೊಟ್ಟುಪುಕ್ಕನ್ ಆಫ್ ಪೊನ್ನೂರ್. ಚಿತ್ರಾಮಾಸಮ್ ಇವ್ವಗ್ರಹಾರತ್ತು ತಣ್ಣೀರಿಯಮ್ ಅಮ್ಬ ಲಮುಮ್ ಇವನ್ ಶಿಯ್ಚ್ಚ ಧರ್ಮ್ಮಮ್. ಹೊನ್ನೂರು ಅಗ್ರಹಾರದಲ್ಲಿ ಒಂದು ಕೊಳ ಮತ್ತು ಒಂದು ಕೈಸಾಲೆಯನ್ನು ಕಟ್ಟಿಸಿ ದಾನ ನೀಡಿದ ಉಲ್ಲೇಖವಿದೆ. (ಯಳಂದೂರು ೧೬) ಚಿದರವಳ್ಳಿಯ ಸೋಮೇಶ್ವರದ ಕ್ರಿ.ಶ. ೧೨೧೨ರ ಶಾಸನ ಬಹಳಷ್ಟು ತ್ರುಟಿತವಾಗಿದ್ದು ಹೊಯ್ಸಳ ಅರಸ 'ಪಾಂಡ್ಯನಂ ಕಯ್ಸೆರೆಕೊಂಡು ಕಾಂಚಿನಾಥನಿಗೆ ಪೊಡುವಟ್ಟು ಅರಕೆಱೆಯನಗ್ರಹಾರ ದೋರ' ಎಂದಿದ್ದು ಭೂಮಿ, ಮನೆ ದಾನಕೊಟ್ಟಂತೆ ಇದೆ. (ತಿ.ನರಸೀಪುರ ೯೮) ಧರ್ಮಾಪುರದ ಚನ್ನಕೇಶವ ದೇವಾಲಯದ ರಂಗಮಂಟಪದ ಶಾಸನ ಕ್ರಿ.ಶ.೧೧೬೨ರಲ್ಲಿ ಹೊಯ್ಸಳ ನರಸಿಂಹದೇವ ದೋರಸಮುದ್ರದಲ್ಲಿ ಆಳ್ವಿಕೆ ಮಾಡುತ್ತಿರುವಾಗ ಉತ್ತರಾಯಣ ಸಂಕ್ರಮಣದಂದು ಆರಿದವಾಳಿಕೆಯ ತೊಗರಿವಾಡಿಯನ್ನು ಮನ್ನೆಯ ಭೂವನ ಹಳ್ಳಿಗೆ ಒಳಗಾದ ಹಳ್ಳಿಗಳ ಸಹಿತ ಧರ್ಮಪುರವೆಂದು ಹೆಸರನ್ನು ಕೊಟ್ಟು ಅಲ್ಲಿನ ಕೇಶವ ದೇವರ ರಂಗಭೋಗ ನೈವೇದ್ಯ ಸ್ಕಂದಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಪಾತ್ರ ಪಾವುಡಕ್ಕೆ ಸಲ್ಲುವಂತೆ ಮಹಾಪ್ರಧಾನಿ ದಂಡನಾಯಕ ಬಿಟ್ಟಿಯಣ್ಣ, ಹಿರಿಯ ಭಂಡಾರಿ ಹುಳ್ಳಯ್ಯ, ಪಸಾಯ್ತ ಸುರಿಗೆಯ ನಾಗಯ್ಯ, ಲಕುಮಯ್ಯನವರ ಸಮಕ್ಷಮದಲ್ಲಿ ದೇವಾಲಯದ ಶ್ರೀಧರ, ಮೂಲಿಗ ಇವರಿಗೆ ದತ್ತಿಯನ್ನಾಗಿ ಬಿಟ್ಟ ಭೂಮಿಯನ್ನು ಗುರುತಿಸಿ ನಾಲ್ಕು ಕಡೆಗಳಲ್ಲಿ ಗಡಿ ಕಲ್ಲುಗಳನ್ನು ನೆಟ್ಟು ದಾನ ಮಾಡಿದ್ದನ್ನು ಹೇಳಿದೆ. ಶಾಸನ ಮುಂದುವರಿದು ಮಹಾಪ್ರಧಾನಿ ಬಿಟ್ಟಯಣ್ಣನು ಧರ್ಮಪುರದ ಕೇಶವ ದೇವರಿಗೆ ಆ ವೂರಮನೆ, ಚನ್ನವೊಳೆವಾರು, ಹೊರನಾಡು, ಗಾಣದೆರೆ, ಕುಂಬಾರದೆರು, ಅಸಗದೆರು, ತೊತ್ತುದೆರು, ನಾವಿದದೆರು, ಭಂಡಿದೆರೆ, ವೊಡ್ಡದೆರೆ, ಮೇದದೆರೆ, ಸಾದದೆರೆ, ಉಡುವಲುದೆರೆ, ಅಯ್ನೂರುಗುಳಿಯ ಪನ್ನಾಯದೆರೆ, ಮುಂತಾದ ತೆರಿಗೆಗಳನ್ನು ಬಿಟ್ಟದ್ದಾಗಿ ಉಲ್ಲೇಖಿಸಿದೆ. (ಹುಣಸೂರು ೨೪)

ಸೋಮನಾಥಪುರದ ಕೇಶವ ದೇವಾಲಯದಲ್ಲಿರುವ ಕಾಲಾನುಕ್ರಮದ ಕ್ರಿ.ಶ. ೧೨೬೯, ೧೨೭೦, ೧೨೮೧, ೧೩೦೦ ಮತ್ತು ೧೩೨೬ರ ಶಾಸನಗಳು ಒಂದೇ ಅಗ್ರಹಾರಕ್ಕೆ ಸಂಬಂಧಿಸಿದ್ದು ವಿವಿಧ ಕಾಲಗಳಲ್ಲಿ ದಾನಮಾಡಿರುವ ಉಲ್ಲೇಖ ಈ ಕೆಳಗಿನಂತಿದೆ.

ಹೊಯ್ಸಳ ಮುಮ್ಮಡಿ ವೀರನಾರಸಿಂಹನ ಆಳ್ವಿಕೆಯಲ್ಲಿ ಅವನ ಪ್ರಿಯಪುತ್ರ ಸೋಮಯ್ಯ ದಂಡನಾಯಕನು 'ಶ್ರೀಮತು ಸರ್ವನಮಸ್ಯದ ಮಹಾಗ್ರಾಹಾರ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ'ವೆಂದು ಹೇಳಿದೆ. ಗ್ರಾಮದ ಮಧ್ಯದಲ್ಲಿ ಕೇಶವ ದೇವರು, ಗೋಪಾಲ, ವರದ, ಜನಾರ್ಧನ ದೇವರುಗಳ ದೇವಾಲಯದಿಂದ ಬರುವ ಉತ್ಪನ್ನ ರಾಜನ ಖಜಾನೆಗೆ ತಲುಪುತ್ತಿತ್ತು. ಆ ಹಣದಲ್ಲಿ ೩೦೦೦ ವರಹಗಳನ್ನು ದೇವರ ನಿರಂತರ ಉತ್ಸವಕ್ಕೆ ಹಾಗೂ ಪುರೋಹಿತರುಗಳಿಗೆ, ದೇವಾಲಯದ ಇತರ ಸಿಬ್ಬಂದಿಗಳಿಗೂ ವಿತರಿಸುವ ವ್ಯವಸ್ಥೆಯನ್ನು ಸೋಮಯ್ಯನ ಅಳಿಯ ಮಲ್ಲಿದೇವ, ಚಿಕ್ಕಕೇತೆಯ ದಂಡನಾಯಕರು ಮಾಡುತ್ತಿದ್ದರು. ಇದಕ್ಕಾಗಿ ೨೧ ವ್ರಿತ್ತಿಗಳು ಒಬ್ಬರಿಗೆ ಇಂತಿಷ್ಟು ಎಂದು ವಿತರಿಸಿದ ವಿವರ ಹಾಗೂ ವ್ರಿತ್ತಿಯನ್ನು ಪಡೆದ ಬ್ರಾಹ್ಮಣರ ವಿವರಗಳು ಇವೆ. (ತಿ.ನರಸೀಪುರ ೮೮) ಇದೇ ಅರಸು ತಾನು ರಚಿಸಿದ ಅಗ್ರಹಾರದಲ್ಲಿ ಬಿಜ್ಜಳೇಶ್ವರ, ಹೇಮೇಶ್ವರ, ಭೈರವೇಶ್ವರ ಮೊದಲಾದ ದೇವರುಗಳ ದೇವದಾನಕ್ಕೆ ಸರ್ವಶಾಸ್ತ್ರದುಪಾದ್ಯಾಯರಿಗೆ ದಾನಕೊಟ್ಟದ್ದನ್ನು ತಿಳಿಸಿದೆ. (ತಿ.ನರಸೀಪುರ ೯೬) ವೀರನಾರಸಿಂಹ ದೇವನು ಅದೇ ಅಗ್ರಹಾರದ ದೇವರಪೂಜೆ ಮಾಡುವ ಆಚಾರ್ಯರು, ವೈಷ್ಣವರು, ನಂಬಿಯಾರುಗಳಿಗೆ ತತ್ತಿನ ವ್ರಿತ್ತಿಯ ೧೪ರ ಪ್ರಾಪ್ತಿ ಬೆಳೆಯ ಕಾಲದಲ್ಲಿ ೫೩೦೦ ಸಲಗೆಯ ನೆಲ್ಲನ್ನು ವರ್ಷಂಪ್ರತಿ ನೀಡುವಂತೆ ಹೇಳಿದೆ. (ತಿ.ನರಸೀಪುರ ೯೧) ಅದೇ ಅಗ್ರಹಾರದ ೧೩೦೦ರಲ್ಲಿ ಹೊಯ್ಸಳ ವೀರಬಲ್ಲಾಳ ದೇವನು ಸೋಮನಾಥಪುರದ ಮಹಾಜನರಿಗೆ ಅಲ್ಲಿನ ಶೈವ ಮತ್ತು ವೈಷ್ಣವ ದೇವರ ಅರ್ಚನೆ ಮುಂತಾದವುಗಳನ್ನು ನಡೆಸುವಂತೆ ಆದೇಶ ಮಾಡಿರುತ್ತಾನೆ. ಈ ಮಹಾಜನರ ಅಧೀನದಲ್ಲಿ ೧೨೪ ವ್ರಿತ್ತಿಗಳಿದ್ದು ಅದರಲ್ಲಿ ಪಂಚಲಿಂಗ ಮತ್ತು ನರಸಿಂಹದೇವರಿಗೆ ವ್ರಿತ್ತಿ ೭ರಂತೆ, ಊರಿನ ಮಧ್ಯದಲ್ಲಿರುವ ಪ್ರಸನ್ನ ಕೇಶವ, ಲಕ್ಷ್ಮೀನಾರಸಿಂಹ, ಸಾರಂಗಪಾಣಿಗೆ ವ್ರಿತ್ತಿ ೧೪ ರಂತೆ ನಿಗದಿಪಡಿಸಿದೆ. ತಲಕಾಡಿನ ಕೀರ್ತಿನಾರಾಯಣ ದೇವಾಲಯದ ನಿರ್ವಹಣೆ, ಕೊಳ, ಕಾಲುವೆ, ಕೆರೆಯ ದುರಸ್ತಿ, ನಿರ್ವಹಣೆಯನ್ನು ಸೋಮನಾಥಪುರದ ಮಹಾಜನರು ನಿರ್ವಹಿಸುವಂತೆ ತಿಳಿಸಿದೆ. (ತಿ.ನರಸೀಪುರ ೮೯) ಅದೇ ಅಗ್ರಹಾರದ ಕ್ರಿ.ಶ. ೧೩೨೬ರ ಶಾಸನವು ಸೋಮನಾಥಪುರದ ಆರು ತತ್ತಿನ ಮಹಾಜನರಿಗೆ ಆ ಗ್ರಾಮ ಮಧ್ಯದ ೧೪ ವ್ರಿತ್ತಿಯ ವೈಷ್ಣವ ಮಹಾಜನರು ೨೧೦ ಗದ್ಯಾಣಕ್ಕೆ ಬದಲಾಗಿ ಅಧಿಕೆ ಮತ್ತು ಸಿದ್ದಾಯವನ್ನು ಕೇಶವ ದೇವಾಲಯದ ಶಿಲ್ಪಗಳಿಗೆ ೩೦ ಸಲಗೆಯ ಭೂಮಿಯನ್ನು ನಂತರ ಪಡೆಯಲಾಗಿದೆ. ವೈಷ್ಣವ ಮಹಾಜನರು ವಾರ್ಷಿಕ ಬಾಡಿಗೆಯಾಗಿ ೬ ಗದ್ಯಾಣವನ್ನು ಕೆರೆ, ಕಾಲುವೆಗಳ ನಿರ್ವಹಣೆಗಾಗಿ ಸಲ್ಲಿಸುವಂತೆ ಹೇಳಿದೆ. ಇತರ ಮಹಾಜನರಿಗೆ ತಗಾದೆ ಮಾಡುವಂತಿಲ್ಲ, ಅವರ ವ್ರಿತ್ತಿಯಿಂದ ಬರುವ ಆದಾಯದಿಂದ ದೇವಸ್ಥಾನದ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳುವಂತೆ ತಿಳಿಸಲಾಗಿದೆ. (ತಿ.ನರಸೀಪುರ ೯೦)

ಮೇಲೆ ನಮೂದಿಸಿರುವ ಶಾಸನಗಳೆಲ್ಲವೂ 'ವಿದ್ಯಾನಿಧಿ ಪ್ರಸನ್ನ ಸೋಮನಾಥಪುರ' ಅಗ್ರಹಾರಕ್ಕೆ ಅಲ್ಲಿಯ ವಿವಿಧ ದೇವರುಗಳ ಪೂಜಾ ಕೈಂಕರ್ಯಗಳ ಬಗ್ಗೆ ವ್ರಿತ್ತಿಗಳನ್ನು ವಿವಿಧ ಹಂತಗಳಲ್ಲಿ ನಿರ್ವಹಿಸಬೇಕೆಂಬುದನ್ನು ಈ ಶಾಸನಗಳು ಉಲ್ಲೇಖಿಸಿವೆ.

ಒಡ್ಡರಪಾಳ್ಯದ ದಕ್ಷಿಣಕ್ಕಿರುವ ಹೊಲದಲ್ಲಿನ ಶಾಸನ ಕ್ರಿ.ಶ. ೧೨೮೩ರಲ್ಲಿ ಬೀರೆಯ ದಂಡನಾಯಕನ ಮಕ್ಕಳು ಗೋಪಿನಾಥನು ಕಣಿಯ ಸ್ಥಳದ ಎಡತೊರೆಯನ್ನು

ಗೋಪಿನಾಥಪುರವೆಂದು ಪ್ರತಿನಾಮವಿಟ್ಟು ಅಗ್ರಹಾರವನ್ನಾಗಿ ಮಾಡಿ ಗುರು ನಲ್ಲಾನು ಚಕ್ರವರ್ತಿಯ ಮಗ ಸುಪ್ರಸಿದ್ಧನಾದ ಪ್ರತಾಪಚಕ್ರವರ್ತಿಗೆ ನಿಧಿ, ನಿಕ್ಷೇಪಗಳ ಜೊತೆ ಇತರ ಎಲ್ಲವನ್ನೂ ಅನುಭವಿಸುವುದು ಮತ್ತು ಎಲ್ಲಾ ವಿಧವಾದ ಸುಂಕಗಳನ್ನು ಮನ್ನಾ ಮಾಡಿ ಸೂರ್ಯಚಂದ್ರರಿರುವವರೆಗೆ ಸುಖವಾಗಿ ಅನುಭವಿಸುವಂತೆ ಹೇಳಿದೆ (ಹೆ.ಕೋ.೨೦). ಹಳೇ ಆಲೂರ ಚನ್ನಿಗರಾಯ ದೇವಾಲಯದಲ್ಲಿನ ಶಾಸನದಲ್ಲಿ ಕ್ರಿ.ಶ.೧೨೯೪ರಲ್ಲಿ ಹೊಯ್ಸಳ ವೀರಬಲ್ಲಾಳ ದೇವರು ಆಳ್ವಿಕೆ ಮಾಡುತ್ತಿರುವಾಗ ಶಿವಬಳನಾಯಕರಿಗೆ ತೊರೆನಾಡಿನಲ್ಲಿರುವ ಹೊಮ್ಮ ಮತ್ತು ಆಲೂರನ್ನು ಅಮ್ಮಲೆಯ ಚನ್ನಕೇಶವ ದೇವರ ಅಮೃತಪಡಿಗೆ ತ್ರಿಭಾಗಿಯಾಗಿ ಸಲ್ಲುವುದೆಂದು ಹೇಳಿ ಗ.೧೩೩ ಪ ೩ನ್ನು ಕಳೆದು ಹೊಮ್ಮ ಮತ್ತು ಆಲೂರನ್ನು 'ಅರಸುಗಂಡರಾಮ ಚತುರ್ವೇದಿ ಮಂಗಲ' ಅಗ್ರಹಾರವೆಂದು ಹೆಸರನ್ನಿಟ್ಟು ತೊರೆನಾಡ ಸೇನಬೋವರಿಗೆ ಅವರನ್ನು ಮಹಾಜನಗಳೋಪಾದಿಯಲ್ಲಿ ಸಮಸ್ತ ಬಳಿಸಹಿತ ೨ ವ್ರಿತ್ತಿಗಳನ್ನಾಗಿ ವಿಂಗಡಿಸಿ ಎರಡೂರ ಗೌಡರಿಗೆ ೧೪ ನಾಡುಗಳನ್ನು ಅನುಭವಿಸುವಂತೆ ಹೇಳಿದೆ. ಶಾಸನದ ಕೆಲವು ಮುಖ್ಯ ಸಾಲುಗಳು ತ್ರುಟಿತವಾಗಿದ್ದು ವಿಷಯವನ್ನು ಸ್ಪಷ್ಟಪಡಿಸಲಾಗುವುದಿಲ್ಲ (ಚಾಮರಾಜನಗರ ೧೮೩).

ತಡಿಮಾಲಂಗಿಯ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಕ್ರಿ.ಶ. ೧೨೯೦ರ ಶಾಸನ ಮಂಚಾಲೆಯ ಮಹಾಪ್ರಧಾನ ಪೆರುಮಾಳದೇವದಂಡನಾಯಕ ಶ್ರೀಮತ್ಸರ್ವನಮಸ್ಯದ ಅಗ್ರಹಾರ ದಕ್ಷಿಣ ವಾರಣಾಸಿ ಉದ್ಭವಸರ್ವಜ್ಞಶ್ರೀರಂಗಪುರವಾದ ಮಾಇಲಂಗೆ ಎಲೆ ನಡಸುವ ಖಂಡಿಕ ಬಾಲಶಿಕ್ಷೆ ಧರ್ಮಕ್ಕೆ ಮಾಇಲಂಗೆಯ ಅಶೇಷ ಮಹಾಜನರಿಂದ ಕೂಚಂಣನ ಮರಡಿಯ ದೇವಪ್ಪನಿಂದ ತತ್ಕಾಲೋಚಿತ ಕ್ರಯದ್ರವ್ಯವನ್ನು ಕೊಟ್ಟು ಕೊಂಡು ಚತುಸ್ಸೀಮೆಯನ್ನು ಗುರುತಿಸಿ ಕಲ್ಲು ನೆಟ್ಟು ಇಪ್ಪತ್ತರ ಮನೆ ಎರಡನ್ನೂ ಆಮಾಲಿಂಗೆಯಲಿ ಋಗ್ವೇದವನೋದಿಸುವ ಖಂಡಿಕದ ಉಪಾಧ್ಯಾಯರ ಜೀವಿತಕ್ಕೆ ವರ್ಷ ಒಂದಕ್ಕೆ ಗದ್ಯಾಣ ೬ ರಂತೆ, ನಾಗರ, ಕನ್ನಡ, ತಿಗುಳಾರ್ಯ್ಯವನೋದಿಸುವ ಬಾಲಶೀಕ್ಷೆ ಉಪಾಧ್ಯರ ಜೀವಿತಕ್ಕೆ ವರ್ಷ ಒಂದಕ್ಕೆ ಗದ್ಯಾಣ ೬ ರಂತೆ ಹಾಗೂ ವರ್ಷಂಪ್ರತಿ ತಮ್ಮ ತಮ್ಮ ಮಕ್ಕಳು ತಪ್ಪದೆ ಕೊಡುವಂತೆಯೂ ಮುಖ್ಯವಾಗಿ ಏನು ತೊಂದರೆ ಬಂದರೂ ಅಲ್ಲಿನ ಮಹಾಜನರು, ದೇವಪ್ಪನು ಸೇರಿ ಪರಿಹಾರವನ್ನು ತೆತ್ತು ಸರ್ವಬಾಧ ಪರಿಹಾರವಾಗಿ ಧರ್ಮ ನಡೆಸಿಕೊಡುವರು ಎಂದಿದೆ. (ತಿ.ನರಸೀಪುರ ೨೩೮) ಇದೇ ಕಾಲಕ್ಕೆ ಸೇರಿದ ತಿರಮಕೊಡಲು ನರಸೀಪುರದ ಶಾಸನ ವೀರನಾರಸಿಂಹದೇವರ ಆಳ್ವಿಕೆಯಲ್ಲಿ ಮಹಾಪ್ರಧಾನ ಪೆರುಮಾಳದೇವದಣಾಯಕರು ಶ್ರೀತ್ಸರ್ವ್ವನಮಶ್ಯದಾಗ್ರಹಾರವನ್ನು ಮಾಡಿ ದಕ್ಷಿಣ ವಾರಣಾಸಿ ಸರ್ವಜ್ಞಪ್ರಸನ್ನ ಚನ್ನಕೇಶವ ಪುರವಾದ ಆಲುಗೋಡ ಗ್ರಾಮದ ಶ್ರೀಕೇಶವದೇವರ ರಂಗಮಂಟಪ ಮತ್ತು ಗ್ರಾಮ ಸಭಾಮಂಟಪ ಮಾಡಿಸಿಕೊಟ್ಟದ್ದನ್ನು ತಿಳಿಸಿದೆ (ತಿ.ನರಸೀಪುರ ೭).

ಹೊಮ್ಮ ಗ್ರಾಮದ ಜನಾರ್ದನಸ್ವಾಮಿ ದೇವಾಲಯದ ಕ್ರಿ.ಶ. ೧೨೯೪ರಲ್ಲಿ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯಲ್ಲಿ ಹದಿನಾಡಿನ ಹೊಮ್ಮವನ್ನು ಪಿಳ್ಳೆನಯನಾರ್ ದೇವರಿಗೆ ಕಮ್ಮಟಿಗರು ಮತ್ತು ಪ್ರಭು ಗಾವುಂಡಗಳು ತೊರೆನಾಡಿಗೆ ಸೇರಿದ ೧೪ ನಾಡುಗಳನ್ನು ಕುಮಾರನ ನಾಡಿನ ತಗಡೂರು ಮತ್ತು ಮೋಗೂರನ್ನು ದಾನವಾಗಿ ಕೊಡುವಾಗ ಹಿಂದೆ ಅಮ್ಮಲೆಯ ಕೇಶವದೇವರಿಗೆ ಕೊಟ್ಟ ದಾನವನ್ನು ಹೊರತುಪಡಿಸಿ ಅರಸು ಗಂಡರಾಯ ಚತುರ್ವೇದಿಮಂಗಳಸರ್ಬ್ಬನಮಸ್ಯ ಅಗ್ರಹಾರ ಎಂದಿದ್ದು (ಮುಖ್ಯಭಾಗ ತ್ರುಟಿತವಾಗಿದೆ) ಹೊಮ್ಮ ಆಲೂರನ್ನು ಅರಸನ ಅಪ್ಪಣೆ

ಪಡೆದು ಧಾರೆಯನೆರೆದು ತೊರೆನಾಡ ನಾಡಸೇನಬೋವ, ಅಲ್ಲಪ್ಪ, ಚವುಡಪ್ಪ, ಸಿಂಗಣ್ಣ, ಕಾಮಣ್ಣ ಸೋಮಣ್ಣ ಇವರಿಗೆ ಅಯ್ವರಿಗೆ) ಆ ಮಹಾಜನಂಗಳೋಪಾದಿಯಲ್ಲಿ ಸಮಸ್ತ ಬಳಿಸಹಿತ ವೃತ್ತಿಗಳು ಸಲುವುದು. ಈ ಎರಡೂರ ಗೌಡರಿಗೆ ವಿಂಸೋತ್ತರ ಕೊಡಗಿ ಮಾನ್ಯಂಗಳು ಸಲುವುದು ಎಂದಿದೆ (ಚಾಮರಾಜನಗರ ೧೪೯) ಬಸವಾಪುರದಲ್ಲಿನ ಶಾಸನ ಹೊಯ್ಸಳ ವೀರಬಲ್ಲಾಳ ದೇವನ ಆಳ್ವಿಕೆಯಲ್ಲಿ ಮಹಾಪ್ರಧಾನಿ ನೀಲಿಗಿರಿ ಸಾದಾರ, ಇಮ್ಮಡಿ ರಾವುತರಾವು ಪೆರುಮಾಳ ದಂಡನಾಯಕರ ಮಕ್ಕಳು ಮಾದಪ್ಪ ದಂಡನಾಯಕರು ಮಾಡಿದ್ದ ವಿದ್ಯಾನಿಧಿಪ್ರಸನ್ನಕೇಶವಪುರದ ಅಗ್ರಹಾರವನ್ನು ಆ ನಗರದ ಶ್ರೀಮದಶೇಷ ಮಹಾಜನರು ತಾವು ಐಕ್ಯಮತ್ಯದಿಂದ ಕ್ರಿ.ಶ. ೧೩೧೬ ರಲ್ಲಿ ಕಾವದೇವ ಕ್ರಮಿತರ ಮಾಟವೆಗ್ಗಡೆತನ (ಹಿರಿತನ) ದಲ್ಲಿ ಪಟ್ಟಣಗೇರಿಗೆ ಪಟ್ಟಣಸಾಮಿ ಕಂಪಸೆಟ್ಟಿಯ ಮಗ ಮಾದಿಸೆಟ್ಟಿ ಮೊದಲಾದವರು ಎಂದು ಉಲ್ಲೇಖಿಸಿದೆ. ಬಹುಶಃ ಉಳಿದ ಭಾಗ ಸವೆದುಹೋಗಿದ್ದು, ಪೂರ್ಣ ಪಾಠ ಲಭ್ಯವಿಲ್ಲವಾಗಿದೆ. (ಚಾಮರಾಜನಗರ ೨೩೩) ಸತ್ಯಗಾಲವರದರಾಜಸ್ವಾಮಿ ದೇವಾಲಯದ ಶಾಸನ ಮುಮ್ಮಡಿ ವೀರಬಳ್ಳಾದೇವರ ಆಳ್ವಿಕೆಯಲ್ಲಿ ಕ್ರಿ.ಶ. ೧೩೨೧ರಲ್ಲಿ ಮೋದಕುಲದ ಪೆರುಮಾಳ ದಂಡನಾಯಕರ ಮಗ ಮಾಧವ ದಂಡನಾಯಕನಿಗೆ ತೊರನೂರನ್ನು ಸರ್ವಮಾನ್ಯವಾಗಿ ಸರ್ವಭಾದಾ ಪರಿಹಾರವಾಗಿ ದಾನ ಕೊಟ್ಟದನ್ನು ತಾಮ್ರ ಶಾಸನ ಉಲ್ಲೇಖಿಸಿದೆ. ಮುಂದುವರೆದು ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮತ್‌ಸರ್ಬನಮಸ್ಯದಗ್ರಹಾರವನ್ನು ಸಕಲ ವಿದ್ಯಾನಿಧಿಪ್ರಸನ್ನ ಮಾಧವಪುರವಾದ ಕುಡುಕೂರ ಶ್ರೀಮದಶೇಷಮಹಾಜನಗಳಿಗೆ ವೀರಬಲ್ಲಾಳದೇವರು ಮಣಲಿದನುಗೆರಿ ಸರಗೂರು ಉಗುನೆಯ ಹೊಸವಳ್ಳಿ, ಇಂದವಾಡಿ ಮೊದಲಾದ ಚತುಸ್ಸೀಮಾ ಸಮನ್ವಿತವಹ ಕಾಲುವಳಿಗಳು ಸಹಿತವಾಗಿ, ಸರ್ವನಮಸ್ಯವಾಗಿ ಸರ್ವಭಾದ ಪರಿಹಾರವಾಗಿ ದಾನ ನೀಡಲಾಗಿದೆ. (ಕೊಳ್ಳೆಗಾಲ ೩೦)

ಮದ್ದೂರು ಹೊಲದ ಕ್ರಿ.ಶ. ೧೩೨೮ರ ಶಾಸನ ಶ್ರೀಮತ್ಸರ್ವ್ವನಮಸ್ಯಮಹಾಗ್ರಹಾರಂ ಉದುಭವ ಸರ್ವ್ವಜ್ಞಶ್ರೀಮದುಪೇಂದ್ರಪುರವಾದ ಮದ್ದೂರ ಶ್ರೀಮದಶೇಷಮಹಾಜನಂಗಳು ತಂತ್ರ ಮಂತ್ರಾಛಾರ್ಯ್ಯ ಅಣ್ಣಂಚಟ್ಟೋಪಾಧ್ಯಾಯರ ಅಲ್ಲಾಳ ದೇವರ ಮಕ್ಕಳು ಆಶಮದೇವರ ಮಾಸವೆಗ್ಗಡೆ ಒಡೆತನದಲು, ವಿರಂಕಳಾನೆ ಪಿಚ್ಚನ್ ಮಾರಾಡೆಸೆಟ್ಟಿ ದೇವಣ್ಣನ ಮಗ ಮಾಧಸೆಟ್ಟಿ, ರಾಮಸೆಟ್ಟಿಯ ಮಗ ಕಂಚಿಸೆಟ್ಟಿ, ಅಲ್ಲದ ಸೆಟ್ಟಿಯ ಮಗ ಮಾಯಣ್ಣ ಮೊದಲಾದ ೬ ಪ್ರಜೆಗಳು ಚಿರದುವಿನ ಬೆದ್ದಲೊಳಗೆ ಹೊಸತಾಗಿ ಉಪೇಂದ್ರ ಪಟ್ಟಣವಕಟ್ಟುವಂತಾಗಿ ಬರೆದುಕೊಟ್ಟ ಶಿಲಾಶಾಸನದಲ್ಲಿ ೬ ಕ್ಕೆ ಅಗಲ ೨೦ ಕ್ಕೆ ಉದ್ದ ಮನೆಗಳನ್ನು ಪಟ್ಟಣಸ್ವಾಮಿಗಳಿಗೆ ೧೨ ಕ್ಕೆ ಅಗಲದ ೩೦ಕ್ಕೆ ಉದ್ದದ ೬ ಮನೆ, ಮಾನ್ಯ ಬರಣಗರಿಗೆ ಆರುಗೈಯಲಿ ೨೦ ಕೈಯುದ್ದದ ೨ ಮನೆ ಮಾನ್ಯ ಅಂತುಮಾನ್ಯದ ಮನೆ ೮ ಕಳೆದು ಉಳಿದ ಮನೆಗಳಿಗೆ ಮಾಡಿದ ದಿನ ಮೊದಲಾಗಿ ೩ ವರುಷ ಮಾನ್ಯ, ೪ನೇ ವರುಷ ೧೨ ಕ್ಕೆ ಅಗಲ ೩೦ ಕೈ ಉದ್ದದ ಮನೆ ಒಂದಕ್ಕೆ ಅಳಿವು ಅನ್ಯಾಯಗೂಡಿ ಕಟ್ಟುಗುತ್ತಿಗೆಯಾಗಿ ಮನೆ ವಣ ತೆರುವರು ಎಂದು ಕಟ್ಟುಗುತ್ತಿಗೆಯ ಬಗ್ಗೆ ಹೇಳಿರುವ ಶಾಸನವಿದು. (ಯಳಂದೂರು ೬೨) ರಾಘಪುರದ ಹೊಲದಲ್ಲಿರುವ ಶಾಸನ ಕ್ರಿ.ಶ.೧೩೨೯ರಲ್ಲಿ ವೀರಬಲ್ಲಾಳದೇವನ ಆಳ್ವಿಕೆಯಲ್ಲಿ ಅನೇಕ ಬಿರುದುಗಳನ್ನು ಹೊಂದಿರುವ ಮಾಧವ ದಂಡನಾಯಕನ ಮಗ ತೆರಕಣಾಂಬಿಯ ೧೪ ನಾಡುಗಳನ್ನು ಆಳುತ್ತಿದ್ದ ಭರತಜೀಯ ದಂಡನಾಯಕನಿಗೆ ಅರಸನು ಕೊಡಗುನಾಡಿನ ಗೊಮ್ಮಟ ಹಳ್ಳಿಯನ್ನು ಕಾಚಗೌಡನ ಮಾದೆಯ

ಹಳ್ಳಿಯನ್ನು ಒಳ್ಳೆಯ ಉದ್ದೇಶದಿಂದ (ಸಕಾರುಣನ್‌ಕೊಟ್ಟ) ಕೇತೆಯ ದಂಡನಾಯಕನಿಗೆ ಕೊಟ್ಟದ್ದನ್ನು ಆತ ತಮ್ಮರಮನೆಯ ಶ್ರೀಕರಣದ ರಾಘವದೇವನ ಮಕ್ಕಳು ನಾರಣದೇವಣ್ಣವರಿಗೆ, ರಾಘವದೇವನ ಹೆಸರಿನಲ್ಲಿ ರಾಘವಪುರದ ಅಗ್ರಹಾರವನ್ನಾಗಿ ಮಾಡುವುದಕ್ಕೋಸ್ಕರ ಕಾಚಗೌಡನ ಮಾದೆಯ ಹಳ್ಳಿಯನ್ನು ಆ ರಾಘವಪುರದ ಪ್ರವಿಷ್ಟವಾಗಿ ಕಾಲುವಳಿಯಾಗಿ ಇಂತು ಈ ಎರಡೂ ಹಳ್ಳಿಯನ್ನು ಸಮಸ್ತ ಬಳಿ ಸಹಿತವಾಗಿ ನಾನಾ ಗೋತ್ರದ ಬ್ರಾಹ್ಮಣರುಗಳಿಗೆ ೩೦ ವೃತ್ತಿಯನ್ನಾಗಿ ವಿಂಗಡಿಸಿ ಗಡಿಕಲ್ಲುಗಳನ್ನು ನೆಟ್ಟು ದಾನ ನೀಡಿದ್ದನ್ನು ಉಲ್ಲೇಖಿಸಿದೆ. (ಗು.ಪೇ.೪೦) ಅತ್ತಿಹಳ್ಳಿಯ ಕ್ರಿ.ಶ. ೧೩೬೭ರ ಶಾಸನ 'ಶ್ರೀಮದನಾದಿಯಗ್ರಹಾರಂ ಶ್ರೀರಾಮ ಪುರವಾದ ಬಂನೂರ ಶ್ರೀಮದಸೇಷಮಹಾಜನಂಗಳು ಚೊಕ್ಕಂಣನೂ ಹಿರಿ... ಹಳಿಗಳ ಸಮಸ್ತಪ್ರಜೆ ಗೌಡುಗಳೂ ಕೂಡಿ ಅತ್ತಿಹಳಿಯ ಸೀಮೆ... ಎಂದು ಹೇಳಿದ ಭಾಗ ನಾಶವಾಗಿದೆ. ಮತ್ತೊಂದು ಅದೇ ಊರಿನ ಶಾಸನದ ವಿಷಯ, ಮೇಲಿನ ಶಾಸನದ ಪಡಿಯಚ್ಚಿನಂತೆ ಇದ್ದು ಕಡೆಯಲ್ಲಿ ಕೊಡಿಗೆಯ ಕೊಟ್ಟು...ಎಂದಿದೆ.' (ಟಿ.ನರಸೀಪುರ ೭೩,೭೪)

ವಿಜಯನಗರದ ಅರಸ ಚಿಕ್ಕಕಂಪನ್ನವೊಡೆಯನ ಆಳ್ವಿಕೆಯ ಕಾಲದಲ್ಲಿ ರಾಮೇಶ್ವರ ದೇವಾಲಯದ ಕ್ರಿ.ಶ. ೧೩೭೨ರ ಶಾಸನದಲ್ಲಿ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮತ್ಸರ್ವನಮಸ್ಯದಮಹಾಗ್ರಹಾರ ಪ್ರಸನ್ನವಿಜಯಪುರದ ಮಹಾಜನರು ತಮ್ಮಲ್ಲಿ ಐಕ್ಯಮತ್ಯದಿಂದ ಊರಿನ ರಾಮನಾಥ ದೇವರ ಪಾತ್ರಭೋಗಕ್ಕೆ ೩೦ ಗದ್ಯಾಣವನ್ನು ಪ್ರತಿವರ್ಷ ಕೊಡಲು ಒಪ್ಪಿಕೊಳ್ಳುವರು ಚಾರಿಯೂರ ಶೂದ್ರರು ಕಟ್ಟಿದ ಏರಿಗೆ ಒಂದು ವರಹದಂತೆ, ಉಳಿದವರು ನನ್ನದು ತನ್ನದೆನ್ನದೆ ಅರ್ಧವರಹದಂತೆ ಪ್ರತಿ ಕುಟುಂಬದವರು ಗದ್ದೆಯಲ್ಲಿ ಬೆಳೆಯುವ ಖಂಡುಗಕ್ಕೆ ಕೊಡುವುದು. ತಾವು ಕೊಡುವ ೩೦ ಗದ್ಯಾಣವನ್ನು ೩ ಕಂತುಗಳಲ್ಲಿ ಕೊಡುವುದಾಗಿ ಹೇಳಿ, ಈ ವ್ಯವಸ್ಥೆಯನ್ನು ವಿರೋಧಿಸಿದ ಬ್ರಾಹ್ಮಣರನ್ನು ಗ್ರಾಮದಿಂದ ಬ್ರಾಹ್ಮಣ ಕುಲದಿಂದ ಬಹಿಷ್ಕರಿಸುವುದಾಗಿ ಹೇಳಿದ ಅಶೇಷಮಹಾಜನಗಳ ಹಸ್ತದ ವೊಪ್ಪದಲ್ಲಿ ಶಾಸನ ಹಾಕಿಸಿದೆ. (ಗಂಡ್ಲುಪೇಟೆ ೧೨)

ದೊಡ್ಡಕವಲಂದೆ ಮಸೀದಿಯ ಹಿಂಭಾಗದಲ್ಲಿನ ಕ್ರಿ.ಶ. ೧೩೭೬ರ ಶಾಸನ 'ಪರಮ ಮಹಾಪಾಸ್ಪತ ವ್ರತಾಚಾರ್ಯ್ಯರಪ್ಪ ಆಕಾಶವಾಸಿ ಸಾಂಕ್ಯಾದಿಗುರು ಅಯ್ಯನವರ ಮನೆಯವರಿಗೆ ವೀರಕಂಪಣ್ಣವೊಡೆಯರ ಕುಮಾರ ನಂಜಣ್ಣವೊಡೆಯರು ಕೊಟ್ಟ ಅಗ್ರಹಾರದ ವೃತ್ತಿ ಸರ್ವಮಾನ್ಯ' ಎಂದು ಹೇಳಿದೆ (ನಂಜನಗೂಡು ೩೦೮) ಹೆಬಸೂರ ವೆಂಕಟಗಿರಿಯಪ್ಪನ ಬಳಿಯಿದ್ದ ತಾಮ್ರಶಾಸನ ಕ್ರಿ.ಶ.೧೩೭೭ರ ವಿಜಯನಗರದ ಅರಸ ಬುಕ್ಕರಾಯನ ಮಗ ಇಮ್ಮಡಿ ಹರಿಹರನು ಹೆಬ್ಬಸೂರು ಅದಕ್ಕೆ ಸೇರಿದ ಲೋಕುಪ್ಪೆ, ಗುಮ್ಮನಪಲ್ಲಿ ವೊದಲಾದ ೧೧ ಗ್ರಾಮಗಳನ್ನು ಒಳಗೊಂಡಂತೆ ಬುಕ್ಕರಾಜಪುರವನ್ನು ಅಗ್ರಹಾರವನ್ನಾಗಿ ಮಾಡಿ ಅನೇಕ ಗೋತ್ರ ಸೂತ್ರದ ಬ್ರಾಹ್ಮಣರಿಗೆ ದಾನಕೊಟ್ಟ ವಿಷಯವಿದೆ (ಕೃಷ್ಣರಾಜನಗರ ೭೭). ನರಸೀಪುರ ತಾಲ್ಲೂಕು ಖಜಾನೆಯಲ್ಲಿನ ತಾಮ್ರ ಶಾಸನ ಕ್ರಿ.ಶ.೧೩೯೭ರಲ್ಲಿ ಹರಿಹರರಾಯನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ಮಲ್ಲಪ್ಪೊಡೆಯರ ಕುಮಾರನಾರಾಯಣದೇವೊಡೆಯ ತಮ್ಮ ತಂದೆ ಪ್ರತಾಪ ಹರಿಹರಮಹಾರಾಯರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಾಗಲೆಂದು ಅಗಸ್ತ್ಯನಾಥನ ಸನ್ನಿಧಿಯಲ್ಲಿ ಚನ್ನಪಟ್ಟಣ ದೊಳಗಣ ಕೊಳತೂರ ಗ್ರಾಮವನ್ನು 'ಪ್ರತಾಪಹರಿಹರಪುರ'ವೆಂದು ಅಗ್ರಹಾರವನ್ನು ಮಾಡಿ ೩೬ ವೃತ್ತಿಗಳನ್ನು

ಮಹಾಜನರಿಗೆ ಸರ್ವಮಾನ್ಯವಾಗಿ ಕೊಟ್ಟು ಸ್ವಹಸ್ತದೊಪ್ಪಹಾಕಿ ದಾನಮಾಡಿದೆ. (ತಿ.ನ.ಪುರ.೧೭) ಅಗರದಲ್ಲಿರುವ ಹನುಮಂತರಾಯನ ಗುಡಿ ಬಳಿಯಲ್ಲಿರುವ ಶಾಸನ ೧೪ನೇ ಶತಮಾನಕ್ಕೆ ಸೇರಿದೆ. ಈ ಶಾಸನ ಅನಾದಿಅಗ್ರಹಾರದ ಉಲ್ಲೇಖವನ್ನು ನಿರೂಪಿಸುತ್ತದೆ. ಹೆಚ್ಚು ತುಟ್ರಿತವಾಗಿರುವ ಈ ಶಾಸನ 'ಶ್ರೀಮತುಅನಾದಿಅಗ್ರಹಾರಂದುರ್ಗ್ಗಯರಗದ ಶ್ರೀಮದಙ ಬೆಮಲಾದೇವಂಗಳು ಆ ಊರಿನ ಬಿಜಯರು ಗ ೪, ಕುಮ್ಮಾರರು ಗ ೮, ಅಗಸರಿಗೆ ಗ ೮, ಅಕ್ಕಶಾಲೆಯರು ಗ ೮, ನಾಯಿಂದರು ಗ ೮ ಇವರಿಗೆ ಗುತ್ತಿಗೆ ಆಧಾರದಲ್ಲಿ ಕೊಟ್ಟು ಹೊರಸ್ಥಳದವರಿಗೆ ಗ ೧ರಂತೆ ಕಂದಾಯವನ್ನಾಗಿ ತೆರುವರು. ಅಲ್ಲದೆ ಅಳಿವು ಅನ್ಯಾಯಗಳನ್ನು ಯಾರು ಅಗ್ರಹಾರದೊಳಗೆ ಮಾಡುವಂತಿಲ್ಲ ಎಂದು ಹೇಳುವ ಶಾಸನವನ್ನು ಯಾರು ಯಾರಿಗೆ ಕೊಟ್ಟರೆಂದು ತಿಳಿಯುತ್ತಿಲ್ಲ.' (ಯಳಂದೂರು ೧೩೪).

ಮೂಡಲಗ್ರಹಾರದ ಮಾರಿಗುಡಿಯಲ್ಲಿನ ಶಾಸನ ಕ್ರಿ.ಶ. ೧೪೧೩ರಲ್ಲಿ ತಾಯೂರನಾಡಪ್ರಭು, ತಾಯೂರಖಚೆ ದಂಡನಾಯಕರ ಮಗ ಪೆರುಮಾಳದೇವ ನಲ್ಲುವ ಬಾಮಣಕಾಮಣನ ಮಗ ಪೆರುಮಾಳ ರಂಗಪ್ಪನ ಮಗ ಭಲ್ಲಪ್ಪ, ಲಖ್ಖಪ್ಪಗಳ ಮಗ ಚೆನಪ್ಪ ಅಂಕೆದಂಡನಾಯಕರ ಅಂಕಣ್ಣ, ನಿಂಗಪ್ಪನ ಕಾಮಣ್ಣನವರೊಳಗಾದ ಪ್ರಭುಗೌಡರು, ನಾಡಗೌಡ ಮೊದಲಾದವರು (ಅನೇಕ ಗೌಡರ ಹೆಸರಿನ ಉಲ್ಲೇಖವಿದ್ದು, ಶಾಸನದ ಬಹುಭಾಗ ತ್ರುಟಿತವಾಗಿರುವುದರಿಂದ, ಬಹಳಷ್ಟು ಹೆಸರುಗಳು ಹೇಳಲಾಗುವುದಿಲ್ಲ) ತಾಯೂರು... ಅಗ್ರಹಾರವಾಗಿ ಮಾಡಿಕೊಂಡ ಎಂಬುದನ್ನು ಗುರುತಿಸಿ... ಹದಿನೆಂಟು ಗಣಸಂಖ್ಯೆಯ ಬ್ರಾಹ್ಮಣರಿಗೆ ವ್ರಿತ್ತಿಯನ್ನಾಗಿ ವಿಂಗಡಿಸಿ ದಾನಕೊಟ್ಟಿರುವುದನ್ನು ಊಹಿಸಬಹುದು. ಗಡಿಮೇರೆಗಳನ್ನು ಗುರುತಿಸಿರುವುದರಲ್ಲಿ ಕೆಲವು ಮಾತ್ರ ಸ್ಪಷ್ಟವಾಗಿವೆ. ಈ ಶಾಸನದಲ್ಲಿ ಅಗ್ರಹಾರವನ್ನಾಗಿ ಮಾಡಿಕೊಂಡ ವಿಷಯವಿದ್ದುದರಿಂದ ದಾಖಲಿಸಲಾಗಿದೆ. (ಚಾಮರಾಜನಗರ ೧೦೪) ಸೋಮವಳ್ಳಿ ಗ್ರಾಮದ ಬ್ರಾಹ್ಮಣರ ಬಳಿಯಿದ್ದ ತಾಮ್ರ ಶಾಸನ, ವಿಜಯನಗರದ ಅರಸ ಮುಮ್ಮಡಿ ಹದಿರಹರರಾಯನು ಕ್ರಿ.ಶ ೧೪೨೨ರಲ್ಲಿ ಆಳುತ್ತಿರುವಾಗ ಅವನ ಮಹಾಮಂಡಲೇಶ್ವರ ಶ್ರೀವೀರ ಹರಿಹರರಾಯ ತಮ್ಮ ತಂದೆ ದೇವರಾಯ ಮಹಾರಾಯರಿಗೆ ಶಾಶ್ವತ ಪುಣ್ಯಲೋಕ ಪ್ರಾಪ್ತಿಯಾಗಲೆಂದು ತೆರಕಣಾಂಬಿಯ ರಾಜ್ಯಕ್ಕೆ ಸಲ್ಲುವ ಕುಲಗಣ ಸ್ಥಳದ ಬಾಗೆಸೋಮಹಳ್ಳಿಯನ್ನು ದೇವರಾಜಪುರವೆಂಬ ಹೆಸರಿನಿಂದ ಕರೆದು ಅಗ್ರಹಾರವನ್ನಾಗಿ ಮಾಡಿ ನಾನಾ ಗೋತ್ರದ, ನಾನಾ ಸೂತ್ರದ ನಾನಾ ನಾಮದೇಯದ ಮಹಾಜನರಿಗೆ, ಹನ್ನೆರಡು ಬ್ರಾಹ್ಮಣರಿಗೆ (ಹೆಸರು ಉಲ್ಲೇಖಿಸಿದೆ) ಒಂದೊಂದು ವೃತ್ತಿಯನ್ನು ಮಾಡಿ ಧಾರೆಯನೆರೆದು ಕೊಟ್ಟ ಧರ್ಮಶಾಸನ ಎಂದಿದೆ (ಗುಂಡ್ಲುಪೇಟೆ ೭೮).

ತ್ರಿಯಂಬರಕಪುರದ ತ್ರಿಯಂಬಕೇಶ್ವರ ದೇವಾಲಯದ ಅರ್ಚಕರಲ್ಲಿದ್ದ ತಾಮ್ರ ಶಾಸನ ಕ್ರಿ.ಶ. ೧೪೪೮ರಲ್ಲಿ ವಿಜಯನಗರದ ಅರಸು ಮಲ್ಲಿಕಾರ್ಜುನ, ಕಡಸೂರು ಗ್ರಾಮವನ್ನು ಪ್ರೌಢದೇವರಾಯಪುರವೆಂಬ ಅಗ್ರಹಾರವನ್ನು ಮಾಡಿ ಅದಕ್ಕೆ ಸೇರಿದ ಇತರ ಮೂರು ಗ್ರಾಮಗಳನ್ನು ಕೆಲವು ಬ್ರಾಹ್ಮಣರಿಗೆ ವ್ರಿತ್ತಿಯನ್ನಾಗಿ ವಿಂಗಡಿಸಿ, 'ತುಲಾಪುರುಷ ಮಹಾದಾನ' ನೀಡಿದ ಸಂದರ್ಭದಲ್ಲಿ ದಾನ ನೀಡಿದೆ. (ಗುಂಡ್ಲುಪೇಟೆ ೧೪೭) ಸರಗೂರಿನ ಕ್ರಿ.ಶ. ೧೪೯೩ರ ದಾನಶಾಸನ ಸಾಳುವ ಇಮ್ಮಡಿ ನಾರಸಿಂಹ ಮಲ್ಲನಾಯಕನ ಮಗ ನಾಗನಾಯಕ ಮತ್ತು ತಿಪ್ಪಾಂಬ ರಾಜನ

ಆದೇಶದಂತೆ ಮಣಿಯೂರ ಹೊನ್ನಯ್ಯನಹಳ್ಳಿ ಸ್ಥಳದ ಚಾಕೇನಹಳ್ಳಿಯನ್ನು ದೇವಸಮುದ್ರವೆಂಬ ಅಗ್ರಹಾರವನ್ನು ಮಾಡಿ ಅಲ್ಲಿ ವಾಸಮಾಡುವ ೪೦ ಬ್ರಾಹ್ಮಣರಿಗೆ ನೀರಿನ ಅಗತ್ಯವಿರುವುದರಿಂದ ಕೆರೆಕಟ್ಟಲು ಹಣದ ನೆರವು ನೀಡುವಂತೆ ಹೇಳಿದೆ. ದಾನವಾಗಿ ನೀಡಿದ ಪ್ರದೇಶದ ಚತುಸ್ಸೀಮೆಗೆ ಗಡಿಕಲ್ಲುಗಳನ್ನು ನಿಲ್ಲಿಸಿ ಗುರುತಿಸಿದೆ. (ಹೆಗ್ಗಡದೇವನ ಕೋಟೆ ೪೯) ಕರಕಲ ಮಾಡಹಳ್ಳಿಯ ಶಾಸನ ಕ್ರಿ.ಶ.೧೪೯೭ರಲ್ಲಿ ಶ್ರೀವೀರ ಉಮ್ಮತ್ತೂರ ನಂಜರಾಯ ಒಡೆಯರ ಮಕ್ಕಳು ಚನ್ನನಂಜರಾಜ ಒಡೆಯರು ಯಜುಃಶಾಖೆಯ ಆಪಸ್ತಂಬ ಸೂತ್ರದ ಕಾಶ್ಯಪ ಗೋತ್ರದ ಕಾಂಚಿಯ ಸಿಂಗಾವರ್‍ಯರ ಮಕ್ಕಳಾದ ನಾರಸಿಂಹಭಟ್ಟ ಉಪಾಧ್ಯಾರಿಗೆ ತಮ್ಮ ಕುಲದೇವರಾದ ಶ್ರೀಸೋಮೇಶ್ವರ ದೇವರ ಸನ್ನಿಧಿಯಲ್ಲಿ ತೆರಕಣಾಂಬಿಯ ನಾಡೊಳಗಣ ಪಂಮುವ ಮಾದಿಹಳ್ಳಿಯನ್ನು ಅದರ ಕಾಲುವಳಿ ಹನುಮಕಲ್ಲಿನ ಕೋಡಿಯಪುರ ಹೊರತಾಗಿ ಆ ಮಾದಿಹಳ್ಳಿಯ ಗ್ರಾಮ ಒಂದನೂ ಅರಮನೆಗೆ ತರುತ್ತಿದ್ದ ಕುಳವನು ಕಡಿದುಬಿಟ್ಟು ಆ ಗ್ರಾಮಕ್ಕೆ ಹೊಸದಾಗಿ ಚೆನ್ನನಂಜರಾಜಪುರವೆಂಬ ಹೆಸರನ್ನು ಕೊಟ್ಟು ಆ ಗ್ರಾಮವನ್ನು ಏಕಸ್ವಾಮ್ಯದ ಧರ್ಮ ಅಗ್ರಹಾರವಾಗಿ ಮಾಡಿ ದಾನವಾಗಿ ಕೊಟ್ಟ ಭೂಮಿಯ ಚತುಃಸೀಮೆಗೆ ವಾಮನಮುದ್ರೆ ಕಲ್ಲುಗಳನ್ನು ನೆಟ್ಟು ಗಡಿಗಳನ್ನು ಗುರುತಿಸಿದ ವಿವರವಿದೆ. (ಗುಂಡ್ಲುಪೇಟೆ ೧೬೮) ಸಂಸ್ಕೃತದಲ್ಲಿರುವ ಶಾಸನ, ಕ್ರಿ.ಶ.೧೪೯೭ರಲ್ಲಿ ಸಾಳ್ವವಂಶದ ಈಶ್ವರನ ಮಗ ನಂಜರಾಜವೊಡೆಯ ಸೋಮನಾಥಪುರದ ಅಗ್ರಹಾರವನ್ನು ಪುನಃ ಸ್ಥಾಪನೆಮಾಡಿ ಅನೇಕರಿಗೆ ದಾನಕೊಟ್ಟ ವಿಷಯವನ್ನು ಹೇಳಿದೆ. (ತಿ.ನರಸೀಪುರ ೯೫)

ನಂಜನಗೂಡು ಶಾನುಭೋಗ ಸುಬ್ಬರಾಯರಲ್ಲಿದ್ದ ತಾಮ್ರಶಾಸನ ಕೃಷ್ಣರಾಯನ ತಂದೆ ನರಸಭೂಪನು ಕ್ರಿ.ಶ.೧೪೯೮ರಲ್ಲಿ ಹಿರಿಯಬಿದರೂರು ಗ್ರಾಮವನ್ನು ನರಸಿಂಹಪುರವೆಂಬ ಹೆಸರಿನಲ್ಲಿ ಅಗ್ರಹಾರವನ್ನು ಮಾಡಿ ದಾನಕೊಟ್ಟಿರುವುದನ್ನು ಘನಗಿರಿ ರಾಜ್ಯಕ್ಕೆ ಸೇರಿದ ಹೊಸೂರುನಾಡಿನ ಹಿರಿಯ ಬಿದರೂರಿಗೆ, ವಿಜಯನಗರದ ಅರಸ ಕೃಷ್ಣರಾಯನು ಕ್ರಿ.ಶ. ೧೫೭೩ರಲ್ಲಿ ಕೃಷ್ಣರಾಯಪುರವೆಂಬ ಅಗ್ರಹಾರವನ್ನು ಮಾಡಿ ಅನೇಕ ಬ್ರಾಹ್ಮಣರಿಗೆ ೧೨ ವೃತ್ತಿಗಳನ್ನು ಪುನರ್ ದತ್ತಿಯಾಗಿ ನೀಡಿದ ಉಲ್ಲೇಖವಿದೆ. (ನಂಜನಗೂಡು ೩೯೮) ಸಾಗರೆ ಊರಬಾಗಿಲಲ್ಲಿರುವ ಶಾಸನವು ಸಗರೆನಾಡಿನ ಅಶೇಷ ಮಹಾಜನಗಳು ಸೇರಿ ತಮ್ಮಲ್ಲಿದ್ದ ಚತುರ್ವೇದಿಮಂಗಲದ ತಾಮ್ರ ಶಾಸನವನ್ನು ಶಿವನ ಸಮುದ್ರದ ತಿಪ್ಪರಸರಿಗೆ ತೋರಿಸಲಾಗಿ, ಅವರು ಕ್ರಿ.ಶ.೧೪೯೯ರಲ್ಲಿ ಆಳ್ವಿಕೆ ಮಾಡುತ್ತಿದ್ದ ನರಸಣ್ಣನಾಯಕವೊಡೆಯರ ಅಪ್ಪಣೆಯಂತೆ ಸಾಗರೆ ಗ್ರಾಮದ ಕೆರೆಯ ರಕ್ಷಣೆಗಾಗಿ ಬೀಚನಹಳ್ಳಿ ಗ್ರಾಮವೂ ಸೇರಿದಂತೆ ಈ ಎರಡೂ ಗ್ರಾಮಗಳಿಗೆ ಸಲ್ಲುವ ಎಲ್ಲಾ ಸುಂಕಸಾಮ್ಯವನ್ನು ಆ ಅಗ್ರಹಾರದ ಮಹಾಜನಗಳು ಅನುಭವಿಸುವಂತೆ ಪುನರ್‌ದತ್ತಿಯನ್ನಾಗಿಸಿ ವಾಮನ ಮುದ್ರೆ, ಗಡಿಕಲ್ಲುಗಳನ್ನು ನಿಲ್ಲಿಸಿ ದಾನಮಾಡಿದ ವಿವರವಿದೆ. ಮಹಾಜನರ ಬಳಿಯಿದ್ದ ತಾಮ್ರ ಶಾಸನದಲ್ಲಿ ವಿವರ ಏನಿತ್ತೆಂದು ತಿಳಿಯುತ್ತಿಲ್ಲ. (ಹೆಗ್ಗಡದೇವನಕೋಟೆ ೧೫೦)

೫೪೯ಯ ೧೫ನೆಯ ಶತಮಾನದ ಶಾಸನ ಸಿಂಗೇರಿಯ ಶ್ರೀನಾರಸಿಂಹ ಭಾರತಿವೊಡೆಯರ ಶಿಷ್ಯರಾದ ಭಾರತಿಪುರದ ಚಿಕ್ಕದೀಕ್ಷಿತರಿಗೆ ಶ್ರೀಮದನಾದಿಯಗ್ರಹಾರ ಶ್ರೀಮದುದ್ಭವಸರ್ವಜ್ಞಪುರವಾದ ಹಂಪಾಪುರದ ಶ್ರೀಮದಶೇಷಮಹಾಜನಂಗಳು ಹಳ್ಳಿಹಿರಿಯೂರ ಗೌಡಪ್ರಜೆಗಳು ಬ್ರಾಹ್ಮಣ ನರಸಿಂಹ ಭಾರತಿವೊಡೆಯರ ಧರ್ಮಛತ್ರ ನಡೆಯಲು ಗೃಹ, ಗದ್ದೆ, ಬೆದ್ದಲಿಗೆ ಕ್ರಯವನ್ನು

ಕೊಂಡುಕೊಟ್ಟರು. ಈ ಮರ್ಯಾದೆ ತಪ್ಪದೆ ನಡೆಯುವಂತೆ ಸಾಲುಗಾವೆಯ ಮಹಾಜನರು, ಮಿರ್ಲೆಯ ಮಹಾಜನರು, ಮಾರ್ಬಳೇಶ್ವರ ಬೆಟ್ಟದ ಗಣಾಚಾರಿ ಚಾಮಯದೇವ, ಸಮಯಕುಮಾರ ಕೊರಗಾಲ ಮಾಯನಾಯ್ಕರ ಸಮಕ್ಷಮ ಅಂದರೆ ಈ ಎರಡೂ ಅಗ್ರಹಾರದ ಮಹಾಜನರು ಮಿರ್ಲೆಯ ನಾರಸಿಂಹದೇವರ ಮುಂದೆ ಬರೆಸಿಕೊಟ್ಟಿರುವುದನ್ನು ಶಾಸನ ತಿಳಿಸುತ್ತದೆ. (ಕೃಷ್ಣರಾಜನಗರ೯೨) ಹೊಣಕನಹಳ್ಳಿಯ ಕ್ರಿ.ಶ.೧೫೦೬ರಲ್ಲಿ ವಿಜಯನಗರದ ಅರಸು ನರಸಿಂಹ ಮಹಾರಾಯರ ಆಳ್ವಿಕೆಯಲ್ಲಿ ಪೆನುಗೊಂಡೆಯ ದೇಪಂಣವೊಡೆಯರ ಮಕ್ಕಳು ವೀರಚಿಕ್ಕವೊಡೆಯರು ರಾಜ್ಯದಲ್ಲಿ ಷೋಡಷ ಮಹಾದಾನಗಳನ್ನು ಮಾಡಲು ಅದರೊಳಗಣ ಮಹಾಭೂತಘಟವೆಂಬ ಮಹಾದಾನವನ್ನು ಶ್ರೀರಂಗಕ್ಷೇತ್ರವಾದ ಉಭಯಕಾವೇರಿ ಮಧ್ಯೆ ಚಂದ್ರಪುಷ್ಕರಣಿ ತೀರದಲ್ಲಿರುವ ರಂಗನಾಥದೇವರ ಸನ್ನಿಧಿಯಲ್ಲಿ ಲಕ್ಷ್ಮೀನಾಥದೀಕ್ಷಿತರ ಮಗ ಷಡ್‌ದರ್ಶನ ಪಾರಂಗತನಾದ ರಂಗನಾಥ ಭಟ್ಟರಿಗೆ ತೆರಕಣಾಂಬಿಯ ಕುಡುಗನಾಡ ಹೊನ್ನರಹಳ್ಳಿಯೆಂಬ ಗ್ರಾಮದಿಂದ ಭಂಡಾರಕ್ಕೆ ಸಲ್ಲುವ ಸಮಸ್ತ ಕುಳವರಿ ವಿರಾಡಕಾಣಿಕೆ, ಬೇಡಿದ ಹೊನ್ನುಹೊಂಬಳಿ, ದವಸಧಾನ್ಯ ಗಣಾಚಾರದೆರೆ, ಕಮ್ಮರದೆರೆ, ಕುಳದೆರೆ, ಎಲೆಯ ತರಗು, ಮಾದಾರಿಕೆ ಉಪಿನಕಾವಲಿ, ಜೀಯರ ತೆರಿಗೆ ಸುಂಕ ಮೊದಲಾದ ಸಮಸ್ತ ತೆರಿಗೆ ಹೊರಿಗೆ ಎಲ್ಲವನ್ನು ಕುಳವ ಕಡಿದು ಸರ್ವಮಾನ್ಯದ ಅಗ್ರಾರವಾಗಿ 'ಚಿಕ್ಕರಾಯಪುರ'ವೆಂಬ ಹೆಸರಿನಲ್ಲಿ ಚತುಸೀಮೆ ಯಲ್ಲಿ ವಾಮನ ಮುದ್ರೆಕಲ್ಲು ನಡೆಸಿ ಶಿಲಾಶಾಸನಮಾಡಿ ದಾನಕೊಟ್ಟ ವಿವರವಿದೆ (ಗುಂಡ್ಲುಪೇಟೆ ೨೬).

ನಂಜನಗೂಡು ನಂಜುಂಡೇಶ್ವರನ ದೇವಸ್ಥಾನದಲ್ಲಿ ನಾರಾಯಣಸ್ವಾಮಿ ಗುಡಿಯಲ್ಲಿರುವ ಕ್ರಿ.ಶ.೧೫೧೭ರ ಶಾಸನ, ಸಾಳುವ ಗಜಸಿಂಹ ಚಿಕ್ಕೋಜಿಯವರ ಕುಮಾರ ವೀರಖಥೆಯ, ನಂಜುಂಡೇಶ್ವರನ ಮೂರನೇ ಜಾವದ ಅಭಿಷೇಕ ನೈವೇದ್ಯಕ್ಕೆ ಪಟ್ಟಣದ ಅಷ್ಟಗ್ರಾಮ ಸೀಮೆಯ ಬಳಗುಳದ ಸಂಮತು ವ್ರಿತ್ತಿಯ ಸೀಮೆಯೊಳಗೆ ಚಂದಗಾಲಕ್ಕೆ ಸಲ್ಲುವ ಪುರ ಈ ೨ ಗ್ರಾಮಗಳನ್ನು ಅಗ್ರಹಾರವನ್ನಾಗಿ ಮಾಡಿ, ಸ್ವಾಮಿ ಸನ್ನಿಧಿಯಲ್ಲಿ ಗ್ರಾಮಕ್ಕೆ ಸಲ್ಲುವ ಸುವರ್ಣಾದಾಯ ಸುಂಕ ಸಹಿತವಾಗಿ ಧಾರೆಯನೆರೆದು ಶಿಲಾಸ್ಥಾಪನೆಯನ್ನು ಮಾಡಿ ಸ್ವಾಮಿಗೆ ಅಭಿಷೇಕ, ಗಂಧಪುಷ್ಪ, ದೂಪ, ದೀಪ, ನೈವೇದ್ಯ, ತಾಂಬೂಲವನ್ನು ಮಾಡಿ ಬರುವ ವಿಸಗಳ ವಿರೂಪಾಕ್ಷ ಭಟ್ಟರು ನಂಜಿನಾಥದೇವರುಗಳ ಲಕ್ಷಮಣ್ಣ, ದನಿಗೆಲಿಯ ರೇಮಣ್ಣನ ಮಕ್ಕಳು ನಂಜುಂಡದೇವ, ಗುರುಮೂರ್ತಿವೊಡೆಯನ ಮಗ ದೇವರಾಯ, ಬೊಯಲಾಪುರದ ಮೆಗಣದ ಮಕ್ಕಳು ಅಭಿಷೇಕ ನೈವೇದ್ಯವನ್ನು ದಿನವೂ ಮಾಡಿ ಆ ಪ್ರಸಾದವನ್ನು ತಾವೇ ಕೊಂಡುಹೋಗುವಂತೆ ಹೇಳಿ ಈ ಪಾರುಪತ್ಯಗಾರಿಕೆಯನ್ನು ಬಳಗುಳದ ಅಣ್ಣಮರಸಹೆಬ್ಬಾರರು ವಿಚಾರಿಸಿಕೊಳ್ಳುವಂತೆಯೂ ಮತ್ತು ಪುತ್ರಪೌತ್ರ ಪಾರಂಪರಿಕವಾಗಿ ಈ ಸೌಲಭ್ಯವನ್ನು ಅನುಭವಿಸುವಂತೆ ಹೇಳಿದೆ. (ನಂಜನಗೂಡು ೧೭) ಬೆಲವತ್ತ ಗ್ರಾಮದ ಕ್ರಿ.ಶ.೧೫೧೭ರ ಶಾಸನ ಸಾಳುವ ಗಜಸಿಂಹ ಚಿಕ್ಕೊಡೆಯರ ಕುಮಾರ ವೀರವೊಡೆಯರು ಬೆಲ್ಲವತ್ತದ ಗ್ರಾಮವನ್ನು ಪುರಸಹ ಸರ್ವಸಾಮಾನ್ಯದ ಅಗ್ರಹಾರವನ್ನಾಗಿ ಮಾಡಿ ಶ್ರೀ ನಂಜುಂಡೇಶ್ವರ ದೇವರಿಗೆ ಮೂರನೆ ಜಾವದ ಅಭಿಷೇಕ ನೈವೇದ್ಯವನ್ನು ಆಚಂದ್ರಾರ್ಕ ಸ್ಥಾಯಿಯಾಗಿ ಮಾಡುವ ಬ್ರಾಹ್ಮಣರು ಲಕ್ಷುಮಣ, ನಂಜುಂಡದೇವ, ವಿರುಪಾಕ್ಷಭಟ್ಟರು, ದೇವರಾಯ, ಅಣ್ಣಿಭಟ್ಟರು ಅಗ್ರಹಾರದ ಸುಂಕ ಮೊದಲಾದವುಗಳನ್ನು ಅನುಭವಿಸುವಂತೆ ಹೇಳಿ

ಇದನ್ನು ಬಳಗುಳದ ಅಣ್ಣಮರಸ ಹೆಬ್ಬಾರು ವಿಚಾರಿಸಿಕೊಳ್ಳುವಂತೆ ಉಲ್ಲೇಖವಿದೆ (ಮೈಸೂರು ೧೧೬).

ಮೇಲಿನ ಎರಡೂ ಶಾಸನಗಳನ್ನು ಹಾಕಿಸಿ ದಾನಕೊಟ್ಟಿರುವುದು ಒಬ್ಬರೇ. ಆದರು ದಾನ ಕೊಟ್ಟ ವಿಷಯವನ್ನು ಹಾಕಿಸಿರುವ ಶಾಸನ ಇರುವುದು ಬೇರೆ ಬೇರೆ ಕಡೆಸಿಕ್ಕಿದ್ದು ಅಲ್ಪಸ್ವಲ್ಪ ವ್ಯತ್ಯಾಸವಿದ್ದು ಕಾಲ ಮಾತ್ರ ಒಂದೇ ಆಗಿದೆ. ಹೊಂಗನೂರು ಗೋವಿಂದರಾಜು ಅಗ್ರಹಾರದ ರಸ್ತೆ ಬದಿಯಲ್ಲಿನ ಕ್ರಿ.ಶ.೧೫೧೭ ಶಾಸನ ಶ್ರೀಮನ್ ಮಹಾಕೃಷ್ಣರಾಯರ ನಿರೂಪದಿಂದ ಸಾಳುವ ಗೋವಿಂದ ರಾಜಯ್ಯನವರು ಹೊಂಗನೂರನ್ನು ಅಗ್ರಾರವನ್ನಾಗಿ ಪರಿವರ್ತಿಸಿ ಅಶೇಷ ಮಹಾಜನರಿಗೆ ಪೂರ್ವದಲ್ಲಿ ಮಾನ್ಯ ಮಾಡಿದ್ದ ಕ್ಷೇತ್ರ, ಗದ್ದೆಗಳನ್ನು ಪರಿವರ್ತನೆ ಮಾಡಿ ಅಗ್ರಹಾರಕ್ಕೆ ಬಿಟ್ಟು, ಮಹಾಜನಂಗಳಿಗೆ ಪೂರ್ವದ ಹೊಂಗನೂರ ಬ್ರಹ್ಮಮಂಡಲದ, ಅವರವರ ಮಾನ್ಯದ ಮನೆಗಳೂ ಅವರವರಿಗೆ ಸರ್ವಮಾನ್ಯವಾಗಿ ಸಲ್ಲುವುದು ಎಂದು ಹೇಳಿ ಬಿಟ್ಟ ಬಿಡಾರ ಸೊಲ್ಲಗೆ ಮಲಿಗೆ, ಸುಂಕ-ಸೂಜಿಗೆ ಪೂರ್ವಮರ್ಯಾದಿಯಿಲ್ಲವೆಂದು ಉಲ್ಲೇಖಿಸಿದೆ. (ಚಾಮರಾಜನಗರ ೧೬೦) ಆಲಕೆರೆ ಗ್ರಾಮದ ಕ್ರಿ.ಶ.೧೫೪೯ರ ಶಾಸನದಲ್ಲಿ ಕೃಷ್ಣರಾಯರ ಆಳುತ್ತಿರುವಾಗ ಶಿರಪ್ರಧಾನ ಸಾಳುವ ಗೋವಿಂದ ರಾಜಯ್ಯನು ಹದಿನಾಡ ಮದ್ದೂರಿಗೆ ಸಲುವ ಆಲಕೆರೆ ಬೆನಕೆರೆಗೆ ಸಲುವ ಮೊದ್ದೂರ ಸೀಮೆಯನ್ನು ಕೃಷ್ಣರಾಯ ಮಹಾರಾಯರಿಗೆ ಧರ್ಮವಾಗಬೇಕೆಂದು ಮದ್ದೂರ ಆಲಕೆರೆಯ ಆಶೇಷಮಹಾಜನರಿಗೆ ಪಂಪಾಕ್ಷೇತ್ರದ ವಿರೂಪಾಕ್ಷಲಿಂಗದ ಸನ್ನಿಧಿಯಲ್ಲಿ ಕೊಟ್ಟ ಅಗ್ರಾರ. ದಾನವಾಗಿ ಕೊಟ್ಟ ಚತುಸ್ಸೀಮೆಯೊಳಗುಳ್ಳ ಗದ್ದೆ ಬೆದ್ದಲು ತೋಟ, ತುಡಿಕೆ, ಅಣೆ ಅಚ್ಚುಕಟ್ಟು, ಮಗ್ಗ, ಮನವಣ ಸುಂಕ ಸುವರ್ನಾದಾಯ ಮೊದಲಾದ ಸರ್ವಸ್ವಾಮ್ಯವನ್ನು ಬಳಸಹಿತ ಅನುಭವಿಸುವಂತೆ ಕೃಷ್ಣರಾಯರ ನಿರೂಪದಿಂ ಎಂದು ಉಲ್ಲೇಖಿಸಿರುವ ಶಾಸನ. (ಯಳಂದೂರು ೧೬೮)

ಮಾದಾಪುರದ ಕ್ರಿ.ಶ.೧೫೪೯ರ ಶಾಸನ, ವೀರಕೃಷ್ಣರಾಯರ ನಿರೂಪದಿಂದ ಮಹಾಪ್ರಧಾನ ಸಾಳುವ ಗೋವಿಂದರಾಜ, ಉಮ್ಮತ್ತೂರ ಸೀಮೆಯ ಮೂಗೂರ ಸ್ತಳದ ಮಾದವಪುರವನ್ನು ಉಮ್ಮತ್ತೂರ ದೇವರಾಯ ಅರಸರ ಮಗ ನಂಜಯ್ಯ ಅರಸನು ವಿರೂಪಾಕ್ಷ ವಿಠಲ ದೇವರ ಸನ್ನಿಧಿಯಲ್ಲಿ ಸಹಿಹಿರಣ್ಯೋದಕ ಸಹಿತ ಸರ್ವಮಾನ್ಯ ಅಘ್ರಾರವಾಗಿ ಧಾರೆಯೆರೆದು ಗ್ರಾಮಕ್ಕೆ ಸಲ್ಲುವ ಸ್ವಾಮ್ಯ ಸುಂಕ ಸಹ ಬಿಟ್ಟದ್ದನ್ನು ಹೇಳಿದೆ. (ತಿ.ನರಸೀಪುರ ೧೨೮) ಇದೇ ಕಾಲದ ಆಲಕೆರೆ ಲಿಂಗದ ಗುಡಿ ಬಳಿಯ ಶಾಸನ, ಕೃಷ್ಣರಾಯರ ಆಳ್ವಿಕೆಯಲ್ಲಿ ಅವನ ಶಿರಪ್ರಧಾನರಾದ ಸಾಳುವ ಗೋವಿಂದ ರಾಜಯ್ಯನವರು ಕೃಷ್ಣರಾಯರಿಗೆ ಒಳಿತಾಗಲೆಂದು ಪಂಪಾ ಕ್ಷೇತ್ರದ ವಿರೂಪಾಕ್ಷಲಿಂಗನ ಸನ್ನಿಧಿಯಲ್ಲಿ ಧಾರಾಪೂರ್ವಕ ಧಾರೆಯನೆರೆದುಕೊಟ್ಟ ಆಲಕೆರೆ ಬೆನಕೆರೆಯನ್ನು 'ಕೃಷ್ಣರಾಜ ಸಮುದ್ರವೆಂಬ ಹೆಸರಿನಲ್ಲಿ ಅಗ್ರಹಾರ'ವನ್ನು ಮಾಡಿ ಆಲಕೆರೆಯ ನಾನಾ ಗೋತ್ರದ ಮಹಾಜನರಿಗೆ ವ್ರಿತ್ತಿಗಳನ್ನಾಗಿ ವಿಂಗಡಿಸಿ ಚತುಃಸೀಮೆಯ ಗಡಿಗಳನ್ನು ಗುರುತಿಸಿ ದಾನ ಮಾಡಿದೆ. (ಯಳಂದೂರು -೧೬೮)

ಕಲಿಯೂರಿನ ಕ್ರಿ.ಶ೧೫೨೧ರ ಶಾಸನ ವಿಜಯನಗರದ ಅರಸ ಕೃಷ್ಣದೇವರಾಯನು ಹಿಂದೆ ಹೊಯ್ಸಳ ಬಲ್ಲಾಳರಾಯನು ತಾಮ್ರ ಶಾಸನ ಮೂಲಕ ಕೊಟ್ಟಿದ್ದ ಮುಳುರಸ್ತಲದ ಕಲವೂರು ಖಿಲವಾಗಿದ್ದುದನ್ನು ಜೀರ್ಣೋದ್ಧಾರ ಮಾಡಿ ಕೃಷ್ಣಾಪುರವೆಂದು ಪ್ರತಿನಾಮದೇಯವನ್ನು ಕೊಟ್ಟು ಕಲವೂರನ್ನು ಅಗ್ರಹಾರವನ್ನಾಗಿ ಸಹಿರಣ್ಯೋದಕ ಧಾರಾಪೂರ್ವಕ ದಾನವನ್ನು ಮಾಡಿ ಚತುಸ್ಸೀಮೆ

ಒಳಗಾಗಿ ಸಲುವ ಹಳಿಹಿರಿಯೂರು ಕೆರೆ, ಕಟ್ಟೆ, ಕಾಲ್ವೆ, ಹೊಳೆ, ಬೆಟ್ಟ, ಆಡು, ಹುಲ್ಲು, ಹೊರೆ, ಒಕ್ಕಲುಸುಂಕ, ಸುವರ್ಣಾದಾಯ ಮಗ್ಗ, ಮನೆವಣ ಮೊದಲಾದುವುಗಳನ್ನು ೩೭ ವ್ರಿತ್ತಿಗಳನ್ನಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ಕೊಡಲಾಗಿದೆ. (ತಿ.ನರಸೀಪುರ ೨೨೫) ಮರಡೀಪುರದ ಕ್ರಿ.ಶ.೧೫೨೮ರ ಶಾಸನದಲ್ಲಿ (ಮುಖ್ಯ ಭಾಗಗಳ ಅಕ್ಷರಗಳು ಸವೆದಿವೆ) ಶ್ರೀ ಕೃಷ್ಣದೇವರಾಯರು ವಿಜಯನಗರದಲ್ಲಿ ಆಳುತ್ತಿರುವಾಗ, ಸಾಳುವ ಗೋವಿಂದರಾಜ ವೊಡೆಯನು ವೊರಡಿಯಪುರವೆಂಬ ಗ್ರಾಮುವನ್ನು ಸರ್ವಮಾನ್ಯದ ಅಗ್ರಹಾರವಾಗಿಸಿ ಸಹಿರಣ್ಯೋದಕದಾನಧಾರಾ ಪೂರ್ವಕವಾಗಿ ಮಾಡಿದ ವಿಷಯವಿದೆ. (ತಿ.ನರಸೀಪುರ ೧೩೨) ಇದೇ ಕಾಲಕ್ಕೆ ಇದೇ ಅರಸನಿಗೆ ಸೇರಿದ ಮರಡೀಪುರದ ಶಾಸನದಲ್ಲಿ ಶ್ರೀಕೃಷ್ಣದೇವರಾಯರಿಗೆ ಪುಣ್ಯವಾಗಲೆಂದು ಕಂಮುಳಿ ಗುಂಟಗಾಲ ಭೂಮಿಯವೊಳಗಾದ ಗ್ರಾಮಕ್ಕೆ ಸಲ್ಲುವ ಚತುಸ್ಸೀಮೆಯಲ್ಲಿನ ನಿಧಿನಿಕ್ಷೇಪ ಅಷ್ಟಭೋಗ ತೇಜ ಸ್ವಾಮ್ಯವನ್ನು ನಿಮ್ಮ ಸಿಷ್ಯ, ಪುತ್ರ, ಪೌತ್ರ ಪಾರಂಪರಿಯಾಗಿ ಅನುಭವಿಸುವಂತೆ ಕೊಟ್ಟ ಮೊರಡಿಯ ಗ್ರಾಮಕ್ಕೆ ಕೃಷ್ಣರಾಯಪುರವೆಂಬ ಅಗ್ರಹಾರವನ್ನು ಮಾಡಿ ದಾನಕೊಟ್ಟದ್ದನ್ನು ಉಲ್ಲೇಖಿಸಿದೆ. (ತಿ.ನರಸೀಪುರ ೧೩೩) ಯಳದೂರು ಲಕ್ಷ್ಮಿನರಸಿಂಹ ದೇವಾಲಯದ ಎಡಭಾಗದ ಶಾಸನ ಕ್ರಿ.ಶ.೧೫೩೧ರಲ್ಲಿ ದುರ್ಗಾಗ್ರಹಾರದಲ್ಲಿ ನೆಲಸಿದ ಶ್ರೀಯೋಗನರಸಿಂಹನ ಪ್ರತಿಷ್ಠಾಕಾಲದಲ್ಲಿ ನೇಮಿತವಾದ ತಿರುಕೊಳಲು ಅನೇಕ ಕಾಲ ಖಿಲವಾಗಿ ಬಿದ್ದಿರುವಾಗ ಸಿಂಗಣ್ಣನಾಯಕರ ಪ್ರಧಾನಿ ಮಲ್ಲರಸಯ್ಯನವರ ಮುದ್ರಾಮನುಷ್ಯನು ಆದವಾನಿ ಸೀಮೆಯ ಬದನೆಯಹಾಳ ಮಲ್ಲಯ್ಯನ ಮಗ ರಾಮಯ್ಯನು ಈ ದುರ್ಗಾಗ್ರಹಾರ ಪಾರುಪತ್ಯ ಮಾಡುತ್ತಲೂ ತಿರುಕೊಳಕ್ಕೆಕಲ್ಲನ್ನುಕಟ್ಟಿಸಿ ತಿರುಕೊಳದಲ್ಲಿನ ಹೂಳನ್ನು ತೆಗೆಸಿ ಜೀರ್ಣೋದ್ಧಾರ ಮಾಡಿದೆ. (ಯಳಂದೂರು ೬೭)

ಮೈಸೂರಿನ ಕೃಷ್ಣಾಚಾರ್ಯರಲ್ಲಿದ್ದ ಕ್ರಿ.ಶ.೧೫೩೫ ತಾಮ್ರ ಶಾಸನ ಈಗ ಪುರಾತತ್ವ ಇಲಾಖೆಯಲ್ಲಿದ್ದು ವಿಜಯನಗರದ ಅರಸು ಅಚ್ಚುತರಾಯ ಹಿರಿಯಮರಲಿ ಗ್ರಾಮವನ್ನು ಅಚ್ಚುತೇಂದ್ರಪುರವೆಂದು ಪ್ರತಿನಾಮದೇಯವನ್ನಿಟ್ಟು ಮಹಾದೇವ ಸೋಮಾಜಿಗೆ ನೀಡುತ್ತಾನೆ. ಬೇವಿನಕುಪ್ಪೆ ಮತ್ತು ಚಿಕ್ಕಮರಲಿ ಗ್ರಾಮಗಳು ಸೇರಿದಂತೆ ಸೋಮಯಾಜಿ ೩೦ ವ್ರಿತ್ತಿಗಳನ್ನಾಗಿ ವಿಂಗಡಿಸಿ ೧೪ ವ್ರಿತ್ತಿಗಳನ್ನು ತನಗಾಗಿ, ಉಳಿದ ೧೬ ವ್ರಿತ್ತಿಗಳನ್ನು ನರಸಿಂಹಯ್ಯನಿಗೆ ೮ ಮತ್ತು ಅಪ್ಪುದೀಕ್ಷಿತರಿಗೆ ೮ ವ್ರಿತ್ತಿಗಳನ್ನು ನೀಡಿದೆ. ದಾನಕೊಟ್ಟ ವ್ರಿತ್ತಿ ಭೂಮಿಗಳ ಎಲ್ಲೆಯನ್ನು ವಿಂಗಡಿಸಿ ವಿವರಿಸಿ ಗಡಿಕಲ್ಲುಗಳನ್ನು ನೆಟ್ಟು ದಾನ ಮಾಡಿದ ಉಲ್ಲೇಖವಿದೆ. (ಮೈಸೂರು ೧೦೫) ತ್ರಿಯಂಬಪುರದ ತ್ರಿಯಂಬಕೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೫೩೫ರ ಶಾಸನ ನಂಜಿನಾಥ ಜೋಯಿಸರ ಮಕ್ಕಳು ಸ್ಥಾನಿಕ ಅಯ್ಯಪಗಳು ತೆರಕಣಾಂಬೆ ಸೀಮೆಯ ಪಡಗುನಾಡಸ್ಥಳದ ಹುಲ್ಲಾನಕ್ಕೆ ಪ್ರತಿನಾಮವಾದ ಕಮಲಾಪುರದ ಅಘ್ರಾರದಲ್ಲಿ ಸರ್ವಮಾನ್ಯವಾಗಿ ಶಾಸನಸ್ಥವಾಗಿ ನಡೆದುಬಂದ ಪಂಡಿತರ, ಪಂಚಕರ ಎಲ್ಲೆಯ ತೋಟ ಮೊದಲಾದವನ್ನು ಅಘ್ರಾರದಲ್ಲಿರುವ ಒಂದು ವ್ರಿತ್ತಿಗೆ ೧೦೦ ಗ ದಂತೆ ಒಟ್ಟು ಸ್ಥಳವನ್ನು ತ್ರಯಂಬಕದೇವರ ದೇವಸ್ಥಾನದ ಖಜಾನೆಯಿಂದ ೨೫೦ ವರಹಕ್ಕೆ ಮಾರಾಟ ಮಾಡಿದ ವಿಷಯವಿದೆ. ಮಾರಾಟ ಮಾಡಿದ ಗದ್ದೆ, ಬೆದ್ದಲು, ತೋಟ, ಹಣ್ಣುಗಳನ್ನು ಸಂಗ್ರಹಿಸುವ ಮನೆ ಮುಂತಾದ ವಿವರಗಳನ್ನು ನೀಡಿದೆ. ಈ ಕ್ರಯಪತ್ರ ಮಾಡುವಾಗ ಮಕ್ಕಳು, ಸಂಬಂಧಿಗಳೆಲ್ಲರ ಒಪ್ಪಿಗೆ ಪಡೆದು ದಾನ ಮಾಡಿದ ವಿವರವಿದೆ. (ಗುಂಡ್ಲುಪೇಟೆ ೧೩೭)

ಹಳ್ಳದಪುರ (ಬೇಚಿರಾಕ್)ದ ಬಸವನಗುಡಿಯಲ್ಲಿನ ಕ್ರಿ.ಶ.೧೫೫೦ರ ಶಾಸನ ವೀರ ಪ್ರತಾಪ ಸದಾಶಿವರಾಯರ ಆಳ್ವಿಕೆಯಲ್ಲಿ ವಿದ್ಯಾಧರ ಮಹಾಪಾತ್ರ ಅರಸುಗಳಿಗೆ ಅವರ ನಾಯಕತನಕ್ಕೆ ನೀಡಿದ ತೆರಕಣಾಂಬಿಯ ಸೀಮೆಯ ಕಲ್ಲಹಾಳಿಯಸ್ಥಳದ ಹಳ್ಳದಪುರದ ಗ್ರಾಮವನ್ನು ಯಜು ಶಾಖೆಯ ಆಪಸ್ತಂಭ ಸೂತ್ರದ ಲಕ್ಷ್ಮೀಪತಿ ಅಯ್ಯನವರಿಗೆ ಅಗ್ರಹಾರವನ್ನಾಗಿ ಮಾಡಿ ಕೊಟ್ಟು ೫೫ ವರಹದ ತೆರಿಗೆಯನ್ನು ತಮ್ಮ ತಾಯಿಗೆ ಧರ್ಮವಾಗಲಿ ಎಂದು ಬಿಟ್ಟು ತಮ್ಮ ಪುತ್ರ ಪೌತ್ರ ಪರಂಪರೆಯಾಗಿ ಸುಖದಿಂದ ಅನುಭವಿಸುವಂತೆ ಹೇಳಿದೆ. (ಗುಂಡ್ಲುಪೇಟೆ ೮೫)

ಅರಕಲವಾಡಿಯ ಕ್ರಿ.ಶ. ೧೫೫೫ರಲ್ಲಿ ಸದಾಶಿವರಾಯರು ಆಳುತ್ತಿರುವಾಗ ಮಹಾಮಂಡಲೇಶ್ವರ ಗೊಬೂರ ತಿಂಮೆಯದೇವ ಮಹಾಅರಸಿನ ಮಗ ರಂಗರಾಜಯ್ಯ ದೇವ ಮಹಾಅರಸು ತೆರಕಣಾಂಬೆಯ ವರದರಾಜದೇವರಿಗೆ ರಥೋತ್ಸವಕ್ಕೆ ಶ್ರೀಕೃಷ್ಣ ಜಯಂತಿಯಂದು ಶ್ರೀ ವಿಠಲೇಶ್ವರ ಸನ್ನಿಧಿಯಲ್ಲಿ ಅರಕಲವಾಡಿಯ ಗ್ರಾಮ, ಅದಕ್ಕೆ ಸಲ್ಲುವ ಕಾಲುವಳ್ಳಿ ಮಲ್ಲಯ್ಯನಪುರ ಸೇರಿದಂತೆ ಅರಕಲವಾಡಿಗೆ 'ಪ್ರತಿನಾಮಧೇಯವಾದ ರಂಗರಾಜಪುರವನು' ಸರ್ವ ಮಾನ್ಯವಾಗಿ ಆ ಗ್ರಾಮಕ್ಕೆ ಸಲ್ಲುವ ಗದ್ದೆ, ಬೆದ್ದಲು, ತೋಟ, ತುಡಿಕೆ, ಅಡುಮನೆ, ಕಳ, ಕೊಡಾರ ಸುಂಕ, ಚರಾದಾಯ, ಆಡುದೆರೆ, ಗಣಾಚಾರ, ಪಂಚಾಳ ಎಲ್ಲವೂ ಸೇರಿದಂತೆ ಆ ಚಂದ್ರಾರ್ಕ್ಕ ಸ್ಥಾಯಿಯಾಗಿ ನಡೆದು ಬರುವಂತೆ ಭೂದಾನ ಮಾಡಿದೆ. (ಚಾಮರಾಜನಗರ ೩೦೧)

ಸನ್ಯಾಸಿಪುರದ ಜೋಡಿದಾರ ನರಸಿಂಹ ಭಟ್ಟರಿಂದ ಕ್ರಿ.ಶ. ೧೫೬೮ರ ತಾಮ್ರ ಶಾಸನ ಶ್ರೀವೀರಪ್ರತಾಪ ಶ್ರೀಕಂಠದೇವ ಮಹಾಅರಸುಗಳ ಕುಮಾರ ವೀರವೀರೇದೇವ ಮಹಾಅರಸುಗಳು ಅಷ್ಟಾವಧಾನಿ ಸೋಮನಾಥ ದೀಕ್ಷಿತರ ಮಗ ನಾರಸಿಂಹಭಟ್ಟರಿಗೆ ಸಿಂಗಪಟ್ಟಣದ ಸ್ಥಳದ 'ವೀರಾಂಬುಧಿಯನು ಅಗ್ರಹಾರವನ್ನಾಗಿ' ಮಾಡಿ ಆ ಪ್ರದೇಶದ ಚತುಃಸೀಮೆಯನ್ನು ಗುರುತಿಸಿ ವಾಮನಮುದ್ರೆ ಕಲ್ಲುನೆಟ್ಟು ಅಲ್ಲಿಯ ನಿಧಿ ನಿಕ್ಷೇಪಗಳೆಲ್ಲವನ್ನು ಪುತ್ರ ಪೌತ್ರ ಪರಂಪರೆಯಾಗಿ ಅನುಭವಿಸುವಂತೆ ಸಾಕ್ಷಿ ಸಹಿತ ದಾನ ಮಾಡಿದ್ದನ್ನು ಹೇಳುತ್ತದೆ. (ಪಿರಿಯಾಪಟ್ಟಣ ೧೧೪) ಗಳಿಗೇಕೆರೆ ಊರಬಾಗಿಲ ಬಳಿಯ ಕ್ರಿ.ಶ.೧೫೭೭ರ ಶಾಸನ ಶ್ರೀರಂಗದೇವ ಮಹಾರಾಯರು ಪೆನುಗೊಂಡಿಯಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಶ್ರೀಬಯಪ್ಪ ನಾಯಕರ ಕೃಷ್ಣಪ್ಪನಾಯಕರ ಕುಮಾರ ವೆಂಕಟಪ್ಪನಾಯಕರು, ರಾಮಚಂದ್ರಭಟ್ಟರ ಮಕ್ಕಳು ವಿಠಲಭಟ್ಟರಿಗೆ, ನರಸಿಂಹಪುರ ಸೀಮೆಗೆ ಸಲುವ ಹಂಪಾಪುರದ ಸ್ಥಳದ ಗಳಿಗೆಕೆರೆಗೆ ಪ್ರತಿನಾಮವಾದ 'ರಾಮಾಪುರವೆಂಬ ಅಗ್ರಹಾರವನ್ನು' ಜೀರ್ಣೋದ್ಧಾರ ಮಾಡಿ ತಾಯಿ ರಾಮಮ್ಮನವರಿಗೆ ಪುಣ್ಯವಾಗಬೇಕೆಂದು ಗ್ರಾಮಕ್ಕೆ ಉಂಟಾದ ಬಾಡಿ, ಬೇಡಿಗೆ, ಬೇಗಾನ ಸುಂಕ, ತಳವಾರಿಕೆ ಸುಂಕ ಮೊದಲಾದ ಈತಿ ಭಾದೆಗಳು ಇಲ್ಲವೆಂದು ದಾನ ಮಾಡಿದ ಉಲ್ಲೇಖವಿದೆ. (ಕೃಷ್ಣರಾಜನಗರ ೧೦೪) ನಂಜನಗೂಡಿನಲ್ಲಿರುವ ಕ್ರಿ.ಶ. ೧೫೮೦ರ ತಾಮ್ರಪಟದಲ್ಲಿ ಚಿನ್ನಬಸಪ್ಪ ಅರಸ ಅನೇಕ ಅಗ್ರಹಾರಗಳನ್ನು ನಿರ್ಮಿಸಿ ವೇದ, ವೇದಾಂಗವನ್ನು ಬಲ್ಲಂತಹ ಬ್ರಾಹ್ಮಣರಿಗೆ, ವೈಷ್ಣವರಿಗೆ ಮುಖ್ಯಸ್ಥರಾದ ವಿಜೇಂದ್ರನಿಗೆ ಶಾಸ್ತ್ರಗಳ ಬಗ್ಗೆ ಅಧಿ ಕಾರಯುತವಾಗಿ ಹೇಳಬಲ್ಲ ಶೈವದ್ವೈತ ಅಪ್ಪಯ್ಯ ದೀಕ್ಷಿತರಿಗೆ ದಾನವಾಗಿ ನೀಡಿದ ವಿಷಯವಿದೆ. (ನಂಜನಗೂಡು ೧೧೬)

ಪಿರಿಯಾಪಟ್ಟಣದ ಚೆನ್ನಿಗರಾಯ ದೇವಸ್ಥಾನದ ಕ್ರಿ.ಶ. ೧೬೫೦ರ ಶಾಸನ ಶ್ರೀಕಂಠರಾಜಯ್ಯನವರ ಕುಮಾರ ಮಾಂಡಳೀಕ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ

ಶ್ರೀಪಿರಿಯಾ ರಾಜಯ್ಯದೇವ ಮಹಾಅರಸು ಈ ಪಟ್ಟಣವನ್ನು ಜೀರ್ಣೋದ್ಧಾರ ಮಾಡಿ ತಮ್ಮ ಹೆಸರಿನಲ್ಲಿ 'ಪಿರಿಯರಾಜಪಟ್ಟಣ'ವೆಂದು ಹೆಸರುಕೊಟ್ಟು ಇಂದಿನಿಂದ ನಮ್ಮ ರಾಜ್ಯದ ದೊರೆಯಾಗಲಿ ಪಕ್ಕದ ರಾಜ್ಯದ ದೊರೆಯಾಗಲಿ ೧೮ ಜಾತಿ, ೧೦೧ ಕುಲದವರೂ ಈ ಶಾಸನದಲ್ಲಿಯ ಸಿಂಗಪಟ್ಟಣವನ್ನು ಪಿರಿಯರಾಜಪಟ್ಟಣವೆಂಬ ಹೆಸರಿನಿಂದ ಕರೆಯುವಂತೆ ಹೇಳಿದೆ. (ಪಿರಿಯಾಪಟ್ಟಣ ೧) ದಾಸನೂರು ಹೊಲವೊಂದರಲ್ಲಿರುವ ಶಾಸನ ೧೬ನೇ ಶತಮಾನಕ್ಕೆ ಸೇರಿರುವ ಕಲ್ಲಿನಲ್ಲಿ ಮೂರು ಸಾಲುಗಳು ಮಾತ್ರವಿದ್ದು ಅದನ್ನು ಯತಾವತ್ತಾಗಿ ಉಲ್ಲೇಖಿಸಿದೆ. ''ಬಾಚರಸರ ಅಂಗರಸರ ಸರ್ವಮಾನ್ಯದ ಅಗ್ರಹಾರ ಶ್ರೀಭುಜಲಿಂಗಲಿಂಗನೇ ಗತಿ'' ಎಂದಿದೆ. (ನಂಜನಗೂಡು ೨೯೧)

ಭೇರ್ಯಗ್ರಾಮದ ಆಂಜನೇಯ ದೇವಸ್ಥಾನದ ಕ್ರಿ.ಶ. ೧೬೦೬ರ ಶಾಸನದಲ್ಲಿ ದೇವರಾಜೊಡೆಯರ ಕುಮಾರ ದೇವರಾಜ ಮಹೀಪಾಲಕರು ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿರುವಾಗ ಭೇರ್ಯವೆಂಬ ಗ್ರಾಮಕ್ಕೆ 'ದೇವರಾಜಪುರವೆಂದು ಪ್ರತಿನಾಮದೇಯವನ್ನಿಟ್ಟು ಅಗ್ರಹಾರವನ್ನಾಗಿ' ರಚನೆ ಮಾಡಿ ವಿದ್ಯಾವಂತರಾದ ಬ್ರಾಹ್ಮಣರಿಗೆ - ಗಜದಾನ, ಅಶ್ವದಾನ, ಮೊದಲಾದ ದಾನದಿಂದ ನಮ್ಮ ಸಮಸ್ತ ಪಿತೃಗಳಿಗೂ ಅಕ್ಷಯ ಪುಣ್ಯಲೋಕ ಪ್ರಾಪ್ತವಾಗಲೆಂದು ಹೊಸೂರ ನರಸಿಂಹಪುರಕೆ ಸೇರಿದ ಭೇರ್ಯಗ್ರಾಮಕ್ಕೆ ಸಲ್ಲುವ ೧೨ ಉಪಗ್ರಾಮಗಳು ಸೇರಿ ಒಂದು ಸಾವಿರ ಸ್ಥಳವನ್ನು ೯೨ ೩/೪ ವೃತ್ತಿಗಳನ್ನಾಗಿ ವಿಂಗಡಿಸಿ ದಾನ ಮಾಡಿದ ಉಲ್ಲೇಖವಿದೆ ಮತ್ತು ಲಕ್ಷ್ಮೀನಾರಾಯಣನು ಸುಪ್ರಸನ್ನನಾಗಲಿ ಎಂದು ಕೃಷ್ಣಾರ್ಪಣ ಬುದ್ಧಿಯಿಂದ ಸರ್ವಮಾನ್ಯವಾಗಿ ಧಾರೆಯೆರೆದಿದ್ದಾನೆ. (ಕೃಷ್ಣರಾಜನಗರ ೮೭) ತಿರುಮಕೂಡಲು ನರಸೀಪುರದ ತಾಮ್ರಶಾಸನ ಕ್ರಿ.ಶ. ೧೬೨೨ರಲ್ಲಿ ಮೈಸೂರು ರಾಜೊಡೆಯರು ತಾವು ಅಗ್ರಹಾರ ಮಾಡಿಸಬೇಕೆಂಬ ಅಭಿಲಾಷೆಯ ಭಿನ್ನವತ್ತಳೆಯನ್ನು ವೆಂಕಟಪತಿರಾಯರಿಗೆ ಕಳಿಸಲಾಗಿ, ಅವರು ಅನುಮತಿ ಕೊಟ್ಟರು. ಈ ಮೊದಲೆ ಬೊಕ್ಕಸದಲ್ಲಿರುವ ತಾಮ್ರಶಾಸನವನ್ನು ಪಡೆದು ರಾಜೊಡೆಯರ ಮೊಮ್ಮಗ ಚಾಮರಾಜವೊಡೆಯರಿಗೆ ಕಾಣಾಂಚಿಯಾಗಿ ಬಂದ ಉಮ್ಮತ್ತೂರ ಚಾವಡಿಗೆ ಸಲ್ಲುವ ಮೂಗೂರ ಸ್ಥಳದ ತಾಯೂರ ನಾಡಲ್ಲಿನ ನವಿಲೂರ ಮತ್ತು ಅಲ್ಲೂರೆಂಬ ಎರಡು ಗ್ರಾಮಗಳನ್ನು ಸೇರಿಸಿ 'ಚಾಮರಾಜಸಮುದ್ರವೆಂಬ ಅಗ್ರಹಾರ'ವನ್ನು ಮಾಡಿ ತಮ್ಮ ವಂಶದ ಹಿರಿಯರಿಗೆ ಶಾಶ್ವತ ವೈಕುಂಠ ಲಭಿಸಬೇಕೆಂದು ೪೧ ವೃತ್ತಿಗಳನ್ನು ಮಾಡಿ ಅದರಲ್ಲಿ ಒಂದು ವೃತ್ತಿಯನ್ನು ತಮ್ಮ ಅರಸ ನರಸರಾಜೊಡೆಯರಿಗೆ ಶಾಶ್ವತ ವೈಕುಂಠ ಪ್ರಾಪ್ತಿಯಾಗಲೆಂದು ಗುಂಜಾ ನೃಸಿಂಹದೇವರಿಗೆ ಕೊಟ್ಟು ಉಳಿದ ೪೦ ವೃತ್ತಿಗಳನ್ನು ೩೩ ನಾನಾ ಗೋತ್ರದ, ನಾನಾ ಸೂತ್ರದ, ನಾನಾ ಶಾಖೆಯ ಬ್ರಾಹ್ಮಣರಿಗೆ ವಿಂಗಡಿಸಿಕೊಟ್ಟ ವಿವರವಿದೆ. (ಟಿ.ನರಸೀಪುರ ೧೫)

ಸೋಸಲೆ ಗ್ರಾಮದ ಕ್ರಿ.ಶ.೧೬೨೭ರ ತಾಮ್ರ ಶಾಸನ, ಶ್ರೀ ವೀರರಾಮರಾಯ ದೇವಮಹಾರಾಯರು ಪೆನುಗೊಂಡೆಯಲ್ಲಿ ಆಳುತ್ತಿರುವಾಗ ಯಲಹಕ್ಕನಾಡ (ಯಲಹಂಕ) ಪ್ರಭುಗಳಾದ ಕೆಂಪ್ಪನಾಚಯ್ಯಗೌಡನ ಮೊಮ್ಮಗ ಕೆಂಪಯ್ಯಗೌಡನ ಮಗನಾದ ಇಮ್ಮಡಿ ಕೆಂಪಯ್ಯಗೌಡ, ತಮ್ಮತಂದೆ ಕೆಂಪಯ್ಯಗೌಡರಿಗೆ ಪುಣ್ಯವಾಗಬೇಕೆಂದು ಹಲಸೂರು ಸೋಮೇಶ್ವರ ದೇವರ ಸನ್ನಿಧಿಯಲ್ಲಿ ಲಕ್ಷ್ಮೀಕಾಂತವೊಡೆಯರ ಪುತ್ರ ರಾಮಚಂದ್ರವೊಡೆಯರ ಮಠಧರ್ಮಕ್ಕೆ ಬೆಂಗಳೂರು ಸೀಮೆಯ ಸೊಂಡೆಕೊಪ್ಪದ ಹೋಬಳಿಯಲ್ಲಿನ ಗೋಣೀಪುರ, ಹಂಪಾಪುರ

ಮೊದಲಾದ ೫ ಗ್ರಾಮಗಳನ್ನು ಅಗ್ರಹಾರವನ್ನಾಗಿಸಿ ಗಡಿಗಳಿಗೆ ವಾಮನಮುದ್ರೆ ಕಲ್ಲನ್ನು ಹಾಕಿಸಿ ಧಾರೆಯನೆರೆದು ಕೊಟ್ಟು ಅಗ್ರಹಾರದ ಧರ್ಮವನ್ನು ನಿಮ್ಮ ಶಿಷ್ಯ ಪರಂಪರೆಯಾಗಿ ಅನುಭವಿಸುತ್ತಾ ಪಾಲಿಸಿಕೊಂಡು ಬರುವಂತೆ ಹೇಳಿ ಶಾಸನದ ಕಡೆಯಲ್ಲಿ 'ಶ್ರೀಕೆಂಪಯ್ಯ' ಮುದ್ರೆಯೊಡನೆ ಎಂದು ಕೊನೆಯಾಗಿದೆ. (ತಿ. ನರಸೀಪುರ ೧೧೯) ಮಾರ್ಚಹಳ್ಳಿ ಗ್ರಾಮಕ್ಕೆ ಆಗ್ನೆಯ ಹುಲ್ಲು ಹಿತ್ತಲಲ್ಲಿನ ಶಾಸನ ಕ್ರಿ.ಶ.೧೬೪೩ ರಲ್ಲಿ ಶ್ರೀರಂಗರಾಯರ ಆಳ್ವಿಕೆಯಲ್ಲಿ ಮೈಸೂರ ನರಸರಾಜಭೂಪರು ತಮ್ಮ ಪುರೋಹಿತ ಲಿಂಗಾಭಟ್ಟರು ಮೊದಲಾದವರು ಸೇರಿ ನರಸರಾಜಪುರದ ಅಶೇಷ ವಿದ್ವನ್ಮಹಾಜನಂಗಳಿಗೆ ಸಹಿರಣ್ಯೋದಕ ದಾನವನ್ನು ಧಾರಾಪೂರ್ವಕವಾಗಿ ಮಾರ್ಚಹಳ್ಳಿಗೆ, 'ನರಸರಾಜಪುರವೆಂಬ ಪ್ರತಿನಾಮದೇಯವನ್ನಿಟ್ಟು' ಅಗ್ರಹಾರವನ್ನು ಮಾಡಿ ಅದರ ಉಪಗ್ರಾಮಗಳಾದ ಆಯರಹಳ್ಳಿ, ಹಾರುವಹಳ್ಳಿ, ಕಾಲೂರು, ಮಲ್ಲಳ್ಳಿ, ಹಂಗರ ಬೋಯನಹಳ್ಳಿ, ದರ್ಶನವಾಳು, ಹೊಸಹಳ್ಳಿ ಮೊದಲಾದ ೮ ಗ್ರಾಮಗಳನ್ನು ೫೦ ವೃತ್ತಿಗಳನ್ನಾಗಿ ವಿಂಗಡಿಸಿ ದಾನಮಾಡಿದ ಉಲ್ಲೇಖವಿದೆ. (ಕೃಷ್ಣರಾಜನಗರ ೧೦೭)

ಕ್ರಿ.ಶ.೧೬೬೨ರಲ್ಲಿ ದೇವರಾಜ ಒಡೆಯರ ಆಳ್ವಿಕೆಯಲ್ಲಿ ಬೀಚನಹಳ್ಳಿ ಮಾರಿಗುಡಿ ಹತ್ತಿರವಿರುವ ಹೊಳೆ ಬೀಚನಹಳ್ಳಿಯನ್ನು 'ದೇವರಾಜಪುರವೆಂದು ಪ್ರತಿನಾಮದೇಯ' ದಿಂದ ಕರೆದು ಅಗ್ರಹಾರವನ್ನಾಗಿ ಮಾಡಿ ಸಕಲ ವಿದ್ಯಾಪಾರಂಗತರಾದ ಬ್ರಾಹ್ಮಣೋತ್ತಮರಿಗೆ ದಾನ ಮಾಡಿ ನೀವು ಪಾರಂಪರಿಕವಾಗಿ ಅನುಭವಿಸಿಕೊಂಡು ಬರುವುದೆಂದು ಹೇಳಿದೆ. ದೇವರಾಜಪುರವೆಂದು ಹೆಸರಿಟ್ಟು ದಾನ ಮಾಡಿದ ಕಾಲುವಳಿಗಳ ಹೆಸರಿನ ವಿವರ ನಾಶವಾಗಿದ್ದು ಆ ಊರುಗಳನ್ನು ಊಹಿಸಲು ಸಾಧ್ಯವಿಲ್ಲವಾಗಿದೆ. ಅಗ್ರಹಾರ ಮಾಡಿ ದಾನ ಮಾಡಿದವರ ವಿವರ ಇಲ್ಲವಾಗಿದೆ. (ಹೆಗ್ಗಡದೇವನಕೋಟೆ ೧೪೬) ನಂಜನಗೂಡಿನ ಮಠದಲ್ಲಿರುವ ೧೫ನೇ ತಾಮ್ರ ಶಾಸನ ಕ್ರಿ.ಶ.೧೬೬೩ರ ಕಾಲದಲ್ಲಿ ಮೈಸೂರ ಅರಸ ಚಾಮರಾಜ ಒಡೆಯರ ಪೌತ್ರರಾದ ದೊಡ್ಡದೇವರಾಜ ಒಡೆಯರ ಪುತ್ರರಾದ ದೇವರಾಜ ಮಹೀಪಾಲಕರು ದ್ವಿಜೇಂದ್ರತೀರ್ಥ ಶ್ರೀಪಾದೊಡೆಯರ ಕರಕಮಲ ಸಂಜಾತರಾದ ಸುಧೀಂದ್ರತೀರ್ಥ ಶ್ರೀಪಾದೊಡೆಯರ ಶ್ರೀರಾಮಚಂದ್ರದೇವರ ಬ್ರಾಹ್ಮಣರ ಸಂತರ್ಪಣಾರ್ಥವಾಗಿ ನಲ್ಲೂರು ಗ್ರಾಮಕ್ಕೆ, 'ದೇವರಾಜಪುರವೆಂದು ಪ್ರತಿನಾಮದೇಯ' ದಿಂದ ಕರೆದು ಅಗ್ರಹಾರವನ್ನಾಗಿ ರಚಿಸಿ ದಾನ ಮಾಡಿದ ಉಲ್ಲೇಖವಿದೆ (ನಂಜನಗೂಡು ೧೨೪).

ತಲಕಾಡಿನ ರಘುನಾಥಾರ್ಯರಲ್ಲಿದ್ದ ಕ್ರಿ.ಶ. ೧೬೬೩ರ ತಾಮ್ರಶಾಸನ ಹೊಯ್ಸಳನಾಡಿನ, ನಾಗಮಂಗಲದ ಹಳ್ಳಿಕೆರೆ ಗ್ರಾಮ ಮತ್ತು ಇತರ ಉಪ ಗ್ರಾಮಗಳನ್ನು ಚಾಮರಾಜರ ಮೊಮ್ಮಗ ದೇವರಾಜವೊಡೆಯರು ದೇವರಾಜಪುರವೆಂದು ಪ್ರತಿನಾಮದೇಯ ವನ್ನಿಟ್ಟು ಯೆಡೂರಿನ ರಾಮಕುಮಾರ ತಾತರ್ಯನ ಮಗ ವೆಂಕಟ ವರದಾಚಾರ್ಯನಿಗೆ ದಾನ ಮಾಡಿರುವುದನ್ನು ಹೇಳುತ್ತದೆ. ತಾತಾಚಾರ್ಯನ ಪೂರ್ವಜರು ಇಕ್ಕೇರಿಯ ನುಲಪುರ ಮತ್ತು ಅಗ್ರಹಾರವನ್ನು ಅರಸ ದೇವರಾಜನಿಂದ ದಾನ ಪಡೆದಿದ್ದರು. (ನರಸೀಪುರ ೨೧೮) ಮುಂಡೂರು ಗ್ರಾಮದ ಕ್ರಿ.ಶ. ೧೬೬೭ರ ಚಾಮರಾಜವೊಡೆಯರ ಮೊಮ್ಮಗ ದೇವರಾಜವೊಡೆಯರು ಮುಂಡೂರು ಗ್ರಾಮವನ್ನು 'ದೇವರಾಜಪುರ ಅಗ್ರಹಾರ'ವೆಂದು ಮಾಡಿ ೨೧ ಜನ ಬ್ರಾಹ್ಮಣರಿಗೆ ವೃತ್ತಿಯನ್ನು (ಧಾನ ಪಡೆದ ಬ್ರಾಹ್ಮಣರ ಪೂರ್ತಿ ವಿವರವಿದೆ) ವಿಂಗಡಿಸಿ ಕೊಟ್ಟು ದಾನ ಕೊಟ್ಟ ಭೂಮಿಗೆ ವಾಮನ ಮುದ್ರೆ

ಕಲ್ಲುನೆಟ್ಟು ಅಲ್ಲಿ ದೊರೆಯುವ ನಿಧಿ ನಿಕ್ಷೇಪ ಸಮಸ್ತವನ್ನು ಆಚಂದ್ರಾರ್ಕಸ್ಥಾಯಿಯಾಗಿ ಅನುಭವಿಸಿಕೊಂಡು ಬರುವುದೆಂದು ಹೇಳಿದೆ. (ಕೃ.ರಾ.ನಗರ ೭೯)

ಮೈಸೂರು ಶೇಷಭಟ್ಟರಲ್ಲಿದ್ದ ತಾಮ್ರಶಾಸನ ಕ್ರಿ.ಶ. ೧೬೬೭ರಲ್ಲಿ ರಚಿತವಾಗಿದೆ. ಈ ಶಾಸನದಲ್ಲಿ ಮೂವರು ವ್ಯಕ್ತಿಗಳನ್ನು ವಿವಿಧ ಹೋಲಿಕೆಗಳನ್ನು ನೀಡಿ ಶಾಸನಕವಿ ಹೊಗಳಿದ್ದಾನೆ. (೧)ದೇವರಾಜವೊಡೆಯರನ್ನು ದೈವಭಕ್ತ, ಬುದ್ಧಿವಂತ ಕವಿ, ಶತ್ರುಗಳನ್ನು ಜಯಿಸಿದವನು, ಮನೋಹರ ವ್ಯಕ್ತಿತ್ವ ಉಳ್ಳವನು ನಂಬಿದವರನ್ನು ರಕ್ಷಣೆ ಮಾಡುವವನು ಕೊಡುಗೈದಾನಿಯೂ ಆಗಿದ್ದನು. (೨) ರತ್ನಪಡಿ ವ್ಯಾಪಾರಿಯಾದ ಬ್ರಾಹ್ಮಣ ಧನ್ನೋಜಿ ಗುಜರಾತಿನಿಂದ ಬಂದವನು. ಮೊದಲು ಚಾಮರಾಜರೊಡನೆ ವ್ಯವಹಾರ ಹೊಂದಿದ್ದವನು. ಅರಸನಿಗೆ ಒಂದು ಜೊತೆ ಕರ್ಣಾಭರಣವನ್ನಿತ್ತು ಹಲವು ಬಹುಮಾನಗಳನ್ನು ಪಡೆದಿದ್ದನು. ಈ ಶಾಸನದ ಕಾಲದಲ್ಲಿ ಧನ್ನೋಜಿಯು ದೇವರಾಜವೊಡೆಯನ ಆಶ್ರಿತನಾಗಿದ್ದನು. ಈತನು ತುಲಾಭಾರ ಮೊದಲಾದ ದಾನ ಧರ್ಮಗಳನ್ನು ಮಾಡಿದ್ದವನು. ಕಪರ್ದಿನಿ ದೇವಾಲಯದಲ್ಲಿ ದೊಡ್ಡ ಸಪ್ತಕೋಟೀಶ್ವರ ಸರೋವರವನ್ನು, ರಾಮೇಶ್ವರದಲ್ಲಿ ಛತ್ರಗಳನ್ನು, ಸುಬ್ರಹ್ಮಣ್ಯದಲ್ಲಿ ರಥೋತ್ಸವನ್ನು ಕಾಶಿಯಲ್ಲಿ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದವನು. (೩) ಈತನ ಹೆಂಡತಿ ರಮಾಬಾಯಮ್ಮ ಗುಣದಲ್ಲಿ ಅನುಸೂಯೆ, ದ್ರೌಪದಿಯಂತೆ ಜಾಣೆ, ಕರುಣೆಯಲ್ಲಿ ವೈದೇಹಿ ಎಂದಿದ್ದಾನೆ. ಈಕೆಯ ಆಸೆಯಂತೆ ಧನ್ನೋಜಿ ಅರಸನ ಅಪ್ಪಣೆ ಪಡೆದು ಕನ್ನಂಬಾಡಿ ಸ್ಥಳದ ಹೊಸಕೋಟೆ ಗ್ರಾಮವನ್ನು 'ಧನ್ನೋಜಿರಾಮಬಾಯಮ್ಮಪುರವೆಂಬ ಅಗ್ರಹಾರವನ್ನಾಗಿ' ಮಾಡಿ ೪೦ ೩/೪ ವ್ರಿತ್ತಿಯನ್ನು, ಕೆಲವರಿಗೆ ೧ ವ್ರಿತ್ತಿಯಂತೆ, ೩/೪ ವ್ರಿತ್ತಿಯಂತೆ, ೧/೨ ವ್ರಿತ್ತಿಯಂತೆ ಮತ್ತು ಕೆಲವರಿಗೆ ೧/೪ ವ್ರಿತ್ತಿಯಂತೆ ವಿಂಗಡಿಸಿ ಅನೇಕ ವಿದ್ವಾಂಸರಾದ ಬ್ರಾಹ್ಮಣರಿಗೆ ಕೊಟ್ಟು ತನಗಾಗಿ ೧ ೧/೪ ವ್ರಿತ್ತಿಯನ್ನು ಉಳಿಸಿಕೊಂಡಿದ್ದಾನೆ. ಜೊತೆಗೆ ೫೦ ಹೆಜ್ಜೆ ಅಗಲ ೧೦೦ ಹೆಜ್ಜೆ ಉದ್ದದ ಭೂಮಿಯನ್ನು ವಾಸದ ನಿವೇಶನಗಳಿಗಾಗಿ ದಾನ ಮಾಡಿದ್ದಾನೆ. ಅಗ್ರಹಾರವಾಗಿ ಮಾಡಿ ಕೊಟ್ಟ ಭೂಮಿಗೆ ಪಶ್ಚಿಮಕ್ಕೆ ಹೊಸೂರು ಮತ್ತು ಕಟ್ಟಿಗೆರೆ, ಉತ್ತರಕ್ಕೆ ಕಾವೇರಿನದಿ, ಪೂರ್ವಕ್ಕೆ ಗೋಪಾಲಪುರ, ದಕ್ಷಿಣಕ್ಕೆ ಮಾವಿನಕೆರೆ ಗಡಿಗಳನ್ನು ನಿರ್ಮಿಸಿ ದಾನ ಮಾಡಿದ್ದಾನೆ. ದಾನ ಶಾಸನಕ್ಕೆ ರಾಜನ ಹಸ್ತಾಕ್ಷರವಿದೆ. (ಮೈಸೂರು ೧೦೪)

ತರೀಕಲ್ಲು ಗ್ರಾಮದ ಕಾಸೀಲಿಂಗನ ಗುಡಿಯಲ್ಲಿನ ಕ್ರಿ.ಶ.೧೬೭೯ ರಲ್ಲಿ ದೇವರಾಜವೊಡೆಯರ ಮಗ ಕಂಠೀರವ ಮಹೀಪಾಲಕರು ತಮಗೆ ವಿಕ್ರಮಾರ್ಜಿತವಾಗಿ ಬಂದ ಕಾವೇರಿ ಕಪಿನೀ ಮಧ್ಯದ ಹೊಸಣನಾಡಿನ ಕೊತ್ತಗಾಲಕ್ಕೆ ಸಲ್ಲುವ ತರೀಕಲ್ಲು ಗ್ರಾಮಕ್ಕೆ ಸಲ್ಲುವ ಬಸ್ತಿಮಾದಳಿ ಗ್ರಾಮ ಮೊದಲಾದ ಒಟ್ಟು ೨೩ ಗ್ರಾಮಗಳ ಸ್ಥಳದ ಸುಂಕ, ನಲ್ಲೂರು ಬಳಿಯ ಲಕ್ಷ್ಮಣ ತೀರ್ಥದಲ್ಲಿ ಕಟ್ಟು ಕಾಲುವೆ ಸಹ ಸೇರಿ ೧೨೫ ವ್ರಿತ್ತಿಗಳನ್ನು ಲಕ್ಷ್ಮೀಕಾಂತಸ್ವಾಮಿಗೆ, ಮಹಾಜನರಿಗೆ ೧೨೭ ವ್ರಿತ್ತಿಗಳನ್ನಾಗಿ ಪರಿಚ್ಛೇದವ ಮಾಡಿ ತರೀಕಲ್ಲನ್ನು ಕಂಠೀರವಸಮುದ್ರವೆಂಬ ಅಭಿದಾನದಲ್ಲಿ ಅಗ್ರಹಾರವನ್ನು ನೀಡಿ ನಾನಾ ಗೋತ್ರದ, ನಾನಾ ಸೂತ್ರದ ನಾನಾಶಾಖೆಗಳ ಸಕಲ ವಿದ್ಯಾಪಾರಂಗತರಾದ ಬ್ರಾಹ್ಮಣರಿಗೆ ದಾನ ಮಾಡಿ ತಮ್ಮ ಪುತ್ರ ಪೌತ್ರ ಪಾರಂಪರೆಯಾಗಿ ಅನುಭವಿಸುವಂತೆ ಹೇಳಿದೆ (ಹುಣಸೂರು ೩೨).

ಬೀಚನಹಳ್ಳಿ ಮಾರಿಗುಡಿ ಬಳಿಯಿರುವ ಕ್ರಿ.ಶ.೧೬೭೨ರ ಶಾಸನ ದೇವರಾಜವೊಡೆಯರ

ಆಳ್ವಿಕೆ ಮಾಡುತ್ತಿದ್ದಾಗ ಹೊಳೆ ಬೀಚನಹಳ್ಳಿಯನ್ನು ದೇವರಾಜಪುರವೆಂಬ ಪ್ರತಿನಾಮದೇಯದಿಂದ ಅಗ್ರಹಾರವನ್ನು ಮಾಡಿ ನಾನಾ ಗೋತ್ರದ, ಸೂತ್ರದ ಸಕಲ ವಿದ್ಯಾಪಾರಂಗತರಾದ ಬ್ರಾಹ್ಮಣರಿಗೆ ದಾನ ನೀಡಿದೆ. ಶಾಸನ ಹೆಚ್ಚು ಭಾಗ ತ್ರುಟಿತವಾಗಿದೆ. (ಹೆಗ್ಗಡದೇವನಕೋಟೆ ೧೪೬) ಕಗ್ಗುಂಡಿ ಗ್ರಾಮದ ಬಸವನಗುಡಿಯ ಕ್ರಿ.ಶ.೧೬೭೨ರಲ್ಲಿ ಮೈಸೂರ ಅರಸ ದೇವರಾಜವೊಡೆಯರು ಶ್ರೀರಂಗಪಟ್ಟಣದ ಸತ್ರದ ಧರ್ಮಕ್ಕೆ ಕೊಟ್ಟ(ಕಗ್ಗುಂ)ಡಿಗೆ ಪ್ರತಿನಾಮದೇಯವಾದ ದೇವರಾಜಪುರ ಗ್ರಾಮವನ್ನು ದಾನ ಮಾಡಿದ ವಿಷಯವಿದೆ. ಇಲ್ಲಿ ಅಗ್ರಹಾರವನ್ನು ಮಹಾಜನರಿಗೆ ನೀಡದೆ ಶ್ರೀರಂಗಪಟ್ಟಣದಲ್ಲಿನ ಸತ್ರದ ಧರ್ಮಕ್ಕೆ ಸಲ್ಲುವ ಅಷ್ಟಭೋಗ ತೇಜ ಸ್ವಾಮ್ಯವೂ ಸಲ್ಲುವುದೆಂದು ಹೇಳಿದೆ. (ಪಿರಿಯಾಪಟ್ಟಣ ೧೧೨)

ಮೈಸೂರಿನ ಗುಂಡಲಪಂಡಿತ ಲಕ್ಷ್ಮಣಾಚಾರ್ಯರ ಬಳಿ ಇದ್ದ ಹತ್ತು ಹಲಗೆಯ ಕ್ರಿ.ಶ. ೧೬೭೪ರ ತಾಮ್ರಶಾಸನ ಚಿಕ್ಕದೇವರಾಜ ಒಡೆಯರು ಮಾಡಿಸಿದ ಶಾಸನದಲ್ಲಿ ಮೈಸೂರು ಅರಸನಾಗಿದ್ದ ದೇವರಾಜ ಅರಸನ ಮೂರನೆಯ ಮಗ ದೇವರಾಜನು ಶ್ರೀರಂಗಪಟ್ಟಣದ ಈಶಾನ್ಯ ದಿಕ್ಕಿನಲ್ಲಿರುವ ಮಣಿಕರ್ಣಿಕಾ ಕ್ಷೇತ್ರದಲ್ಲಿ ಪೂರ್ವಶತಕದ 'ದೇವನಗರ ಅಗ್ರಹಾರ'ವನ್ನು ಮಾಡಿ ಪೂರ್ವ ಮತ್ತು ಉತ್ತರ ಮಿಮಾಂಸ ಹಾಗೂ ಶೃತಿ, ಸ್ಮೃತಿ ಬಲ್ಲಂತ ನಿಯಮ ಪಾಲಿಸುವಂತಹ ಶ್ರೀವೈಷ್ಣವ, ಮಾಧ್ವ ಮತ್ತು ಅದ್ವೈತ ಬ್ರಾಹ್ಮಣರಿಗೆ ದಾನ ಮಾಡಿರುವುದನ್ನು ಉಲ್ಲೇಖಿಸಿದೆ. ಮುಂದುವರಿದಂತೆ ಶಾಸನದಲ್ಲಿ ತಮ್ಮ ಅಪ್ಪಾಜಿಯವರ ಪುಣ್ಯತಿಥಿಯಲ್ಲಿ ತಮ್ಮ ಪಿತ್ರಾದಿಗಳೆಲ್ಲಾ ವೈಕುಂಠಲೋಕ ಪ್ರಾಪ್ತಿಯಾಗಲೆಂದು ಕೌಂಡಿನೀ ನದಿ (ಗುಂಡ್ಲು ನದಿ)ಯ ಪಶ್ಚಿಮ ತೀರದಲ್ಲಿ ಪರವಾಸುದೇವರ ದೇವಾಲಯವನ್ನು ಕಟ್ಟಿಸಿ ಅಗ್ರಹಾರವನ್ನು ಮಾಡಿ ತ್ರಿಮತಸ್ತ ಬ್ರಾಹ್ಮಣರಿಗೆ ದಾನ ನೀಡುತ್ತಾನೆ. ಇದಲ್ಲದೆ ವಾಯುವ್ಯ ದಿಕ್ಕಿನಲ್ಲಿ 'ದ್ವಿತೀಯ ಶತಕದ ಅಗ್ರಹಾರ'ವನ್ನು ಮಾಡಿ ತನಗೆ ತುಂಬಾ ಪ್ರಿಯರಾದ ಶ್ರೀವೈಷ್ಣವ ಬ್ರಾಹ್ಮಣರಿಗೆ ೮೦ ವ್ರಿತ್ತಿಯನ್ನು ಉಯ್ಯಂಬಳ್ಳಿ ಮೊದಲಾದ ೧೬ ಗ್ರಾಮಗಳು ಸೇರಿದ ಚತುಃಸ್ಸೀಮೆಯ ಗಡಿಗಳನ್ನು ಗುರುತಿಸಿ ವಾಮನ ಮುದ್ರೆ ಕಲ್ಲುಗಳನ್ನು ನೆಟ್ಟು (ವ್ರಿತ್ತಿಯನ್ನು ಪಡೆದ ಬ್ರಾಹ್ಮಣರ ಗೋತ್ರ, ಸೂತ್ರ ಮೊದಲಾದ ಎಲ್ಲಾ ವಿವರಗಳನ್ನು ಶಾಸನದಲ್ಲಿ ಉಲ್ಲೇಖಿಸಿದೆ) ದಾನ ನೀಡಿದೆ. (ಮೈಸೂರು ೯)

ಚಾಮರಾಜನಗರ ತಾಲ್ಲೂಕಿನ ನಾರಾಯಣಸ್ವಾಮಿ ದೇವಾಲಯದ ಆಗಮಿಕರ ವಶದಲ್ಲಿದ್ದ ತಾಮ್ರಶಾಸನ ಕ್ರಿ.ಶ.೧೬೭೫ರಲ್ಲಿ ಮೈಸೂರ ಅರಸ ಚಿಕ್ಕದೇವಮಹಾರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ತಮ್ಮ ತಂದೆ ದೊಡ್ಡ ದೇವರಾಜ ಒಡೆಯರಿಗೆ ವೈಕುಂಠಲೋಕ ಪ್ರಾಪ್ತಿಯಾಗಬೇಕೆಂದು ಅವರ ಪ್ರತ್ಯಾಬ್ದಿಕ ಪುಣ್ಯಕಾಲದಲ್ಲಿ ಶ್ರೀಕೃಷ್ಣದೀಕ್ಷಿತರಿಗೆ, ತೆರಕಣಾಂಬಿಯ ಸ್ಥಳದಲ್ಲಿನ ಕಬ್ಬಿಗನಪುರಕ್ಕೆ ಪ್ರತಿನಾಮದೇಯವಾದ 'ಚಿಕ್ಕದೇವರಾಜಪುರ'ವೆಂಬ ಗ್ರಾಮ ಒಂದನ್ನು, ಹುಲ್ಲಾನ ಗ್ರಾಮಕ್ಕೆ ಪ್ರತಿನಾಮದೇಯವಾದ 'ಕೃಷ್ಣಾಪುರವೆಂಬ' ಗ್ರಾಮ ಒಂದನ್ನು, ಒಟ್ಟು ಈ ಎರಡು ಗ್ರಾಮಗಳನ್ನು ಧಾರೆಯನೆರೆದು ಕೊಟ್ಟು ಈ ಗ್ರಾಮಗಳ ಚತುಃಸ್ಸೀಮೆಯ ಗಡಿಗಳನ್ನು ಗುರುತಿಸಿ ಲಿಂಗಮುದ್ರೆ ಕಲ್ಲುಗಳನ್ನು ನೆಡಲಾಗಿದೆ. ಪಾರಂಪರ್ಯವಾಗಿ ಶಾಸನಗಳಲ್ಲಿ ಬಳಸಲಾಗುವ ವಿಶೇಷಣಗಳಾದ ಆಚಂದ್ರಾರ್ಕ, ಪುತ್ರಪೌತ್ರ ಮೊದಲಾದ ಉಕ್ತಿಗಳಿರುವ ಶಾಸನದ ಭಾಗ ತ್ರುಟಿತವಾಗಿದೆ. (ಚಾಮರಾಜನಗರ ೧೧) ಮುಂಡೂರು ಗ್ರಾಮದ ಕ್ರಿ.ಶ. ೧೬೭೭ರಲ್ಲಿ ರಾಜವೊಡೆಯರ ಮಗ ರಾಜಮಹಾಪಾಲಕರು ಮುಂಡೂರೆಂಬ ಗ್ರಾಮವನ್ನು ಅಗ್ರಹಾರವನ್ನಾಗಿ

ಮಾಡಿದ ಉಲ್ಲೇಖವಿದೆ. ಶಾಸನ ಬಹುಭಾಗ ತ್ರುಟಿತವಾಗಿದೆ. (ಕೃಷ್ಣರಾಜನಗರ ೭೮)

ಇಲವಾಲ ಹೋಬಳಿ ಮಾಣಿಕ್ಯಾಪುರದ ಮಾರಮ್ಮನ ದೇವಸ್ಥಾನದಲ್ಲಿರುವ ಕ್ರಿ.ಶ. ೧೬೮೫ರ ಶಾಸನ ಮೈಸೂರ ಅರಸು ಚಾಮರಾಜ ಒಡೆಯರ ಪೌತ್ರರಾದ ಹಿರಿದೇವರಾಜ ಒಡೆಯರ ಪುತ್ರರಾದ ಚಿಕ್ಕದೇವರಾಯ ಮಹಾರಾಜ ಒಡೆಯರು ದೊಡ್ಡ ಅರಸಿನವರು ಮಾಡಿದ ದೇವರಾಯ ಅಗ್ರಹಾರದಲ್ಲಿ ಅವರ ಆಶ್ರಿತರಾದ ಅಳಸಿಂಗರ್ರೈಯಂಗಾರಿಗೆ ಪ್ರಸನ್ನನಾದ ಗೋಪಾಲಸ್ವಾಮಿ ದೇವರ ಶ್ರೀಭಂಡಾರಕ್ಕೆ ಕೊಟ್ಟ ಭೂದಾನ ನೀಡಿದ ವಿವರವಿದೆ. ಶ್ರೀಗೋಪಾಲಸ್ವಾಮಿಯ ನಿತ್ಯಕಟ್ಲೆ ಪೂಜೆಗೆ, ಅಮೃತಪಗೆ, ದೀಪಾರಾಧನೆಗಾಗಿ ತಮಗೆ ವಿಕ್ರಮಾರ್ಜಿತವಾಗಿ ವಂಶಾನುಕ್ರಮದಲ್ಲಿ (ಗೆದ್ದು ವಶಪಡಿಸಿಕೊಂಡ) ನಡೆದು ಬರುವ ಮೈಸೂರ ವಳಿತದ ಹೆಮ್ಮನಹಳ್ಳಿಗೆ ಸೇರಿದ ಮಾಣಿಕ್ಯಾಪುರದ ಗ್ರಾಮದಲ್ಲಿ ತಿರುಮಲೈಯ್ಯಾಂಗಾರಿಗೆ ಧಾರೆಯನೆರೆದುಕೊಟ್ಟ ತೋಟಸ್ಥಲದ ಹೊರತಾಗಿ, ಉಳಿದ ಸಕಲ ಸ್ವಾಮ್ಯವನ್ನು ಮಾಣಿಕ್ಯಪುರದ ಗ್ರಾಮ ಒಂದಕ್ಕೆ ಹೊಂದಿಸಿಕೊಟ್ಟ ಭೂಮಿ ಬೊಮ್ಮನ ಸ್ಥಳದ ಎಲ್ಲೆ ಸರಹದ್ದಿನ ಕಮ್ಮರವಳ್ಳಿಯ ವಳಗೆರೆ ತೋಟ, ಬೆದ್ದಲು, ಅಡವು ಸಹಾ ಸೇರಿದಂತೆ ಕಂಗು ೮೪ ಹಣವಿನ ಭೂಮಿಯನ್ನು ಮಾರನಗೌಡನ ಹಳ್ಳಿ ಎಲ್ಲೆಯಲ್ಲಿ ಗಣಾಚಾರಿ ಚನ್ನನ ಕೈಯ ಕ್ರಯಕ್ಕೆ ತೆಗೆದುಕೊಂಡ ತೋಟದಲ್ಲಿ ಕಟ್ಟೆ ಸಹಿತವಾಗಿ ಕೃಷ್ಣಜಯಂತಿ ಪುಣ್ಯಕಾಲದಲ್ಲಿ ಧಾರೆಯೆರೆದು ಕೊಟ್ಟು, ಈ ಚತುಸ್ಸೀಮೆಯೊಳಗುಳ್ಳ ನಿಧಿ, ನಿಕ್ಷೇಪ ಮೊದಲಾದವುಗಳೆಲ್ಲಾ ಗೋಪಾಲಸ್ವಾಮಿಯ ಶ್ರೀಭಂಡಾರಕ್ಕೆ ಸೇರುವುದು. ತೋಟ ಮತ್ತು ಅದರ ಉತ್ಪತ್ತಿ ಆಚಂದ್ರಾರ್ಕವಾಗಿ ತಿರುಮಲೈಯ್ಯಂಗಾರಿಗೆ ಸಲ್ಲುವುದು ಎಂದು ಉಲ್ಲೇಕಿಸಿರುವ ಶಿಲಾ ಶಾಸನ (ಮೈಸುರು ೨೧೩).

ಗುಂಡ್ಲುಪೇಟೆ ತಾಲೂಕಿನ ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದ ಅರ್ಚಕರ ವಶದಲ್ಲಿದ್ದ ೧೭ನೇ ಶತಮಾನಕ್ಕೆ ಸೇರಿದ ತಾಮ್ರಶಾಸನದಲ್ಲಿ ಪೂರ್ಣಪಾಠವಿಲ್ಲ. ಆದರೆ 'ಅಕೀಬೇಗೂರನ್ನು ಅಗ್ರಹಾರ'ವನ್ನಾಗಿ ಮಾಡಿ ದಾನ ನೀಡಿದ ಊರಿಗೆ ಸೇರಿದ ಅನೇಕ ಉಪ ಗ್ರಾಮಗಳ ಹೆಸರನ್ನು ಉಲ್ಲೇಖಿಸಿ ಕಲ್ಲುನೆಟ್ಟು ದಾನ ಮಾಡಿದ ವಿವರವಿದೆ. ಅಗ್ರಹಾರವನ್ನಾಗಿ ಮಾಡಿದ ಊರು, ದಾನ ಕೊಟ್ಟವರು ಮತ್ತು ದಾನ ಪಡೆದ ಯಾವ ವಿವರಗಳು ಅಲಭ್ಯವಾಗಿರುವುದರಿಂದ ಸ್ಪಷ್ಟ ದಾಖಲೆ ನೀಡುವುದು ಸಾಧ್ಯವಿಲ್ಲವಾಗಿದೆ. (ಗುಂಡ್ಲುಪೇಟೆ ೧೪೪೮) ಸತ್ಯಾಗಾಲದ ಈಶ್ವರ ದೇವಾಲಯದ ಪಂಚಲಿಂಗೇಶ್ವರ ಮಂಟಪದ ಕಂಬದಲ್ಲಿನ ಶಾಸನ ಕ್ರಿ.ಶ. ೧೭೨೦ರಲ್ಲಿ ಇಮ್ಮಡಿ ಕೃಷ್ಣರಾಜ ವೊಡೆಯರ ಆಳ್ವಿಕೆಯಲ್ಲಿ ಯಳಂದೂರ ಪ್ರಭು ಲಿಂಗರಾಜ ವೊಡೆಯರ್ರೈಯನ ಕುಮಾರ ಚಾಮರಾಜವೊಡೆಯರು ಗುಡಿಯನ್ನು ಕಟ್ಟಿಸಿ ಪಂಚಲಿಂಗ ಪ್ರತಿಷ್ಠೆಯನು ಮಾಡಿಸಿ ದೇವತಾಪೂಜೆ, ನೈವೇದ್ಯಕ್ಕೆ ಸತ್ಯಗಾಲದ 'ಮಲದವರಾಯ ಸಮುದ್ರದ ಅಗ್ರಹಾರ'ದಲ್ಲಿ ಕೃಷ್ಣಂಭಟ್ಟನ ಸ್ವಾಸ್ತಿಯನು ಕ್ರಯಕ್ಕೆ ಕೊಂಡು ಅರ್ಚಕ ದೇವಕುಪ್ಪೆಯ ಮಗ ಸೀತ್ಯೆಗೆ (ಸೀತಯ್ಯ) ಕೊಟ್ಟಿದ್ದನ್ನು ಉಲ್ಲೇಖಿಸಿದೆ. 'ಸತ್ಯಗಾಲದ ಮಲದವರಾಯ ಸಮುದ್ರದ ಅಗ್ರಹಾರ'ವನ್ನು ಈ ಮೊದಲೆ ಅನುಭವಿಸುತ್ತಿದ್ದವರಿಂದ ಕೊಂಡು ದಾನ ಮಾಡಿದ ವಿವರವಿದೆ (ಕೊಳ್ಳೆಗಾಲ ೩೧).

ಕೃಷ್ಣರಾಜನಗರ ತಾಲ್ಲೂಕಿನ ಮಾಚನಹಳ್ಳಿ ಗ್ರಾಮದ ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಹತ್ತಿರವಿದ್ದ ಕ್ರಿ.ಶ. ೧೭೪೧ರ ತಾಮ್ರ ಶಾಸನ, ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಕಳಲೆ ವಂಶದ ದೇವರಾಜ

ಮತ್ತು ನಂಜರಾಜರು ಕೆಲವು ಪ್ರದೇಶಗಳನ್ನು ಆಳುತ್ತಿದ್ದರು. ನಂಜರಾಜನು ಕನ್ನಂಬಾಡಿಗೆ ಸೇರಿದ ೨೬ ಗ್ರಾಮಗಳನ್ನು ಸೇರಿಸಿ 'ನಂಜರಾಜ ಸಮುದ್ರ'ವೆಂದು ಪ್ರತಿನಾಮದೇಯವನ್ನಿಡುತ್ತಾನೆ. ಇಪ್ಪತ್ತಾರು ಗ್ರಾಮಗಳನ್ನು ೧೨೦ ವ್ರಿತ್ತಿಗಳನ್ನಾಗಿ ವಿಂಗಡಿಸಿ ನಾನಾ ಗೋತ್ರದ, ವೇದಾಂಗ ಪಾರಂಗತರಾದ ಬ್ರಾಹ್ಮಣರಿಗೆ ರಾಜನ ಅನುಮತಿ ಪಡೆದು ದಾನವಾಗಿ ನೀಡುತ್ತಾನೆ. ೧೨೦ ವ್ರಿತ್ತಿಗಳನ್ನು ಪಡೆದ ಪ್ರತಿಯೊಬ್ಬ ಬ್ರಾಹ್ಮಣನಿಗೆ ವಾಸಿಸಲು ಮನೆ, ಗೃಹೋಪಯೋಗಿ ವಸ್ತುಗಳಾದ ಚಾಪೆ, ಹಾಸಿಗೆ, ವಿವಿಧ ಬಣ್ಣಗಳ ಹೊದಿಕೆ, ಅಡಿಗೆಗೆ ಬಳಸುವ ಪಾತ್ರೆ, ಪಡಗ, ಉತ್ತಮ ದರ್ಜೆಯ ಅಕ್ಕಿ, ೯ ರೀತಿಯ ವಿವಿಧ ಬೇಳೆ ಕಾಳುಗಳು, ಬೆಲ್ಲ, ತುಪ್ಪ, ಎಣ್ಣೆ ಮತ್ತು ಪೂಜೆಗೆ ಬಳಸುವ ಪೂಜಾ ಪಾತ್ರೆಗಳು, ಹಸು ಮೊದಲಾದ ಉಪಯುಕ್ತ ವಸ್ತುಗಳನ್ನು ದಾನವಾಗಿ ನೀಡಿದ ವಿವರಗಳನ್ನು ನೀಡಿದೆ. ಅಲ್ಲದೆ ೧೨೦ ವ್ರಿತ್ತಿಗಳನ್ನಾಗಿ ನೀಡಿದ ೨೬ ಗ್ರಾಮಗಳ ಭೂಮಿಯ ೮ ದಿಕ್ಕಿನ ಗಡಿ ಭಾಗಗಳನ್ನು ಗುರುತಿಸಿ ವಾಮನ ಮುದ್ರೆ ಕಲ್ಲುಗಳನ್ನು ನೆಟ್ಟು ದಾನ ಮಾಡಿರುವುದನ್ನು ೨೫೩ ಸಾಲುಗಳಲ್ಲಿ ತಾಮ್ರ ಶಾಸನ ಉಲ್ಲೇಖಿಸಿದೆ. (ಕೃಷ್ಣರಾಜನಗರ ೧೧೭)

ಹರದನಹಳ್ಳಿಯ ರಾಮಕೃಷ್ಣ ಜೋಯಿಸರ ಬಳಿಯಿದ್ದ ಕ್ರಿ.ಶ. ೧೭೪೪ರ ತಾಮ್ರಶಾಸನ ಮೈಸೂರು ಅರಸ ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಪ್ರಧಾನಿ ವೆಂಕಟಪತಿಯು ಕಾವೇರಿ ಮತ್ತು ಕಪಿಲಾ ನದಿ ದಂಡೆಯಲ್ಲಿ ತಿರುಮಕೂಟದ ಹಂಪಾಪುರವನ್ನು 'ವೆಂಕಟರಾಮ ಸಮುದ್ರವೆಂಬ' ಹೆಸರಿನಲ್ಲಿ ಅಗ್ರಹಾರವನ್ನಾಗಿ ಮಾಡಿ ೧೨ ಜನ ಬ್ರಾಹ್ಮಣರಿಗೆ ವ್ರಿತ್ತಿಗಳನ್ನು ನೀಡಿದೆ. ವ್ರಿತ್ತಿಗಳನ್ನಾಗಿ ನೀಡಿದ ಗ್ರಾಮಗಳ ಗಡಿಗಳನ್ನು ನಿರ್ದೇಶಿಸಿ ವಾಮನ ಮುದ್ರೆ ಕಲ್ಲುಗಳನ್ನು ನೆಟ್ಟು ವಂಶ ಪಾರಂಪರ್ಯವಾಗಿ ಅನುಭವಿಸುವಂತೆ ದಾನ ನೀಡಿದೆ. (ಚಾಮರಾಜನಗರ ೨೯೧) ನರಸೀಪುರಕ್ಕೆ ಸೇರಿದ್ದ ಮತ್ತೊಂದು ತಾಮ್ರಶಾಸನ ಕ್ರಿ.ಶ. ೧೭೪೯ರಲ್ಲಿ ಕೃಷ್ಣರಾಜ ಮೈಸೂರನ್ನು ಆಳುತ್ತಿರುವಾಗ ಅವನ ದಳಪತಿ ದೇವರಾಜನು ಅರಸನ ಅನುಮತಿ ಪಡೆದು ೧೪ ಗ್ರಾಮಗಳನ್ನು ಸೇರಿಸಿ ರಾಮಚಂದ್ರಪುರವೆಂಬ ಅಗ್ರಹಾರವನ್ನು ಮಾಡಿ ೧೨೦ ವ್ರಿತ್ತಿಗಳನ್ನಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟಿರುವುದನ್ನು ಹೇಳುತ್ತಾ ವಾಸ ಮಾಡಲು ಮನೆ, ಅಗತ್ಯ ವಸ್ತುಗಳ ಸಹಿತ ದಾನ ಮಾಡಿದೆ. ಅಲ್ಲದೆ ಈ ತಾಮ್ರ ಶಾಸನ ೧೬ ಹಾಳೆಗಳ ೧೩೯೦ ಸಾಲುಗಳ, ೫೭ ಪುಟಗಳಲ್ಲಿ ಮೈಸೂರು ಅರಸರ, ಕಳಲೆ ವಂಶದ ವಿವರಗಳು ಹಾಗೂ ದಾನ ನೀಡಿದ ಗ್ರಾಮಗಳ ಎಲ್ಲೆಕಟ್ಟುಗಳ ವಿವರವಿರುವ ಸುದೀರ್ಘ ಶಾಸನ. (ಟಿ.ನರಸೀಪುರ ೧೬)

ಹನಸೋಗೆಯ ಶೇಷಗಿರಿಯಾಚಾರ್ಯರ ವಶದಲ್ಲಿದ್ದ ಕ್ರಿ.ಶ. ೧೭೬೧ರ ತಾಮ್ರಶಾಸನ ಮೈಸೂರು ದೊರೆ ಕೃಷ್ಣರಾಜನು ಬರಗೂರು ಮತ್ತು ಇತರ ೧೨ ಉಪಗ್ರಾಮಗಳನ್ನು ಕೃಷ್ಣರಾಜಸಮುದ್ರವೆಂಬ ಹೆಸರಿನಿಂದ ಅಗ್ರಹಾರವನ್ನಾಗಿ ಮಾಡಿ, ೮೦ ವ್ರಿತ್ತಿಗಳನ್ನಾಗಿ ವಿಂಗಡಿಸಿ ನಾನಾ ಗೋತ್ರದ ಬ್ರಾಹ್ಮರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಅರಸನ ವಂಶಾವಳಿಯನ್ನು ಮತ್ತು ದಾನ ನೀಡಿದ ಬ್ರಾಹ್ಮಣರ ಕುಲ ಗೋತ್ರಗಳನ್ನು ತಿಳಿಸಿದೆ. (ಕೃಷ್ಣರಾಜನಗರ ೪೬) ಇದೇ ಹನಸೋಗೆಯ ಆಚಾರ್ಯರ ಬಳಿಯಲ್ಲಿದ್ದ ಇದೇ ಕಾಲಕ್ಕೆ ಸೇರಿದ ಮತ್ತೊಂದು ಶಾಸನವೂ ಅರಸ ಕೃಷ್ಣರಾಜ ೧೨ ಗ್ರಾಮಗಳನ್ನು ತನ್ನ ತಾಯಿಯ ಹೆಸರಿನಲ್ಲಿ 'ದೇವಾಂಬಸಮುದ್ರವೆಂಬ ಅಗ್ರಹಾರ'ವನ್ನು ಮಾಡಿ ೨೨೫ ವ್ರಿತ್ತಿಗಳನ್ನಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ದಾನ ಕೊಡುತ್ತಾನೆ. ದಾನ ಕೊಟ್ಟ ಭೂಮಿಯ ಚತುಸ್ಸೀಮೆಯಲ್ಲಿ ಗಡಿಕಲ್ಲುಗಳನ್ನು ನಿಲ್ಲಿಸಿದ ವಿವರವಿದೆ. (ಕೃಷ್ಣರಾಜನಗರ ೪೭)

ಮೈಸೂರು ನಗರದ ಪ್ರಸನ್ನ ನಂಜುಂಡೇಶ್ವರ ದೇವಾಲಯದಲ್ಲಿ ಕ್ರಿ.ಶ.೧೮೨೧ರಲ್ಲಿ ಮುಮ್ಮಡಿ ಕೃಷ್ಣರಾಜವೊಡೆಯರ ಪಟ್ಟಮಹಿಷಿ ದೇವಾಜಮ್ಮಣ್ಣಿ ಮತ್ತಿಬ್ಬರು ಧರ್ಮಪತ್ನಿಯರಾದ ಲಿಂಗಾಜಮ್ಮಣ್ಣಿ ಮತ್ತು ಚಲುವಾಜಮ್ಮಣ್ಣಿಯವರು ತಾವು ವಾಸಿಸುತ್ತಿದ್ದ ಅರಮನೆಯ ಭಾಗಗಳಾದ ಲಕ್ಷ್ಮೀವಿಲಾಸ, ಕೃಷ್ಣವಿಲಾಸ ಮತ್ತು ರಮಾವಿಲಾಸಗಳನ್ನು ಕ್ರಮವಾಗಿ ದೇವಾಂಬಾ, ಲಿಂಗಾಂಬಾ ಮತ್ತು ಚಲುವಾಂಬಾ ಎಂಬ ಹೆಸರಿನಿಂದ ಅಗ್ರಹಾರಗಳನ್ನು ಮಾಡಿಸಿ ತಮಗೆ ದೀರ್ಘಸುಮಂಗಲಿ ಭಾಗ್ಯವಾಗಲೆಂದು ಸ್ಥಾಪಿಸಿದನ್ನು ಮೂರು ಶಾಸನಗಳು ಉಲ್ಲೇಖಿಸುತ್ತವೆ. ಪಟ್ಟಮಹಿಷಿ ದೇವಾಜಮ್ಮಣಿ ಅಗ್ರಹಾರಕ್ಕೆ ನಾಲ್ಕು ದಿಕ್ಕಿನಲ್ಲಿ ವಾಮನ ಮುದ್ರೆ ಕಲ್ಲುಗಳನ್ನು ನಿಲ್ಲಿಸಿ, ೨೧ ಮನೆಗಳನ್ನು ಕಟ್ಟಿಸಿ, ಅಗ್ರಹಾರದ ಈಶಾನ್ಯ ಭಾಗದಲ್ಲಿ ಶಿವದೇವಾಲಯದಲ್ಲಿ ಪ್ರಸನ್ನ ನಂಜುಂಡೇಶ್ವರನ ಪ್ರತಿಷ್ಠೆಯನ್ನು ಮಾಡಿಸಿ, ಮಾಡಿದ ದೇವ ಬ್ರಾಹ್ಮಣರಿಗೆ ದೇವಾಲಯಕ್ಕೆ ತಮ್ಮ ಖಾಸಾದಸಕತ್ತಿನಿಂದ ನಡೆಯುಯುವಂತೆ ರುಜು, ಮೊಹರು ಹಾಕಿ ದಾನವಾಗಿ ಕೊಟ್ಟ - ದೇವರವೃತ್ತಿ-೧, ಬ್ರಾಹ್ಮಣವೃತ್ತಿ-೨೧, ಸಹಾ ಗಣ್‌ಸಂಖ್ಯಾವೃತ್ತಿ ೨೨ಕ್ಕೆ, ಈ ವೃತ್ತಿ ಒಂದಕ್ಕೆ ೩೬ ವರಹಾದ ಮೇರೆಗೆ ಒಟ್ಟು ೭೯೨ ವರಾಹಕ್ಕೆ ಯಡತೊರೆ ತಾಲ್ಲೂಕಿನ ಕುಂದೂರು, ಮೆಟಕೇರಿ ಮೊದಲಾದ ೫ ಉಪಗ್ರಾಮಗಳನ್ನು ವಿಂಗಡಿಸಿಕೊಟ್ಟು ಇದರಿಂದ ಬರುವ ಹುಟ್ಟುವಳಿಯನ್ನು ಮಹಾಜನಗಳು ನಡೆಸಿಕೊಂಡು ಬರುವಂತೆ, ಪ್ರಸನ್ನ ನಂಜುಂಡೇಶ್ವರ ದೇವರ ವಿಶೇಷ ಪಡಿತರ, ದೀಪಾರಾಧನೆ, ರಥೋತ್ಸವಗಳಿಗೆ ಸಮರ್ಪಿಸಿದ ವೃತ್ತಿ ಹೊರತಾಗಿ ವರ್ಷಂಪ್ರತಿ ೩೯೩ ವರಹ ೫ ಹಣ ತಸ್ತೀಕು ನಡೆಸಿಕೊಂಡು ಬರುವಂತೆ ಮೈಸೂರು ತಾಲ್ಲೂಕು ಅಮಲದಾರನಿಗೆ ಅಪ್ಪಣೆ ಕೊಡಿಸಿದ ಸನ್ನದು ಎಂದಿದೆ.

ರಾಣಿ ಲಿಂಗಾಜಮ್ಮಣ್ಣಿಯವರು ಸಹ ಹಿರಿಯ ಪಟ್ಟದರಾಣಿ ಲಕ್ಷ್ಮೀವಿಲಾಸದ ನಮ್ಮ ಅಕ್ಕಾಜಿಯವರ ಅಗ್ರಹಾರದ ಎದುರು ಸಾಲಿನಲ್ಲಿ ೨೦ ಮನೆಗಳನ್ನು ಪರಕಾಲಮಠ ಮತ್ತು ಅಲ್ಲಿ ಹಯಗ್ರೀವ ದೇವರನ್ನು ಪ್ರತಿಷ್ಠೆ ಮಾಡಿಸಿ, ಮಂಟಪವನ್ನು ಕಟ್ಟಿಸಿ ಅತ್ತಿಗುಪ್ಪೆ ತಾಲ್ಲೂಕಿನ ಕಾಮನಾಯಕನಹಳ್ಳಿ, ಶೆಟ್ಟಿಹಳ್ಳಿ ಮೊದಲಾದ ನಾಲ್ಕು ಗ್ರಾಮಗಳು ಇವುಗಳ ಉಪಗ್ರಾಮಗಳನ್ನು ವಿಂಗಡಿಸಿ ೨೧ ವ್ರಿತ್ತಿಗಳನ್ನಾಗಿ ಮಾಡಿ ೨೦ ಬ್ರಾಹ್ಮಣರಿಗೆ ಮತ್ತು ಹಯಗ್ರೀವ ದೇವರಿಗೆ ದಾನ ಕೊಡುತ್ತಾಳೆ. ಈ ವ್ರಿತ್ತಿಗಳಿಂದ ಬರುವ ೭೫೬ ವರಹಗಳನ್ನು ೩೬ ವರಹಗಳಂತೆ ಹಂಚಿಕೊಳ್ಳುವುದೆಂದು ರಾಜನ ಅನುಮತಿಯಿಂದ ನೀಡಲಾಗಿದೆ. ರಾಣಿ ಚಲುವಾಜಮ್ಮಣ್ಣಿಯವರು ಸಹ ಹಿರಿಯ ರಾಣಿಯ ಅಗ್ರಹಾರದ ಹಿಂದಿನ ಭಾಗದಲ್ಲಿ ೨೦ ಮನೆಗಳು, ಅಹೋಬಲ ಮಠ, ಆ ಮಠದಲ್ಲಿ ಮಂಟಪ ಕಟ್ಟಿಸಿ ಶ್ರೀ ಲಕ್ಷ್ಮೀನರಸಿಂಹ ದೇವರ ಪ್ರತಿಷ್ಠೆಯನ್ನು ಮಾಡಿಸಿ, ದೇವರ ವ್ರಿತ್ತಿ-೧ ಬ್ರಾಹ್ಮಣರ ವ್ರಿತ್ತಿ-೨೦, ಒಟ್ಟು ೨೧ ವ್ರಿತ್ತಿಗಳಿಗೆ, ಒಂದು ವ್ರಿತ್ತಿಗೆ ೩೬ ವರಹದಂತೆ ಒಟ್ಟು ೭೫೬ ವರಹಗಳಿಗೆ ಬೂಕನಕೆರೆ ತಾಲ್ಲೂಕಿನ ಡಿಂಕ-೧, ಬೇಬಿ-೧, ಹೊನಗಾನಹಳ್ಳಿ-೧ ಈ ಮೂರು ಗ್ರಾಮಗಳು ಮತ್ತು ಉಪಗ್ರಾಮಗಳನ್ನು ವಿಂಗಡಿಸಿಕೊಟ್ಟು ಇವುಗಳಿಂದ ಬರುವ ಹುಟ್ಟುವಳಿಯಿಂದ ದೇವರಿಗೆ ಮತ್ತು ಬ್ರಾಹ್ಮಣರು ಪಾಲಿಸುವಂತೆ ಮಹಾರಾಜರ ಅಪ್ಪಣೆ ಪಡೆದು ಖಾಸಾದಸ್ಕತ್ತು ಹಾಕಿ ದಾನ ಮಾಡಿದ ವಿವರಗಳಿವೆ (ಮೈಸೂರು-೧, ೨, ೩)..

ಮೈಸೂರು ನಗರದ ಕೋಟೆ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿನ ಕ್ರಿ.ಶ.೧೮೨೯ರ ಶಾಸನ ಮುಮ್ಮಡಿ ಕೃಷ್ಣರಾಜ ಒಡೆಯರ ಅರಮನೆಯ ಕೋಟೆಯೊಳಗೆ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ

ಕಟ್ಟಿಸಿದ ಸಂದರ್ಭವನ್ನು ತಮ್ಮ ಕುಲದೇವರಾದ ಶ್ರೀ ಚಾಮುಂಡೇಶ್ವರಿ ಪ್ರೀತ್ಯರ್ಥವಾಗಿ ನವರತ್ನಗಳೆಂಬ ಸೇವೆಗಳನ್ನು ಸಲ್ಲಿಸಿರುವುದನ್ನು ಪ್ರಸ್ತಾಪಿಸಿದೆ. (೧) ಮೇಲುಕೋಟೆ, ನಂಜನಗೂಡು, ಮೈಸೂರು ಮುಂತಾದ ಸ್ಥಳಗಳಲ್ಲಿ ದೇವರಿಗೆ ಸಮರ್ಪಿಸಿದ ರತ್ನಮಯ ಆಭರಣಗಳನ್ನು ಅರ್ಪಿಸಿದ ಭೂಷಾರತ್ನ, (೨) ಚಾಮರಾಜನಗರ ಮೊದಲಾದ ನಗರ, ಪುರ, ಗ್ರಾಮಾದಿಗಳನ್ನು ನಿರ್ಮಿಸಿದ ದೇಶರತ್ನ, (೩) ಚಾಮರಾಜನಗರದ ಚಾಮರಾಜೇಶ್ವರಸ್ವಾಮಿ, ನಾರಾಯಣಸ್ವಾಮಿ, ಮೈಸೂರ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯಗಳನ್ನು ಕಟ್ಟಿಸಿದ ಸೇವಾರತ್ನ, (೪) ಅರಸ ತನ್ನ ನಿಜ ನಾಮಾಂಕಿತದಿಂದ ರಚಿಸಿದ ಕೃಷ್ಣರಾಜೇಂದ್ರಪುರ ಅಗ್ರಹಾರ ಮೊದಲಾಗಿ ಗೃಹಸೋಬಸ್ಕರ ಗೃಹಸಹಿತಂಗಳಾದ ಅನೇಕ ಅಗ್ರಹಾರ ನಿರ್ಮಾಣ ಮಾಡಿ ಗ್ರಾಮ ಭೂದಾನವೆಂಬ ದಾನರತ್ನ, (೫) ಅರಸನ ಕುಲದೇವರಾದ ಬೆಟ್ಟದ ಶ್ರೀಚಾಮರಾಜೇಶ್ವರಸ್ವಾಮಿ ಗೋಪುರ, ಇಷ್ಟದೇವರಾದ ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ಗೋಪುರ, ಚಾಮರಾಜೇಶ್ವರಸ್ವಾಮಿ ಗೋಪುರ ಮತ್ತು ಮೈಸೂರಿನ ಲಕ್ಷ್ಮೀರಮಣಸ್ವಾಮಿ ಗೋಪುರಗಳನ್ನು ಕಟ್ಟಿಸಿದ ಪ್ರತಿಷ್ಠಾರತ್ನ, (೬) ಕಾವೇರಿ ನದಿಗೆ ಕೃಷ್ಣರಾಜಕಟ್ಟೆಯನ್ನು ಪಶ್ಚಿಮವಾಹಿನಿಯಲ್ಲಿ ಕೃಷ್ಣರಾಜ ಸೋಪಾನ ಕಟ್ಟಿಸಿದ ಉಪಕಾರ ರತ್ನ, (೭) ಕಾಶಿ, ಜಗನ್ನಾಥ, ಶ್ರೀರಂಗ, ಕಂಚಿ, ತಿರುಪತಿ, ಮೇಲುಕೋಟೆ ಮೊದಲಾದ ದಿವ್ಯಕ್ಷೇತ್ರಗಳಲ್ಲಿ ಅನ್ನದಾನ ಸತ್ರಗಳನ್ನು ಕಟ್ಟಿಸುವ ಧರ್ಮರತ್ನ, (೮) ಕೃಷ್ಣರಾಜವರಹ, ಕೃಷ್ಣರಾಜಹಣ ಮೊದಲಾದ ಸುವರ್ಣ ರಜತ ನಾಣ್ಯಗಳನ್ನು ಅಚ್ಚುಹಾಕಿಸುವ ಕೀರ್ತಿರತ್ನ, (೯) ಶ್ರೀಭಾಗವತ ಅಧ್ಯಾತ್ಮ ರಾಮಾಯಣ ಮೊದಲಾದ ಪುರಾಣೇತಿಹಾಸಂಗಳಿಗೆ ಕರ್ನಾಟಕ ಭಾಷಾ ವ್ಯಾಖ್ಯಾನಗಳನ್ನು, ಸೌಗಂಧಿಕಾ ಪರಿಣಯ ಮೊದಲಾದ ಕಾವ್ಯ ಪ್ರಬಂಧಗಳನ್ನು ರಚಿಸುವ ಸಾರಸ್ವತ ರತ್ನ - ಈ ನವರತ್ನಗಳ ನಿರ್ಮಾಣ ಮಾಡಿ ಇದರಲ್ಲಿ ಸೇವಾರತ್ನಕ್ಕೆ ಸೇರಿದ ಪ್ರಸನ್ನ ಕೃಷ್ಣಸ್ವಾಮಿ ದೇವರ ಸನ್ನಿಧಿಗೆ ಬರೆಸಿ ಒಪ್ಪಿಸಿದ ಕ್ರಮದ ಬಗ್ಗೆ ಹೀಗೆ ಪ್ರಸ್ತಾಪಿಸಿದೆ. ಅರಮನೆಗೆ ಬಲಭಾಗದಲ್ಲಿನ ವೇದ ವೇದಶೃಂಗ ಸಹಿತ ಪಂಚೋಪನಿಷನ್ನಾಮಕವಾದ ಸ್ವರ್ಣಕಲಶಯುಕ್ತವಾದ ವಿಮಾನವುಳ್ಳ ದೇವಾಲಯದ ಮಹಾದ್ವಾರ ಪ್ರಾಕಾರ ಮಂಟಪ ಸಹಿತವಾಗಿ ನಿರ್ಮಿಸಿ ಶ್ರೀ ರುಕ್ಮಿಣಿ ಸತ್ಯಬಾಮೆ ಸಮೇತ ಪ್ರಸನ್ನ ಕೃಷ್ಣಸ್ವಾಮಿಯ ಪಂಚಬೇರಯುಕ್ತವಾಗಿ ಪ್ರತಿಷ್ಠೆಯನ್ನು ಮಾಡುವುದು. ಮತ್ತು ಶ್ರೀ ರಂಗನಾಥ, ವೆಂಕಟರಮಣಸ್ವಾಮಿ, ವರದರಾಜ, ಚಲುವರಾಯಸ್ವಾಮಿಯ ವಿಗ್ರಹಗಳ ಜೊತೆ ಮತ್ತು ಹಲವು ದೇವವಿಗ್ರಹಗಳನ್ನು, ಪೂರ್ವಾಚಾರ್ಯರ ವಿಗ್ರಹಗಳನ್ನು ಮಾಡಿಸಿ ಪ್ರತಿಷ್ಠೆಯನ್ನು ಮಾಡುವಂತೆ ತಿಳಿಸಿದೆ. ಅಲ್ಲದೆ ಕಂಚಿಯಿಂದ ತರಲಾಗಿದ್ದು ತೆಂಕಣಾಂಬಿಯಲ್ಲಿರಿಸಿದ್ದ ಪೆರುಂದೇವಿ ಅಮ್ಮನವರವನ್ನು ಈ ದೇವಸ್ಥಾನಕ್ಕೆ ತಂದು ಪ್ರತಿಷ್ಠಾಪನೆ ಮಾಡಿಸುವುದು. ಮೇಲುಕೋಟೆ ನಾರಾಯಣಸ್ವಾಮಿ ಸನ್ನಿಧಿಯಿಂದ ಶ್ರೀಶಠಗೋಪರನ್ನು ಕರೆಸಿ ಈ ದೇವರುಗಳ ನಿತ್ಯ ಪಡಿತರ, ದೀಪಾರಾಧನೆ, ನಿತ್ಯೋತ್ಸವ ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ರಥೋತ್ಸವ ಮೊದಲಾದ ಉತ್ಸವಗಳನ್ನು ಮಾಡಿಸುವುದರ ಜೊತೆಗೆ ಧರ್ಮಾಧ್ಯಯನ, ರಾಮಾನುಜ ಕೂಟ ಮೊದಲಾದ ಎಲ್ಲಾ ಸೇವೆಗಳು ಸಾರೋದ್ಧಾರವಾಗಿ ನಡೆಯಲು ಪ್ರತಿವರ್ಷ ಕಂಠೀರಾಯಿ ಐದುಸಾವಿರ ವರಹ ತಸ್ತೀಕು ನಿಷ್ಕರ್ಷೆ ಮಾಡಿ ಮೈಸೂರು ಅಠ್ಠವಣೆ ಸುಭೇದಾರನ ಹೆಸರಿಗೆ ನಿರೂಪ ಕಟ್ಲೆ ಮಾಡಿಸಿ ಈ ಸೇವೆಗಳು ಆಚಂದ್ರಾರ್ಕವಾಗಿ ನಡೆಯುವಂತೆ ಪ್ರಾರ್ಥಿಸುತ್ತಾ ಶೇಷ ತೀರ್ಥಪ್ರಸಾದಗಳನ್ನು ಸ್ವೀಕರಿಸುವುದಕ್ಕೋಸ್ಕರ ಸನ್ನಿಧಿಯಲ್ಲಿ (ಅರಸನ) ಪಟ್ಟಮಹಿಷಿ

ಲಕ್ಷ್ಮೀವಿಲಾಸದ ರಾಣಿ, ಕೃಷ್ಣವಿಲಾಸದ ಮತ್ತು ರಮಾವಿಲಾಸದ ಧರ್ಮಪತ್ನಿಯರ ಸಹಿತ ತಮ್ಮ ರೂಪು ಭಕ್ತಪ್ರತಿಮೆಗಳನ್ನು ಪ್ರತಿಷ್ಠೆ ಮಾಡಿಸಿ ಶ್ರೀಯವರ ಸನ್ನಿಧಿಗೆ ಒಪ್ಪಿಸಿದ ವಿವರಗಳಿರುವ ವಿಶಿಷ್ಟ ಶಾಸನ. ಶಾಸನದ ಕಡೆಯಲ್ಲಿ 'ಶ್ರೀಕೃಷ್ಣ' ಎಂಬ ರುಜುವಿನಿಂದ ಕೊನೆಯಾಗಿದೆ. (ಮೈಸೂರು - ೩೭)

ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಸುಬ್ರಾಯದಾಸರ ಪ್ರಸನ್ನ ವೆಂಕಟರಣಸ್ವಾಮಿ ದೇವಾಲಯದಲ್ಲಿ ಪ್ರಾಣದೇವರ ಗುಡಿ ಬಾಗಿಲುವಾಡದ ಮೇಲೆ ಗೋಡೆಯಲ್ಲಿರುವ ಕ್ರಿ.ಶ. ೧೮೩೭ರಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರ ಕಾಲದ ಶಾಸನ ಸರ್ವವಿಷಯದಲ್ಲೂ ಸಂರಕ್ಷರಾದ ಸುಬ್ಬರಾಯದಾಸ (ಅಲಿಯಾಸ) ಪ್ರತಿನಾಮಾ ಗೋಪಾಲದಾಸನು ಕೃಷ್ಣವಿಲಾಸದಲ್ಲಿ ನನ್ನ ಹೆಸರಿಗೆ ದಯಮಾಡಿಸಿದ ವೃತ್ತಿ ಮನೆಯನ್ನು ಪ್ರಸನ್ನವೆಂಕಟೇಶ ದೇವರ ದೇವಸ್ತಾನ, ಚಿತ್ರಮಂಟಪ, ರಥ, ತಟಾಕ, ತೋಪು, ದೇವಸ್ಥಾನದ ಎದುರಿಗೆ ಅಗ್ರಹಾರ ತಟಾಕದ ಮೇಲೆ ಪ್ರಾಣದೇವರು ದೇವಸ್ತಾನ, ಪ್ರಸನ್ನ ಪುಷ್ಕರಣಿ ಪ್ರಸನ್ನ ಪ್ರಾಣದೇವರು, ರಾಮದೇವರು ದೇವಸ್ತಾನ ಉತ್ಸವ ಮಂಟಪ, ಸಂಧ್ಯಾ ಮಂಟಪ ಮುಂತಾದವುಗಳು ಆಳಿದ ಮಹಾಸ್ವಾಮಿಯವರಿಗೆ ಮತ್ತು ಅವರ ಪುತ್ರ ಕಳತ್ರ ಅವರ ವಂಶಪಾರಂಪರ್ಯ ವಿಶಿಷ್ಟಧರ್ಮವಾಗಿ ಸೇರಬೇಕೆಂದು ನಮ್ಮ ಅಣ್ಣ ಸೀನಪ್ಪದಾಸರು ಸಮ್ಮತಿಯಿಂದಾ ಮುಂದೆ ಅವರಿಗೆ ಪರಲೋಕಾ ಸಾಧನಾರ್ಥವಾಗಿ ಶ್ರೀಕೃಷ್ಣಾರ್ಪಣ ಪೂರ್ವಕವಾಗಿ ಆಳಿದ ಮಹಾಸ್ವಾಮಿಯವರು ಮಾಡಿಸಿದ ಧರ್ಮ ಇವರ ಸವಿಸ್ತಾರದ ವಿವರವನ್ನು ಪ್ರಸನ್ನ ವೆಂಕಟೇಶ ದೇವರ ದೇವಸ್ತಾನದ ಶಿಲಾಶಾಸನದಲ್ಲಿದೆ ನೋಡಲಾಗಿ ತಿಳಿದು ಬಂದಿತ್ತು ಎಂದು ಹೇಳಿ ಕಡೆಯಲ್ಲಿ ರುಜು ಶ್ರೀ ಕೃಷ್ಣ ಎಂದಿದೆ (ಮೈಸೂರು ೪). ಬಳಿಕೆರೆ ಆಂಜನೇಯಸ್ವಾಮಿ ದೇವಾಲಯದ ಕಂಬದಲ್ಲಿ ಮುಮ್ಮಡಿ ಕೃಷ್ಣದೇವರಾಯ ವಡೆಯರ ಕಾಲದಲ್ಲಿ ಶ್ರೀನಿವಾಸದಾಸ ಅವನ ತಮ್ಮ ಸುಬ್ರಾಯದಾಸ ಉರುಪ್ ಗೋಪಾಲದಾಸ ಕಾಶಿ, ರಾಮೇಶ್ವರ, ಶೃಂಗೇರಿ, ತಿರುಪತಿ ಮೊದಲಾದ ಕ್ಷೇತ್ರಗಳಲ್ಲಿ ತಮ್ಮ ಅಣ್ಣ ವೆಂಕಟದಾಸರು ಮತ್ತು ಅವರ ವಂಶಸ್ಥರುಗಳಿಗೂ ವಿಶೇಷ ಪಿತೃಗಳಿಗೂ ಮುಕ್ತಿಲೋಕ ಪ್ರಾಪ್ತಿಯಾಗಬೇಕೆಂದು ದೇವಸ್ಥಾನ, ಛತ್ರ, ಜಯಘಂಟೆ ಮೊದಲಾದವನ್ನು ದಾನಮಾಡಿದ ಉಲ್ಲೇಖ ಕೃಷ್ಣವಿಲಾಸ ಅಗ್ರಹಾರದಲ್ಲಿದೆ. (ಹುಣಸೂರು ೨೧)

ನಾರಾಯಣರಾಯರ ಅಗ್ರಹಾರದ ಮನೆಯೊಂದರ ಗೋಡೆಯ ಮೇಲಿನ ಕ್ರಿ.ಶ. ೧೮೭೩ರಲ್ಲಿನ ಶಾಸನ ಕೃಷ್ಣರಾಜವಡೆಯರ ಆಳ್ವಿಕೆಯಲ್ಲಿ, ಕಪಿಲಾನದೀತೀರ ಗರಳಪುರಿಕ್ಷೇತ್ರ ಶ್ರೀಕಂಠೇಶ್ವರಸ್ವಾಮಿ ಸನ್ನಿಧಿಯಲ್ಲಿ ಗಾರ್ಗ್ಯ ಭಾರಧ್ವಾಜ ಗೋತ್ರ ಆಪಸ್ತಂಬ ಸೂತ್ರ ಯಜುಶ್ಯಾಖ್ಯಾಧ್ಯಾಯಿಗಳಾದ ಲಕ್ಷ್ಮೀನರಸಯ್ಯನವರ ಪೌತ್ರರಾದ ನಾರಾಣಪ್ಪನವರ ಪುತ್ರರಾದ ಮೈಸೂರ ಸಂಸ್ಥಾನದ ರೆಶೀಡೆಂಟ್ ಕಛೇರಿ ಹೆಡ್‌ಶಿರಸ್ದಾರ ಚವುಡಪ್ಪನವರ ಧರ್ಮ ಪತ್ನಿ ಸಾವಿತ್ರಮ್ಮನವರಿಂದ ಏಕವ್ಯೂಹ ಸಂಖ್ಯಾರವಾಗಿ ಸಾವಿತ್ರಂಬಾಗ್ರಹಾರವು ನಿರ್ಮಿತವಾಗಿ ೫ ಮನೆ ಸೋಪಸ್ಕರವಾಗಿ ಬ್ರಾಹ್ಮಣರಿಗೂ, ಒಂದು ಮಂಟಪ ದೇವರಿಗೂ ಲಕ್ಷ್ಮೀನೃಸಿಂಹ, ಚೌಡೇಶ್ವರರ ಪ್ರೀತ್ಯರ್ಥ ಕೃಷ್ಣಾರ್ಪಣ ಪೂರ್ವಕ ಸಹಿರಣ್ಯೋದಕವಾಗಿ ಧಾರೆಯೆರದು ವೃತ್ತಿ ವಿವರವನ್ನು ಹೇಳಿ ದಾನ ಮಾಡಿದೆ. (ನಂಜನಗೂಡು ೪೦೦)

ಮಹಾಜನರಿಗೆ, ಬ್ರಾಹ್ಮಣರಿಗೆ ಅಗ್ರಹಾರಗಳನ್ನು ದಾನ ನೀಡಿದಂತೆ ಬ್ರಾಹ್ಮಣೇತರರಿಗೆ ರಾಜ ಅಥವಾ ಅವನ ಕೈಕೆಳಗಿನ ಮಾಂಡಲೀಕರು, ಅಧಿಕಾರಿಗಳು ಸ್ವತಃ ಅಥವಾ ರಾಜನ ಅನುಮತಿ ಪಡೆದು ನೀಡಿದ ದಾನಗಳನ್ನು ಪುರವರ್ಗ, ಕೊಡುಗೆ, ರಕ್ತಕೊಡುಗೆ, ಉಂಬಳಿ, ಪಲ್ಲಕ್ಕಿ

ಉಂಬಳಿಗಳನ್ನು ಅಗ್ರಹಾರಗಳ ಮಾದರಿಯಲ್ಲಿ ದಾನ ನೀಡಿದ ಶಾಸನಗಳನ್ನು ಪರಿಶೀಲಿಸಲಾಗಿದೆ. ಈ ರೀತಿಯ ಶಾಸನಗಳು ಹಾಳಾಗಿದ್ದು ಯಾರು, ಯಾರಿಗೆ, ಯಾವ ಸಂದರ್ಭದಲ್ಲಿ ನೀಡಿದ ದಾನಗಳು ಮತ್ತು ಪಡೆದ ವ್ಯಕ್ತಿಗಳ ವಿವರ ನಿಖರವಾಗಿ ದೊರೆಯುವುದಿಲ್ಲವಾದರು ಕ್ವಚಿತ್ತವಾಗಿ ಪ್ರಯತ್ನಿಸಲಾಗಿದೆ. ತೀರಾ ತ್ರುಟಿತವಾಗಿರುವ ಶಾಸನಗಳನ್ನು ಕೈ ಬಿಡಲಾಗಿದೆ.

ವಿವಿಧ ರೀತಿಯ ಕೊಡುಗೆಗಳ ದಾನ

ಬೆಳತೂರು ಕಾಳಮ್ಮನ ಗುಡಿಯಲ್ಲಿನ ೧೨ನೇ ಶತಮಾನದ ನುಗುನಾಡ ಬೆಳತೂರ ಕಾವರಬೀವ ಮಾಲೆಜೀಯನ ಮಗ ತುರುಗೋಳದಲ್ಲಿ ಕಾದಿ ತರುವ ಮಗುಳ್ಚಿ ವೀರ ಸ್ವರ್ಗಸ್ಥನಾದ ಅವನಿಗೆ 'ಬೆಳತೂರ ಕೊಡಗೆ' ಯನ್ನು ಕೊಡಲಾಗಿದೆ. (ಹೆ.ದೇವ.ಕೋಟೆ-೫೫) ಸುಮಾರು ಇದೇ ಕಾಲಕ್ಕೆ ಸೇರಿದ ಜಿನ್ನಹಳ್ಳಿ ಮಾರಿಗುಡಿಯ ಶಾಸನ ಹೆಗಡೆ ಮಾರತಮ್ಮನು ಮಾದಮಾರ ಗೌಡನ ಮಗ ಮಾದಿಗೌಡನಿಗೆ ಕೊಟ್ಟ 'ಕೊಡಗೆಯ' ಮಣ್ಣು ೫೦೦ ಎಂದಿದೆ. (ಹೆ.ದೇ.ಕೋ.-೨೪) ದೊಡ್ಡ ಬೆಲಹಾಳು ಈಶ್ವರ ದೇವಾಲಯದಲ್ಲಿನ ಕ್ರಿ.ಶ.೧೩೪೪೮ ಶಾಸನ ಮಹಾಪ್ರಧಾನ ನಾಗಿಯದಂಡನಾಯ್ಕನ ಮಗ ಕೇತೆಯ ದಂಡನಾಯಕ ರಾಘವದೇವರಿಗೆ ಚಂಗನಾಡ ಮೂಡ ಬಾಗಿಲು ಬೆಲಹಾಳನು 'ಕೊಡಗಿ' ಯಾಗಿ ನೀಡಿ, ಚತುಸ್ಸೀಮೆಯಲ್ಲಿನ ಕೆರೆ, ಗದ್ದೆ, ಬೆದ್ದಲುಗಳನ್ನು ಸಮಸ್ತ ಬಳಿ ಸಹಿತ ದಾನ ಮಾಡಿದೆ (ಪಿರಿಯಾಪಟ್ಟಣ-೧೨೨) ಗುಂಡ್ಲುಪೇಟೆಯ ವಿಜಯನಾರಾಯಣಸ್ವಾಮಿ ದೇವಾಲಯದಲ್ಲಿನ ಕ್ರಿ.ಶ. ೧೫೪೪ರಲ್ಲಿ ಲಾಳವಂದ ಖಾನೆಯ ...ರುಸ್ತುಂ ಖಾನೊಡೆಯ, ತಮ್ಮ ನಾಯಕತನಕ್ಕೆ ಬಂದ ವಿಜಯಪುರದ ವಿಜಯನಾರಾಯಣಸ್ವಾಮಿ ದೇವರ ದೀಪ, ನೈವೇದ್ಯಕ್ಕೆಂದು ಬಿಟ್ಟಿದ್ದ 'ಕೊಡಗೆದೆರೆ' ಯನ್ನು ಪಾರುಪತ್ಯೇದಾರರು ಅನ್ಯಾಯವಾಗಿ ಪಡೆದುಕೊಳ್ಳುತ್ತಿದ್ದುದನ್ನು ತಪ್ಪಿಸಲಾದ ಉಲ್ಲೇಖವಿದೆ. (ಗುಂಡ್ಲುಪೇಟೆ-೬)

ಉಪ್ಪಿನಹಳ್ಳಿಯ ೧೬ನೆಯ ಶತಮಾನದ ಶಾಸನ, ಕಾರೆನಾಡ ಮಹಾಪ್ರಭು ಕಾಮಣ್ಣ ಉಪ್ಪಹಳ್ಳಿಯ ಮಲ್ಲಿಕಾರ್ಜುನ ದೇವಾಲಯದ ಸ್ಥಾನಿಕರಿಗೆ ಕೊಟ್ಟ (ಹೆಸರುಹಾಳಾಗಿದೆ) ಮೂರು ಸ್ಥಾನಕ್ಕೆ ಸಲ್ಲುವ ಗದ್ದೆ, ಬೆದ್ದಲುಗಳನ್ನು ಸರ್ವಸ್ವಾಮ್ಯದಲ್ಲಿ ಅನುಭವಿಸಿಕೊಂಡು ತೆಱುವ 'ಕೊಡಗಿದೆಱೆ'ಯ ಬಗ್ಗೆ ಹೇಳಿದೆ. (ನಂಜನಗೂಡು ೩೫೬) ಇದೇ ಕಾಲದ ಪಂಚನಹಳ್ಳಿಯ ಶಾಸನ ಅರಕೆರೆಯ ಮಲ್ಲಪನಾಯಕನ ಮಗ ಪರಮನಾಯ್ಕನು ಬಸವೇಶ್ವರ ದೇವರ ಹೆಸರಿನಲ್ಲಿ ಪುಣ್ಯವಾಗಲಿ ಎಂದು ಪಂಚನಹಳ್ಳಿಯ ಸಿದ್ದೇಗೌಡನ ಮಗ ಪುಟ್ಟದೇವಗೌಡನಿಗೆ ಕೊಟ್ಟ 'ಕೊಡುಗೆ'. (ಗುಂಡ್ಲುಪೇಟೆ-೯೭) ಇದೇ ಕಾಲದ ಪಡುಗೂರಿನ ಆಂಜನೇಯದೇವಾಲಯದಲ್ಲಿನ ಶಾಸನ, ಸಾಳುವ ಗೋವಿಂದ ರಾಜಯ್ಯನಿಗೆ ಧರ್ಮವಾಗಲಿಯೆಂದು ಹನುಮಂತದೇವರ ಸೇವೆಗಾಗಿ ಬೋವರಾವುತ, ಮಂಗರಾವುತ, ಬಸವರಾವುತ, ಮಲ್ಲರಾವುತ, ದೇವರಾಯರಾವುತ, ಅಣ್ಣಮಯ್ಯ ರಾವುತ, ಬಯಿರರಾವುತ ಈ ಆರು ಮಂದಿಗೆ ಸೇರಿಸಿ ೪೩೦ ಕಂಬದ ಭೂಮಿಯನ್ನು ಒಬ್ಬರಿಗೆ ಇಂತಿಷ್ಟು ಕಂಭಗಳ ಭೂಮಿಯನ್ನು ಅನುಭವಿಸುವಂತೆ ಕೊಟ್ಟ 'ಕೊಡುಗೆ' ಯನ್ನು ಹೇಳಿದೆ. (ಗುಂಡ್ಲುಪೇಟೆ - ೯೪)

ಬಾಣೂರ ಬಸವೇಶ್ವರ ದೇವಾಲಯದ ಕ್ರಿ.ಶ. ೧೬೦೭ರ ಶಾಸನ ವಿರೂಪನಾಯಕರು (ತಳನೂರು) ಮಲ್ಲಣ್ಣನಿಗೆ, ಕೊತ್ತಮಾರಸ್ಥಳದ ವಳಗಣ ಬಾಣೂರ ಗ್ರಾಮ ಒಂದನ್ನು

'ಕೊಡುಗೆ' ಯಾಗಿ ಕೊಟ್ಟು ಆ ಗ್ರಾಮದ ಚತುಸೀಮೆಯ ಅಷ್ಟಭೋಗ ಸ್ವಾಮ್ಯವನ್ನು ಪುತ್ರ, ಪೌತ್ರರು ಅನುಭವಿಸುವಂತೆ ಹೇಳಿದೆ. (ಕೊಳ್ಳೆಗಾಲ - ೪೪) ಮೂಗೂರಿನ ಕ್ರಿ.ಶ. ೧೬೨೮ರಲ್ಲಿ ಚಿಕ್ಕ ವೊಡೆಯನ ಮಗ ದೊಡ್ಡಯ್ಯನು ಮೂರು ಖಂಡುಗದ ಭೂಮಿಯನ್ನು 'ಕೊಡುಗೆ' ಯಾಗಿ ತಿರುಮಲರಾಜನಿಂದ ಪಡೆಯುತ್ತಾನೆ. ಅದರಲ್ಲಿ ಕೇಶಿನಾಥದೇವರ ಏಕಾಂತ ನೈವೇದ್ಯಕ್ಕೆ ಒಂದು ಖಂಡುಗವನ್ನು ಕೇತಹಳ್ಳಿ ಮಠಕ್ಕೆ ಎರಡು ಖಂಡುಗವನ್ನು ಕೊಡುವಂತೆ ಹೇಳಿ ಮಲ್ಲಿಗೆಹಳ್ಳಿಯನ್ನು 'ಕೊಡುಗೆ' ಯಾಗಿ ದಾನ ನೀಡಿದ ಉಲ್ಲೇಖವಿದೆ. (ತಿ.ನರಸೀಪುರ-೨೬೯) ಕ್ರಿ.ಶ.೧೭ನೆಯ ಶತಮಾನದ ಆಲತ್ತೂರಿನ ವರದರಾಜಸ್ವಾಮಿ ದೇವಾಲಯದ ಶಾಸನ 'ಹೊಸವೀರ ಸಿಂಗಯ್ಯ ಸೆಟ್ಟರು ನಮ್ಮ 'ಕೊಡುಗೆ' ಹೊಲದೊಳಗಣ ಗೋವಿಂದ ಬಾಯಿಯ' ಎಂದಿದೆ. (ಗುಂಡ್ಲುಪೇಟೆ-೩೫) ಕ್ರಿ.ಶ.೧೭೩೬ರ ಶಾಸನ ತಿರುಮಕೂಡಲಿನ ಗಂಗಾಧರಯ್ಯನ ಮಗ ಲಿಂಗಪ್ಪ ಪತ್ನಿ ಗೌರಮ್ಮನು, ವಿಶ್ವನಾಥ, ನಂಜುಂಡೇಶ್ವರ, ವಿಶ್ವೇಶ್ವರ, ಜಗದೇಶ್ವರ, ಮುದ್ದು ಗೌರಮ್ಮದೇವಿಯ ಪ್ರತಿಷ್ಠೆ, ಜೀರ್ಣೋದ್ಧಾರ, ನೈವೇದ್ಯ, ದೀಪಕ್ಕೆ 'ಕೊಡುಗೆ' ಯಾಗಿ ತಮಗೆ ಬಂದದ್ದನ್ನು ನಂಜೆ ಹೆಬ್ಬಾರರಿಗೆ ದಾನ ಮಾಡಿದ್ದನ್ನು ಹೇಳಿದೆ. (ತಿ.ನರಸೀಪುರ-೨೭) ಕೆರೆಹಟ್ಟಿ ಹೊಸೂರಿನ ಸಂಕ್ಷಿಪ್ತ ಶಾಸನ 'ಮಲಿಹಳ್ಳಿಯ ಪಾಲೆನಾಯಕನ ಮಗ ಗೌರಪ್ಪ ನಾಯಕ ಆಲಂಬಾಡಿಯ ಪಟ್ಟಣಸ್ವಾಮಿ... ನಂಜಕೊಟ್ಟ 'ಕೊಡುಗೆ' ನಾಲ್ಕು ಅಂಕಣ' ಎಂದಿದೆ. (ಕೊಳ್ಳೆಗಾಲ-೭೬) ಕಪ್ಪುಸೋಗೆ ಬಸವನ ಚಾವಡಿಯಲ್ಲಿನ ಕ್ರಿ.ಶ. ೧೮೧೮ರಲ್ಲಿ ಕೃಷ್ಣರಾಜವೊಡೆಯರು ಸ್ವಾರ್ ಕಛೇರಿ ಬಕ್ಷಿ ಭೀಮರಾಯರಿಗೆ 'ಇನಾಂಕೊಡುಗೆ' ಎಂದು ದಾನ ಮಾಡಿದೆ.' (ನಂಜನಗೂಡು-೧೫೦) ತೆರಕಣಾಂಬಿಯ ಶಾಸನ 'ಕಾಲನಾಥದೊಯಿಸರ 'ಕೊಡಗಿ' ಯನು ಅಪಹರಿಸ್ತವರು ಕಾಶಿಯ ಕ್ಷೇತ್ರದಲ್ಲಿ ತಂದೆ ತಾಯಿ ಗೋವು ಬ್ರಾಹ್ಮರ ಕೊಂದ ಪಾಪಕ್ಕೆ ಹೋಹರು'' ಎಂದಿದೆ. (ಗುಂಡ್ಲುಪೇಟೆ-೧೨೬)

ಪುರವರ್ಗ :

ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದ ಕ್ರಿ.ಶ.೧೪೯೨ರ ಶಾಸನ ಉಮ್ಮತ್ತೂರಿನ ಇಮ್ಮಡಿರಾಯ ಒಡೆಯರ ಮಗ ವೀರನಂಜರಾಯ ಒಡೆಯರ ಮನೆಯ ಮಹಾಪ್ರಧಾನ ದೇವರಾಯನ ಮಗ ಪರ್ವತಯ್ಯನು ತಿರುಮಲಯ್ಯನು ಒಡೆಯರ (ಜಂಗಮರ) ಆರೋಗಣೆಗೆ ಬೊಮ್ಮನಹಳ್ಳಿಯನು 'ಪುರವರ್ಗವಾಗಿ' ಮಾಡಿ ಲಿಂಗಮುದ್ರೆ ಕಲ್ಲು ಹಾಕಿಸಿ, ಅಲ್ಲಿ ಕೆರೆಯನ್ನು ಕಟ್ಟಿಸಿ, ಕೆರೆಯ ಕೆಳಗೆ ಅಡಿಕೆ ಮರವನ್ನು ಹಾಕಿಸಿ, ಗ೧೨ಕ್ಕೆ ಪುರಗುತ್ತಿಗೆಯಾಗಿ ಮಾಡಿ ಹಲವು ಸುಂಕಗಳನ್ನು ಮನ್ನಾ ಮಾಡಿ ತೋಟದಿಂದ ಬರುವ ಆದಾಯದಲ್ಲಿ ತೋಟದ ಉಪಕ್ಷಯವನ್ನು ಕಳೆದು, ಒಬ್ಬ ಒಡೆಯನ ಆರೋಗಣೆಗೆ ವರ್ಷಕ್ಕೆ ೬ ಗದ್ಯಾಣದಂತೆ ಲಭ್ಯವಾಗುವ ಹೊನ್ನಿನಿಂದ ಅಷ್ಟು ಜನ ಒಡೆಯರ ಆರೋಗಣೆಗೆ ಸಲ್ಲುವುದೆಂದು ಉಲ್ಲೇಖಿಸಿದೆ. (ಗುಂಡ್ಲುಪೇಟೆ - ೧೩೫)

ಉಂಬಳಿ :

ಚಿಕ್ಕಣಾಪುರ ಪಾಳುಗ್ರಾಮದ. ಕ್ರಿ.ಶ. ೧೪೮೨ರ ಶಾಸನ ಮಂಡಲೇಶ್ವರ ವೀರನಂಜರಾಜವೊಡೆಯರು ತೆರಕಣಾಂಬಿಯ ಅಂಗಡಿಯ ವೀರದೇವರಿಗೆ ಮಂಗಳವಾರದ

ನೈವೇದ್ಯಕ್ಕೆ ೫ ಹಣದ ಲೆಕ್ಕದಲ್ಲಿ ವರ್ಷವೊಂದಕ್ಕೆ ೫೪ ವಾರಗಳಿಗೆ ೨೭ ಹೊನ್ನಿನ ತೆರಕಣಾಂಬಿಯ ನಾಡ ಕಾಚಗೌಡನ ಮಾಡಹಳ್ಳಿಯ ಕಾಲುವಳಿಯ ಚಿಕ್ಕಣ್ಣನ ಹಳ್ಳಿಯನ್ನು ದಿವ್ಯ ಶ್ರೀ ಕಾರ್ಯಕ್ಕೆ ಅರಮನೆ ಭಂಡಾರಕ್ಕೆ ಸಲ್ಲುವ ೨೭ ಹೊನ್ನಿನ ಗ್ರಾಮವನ್ನು 'ದೇವರ ಉಂಬಳಿ' ಯಾಗಿ ಲಿಂಗಮುದ್ರೆ ಕಲ್ಲು ನೆಟ್ಟು ದಾನ ಮಾಡಿದೆ. (ಗುಂಡ್ಲುಪೇಟೆ-೮೧) ಬಸವಾಪುರದ ಕ್ರಿ.ಶ. ೧೪೯೨ರಲ್ಲಿ ಉಮ್ಮತ್ತೂರಿನ ವೀರಹೊನ್ನ ಒಡೆಯರು ತಮಗೆ 'ಉಂಬಳಿ' ಯಾಗಿ ಬಂದ ತೆರಕಣಾಂಬೆಯ ರಾಜ್ಯದ ಹೊಸನಾಡು ಬಸವಪುರವನು...ಂಮಪಟ ಆರೋಗಣೆಗೆ, ಚತುಸ್ಸೀಮೆಗೆ ಸಲ್ಲುವ ಗದ್ದೆ ಬೆದ್ದಲು, ತೋಟ, ತುಡಿಕೆ, ಕಳೆ, ಕೊಡಾರ, ಅಡುಮನೆ ಮೊದಲಾದ ಚತುಸ್ಸೀಮೆಯ ಗಡಿಗೆ ಲಿಂಗಮುದ್ರೆ ಕಲ್ಲು ಹಾಕಿ ಪರಾಕು ಮಾಡಲಾಗಿ ೪೦ ಹೊನ್ನಿಗೆ ಶ್ರೋತ್ರಿಗುತ್ತಿಗೆಯಾಗಿ ಅನುಭವಿಸಿಕೊಂಡು ಬರುವಂತೆ ತಿಳಿಸಿದೆ. (ಚಾ.ನಗರ-೨೫೬) ಲೊಕ್ಕೆರೆ ಗ್ರಾಮದ ಮಾರಿಗುಡಿಯ ಕ್ರಿ.ಶ. ೧೫೪೦ರ ಶಾಸನ ಸೋಮಶಿಲಾದೇವುರಾವುತರಾಯ ಮಹಾ ಪಾತ್ರ ಅರಸುಗಳ ಕಾರ್ಯಕರ್ತ ಮಂಡಲೇಶ್ವರ ಕೊಂಡಯ್ಯದೇವ ಚೋಳಮಹಾಅರಸು, ತೆರಕಣಾಂಬಿಯ ಬುಳ್ಳಪ್ಪನಾಯಕರ ಮಗ ಕೇಶವಯ್ಯನಿಗೆ ೩೫ ವರಹದ ಗ್ರಾಮದ ಚತುಸ್ಸೀಮೆಯಲ್ಲಿನ ಸರ್ವ ಆದಾಯವನ್ನು ಅನುಭವಿಸುವಂತೆ 'ಪ್ರಮಾಣಿನ ಉಂಬಳಿ' ಯನ್ನು ನೀಡಿದೆ. (ಗುಂಡ್ಲುಪೇಟೆ-೧೮೬)

ಹೊರೆಯಾಲ ರಂಗನಾಥಸ್ವಾಮಿ ದೇವಾಲಯದ ಕ್ರಿ.ಶ. ೧೫೪೬ರ ಶಾಸನ ದಳವಾಯಿ ಕೃಷ್ಣಪ್ಪನಾಯಕರು ತಗಡೂರು ಚಿಕ್ಕಮಲ್ಲಯ್ಯನಿಗೆ ಕೊಟ್ಟ 'ಉಂಬಳಿ ಗ್ರಾಮ' ವನ್ನು ಅವರ ನಾಯಕತನಕ್ಕೆ ಅಚ್ಯುತ ಮಹಾರಾಯರು ದಯಪಾಲಿಸಿದ್ದ ಉಮ್ಮತ್ತೂರ ಸೀಮೆಯ ತಗಡೂರಿನ ಹೊರೆಯಾಲ ಗ್ರಾಮವನ್ನು ದಾನ ಮಾಡಿದೆ. (ಗುಂಡ್ಲುಪೇಟೆ-೫೩) ಕಾಗಲವಾಡಿ ಗ್ರಾಮದಲ್ಲಿ ಕ್ರಿ.ಶ.೧೫೭೦ರಲ್ಲಿ ವಿಜಯನಗರದ ಅರಸು ಸದಾಶಿವರಾಯರ ಆಳ್ವಿಕೆಯಲ್ಲಿ ಮಹಾಮಂಡಲೇಶ್ವರ ರಾಮರಾಜ (ತಿರುಮ) ರಾಜಯ್ಯನವರ ಅರಸರುಗಳು ಹದಿನಾಡ ಸೀಮೆಯೊಳಗಿನ ಕಾಗಲವಾಡಿಯನ್ನು 'ಉಂಬಳಿ' ಯಾಗಿ ನೀಡಿದ್ದನ್ನು ತಿಳಿಯಬಹುದು. (ಚಾ.ನಗರ.೧೭೭) ಕುದೇರು ಗ್ರಾಮದ ಮಾರೀಗುಡಿ ಬಳಿಯ ಕ್ರಿ.ಶ.೧೫೭೮ರಲ್ಲಿ ಭುಜಂಗದೇವ ಮಹಾರಾಯರ ಆಳ್ವಿಕೆಯಲ್ಲಿ ಮಂಡಲೇಶ್ವರ ರಾಮರಾಜಯ್ಯದೇವ ಮಹಾ...ಳು ಅಯ್ಯನವರು ಹದಿನಾಡ ರಾಮರಾಜನಾಯಕನಿಗೆ, ನಮ್ಮ ಭಂಡಾರಕ್ಕೆ ಸಲ್ಲುವ ಉಮ್ಮತ್ತೂರ ಸೀಮೆಯ ಕುದಿಹೆರು ಸ್ಥಳವನ್ನು 'ಉಂಬಳಿ' ಯಾಗಿ ಕುದಿಹೆರು, ಮೂಕಹಳ್ಳಿಯ ಗ್ರಾಮ ಈ ಎರಡೂ ಗ್ರಾಮಗಳ ಚತುಸ್ಸೀಮೆಯಲ್ಲಿನ ನಿಧಿ, ನಿಕ್ಷೇಪ ಎಲ್ಲವನ್ನೂ ಆಚಂದ್ರಾರ್ಕಸ್ಥಾಯಿಯಾಗಿ, ದೇವದಾಯ, ಬ್ರಹ್ಮದಾಯವನ್ನು ಸರ್ವಮಾನ್ಯವಾಗಿ ಅನುಭವಿಸುವಂತೆ ಹೇಳಿದೆ (ಚಾ.ನಗರ-೭೨)

೧೬ನೆಯ ಶತನಾಮದ ತಿರುಮಕೂಡಲ ಬ್ರಹ್ಮೇಶ್ವರ ದೇವಾಲಯದ ಶಾಸನ, ವೀರ ಕೃಷ್ಣಮಹಾರಾಯರ ಆಳ್ವಿಕೆಯಲ್ಲಿ, ರಾಯರ ಮನೆಯ ಬೆವಹಾರಿ ಶರಣಪ್ಪ ಶೆಟ್ಟಿ, ಪಾರ್ವತಿಯ ದೇವಾಲಯವನ್ನು ತಿರುಮಕೂಡಲ ಆಗಸ್ತನಾಥ ದೇವಾಲಯದಲ್ಲಿ ಕಟ್ಟಿಸಿದನು. ಕೃಷ್ಣರಾಯರ ಮಹಾಪ್ರಧಾನ ಸಾಳುವ ಗೋವಿ... ಜೊಡೆಯರು ಕೊಳ್ಳೆಗಾಲ ಸ್ಥಳದ ಹೊನ್ನಹ... (ಸ್ಥಳದ ಹೆಸರು ಹಾಳಾಗಿದೆ) 'ಉಂಬಳಿ' ಯಾಗಿ ಕೊಟ್ಟು ಪಾರ್ವತಿದೇವಿಯ ಅಮೃತ ಪಡಿಗೆ ಕೊಟ್ಟದ್ದನ್ನು ತಿಳಿಸಿದೆ. (ತಿ.ನರಸೀಪುರ-೨೬) ಬನ್ನೂರ ದೇವಾಲಯದಲ್ಲಿರುವ ಕ್ರಿ.ಶ. ೧೬೫೧ರಲ್ಲಿ ವೆಂಕಟಪತಿಯ

ಆಳ್ವಿಕೆಯಲ್ಲಿ ಮೈಸೂರು ಚಾಮರಸವೊಡೆಯರ ಮಗ ರಾಜವೊಡೆಯ ವಹ್ನಿಪುರದ ರಘುಪತಿ ಸ್ವಾಮಿಯ ಅರ್ಚನೆಯ ವೃತ್ತಿಗೆ, ಅಂಗರಂಗ ವೈಭೋಗ ಪಡಿತರಕ್ಕೆಂದು ದಾನ ಮಾಡಿದೆ. ಬನ್ನೂರ ಸ್ಥಳಕ್ಕೆ ಸಲ್ಲುವ ಬೇವಿನಹಳ್ಳಿಯ ಗ್ರಾಮವನ್ನು 'ಉಂಬಳಿ' ಯಾಗಿ ನೀಡಿದೆ. (ತಿ.ನರಸೀಪುರ-೫೦) ಚಾಮುಂಡಿ ದೇವಾಲಯದ ಕ್ರಿ.ಶ.೧೬೨೦ರ ಶಾಸನ, ಕಾರಗಹಳ್ಳಿ ಸೀಮೆಯನ್ನು ತಿರುಮಲರಾಜನು, ನರಸರಾಜ ವೊಡೆಯನ ಮಗ ಚಾಮರಾಜ ವೊಡೆಯನ ನಾಯಕತನಕ್ಕೆ 'ಉಂಬಳಿ' ಯಾಗಿ ಕೊಟ್ಟಿದ್ದನು. ವೀರರಾಘವರಾಯನು ಕಾರಗಹಳ್ಳಿಯ ಸೀಮೆಯ ರಾಜಬಾಳ ಸ್ಥಳವನ್ನು ಲಿಂಗೇಗೌಡನ ಮಗ ದೇಪಗೌಡನಿಂದ ಕೊಂಡು ತಮ್ಮ ತಂದೆ ತಾಯಿಗೆ ಪುಣ್ಯವಾಗಲೆಂದು ಬಸವೇಶ್ವರಸ್ವಾಮಿಯ ಅಮೃತ ಪಡಿಗೆ ದಾನ ಮಾಡುತ್ತಾನೆ. (ತಿ.ನರಸೀಪುರ-೧೩೬) ಮೈಸೂರಿನ ವಾಜಿಮಂಗಲದ ಶಾಸನ ತ್ರುಟಿತವಾಗಿದ್ದು ಸದಾಶಿವರಾಯರು ಮಹಾಮಂಡಲೇಶ್ವರನಿಗೆ ನೀಡಿದ್ದನ್ನು ಶ್ರೀರಂಗಪಟ್ಟಣ ಸೀಮೆಯ ವೊಜಮಂಗಲವನ್ನು ಗದ್ದೆ, ಬೆದ್ದಲು, ತೋಟ, ತುಡಿಕೆ, ಸುವರ್ಣಾದಯ ಮೊದಲಾದ ಸಕಲ ಸ್ವಾಮ್ಯವನ್ನು ಅನುಭವಿಸುವಂತೆ 'ಗ್ರಾಮದ ಸೆಟ್ಟಿಯ ಉಂಬಳಿ'ಯ ಶಿಲಾಶಾಸನವೆಂದಿದೆ. (ಮೈಸೂರು - ೧೨೦)

ಪಲ್ಲಕ್ಕಿ ಉಂಬಳಿ :

ಮುಡಕನಪುರದ ಕ್ರಿ.ಶ. ೧೫೨೦ರ ವೆಂಕಟಪತಿ ಅರಸನ ಆಳ್ವಿಕೆಯಲ್ಲಿ ಜಗದೇವರಾಯ ವೊಡೆಯನ ಮಗ ದೇವರಾಯವೊಡೆಯನು ಚಿದುರುವಳ್ಳಿಯ ಚಿಕ್ಕಣ್ಣಗೌಡನ ಮಗ ಶಿವಯೋಗಿ ವೊಡೆಯರಿಗೆ 'ಪಲ್ಲಕ್ಕಿ ಉಂಬಳಿ' ಕೊಡುಗೆಯಾಗಿ ಮುಡುಕನಪುರದ ಗ್ರಾಮವನ್ನು ಆ ಸ್ಥಳದ ಚತುಸೀಮೆಯಲ್ಲಿನ ಗದ್ದೆ, ಬೆದ್ದಲು, ತೋಟ, ತುಡಿಗೆ, ಸುಂಕ, ಕಾಡಾರಂಭ, ನೀರಾರಂಭ, ಸುವರ್ಣಾದಾಯ ಮೊದಲಾದವನ್ನು ಅನುಭವಿಸುವಂತೆ ದಾನ ಮಾಡಿದೆ. (ತಿ.ನರಸೀಪುರ -೧೦೩) ದೊಡ್ಡಬೆಲಹಾಳು ಮಾರೀಗುಡಿ ಬಳಿಯ ಕ್ರಿ.ಶ. ೧೫೪೫ರ ಶಾಸನ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಶ್ರೀವೀರನಂಜರಾಯ ಪಟ್ಟಣದ ಶ್ರೀಕಂಠವೊಡೆಯರಿಗೆ ನಂದಿವಾಲದ ಅಹೋಬಲೇಶ್ವರ ಅರಸನಿಗೆ ಬೆಲಹಾಳು ಸ್ಥಳಕ್ಕೆ ಸಲುವ ಸೀಮೆಯನ್ನು ತಮ್ಮ ಸ್ವಂತ ಇಚ್ಛೆಯಿಂದ 'ಪಲ್ಲಕ್ಕಿ ಉಂಬಳಿ' ಯಾಗಿ ಕೊಟ್ಟ ದಾನ, ಸೀಮೆಗೆ ತಪ್ಪಿದವರು ತಮ್ಮ ಗುರು, ದೈವ, ತಂದೆ, ತಾಯಿ, ಗೋವು ಬ್ರಾಹ್ಮಣರನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುವರು ಎಂಬ ಶಾಪಾಶಯನವನ್ನು ಹೇಳಿದೆ. (ಪಿರಿಯಾಪಟ್ಟಣ ೧೨೧)

ಕೊಳ್ಳೆಗಾಲದ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯದಲ್ಲಿನ ಕ್ರಿ.ಶ. ೧೫೬೯ರಲ್ಲಿ ಸದಾಶಿವರಾಯರ ಆಳ್ವಿಕೆಯಲ್ಲಿ ಮಹಾಮಂಡಲೇಶ್ವರ ರಾಮರಾಜ ತಿರುಮಲ ರಾಜರಸರ ಕುಮಾರ ರಾಮರಾಜಯ್ಯದೇವ ಮಹಾಅರಸುಗಳ ಹದಿನಾಡ ಸೀಮೆಯ ಪ್ರಭು ರಾಮರಾಜನಾಯಕರಿಗೆ ಕೊಟ್ಟ ಉಂಬಳಿಯನ್ನು ಹದಿನಾಡ ಸೀಮೆಯ ಶಿವನಸಮುದ್ರದ ಸ್ಥಳದ ಕೊಳ್ಳೆಗಾಲವನ್ನು 'ಪಲ್ಲಕ್ಕಿ ಉಂಬಲಿ' ಯಾಗಿ ಕೊಟ್ಟು ಆ ಸ್ಥಳಕೆ ಸಲುವ ಹಳ್ಳಿ ಹಿರಿಯೂರ ಚಸುಸ್ಸೀಮೆಯಲ್ಲಿನ ಗದ್ದೆ, ಬೆದ್ದಲು, ಸುಂಕ, ಸುವರ್ಣಾದಾಯ, ತೋಟ, ಮೊದಲಾದ ಸಕಲ ಸ್ವಾಮ್ಯವನ್ನು ಪೂರ್ವಮಾನ್ಯವೆಂದು ಹೇಳಿದೆ. (ಕೊಳ್ಳೆಗಾಲ-೧) ತಾಯೂರ ತೃಣೇಶ್ವರ

ದೇವಾಲಯದ ಕ್ರಿ.ಶ. ೧೫೮೬ರಲ್ಲಿ ವೆಂಕಟಪತಿರಾಜನ ಆಳ್ವಿಕೆಯಲ್ಲಿ ಮಂಡಲೇಶ್ವರ ರಾಮರಾಜ ತಿರುಮಲರಾಜ, ಹದಿನಾಡ ರಾಮರಾಯ ನಾಯಕನ ಮಗನಿಗೆ ಮೂಗೂರ ಸೀಮೆಯ ತಾಯೂರ ಗ್ರಾಮವನ್ನೊಳಗೊಂಡಂತೆ ೧೫ ಗ್ರಾಮಗಳ ಸ್ಥಾನದ ಉಭಯ ಮಾರ್ಗದ ಸುಂಕವನ್ನು 'ಪಲ್ಲಕ್ಕಿಯ ಉಂಬಳಿ' ಯಾಗಿ ಕೊಟ್ಟು ದೇವದಾಯ, ಬ್ರಹ್ಮದಾಯವನ್ನು ಪೂರ್ವ ಮರ್ಯಾದೆಯಲ್ಲಿ ನಡೆಸಿಕೊಂಡು ಬರುವಂತೆ ತಿಳಿಸಿದೆ. (ನಂಜನಗೂಡು - ೨೦೮) ೧೬ನೇ ಶತಮಾನದ ತಳನೂರಿನ ಮೂಗೂರು ಸೀಮೆಯ ಒಳಗಣ ತೆಳನೂರನ್ನು 'ಆ ಪಲ್ಲಕ್ಕಿ ಉಂಬಳಿ' ಯಾಗಿ ಕೊಟ್ಟು ಚತುಸ್ಸೀಮೆಯಲ್ಲಿ ನಿಧಿ ನಿಕ್ಷೇಪ, ಜಲ-ಪಾಷಾಣ ಆಗಾಮಿ ಸಿದ್ಧ ಸಾಧ್ಯಗಳೆಂಬ ಅಷ್ಟಭೋಗತೇಜ ಸ್ವಾಮ್ಯಗಳನ್ನು, ಬ್ರಹ್ಮಾದಾಯ ಮೊದಲಾದವುಗಳನ್ನು ಪೂರ್ವ ಮರ್ಯಾದೆಯಂತೆ ನಡೆಸಿಕೊಂಡು ಬರುವಂತೆ ಹೇಳಿದೆ. (ದಾನ ಯಾರು ಯಾರಿಗೆ ಕೊಟ್ಟ ಮಾಹಿತಿ ಇಲ್ಲ, ಚಾ.ನಗರ - ೧೨೪)

ರಕ್ತ ಕೊಡುಗೆ :

ಗಣಿಗನೂರಿನ ಮನೆಯ ಹಿಂಭಾಗದಲ್ಲಿರುವ ಕ್ರಿ.ಶ.೧೫೬೪ರ ಶಾಸನ ಸದಾಶಿವರಾಯರು ರಾಜ್ಯವಾಳುತ್ತಿರುವಾಗ ಶ್ರೀಮನ್ಮಹಾ...ನದ ಸೀಮೆಯ ದೀವಾಣದವೊಡೆಯರು ಚಾಮರಸವೊಡೆಯರಿಗೆ ಕೊಟ್ಟ ಶಿಲಾಶಾಸನದಲ್ಲಿ ಸಂಜರಕಾನನು ನಿಮ್ಮ ತಂದೆ ದೇವಪ್ಪಗೌಡರನ್ನು ಅನ್ಯಾಯವಾಗಿ ಕೊಂದದಕ್ಕೆ ಅದರ ಸಲುವಾಗಿ ನಾವು ನಮ್ಮ ರಾಯವೊಡೇರಿಗೆ ಬಿನ್ನಹಮಾಡಿ ಕಳುಹಿ ನಮ್ಮ ಜಗದೇಕರಾಯವೊಡೇರ ನಾಯಕತನಕ್ಕೆ ಸಲ್ಲುವ ಹದಿನಾಡ ಸೀಮೆವೊಳಗಣ ಗಣಿಗನೂರ ಸ್ಥಳವನು ನಿಮಗೆ 'ರಕ್ತಕೊಡಗಿ' ಯಾಗಿ ಗಣಿಗನೂರ ಗ್ರಾಮ ಬಸವಂಣವೊಡೆಯರಪುರದ ಗ್ರಾಮ ತೂಬಿಗೆರೆಯ ಗ್ರಾಮ ಸೇನಗುಂಡಿಲ ಗ್ರಾಮ ಆರು ಗ್ರಾಮವನು ನಿಮಗೆ ಕೊಟ್ಟೆವಾಗಿ ಈ ಗ್ರಾಮವನು ನೀವು ನಿಮ್ಮ ಪುತ್ರ ಪಾರಂಪರೆಯಾಗಿ ಆಚಂದ್ರಾರ್ಕಸ್ವಾಯಿಯಾಗಿ ಅನುಭವಿಸಿಕೊಂಡು ಸುಖದಲ್ಲಿ ಯಿಹರಿಯೆಂದು ಕೊಟ್ಟ ರಕ್ತ ಕೊಡುಗೆ. (ಯಳಂದೂರು- ೧೭೯) ಕುದೇರು ಗ್ರಾಮದ ಮತ್ತೊಂದು ಶಾಸನದಲ್ಲಿನ ಮುಖ್ಯ ಭಾಗಗಳು ತ್ರುಟಿತವಾಗಿ 'ಬಂಮಿಹಳ್ಳಿ.... ರಕ್ತ ಕೊಡುಗೆ ಆಗಿ ಆ ಮಾಥಿಯೊಜಂ....ಕಂ ४೦೦ ಚಂದ್ರಾದಿತ್ಯ.... ಎಂದಿದೆ. (ಚಾ.ನಗರ-೭೫) ಅರೆಪುರದಲ್ಲಿನ ಶಾಸನ ಅರೆಪುರವನ್ನು 'ರಕ್ತ ಕೊಡುಗೆ' ಯಾಗಿ ಒಳಗದ್ದೆ, ಬೆದ್ದಲು ಇತ್ಯಾದಿ ಎಲ್ಲವನ್ನು ಅನುಭವಿಸಿಕೊಂಡು ಬರುವಂತೆ ಹೇಳಿದೆ. ಯಾರು, ಯಾರಿಗೆ ಕೊಟ್ಟರೆಂಬ ವಿವರವಿಲ್ಲ. (ಗುಂಡ್ಲುಪೇಟೆ-೫೪)

ಕುರುಹಟ್ಟಿಯ ೩೧೮ರ ಶಾಸನದಲ್ಲಿ ನಂದೀಶ್ವರ ದೇವರ ದೀಪಾರಾಧನೆಗೆ ಕೊಟ್ಟ 'ಕೊಡುಗೆ' ಮಾಳಂಗಿಯ ನಾಡ ಕಿರುವತ್ತಿಲಿ ೨೦೦ ಮಣ್ಣನು ಕೊಟ್ಟಿದೆ. ಹೀಗೆ ಪೂರ್ಣಪಾಠವಿಲ್ಲದ ಶಾಸನಗಳನ್ನು ಪರಿಗಣಿಸಿರುವುದಿಲ್ಲ.

ಗ್ರಂಥ ಋಣ

E.C.Vol.3,4,5 Mysore

ಕ.ಸಾ.ಪ. ಗ್ರಂಥ ಭಂಡಾರ

ವಿಪ್ರ ಗ್ರಾಮದ ಅವಶೇಷಗಳು

ಈಗಿನ ಕೊಪ್ಪಳ ಜಿಲ್ಲೆಯ ಗಂಗಾವತಿಗೆ ದಕ್ಷಿಣಕ್ಕಿರುವ ವಿಪ್ರ ಗ್ರಾಮವು ದೇವಘಾತದ ಬಳಿ ಇದೆ. ಈಗ ಇದು ಹಾಳು ಗ್ರಾಮವಾಗಿದೆ. ಈ ಪಾಳು ಗ್ರಾಮದಲ್ಲಿ ಶಂಕರಲಿಂಗನ ಗುಡಿ ಮತ್ತು ಇದರ ಸಮೀಪದ ದೇವಘಾತದಲ್ಲಿ ಅಮೃತೇಶ್ವರನ ದೇವಾಲಯವಿದೆ. ಈ ಎರಡು ದೇವಾಲಯಗಳ ನಡುವೆ ದುರ್ಗಾದೇವಿಯ ಗುಡಿಯೂ ಇದೆ.

ವಿಪ್ರವು ಕಂಪಿಲಿ ನೊಳಂಬರ ನೆಲೆವೀಡಾಗಿತ್ತೆಂಬ ಅಂಶವನ್ನು ಅಲ್ಲಿನ ಶಾಸನಗಳಲ್ಲದೆ ಬಳ್ಳಾರಿ ಜಿಲ್ಲೆಯ ಒಂದೆರಡು ಶಾಸನಗಳು ಸಹ ತಿಳಿಸುತ್ತವೆ. ಶಾಸನೋಕ್ತವಾಗಿ ಈ ಗ್ರಾಮದ ಹೆಸರನ್ನು 'ವಿಪ್ರನಾರಾಯಣದ ನೆಲೆವೀಡು' ಎಂದು ಕರೆಯಲಾಗಿದೆ. ಈಗ 'ವಿಪ್ರ' ನಾರಾಯಣ' ಎಂದು ಕರೆಯುವ ಗ್ರಾಮದ 'ನಾರಾಯಣ' ಎಂದು ಹಿಂದೆ ಕರೆಯುತ್ತಿದ್ದ ಆ ಕಾಲದ ವಿಶೇಷಣ ಕಾಣೆಯಾಗಿದೆ. ಒಂದು ಶಾಸನದಲ್ಲಿ ವಿಪ್ರದ ಸಮೀಪದಲ್ಲಿರುವ ದೇವಘಾತವು ಮೂವತ್ತುಮೂರು ದೇವತೆಗಳ ಕ್ಷೇತ್ರವಾಗಿತ್ತೆಂಬ ಅಂಶವಲ್ಲದೆ; ಕಿಷ್ಕಿಂಧೆಯ ಬಳಿ ಇದು ಇತ್ತೆಂಬ ಅಂಶವನ್ನು ತಿಳಿಸುತ್ತದೆ. ಹೀಗಾಗಿ ಕ್ರಿ.ಶ. ಸುಮಾರು ೧೦ನೆಯ ಶತಮಾನದಲ್ಲಿಯೇ ಈ ಗ್ರಾಮವು ಅಸ್ತಿತ್ವದಲ್ಲಿತ್ತು. ಹಾಗೂ ಇದು ನೊಳಂಬರ ಇನ್ನೊಂದು ನೆಲೆವೀಡಾಗಿತ್ತೆಂದು ತಿಳಿಯುತ್ತದೆ.

ಕಂಪಿಲಿ ಹಾಗೂ ವಿಪ್ರಗಳು ತುಂಗಭದ್ರಾನದಿಯ ಇಕ್ಕೆಲಗಳ ಸಮೀಪದಲ್ಲಿಯೆ ಇವೆ. ಇಷ್ಟು ಸಮೀಪ ಎರಡು ನೆಲೆವೀಡುಗಳು ಏಕಿರಬೇಕೆಂಬ ಸಂಶಯ ಬರುತ್ತದೆ. ಬಹುಶಃ ಚೋಳರ ಧಾಳಿಯಿಂದ ತಪ್ಪಿಸಿಕೊಳ್ಳಲು ನದಿಯ ಇನ್ನೊಂದು ಬದಿ ಇರುವ ವಿಪ್ರವನ್ನು ತಾತ್ಕಾಲಿಕ ನೆಲೆವೀಡನ್ನಾಗಿ ನೊಳಂಬರು ಬಳಸಿಕೊಂಡಿರಬೇಕು.

ವಿಪ್ರಗ್ರಾಮವು ತುಂಗಭದ್ರೆಯ ಉತ್ತರ ತಡಿಯಲ್ಲಿದ್ದು ನದಿಯ ಉತ್ತರಾಭಿಮುಖವಾಗಿ ಹರಿಯುವುದರಿಂದ ಇದು ಪುಣ್ಯಕ್ಷೇತ್ರವಾಗಿದ್ದು, ಸತ್ತವರಿಗೆ ಇಲ್ಲಿ ಎಡೆಯಿಡುವ ಪದ್ಧತಿ ಈಗಲೂ ನಡೆಯುತ್ತಿದೆ. ಈ ಕಾರ್ಯವು ಹಿಂದಿನಿಂದಲೂ ನಡೆದುಕೊಂಡು ಬರುತ್ತಿತ್ತೆಂಬ ಅಂಶವನ್ನು ಶಾಸನವೊಂದು ಉಲ್ಲೇಖಿಸುತ್ತದೆ.

ವಿಪ್ರಗ್ರಾಮವು ಇಂದು ಅಸ್ತಿತ್ವದಲ್ಲಿ ಇಲ್ಲದಿದ್ದರೂ ಅದು ಹಿಂದೆ ಇದ್ದ ಕುರುಹಾಗಿ ಸುಟ್ಟ ಇಟ್ಟಿಗೆಯ ಅವಶೇಷಗಳು ಮತ್ತು ಪಾಳು ದೇವಾಲಯಗಳ ಅವಶೇಷಗಳು ಅಲ್ಲಲ್ಲಿ ಬಿದ್ದಿವೆ. ಈ

ಅವಶೇಷಗಳಲ್ಲಿ ಈಗ ದೇವಘಾತ ಭಾಗದಲ್ಲಿ ಅಮೃತೇಶ್ವರ ದೇವಾಲಯ ಹಾಗೂ ಒಂದೆರಡು ಚಿಕ್ಕ ದೇವಾಲಯಗಳು, ದೇವಘಾತದಿಂದ ವಿಪ್ರಕ್ಕೆ ಹೋಗುವ ಮಾರ್ಗದಲ್ಲಿ ಸಿಗುವ ದುರ್ಗಾ ದೇವಾಲಯವೂ, ಅಲ್ಲಿಂದ ಮುಂದಕ್ಕೆ ಶಂಕರಲಿಂಗ ದೇವಾಲಯವು ಮಾತ್ರ ಉಳಿದಿವೆ.

ವಿಪ್ರ-ಶಂಕರಲಿಂಗ ದೇವಾಲಯ: ದೇವಘಾತದಿಂದ ಸುಮಾರು ಮೂರು ಕಿಲೊಮೀಟರ್ ದೂರದಲ್ಲಿ ವಿಪ್ರದ ಶಂಕರಲಿಂಗ ದೇವಾಲಯವಿದೆ, ತುಂಗಭದ್ರಾ ನದಿಯು ದೇವಘಾತದ ಕಡೆಯಿಂದ ಉತ್ತರಾಭಿಮುಖವಾಗಿ ಹರಿಯುತ್ತಾ ಇಲ್ಲಿ ಪೂರ್ವಕ್ಕೆ ತಿರುಗಿದೆ. ತುಂಗಭದ್ರಾನದಿಯ ತೀರದಲ್ಲಿ ಈ ದೇವಾಲಯವಿದೆ. ಈ ದೇವಾಲಯವನ್ನು ವಾಸ್ತು ರಚನಾ ವಿಶೇಷತೆಯಿಂದ ಕಂಪಲಿಯ ನೊಳಂಬರ ಕಾಲಕ್ಕೆ ಸೇರಿಸಬಹುದಾಗಿದೆ. ಬಳ್ಳಾರಿ ಜಿಲ್ಲೆಯ ಕಲ್ಕಂಭದ ಶಾಸನ ಹಾಗೂ ಇನ್ನೂ ಬೇರೆ ಕಡೆಯಲ್ಲಿನ ಶಾಸನಗಳಲ್ಲಿ ವಿಪ್ರವನ್ನು ಕಂಪಿಲಿಯ ನೊಳಂಬರ ಶಾಸನಗಳಲ್ಲಿ ಹೇಳಿರುವಂತೆ ವಿಪ್ರನಾರಾಯಣದ ನೆಲೆವೀಡು ಎಂದು ಕರೆದಿದ್ದಾರೆ. ಆದರೆ ಇಲ್ಲಿ ವಿಷ್ಣುವಿನ ದೇವಾಲಯವಿದ್ದ ಕುರುಹುಗಳು ಕಾಣಬರುತ್ತಿಲ್ಲ. ಹೀಗಾಗಿ ಇದನ್ನು ವಿಪ್ರನಾರಾಯಣ ಎಂದು ಏಕೆ ಕರೆದರೆಂಬುದು ಸ್ಪಷ್ಟವಾಗುತ್ತಿಲ್ಲ. ಅಥವಾ ಇನ್ನೂ ಆಧಾರಗಳು ಸಾಲವು ಎಂದೇ ತಿಳಿಯಬೇಕಾಗುತ್ತದೆ. ಈ ಗ್ರಾಮದಲ್ಲಿ ದ್ಯಾಮವ್ವನ ಗುಡಿಯ ಬಳಿ ಇನ್ನೊಂದು ಶಿವನ ದೇವಾಲಯವಿದೆ. ಅದು ಶಿಥಿಲವಾಗಿದೆ. ಲಿಂಗವನ್ನು ಕಿತ್ತುಹಾಕಲಾಗಿದೆ. ದೇವಾಲಯದ ಎಡಬದಿಗೆ ವೀರಗಲ್ಲು ಮತ್ತು ಭಗ್ನ ಭೈರವಮೂರ್ತಿ ಶಿಲ್ಪವಿದೆ.

ಶಂಕರನಾರಾಯಣ ದೇವಾಲಯವು ಚಪ್ಪಡಿಯ ಕಲ್ಲಿನ ನಿರ್ಮಾಣವಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ತೆರೆದ ನವರಂಗವನ್ನು ಹೊಂದಿದೆ. ದೇವಘಾತದ ಅಮೃತೇಶ್ವರ ದೇವಾಲಯದಂತೆ ಇಲ್ಲಿ ಇಟ್ಟಿಗೆಯ ರಚನೆಯಿಲ್ಲ. ಊರ್ಧ್ವ ಮುಖದಲ್ಲಿ ಅಧಿಷ್ಠಾನ, ಭಿತ್ತಿ ಮತ್ತು ಕಪೋತವನ್ನು ಹೊಂದಿದೆ. ಮೇಲೆ ಚಪ್ಪಡಿ ಕಲ್ಲು ಹಾಸಬೇಕಾದ ಭಾಗದಲ್ಲಿ ಗರ್ಭಗೃಹ ಮತ್ತು ಅಂತರಾಳದ ಮೇಲೆ ದಪ್ಪವಾದ ಗಾರೆಗಚ್ಚನ್ನು ಬಳಸಲಾಗಿದೆ. ನವರಂಗದಲ್ಲಿ ಚಪ್ಪಡಿಗಳನ್ನು ಮುಚ್ಚಿಗೆಯಾಗಿ ಬಳಸಲಾಗಿದೆ. ದೇವಾಲಯದ ರಚನೆಯಲ್ಲಿ ವೈಶಾಲ್ಯವನ್ನು ತೋರಲಾಗಿದೆ. ವಿಶಾಲವಾದ ಗರ್ಭಗೃಹ, ಅಷ್ಟೇ ವಿಶಾಲವಾದ ಅಂತರಾಳವನ್ನು ಹೊಂದಿದೆ. ಅಂತರಾಳದಲ್ಲಿ ದೇವರಿಗೆ ಎದುರಾಗಿ ನಂದಿಶಿಲ್ಪವಿರುವುದನ್ನು ಬಿಟ್ಟರೆ ಬೇರೆ ಯಾವ ಶಿಲ್ಪಗಳೂ ಇಲ್ಲ. ಗರ್ಭಗೃಹಕ್ಕೂ ತೆರೆದ ಅಂತರಾಳಕ್ಕೂ ಮಧ್ಯೆ ಇರುವ ಬಾಗಿಲಿನ ತಳಭಾಗದಲ್ಲಿ ಶೈವ ದ್ವಾರಪಾಲಕರ ಶಿಲ್ಪಿಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ಉಳಿದಂತೆ ಅಪೂರ್ಣ ಕೆತ್ತನೆಯ ಪಟ್ಟಿಕೆಗಳಿವೆ.

ನವರಂಗವು ಹಿಂದೆ ಹೇಳಿದಂತೆ ವಿಶಾಲವಾಗಿದ್ದು ಸುತ್ತಲೂ ಗೋಡೆಗಳಿಲ್ಲದೆ ತೆರೆದ ರಚನೆಯಾಗಿದೆ. ಈ ನವರಂಗದಲ್ಲಿ ಅಂತರಾಳಕ್ಕೆ ಹೊಂದಿಕೊಂಡಂತೆ ಇರುವ ಭಾಗದಲ್ಲಿ ಮಾತ್ರ ಕಲ್ಲಿನ ಗೋಡೆಯಿದ್ದು ಅಂತ್ಯದ ಕಂಬಗಳು ಕಲ್ಯಾಣಿ ಚಾಲುಕ್ಯರ ಮಾದರಿಯಲ್ಲಿವೆ. ಉಳಿದ ಕಂಬಗಳು, ಚೌಕ, ಅಷ್ಟಚೌಕ, ಮತ್ತು ವೃತ್ತಾಕಾರದಲ್ಲಿವೆ. ಸರಳ ಬೋದಿಗೆಯನ್ನು ಬಳಸಿರುತ್ತಾರೆ. ನವರಂಗದ ಮಧ್ಯದ ಕಂಬಗಳಲ್ಲಿ ಮಾಲಾಲಂಕಾರವಿಲ್ಲ, ಮುಚ್ಚಿಗೆಯಲ್ಲಿ ಕಮಲದ ಅಲಂಕಾರವಿದೆ. ಒಟ್ಟು ಹನ್ನೆರಡು ಕಂಬಗಳು ಕಾಣುವಂತಿದ್ದು ಉಳಿದ ನಾಲ್ಕು ಕಂಬಗಳು ಹಿಂಭಾಗದ ಗೋಡೆಯಲ್ಲಿ ಸೇರಿದೆ. ನವರಂಗದ ಗೋಡೆಗೆ ಸೇರಿಸಿದಂತೆ ಬಲಭಾಗಕ್ಕೆ ನಾಗಶಿಲ್ಪ ಗಣಪತಿ ಶಿಲ್ಪಗಳೂ,

ಎಡಭಾಗದ ಗೋಡೆಗೆ ಸೇರಿಸಿದಂತೆ ಸೂರ್ಯ ಮತ್ತು ನಾಗರ ಶಿಲ್ಪಗಳಿವೆ. ಇವುಗಳ ಕೆತ್ತನೆ ರೀತಿ ಕಲ್ಯಾಣಿ ಚಾಲುಕ್ಯರ ಇತರೆ ದೇವಾಲಯದಲ್ಲಿನ ಶಿಲ್ಪಗಳಂತಿರುವುದರಿಂದ ಇವನ್ನು ಈ ದೇವಾಲಯದ ರಚನಾ ಕಾಲಕ್ಕೆ ಸೇರಿಸಬಹುದು.

ನೊಳಂಬರ ರಚನೆಯೆಂದು ಗುರುತಿಸಲು ಇವುಗಳ ತೆರೆದ ಅಂತರಾಳದ ಕಂಬಗಳು ಸಾಕ್ಷಿಯಾಗಿವೆ. ಇಲ್ಲಿ ಮೇಲಿನ ತೊಲೆಯಭಾರವನ್ನು ಹೊರಲು ಅನುಕೂಲವಾಗುವಂತೆ ಅಂತರಾಳಕ್ಕೂ ನವರಂಗದ ಭಾಗಕ್ಕೂ ಮಧ್ಯೆ ಎರಡು ಕಂಬಗಳನ್ನು ನಿಲ್ಲಿಸಲಾಗಿದೆ. ಈ ಕಂಬಗಳು ಚಿಕ್ಕದಾಗಿದ್ದು ನೀಳವಾಗಿ ಅಷ್ಟಮುಖವನ್ನು ಹೊಂದಿವೆ. ಹೇಮಾವತಿ ಮತ್ತು ಅದರ ಪರಿಸರದಲ್ಲಿ ದೊರೆಯುವ ದೇವಾಲಯದ ಕಂಬಗಳಂತೆ ಅಲಂಕಾರವಿಲ್ಲದಿದ್ದರೂ ಒಟ್ಟಾರೆ ರಚನೆಯಲ್ಲಿ ಅವನ್ನು ಹೋಲುತ್ತವೆ. ಗರ್ಭಗೃಹದ ಲಿಂಗವು ಚೌಕಾಕಾರದ ಪಾಣಿ ಪೀಠವನ್ನು ಹೊಂದಿದ್ದು ಮಧ್ಯೆ ಎತ್ತರವಲ್ಲದ ಉದ್ಭವಲಿಂಗದಂತಹ ಲಿಂಗವಾಗಿದೆ. ದೇವಾಲಯವು ಪೂರ್ವಾಭಿಮುಖವಾಗಿದೆ.

ದುರ್ಗಾ ದೇವಾಲಯ: ವಿಪ್ರ ಹಾಗೂ ದೇವಘಾತದ ನಡುವಿರುವ ದುರ್ಗಾದೇವಿಯ ಗುಡಿಯು ಕಂಪಿಲಿ ನೊಳಂಬರ ಅಂತ್ಯಕಾಲದ ನಿರ್ಮಾಣವಾಗಿದೆ. ಗರ್ಭಗೃಹ, ಮುಚ್ಚಿದ ಅಂತರಾಳ ಹಾಗೂ ನವರಂಗವಿದೆ. ಅಂತರಾಳದ ಬಾಗಿಲವಾಡ ಕಲ್ಯಾಣಿ ಚಾಲುಕ್ಯರ ಕಾಲದ್ದಾಗಿದೆ. ಇದೂ ಶಿವನ ದೇವಾಲಯವಾಗಿದ್ದು ಇದರ ಸಮೀಪ ದ್ಯಾಮವ್ವನ ಗುಡಿ ಇರುವುದರಿಂದ ಈ ಹೆಸರಿನಿಂದ ಕರೆಯುತ್ತಾರೆ.

ಅಮೃತೇಶ್ವರ ದೇವಾಲಯ : ದೇವಘಾತದಲ್ಲಿರುವ ಈ ದೇವಾಲಯ ಸಂಕೀರ್ಣವು ಇನ್ನೊಂದು ದೇವಾಲಯವಾಗಿದೆ. ಈ ದೇವಾಲಯದ ಒಳರಚನೆಯು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ನವರಂಗದಲ್ಲಿನ ಮುಂಭಾಗ ಬಿದ್ದು ಹೋಗಿದೆ. ಈ ದೇವಾಲಯದ ನವರಂಗಕ್ಕೆ ಉತ್ತರ ದಕ್ಷಿಣವಾಗಿ ಎರಡು ಬಾಗಿಲುಗಳಿವೆ. ಗರ್ಭಗೃಹ ಲಿಂಗ ಪೀಠವು ಚೌಕಾಕಾರವಾಗಿದೆ. ತೆರೆದ ಅಂತರಾಳವಿದ್ದು ಮಧ್ಯ ಕಂಬಗಳಿಲ್ಲ. ಗರ್ಭಗೃಹದ ಗೋಡೆಗಳಲ್ಲಿ ಹೆಚ್ಚು ಉಬ್ಬಿದ ಕಂಬಗಳಿವೆ. ನವರಂಗದ ನಾಲ್ಕು ಕಂಬಗಳು ಬಾಗಳಿಯ ಕಲ್ಲೇಶ್ವರ ದೇವಾಲಯದ ಕಂಬಗಳಂತೆ ಇದ್ದು, ಮೇಲೆ ಸಾದಾ ಬೋದಿಗೆ ಇದೆ. ಈ ಬೋದಿಗೆ ಮಧ್ಯೆ ಚಿಕ್ಕದಾದ ಸೀಳು ಬಂದಿದೆ. ನವರಂಗದ ಮುಚ್ಚಿಕೆಯಲ್ಲಿ ಕಮಲವಿದೆ. ದೇವಾಲಯದ ಗರ್ಭಗೃಹದ ಮೇಲಿರುವ ಶಿಖರಭಾಗವು ಇಟ್ಟಿಗೆಯಿಂದ ನಿರ್ಮಾಣವಾಗಿದೆ. ಈ ಗೋಡೆ ಆಗಾಗ್ಗೆ ಜೀರ್ಣೋದ್ಧಾರವಾಗಿದ್ದರೂ ಮೂಲ ರಚನೆ ಹಾಗೆ ಉಳಿದು ಬಂದಿದೆ. ಎತ್ತರವಾದ ಈ ಗರ್ಭಗೃಹದ ಇಟ್ಟಿಗೆಯ ಶಿಖರವು ಎರಡು ತಳಗಳನ್ನು ಹೊಂದಿದೆ. ದೇವಕೋಶಗಳಿಲ್ಲ, ಇಟ್ಟಿಗೆಯ ಉಬ್ಬುಕಂಬಗಳಿವೆ. ಮೇಲಿನ ಸ್ತೂಪದ ಭಾಗವು ಇತ್ತೀಚೆಗೆ ಜೀರ್ಣೋದ್ಧಾರವಾಗಿದೆ. ಮೇಲೆ ಕಳಶವಿಲ್ಲ, ಅಂತರಾಳ ಮತ್ತು ನವರಂಗದ ಗೋಡೆಗಳು ಇಟ್ಟಿಗೆ ಮತ್ತು ಗಾರೆಯದಾಗಿದ್ದು ಈಗ ಪೂರ್ಣ ಹಾಳಾಗಿದೆ. ಕ್ರಿ.ಶ. ೧೦ನೆಯ ಶತಮಾನದ ಶಾಸನವೊಂದು ಈ ದೇವಾಲಯಕ್ಕೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

ಇಲ್ಲಿನ ದೇವಾಲಯಗಳು ಹಾಳಾಗಲು ಮುಖ್ಯ ಕಾರಣ ಮಳೆ, ಬಿಸಿಲು, ಗಾಳಿಗೆ ಸಿಲುಕಿ ಸರಿಯಾದ ನಿರ್ವಹಣೆ ಇಲ್ಲದಿರುವುದು ಒಂದು ಕಾರಣವಾದರೆ, ಮತ್ತೊಂದು ದೇವಾಲಯಗಳಲ್ಲಿ

ಹುದುಗಿಸಿಟ್ಟಿರಬಹುದೆಂಬ ನಿಧಿಯ ಕಲ್ಪನೆ ಮತ್ತು ಆಸೆಗೆ ದೇವಾಲಯಗಳನ್ನು ಅಗೆದು ಹಾಳುಮಾಡಿರುವುದಾಗಿದೆ.

ಇಂದಿಗೂ ದೇವಘಾತದ ಅಮೃತೇಶ್ವರ ದೇವಾಲಯದ ಬಳಿಯಲ್ಲಿ ಸ್ಥಳೀಯ ಜನರು ತಮ್ಮ ಕುಟುಂಬದ ಹಿರಿಯರಿಗೆ ಎಡೆ ಮಾಡುವ ಸಂಪ್ರದಾಯ ನಡೆದು ಬರುತ್ತಿದೆ.

ಹೀಗೆ ಈ ಮೂರು ದೇವಾಲಯಗಳ ಸುತ್ತಲೂ ಹೊಲ, ಗದ್ದೆ, ತೋಟ, ತುಡಿಕೆಗಳಿದ್ದು ಮಳೆಗಾಲದಲ್ಲಿ ಈ ಪ್ರದೇಶದಲ್ಲಿರುವ ದೇವಾಲಯಗಳಿಗೆ ಹೋಗಿ ಬರಲು ತುಂಬಾ ಕಷ್ಟವಾಗುತ್ತದೆ. ಬೇಸಿಗೆಯಲ್ಲಿ ವಿಪರೀತ ಬಿಸಿಲಿನ ತಾಪವಿದ್ದರೂ ಕ್ಷೇತ್ರಕಾರ್ಯ ಮಾಡುವವರಿಗೆ ಅಷ್ಟು ತೊಂದರೆ ಆಗುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯ ಕೆಲವು ಅಪರೂಪದ ವೀರಗಲ್ಲುಗಳು ಮತ್ತು ಶಿಲ್ಪಗಳು

ವೀರನ ಪರಾಕ್ರಮ, ಸಚ್ಚಾರಿತ್ರ, ಸಂಯಮಶೀಲತೆಯಿಂದ ಸಾಮಾಜಿಕ ಜೀವನದಲ್ಲಿ ತನ್ನನ್ನೂ ತೊಡಗಿಸಿಕೊಂಡು ಯುದ್ಧದಲ್ಲಿ ಹೋರಾಡುತ್ತಾನೆ. ಕೆಲವು ಸಾರಿ ಮಹಿಳೆಯರ ಮಾನರಕ್ಷಣೆ ಅಥವಾ ಪ್ರಾಣಿಗಳ ರಕ್ಷಣೆಗಾಗಿ ತನ್ನ ಪ್ರಾಣಾರ್ಪಣೆ ಮಾಡುತ್ತಾನೆ. ಅಂತಹ ವೀರನ ಶೌರ್ಯ, ಸಾಹಸಗಳನ್ನು ಮುಂದಿನ ತಲೆಮಾರಿಗೆ ಮಾದರಿಯಾಗುವಂತೆ ರಾಜ, ಅಧಿಕಾರಿಗಳು, ಊರಿನ ಜನತೆ ಅಥವಾ ಅವನ ಸಂಬಂಧಿಗಳು ವೀರಗಲ್ಲುಗಳನ್ನು ಸ್ಥಾಪಿಸಿ ಗೌರವಿಸುತ್ತಾರೆ. ಅಂತಹ ಕೆಲವು ವೀರಗಲ್ಲುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಕುರುವಂಗಿ ವೀರಗಲ್ಲು

ಕುರುವಂಗಿಯ ಬಸವೇಶ್ವರ ದೇವಾಲಯದ ಎದುರು ಗೋಡೆಗೆ ಒರಗಿಸಿ ನಿಲ್ಲಿಸಿರುವ ನಾಲ್ಕು ವೀರಗಲ್ಲುಗಳಿವೆ. ಆ ವೀರಗಲ್ಲುಗಳು ರಚನೆಯ ದೃಷ್ಟಿಯಿಂದ ಮತ್ತು ಶೈಲಿಯ ದೃಷ್ಟಿಯಿಂದ ಹೊಯ್ಸಳರ ಕಾಲಕ್ಕೆ ಸೇರಿಸಬಹುದಾಗಿದೆ. ಅಲ್ಲಿನ ವೀರಗಲ್ಲುಗಳಲ್ಲಿ ಶತ್ರುವಿನ ಕಡೆಯ ವೀರನ ಶಿಲ್ಪವನ್ನು ಕೆತ್ತಿ ನಾಶಮಾಡಿರುವುದನ್ನು ಗಮನಿಸಬೇಕಾದ ಅಂಶವಾಗಿದೆ. ಆ ಎಲ್ಲಾ ವೀರಗಲ್ಲುಗಳಲ್ಲೂ ಪ್ರಮುಖವಾದ ಅಂಶವೆಂದರೆ ವೀರನನ್ನು ಪ್ರಧಾನವಾಗಿ ಬಿಡಿಸಿರುವುದು. ಮೊದಲನೆಯ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದರೂ ವಾಸ್ತವವಾಗಿ ನಾಲ್ಕು ಹಂತಗಳಲ್ಲಿ ಬಿಡಿಸಲಾಗಿದೆ. ಮೊದಲ ಹಂತವೆಂದು ಗುರ್ತಿಸುವ ಸ್ತರದ ಕೆಳಭಾಗದಲ್ಲಿ ಚಿಕ್ಕದಾಗಿ ವೀರನನ್ನು ಮೇನೆಯಲ್ಲಿ ಹೊತ್ತು ತರುತ್ತಿರುವುದನ್ನು ಬಿಡಿಸಲಾಗಿದೆ. ಯುದ್ಧ ದೃಶ್ಯದ ಹಂತದಲ್ಲಿ ವೀರ ನೀಳವಾದ ಕತ್ತಿಯನ್ನು ಹಿಡಿದಿದ್ದು ಎಡಗೈಲಿ ಗುರಾಣಿಯನ್ನು ಹಿಡಿದ್ದಿದ್ದಾನೆ. ಇವನ ಹಿಂಬದಿಯಲ್ಲಿ ಸೇವಕನೊಬ್ಬ ಛತ್ರಿ ಹಿಡಿದಿರುವಂತೆ ನಿಂತಿರುವುದನ್ನು ಬಿಡಿಸಿದೆ. ಇವನನ್ನು ವೀರನಿಗಿಂತ ಚಿಕ್ಕದಾಗಿ ಬಿಡಿಸಿದೆ.

ವೀರ ಆಲೀಢ ಭಂಗಿಯಲ್ಲಿ ನಿಂತಿದ್ದು, ಮುಡಿ ಹಾಕಿದ್ದಾನೆ. ಮುಡಿಯಲ್ಲಿ ದೊಡ್ಡ ಅರಳಿದ ಹೂವು ಮುಡಿದಿರುವಂತೆ ಬಿಡಿಸಲಾಗಿದೆ. ಶಾಸನ ಸವೆದಿರುವುದರಿಂದ ವೀರ ಧರಿಸಿರುವ ಆಭರಣಗಳು ಕಾಣುವುದಿಲ್ಲ. ನಡುವಿನಲ್ಲಿ ನಡುಪಟ್ಟಿ ಒರೆ ಸಮೇತವಿರುವ ಬಾಕುವನ್ನು

ಸಿಕ್ಕಿಸಿದ್ದಾನೆ. ಎರಡನೆಯ ಹಂತದಲ್ಲಿ ಅಪ್ಸರೆಯರು ವೀರನನ್ನು ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೆಯ ಹಂತದಲ್ಲಿ ನಡುವೆ ಶಿವಲಿಂಗ, ಅದರ ಮುಂದೆ ಬಸವನ ಶಿಲ್ಪವಿದೆ. ಎಡಭಾಗದಲ್ಲಿ ಇಬ್ಬರು ವ್ಯಕ್ತಿಗಳಿದ್ದು ಒಬ್ಬ ಕುಳಿತು ಕೈಮುಗಿಯುತ್ತಿರುವಂತೆಯೂ ಮತ್ತೊಬ್ಬ ವ್ಯಕ್ತಿ ನಿಂತು ಶಿವಲಿಂಗಕ್ಕೆ ಕೈಮುಗಿಯುತ್ತಿರುಂತೆಯೂ ಬಿಡಿಸಲಾಗಿದೆ.

ಎರಡನೇ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು ಮೊದಲ ಹಂತದಲ್ಲಿರುವ ವೀರ ಆಲಿಡಭಂಗಿಯಲ್ಲಿ ಯುದ್ಧಕ್ಕೆ ಸಾಗುತ್ತಿರುವಂತೆ ಕಂಡುಬರುತ್ತದೆ. ವೀರನ ಕೈಗಳಲ್ಲಿ ಬಿಡಿಸಿರುವ ಆಯುಧಗಳ ಸ್ಪಷ್ಟತೆ ಇಲ್ಲ. ವೀರನ ಹಿಂದ ಸೇವಕನೊಬ್ಬನಿದ್ದು ಆ ಸೇವಕನ ಮತ್ತು ವೀರನ ನಡುವೆ ಮರದ ಕೊಂಬೆ ಮೇಲೆ ಹೋಗಿ ಎಲೆಗಳಿಂದ ತುಂಬಿರುವ ಮರದ ಸಂಕೇತದಿಂದ ಯುದ್ಧವು ಯಾವುದೋ ಕಾಡಿನ ನಡುವೆ ನಡೆದಿರುವ ಸಾಧ್ಯತೆ ಇದೆ. ಶತ್ರು ಪಕ್ಷದ ವೀರನ ಶಿಲ್ಪವನ್ನು ಇಲ್ಲಿಯೂ ಒಡೆದು ತೆಗೆಯಲಾಗಿದೆ. ಅಲ್ಲಿ ಅಳಿದುಳಿದ ಅವಶೇಷಗಳಿಂದ ಬಹುಶಃ ವೀರನು ಶತ್ರುವಿನ ತಲೆಯ ಚೆಂಡನ್ನಿಡಿದು ಕತ್ತರಿಸುತ್ತಿರುವಂತೆ ಊಹಿಸಬಹುದಾಗಿದೆ. ಎರಡನೆಯ ಹಂತದಲ್ಲಿ ಸ್ವರ್ಗಾರೋಹಣ ಭಾಗವು ಬೇರೆಯ ವೀರಗಲ್ಲಿಗಿಂತ ಭಿನ್ನವಾಗಿದೆ. ಅದೆಂದರೆ ಪುಷ್ಪಕ ವಿಮಾನದಲ್ಲಿ ಕೈಮುಗಿದು ಕುಳಿತಿರುವ ವೀರನನ್ನು ಅಪ್ಸರೆಯರು ಎತ್ತಿಕೊಂಡು ಆಕಾಶ ಮಾರ್ಗದಲ್ಲಿ ಹೋಗುತ್ತಿರುವಂತೆ ಬಿಡಿಸಲಾಗಿದೆ. ಈ ಹಂತದಲ್ಲಿ ಮೋಡಗಳನ್ನೂ ಬಿಡಿಸಲಾಗಿದೆ. ವಿಮಾನವನ್ನು ಹೂಬಳ್ಳಿಗಳಿಂದ ಅಲಂಕರಿಸಿರುವಂತೆ ಬಿಡಿಸಿದೆ. ಮೂರನೆಯ ಹಂತದಲ್ಲಿ ಶಿವಪೂಜೆ ಮಾಡುತ್ತಿರುವ ಯತಿಯ ಜೊತೆಗೆ ಇಬ್ಬರು ಭಕ್ತರನ್ನು, ಅವರಲ್ಲಿ ನಿಂತ ವಟುವನ್ನು ಅವನ ಹಿಂದೆ ಕೈಮುಗಿದು ಕುಳಿತಿರುವ ವೀರನನ್ನು ಬಿಡಿಸಿದೆ. ಯತಿಯ ಹಿಂಭಾಗದಲ್ಲಿ ಬಸವ ಮತ್ತು ಚಂದ್ರನನ್ನು ಬಿಡಿಸಿದೆ.

ಮೂರನೇ ವೀರಗಲ್ಲು ಇದೇ ಕಾಲಕ್ಕೆ ಸೇರಿದ್ದಾದರೂ ವೀರ ಬಿಲ್ಲು ವಿದ್ಯೆಯಲ್ಲಿ ಪಾರಂಗತನಾಗಿರುವಂತೆ ತಿಳಿಯುತ್ತದೆ. ಶತ್ರುವನ್ನು ಇಲ್ಲಿ ಬಿಡಿಸಿಲ್ಲ. ವೀರನ ಹಿಂದೆ ಬಾಣಗಳ ಕಟ್ಟನ್ನು ಹಿಡಿದು ನಿಂತಿರುವ ಸೇವಕನಿದ್ದಾನೆ. ಸೇವಕನು ತುಂಡು ದಟ್ಟಿಯನ್ನು ಉಟ್ಟಿದ್ದಾನೆ. ಅದು ವೀರನು ಉಟ್ಟಿರುವ ದಟ್ಟಿಗಿಂತಲೂ ಭಿನ್ನವಾಗಿದೆ. ವೀರನ ಮುಂಭಾಗದಲ್ಲಿ ಬಿಲ್ಲಿನ ಸಮೀಪ ಒಬ್ಬ ವ್ಯಕ್ತಿ ನಿಂತಿರುವಂತಿದೆ. ಅವನು ಶತ್ರುವಿರಬಹುದು ಅನ್ನಿಸಿದರು ಅವನು ನಿಂತಿರುವ ಭಂಗಿ ಶತ್ರುವಿನಂತೆ ಕಾಣುವುದಿಲ್ಲ. ಸೇವಕನು ಬಾಣಗಳ ಕಟ್ಟನ್ನು ತಬ್ಬಿ ಹಿಡಿದುಕೊಂಡಿರುವಂತಿದೆ. ವೀರ ಮತ್ತು ಸೇವಕರಿಬ್ಬರೂ ಯಜ್ಞೋಪವೀತವನ್ನು ಧರಿಸಿರುವಂತೆ ಬಿಡಿಸಲಾಗಿದೆ. ವೀರನಿಗೂ ಬತ್ತಳಿಕೆ ಇದ್ದು ಅದನ್ನು ತುರುಬಿನ ಕೆಳಗೆ ಶಿಲ್ಪಿ ಬಿಡಿಸಿದ್ದಾನೆ. ಅಲಂಕೃತ ಅಪ್ಸರೆಯರು ಕೈಗಳಲ್ಲಿ ಚಾಮರ ಹಿಡಿದಿದ್ದಾರೆ. ಮೂರನೆಯ ಹಂತದ ಸ್ವರ್ಗಾರೋಹಣ ವಿವರವು ತೀರಾ ಸರಳವಾಗಿದೆ. ವೀರ ಭಕ್ತಿಯಿಂದ ಕೈಮುಗಿದು ವೀರ ಮಂಡಿಯಲ್ಲಿ ಕುಳಿತಿದ್ದಾನೆ. ಯತಿ ವೀರಮಂಡಿಯೂರಿ ಲಿಂಗಕ್ಕೆ ಬೊಗಸೆಯಿಂದ ಅಭಿಷೇಕ ಮಾಡುತ್ತಿರುವಂತೆ ಬಿಡಿಸಲಾಗಿದೆ.

ನಾಲ್ಕನೆಯ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು, ಮೊದಲ ಹಂತದಲ್ಲಿ ವೀರನೊಬ್ಬನನ್ನೆ ಯುದ್ಧರಂಗ ದೃಶ್ಯದಲ್ಲಿ ಬಿಡಿಸಿದೆ. ವೀರನು ಬಲ್ಲೆಯನ್ನು ಹಿಡಿದು ಶತ್ರುಗಳ ಕಡೆಗೆ ರಭಸದಿಂದ ಎಸೆಯುವ ಭಂಗಿಯಲ್ಲಿ ನಿಂತಿದ್ದಾನೆ. ಎಡಗೈಲಿ ಗುರಾಣಿ ಇದೆ. ನಡುವಿನಲ್ಲಿ ಇತರೆ ವೀರಗಲ್ಲುಗಳ ಶಿಲ್ಪಗಳಲ್ಲಿದ್ದಂತೆ ಒರೆಯ ಸಮೇತವಿರುವ ಬಾಕನ್ನು ಸಿಕ್ಕಿಸಿದ್ದಾನೆ. ಇವನ ತಲೆಗೆ ಸುತ್ತಿರುವ ರುಮಾಲು

ವಿಶಿಷ್ಟವಾಗಿದೆ. ಎರಡನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ಚಾಮರವನ್ನು ಹಿಡಿದು ಬೀಸುತ್ತಾ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವಂತೆ ಬಿಡಿಸಲಾಗಿದೆ. ಮೂರನೆಯ ಹಂತದಲ್ಲಿ ಶಿವಲಿಂಗಕ್ಕೆ ಯತಿ ಅಭಿಷೇಕ ಮಾಡುತ್ತಿರುವಂತೆ ಅವನ ಹಿಂದೆ ವೀರ, ವೀರಮಂಡಿಯಲ್ಲಿ ಕುಳಿತು ನಮಸ್ಕರಿಸುವಂತೆ ಶಿಲ್ಪಿ ಬಿಡಿಸಿದ್ದಾನೆ. ಶಿವಲಿಂಗದ ಎದುರಿನಲ್ಲಿ ನಂದಿಯ ಶಿಲ್ಪವೂ ಇದೆ. ಈ ಮೇಲಿನ ನಾಲ್ಕು ವೀರಗಲ್ಲುಗಳು ಕುರುಮಂಗಿಯ ಬಸವೇಶ್ವರ ದೇವಾಲಯದ ರಸ್ತೆ ಬದಿಯಲ್ಲಿರುವ ಗೋಡೆಗೆ ಒರಗಿಸಿ ನಿಲ್ಲಿಸಲಾಗಿದೆ.

ಗೌತಮೇಶ್ವರ ದೇವಾಲಯದ ಬಳಿ ಇರುವ ವೀರಗಲ್ಲು ಮತ್ತು ಶಾಸನ

ಗೌತಮೇಶ್ವರ ದೇವಾಲಯದ ಎಡಭಾಗದ ಗೋಡೆಗೆ ಆನಿಸಿ ಮೂರು ವೀರಗಲ್ಲುಗಳನ್ನು ನಡುವೆ ಒಂದು ಶಾಸನದ ಕಲ್ಲನ್ನು ನಿಲ್ಲಿಸಲಾಗಿದೆ. ಇವುಗಳಲ್ಲಿ ಮೊದಲನೆಯ ವೀರಗಲ್ಲು ಎರಡು ಹಂತ ಮಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಮೊದಲನೆ ಹಂತದ ಬಹುಶಃ ಯುದ್ಧದ ದೃಶ್ಯ ತುಂಬಾ ಅಸ್ಪಷ್ಟತೆಯ ಶಿಲ್ಪಗಳು ಕಾಣುತ್ತವೆ. ಈ ಹಂತದ ಪರಿಚಯಕ್ಕೆ ಹೋಗದೆ ಎರಡನೇ ಹಂತದ ಮತ್ತು ಮೂರನೇ ಹಂತದ ವಿವರಗಳನ್ನು ನೀಡಲಾಗಿದೆ. ನಾಲ್ಕನೇ ಹಂತ ಹಾಳಾಗಿದೆ.

ಈ ವೀರಗಲ್ಲು ವಿಶಿಷ್ಟವಾಗಿದ್ದು ವೀರರು ಬಲದಿಂದ ಎಡಕ್ಕೆ ಸಾಗುತ್ತಿದ್ದು ಶತ್ರುವು ಕೆಳಗೆ ಬಿದ್ದು ಕೈಮುಗಿದು ಶರಣಾಗುತ್ತಿರುವಂತೆ ಬಿಡಿಸಲಾಗಿದೆ. ವೀರರ ಕೈಗಳಲ್ಲಿ ಭಲ್ಲೆ ಖಡ್ಗ, ಗುರಾಣಿಗಳಿದ್ದರೆ ಒಬ್ಬ ವೀರನ ಕೈಲಿ ಬಿಲ್ಲು ಮತ್ತು ಬಾಣಗಳ ಕಟ್ಟಿದೆ. ಆವೇಶದಿಂದ ನುಗ್ಗುತ್ತಿರುವಂತೆ ಬಿಡಿಸಲಾಗಿರುವ ವೀರನ ಬಲಗೈಲಿ ಗುರಾಣಿ ಎಡಗೈಲಿ ಭಲ್ಲೆ ಇರುವಂತೆ, ಮತ್ತೊಬ್ಬ ವೀರನ ಗುರಾಣಿಯ ಮೇಲುಭಾಗದಲ್ಲಿ ಎರಡು ಮೀನುಗಳ ಅಲಂಕಾರವನ್ನು ಬಿಡಿಸಿದಂತೆ ಕಾಣುತ್ತದೆ. ಈ ಹಂತದ ಮೇಲ್ಭಾಗದಲ್ಲಿನ ಶಿಲ್ಪದಲ್ಲಿ ವೀರನನ್ನು ಮೇನೆಯಲ್ಲಿ ಕುಳ್ಳರಿಸಿಕೊಂಡು ಹೋಗುತ್ತಿರುವಂತೆಯೂ ಅವನ ಹಿಂದೆ ಮುಂದೆ ಸೇವಕರಿರುವಂತೆಯೂ ಬಿಡಿಸಲಾಗಿದೆ. ಉಳಿದ ಹಂತ ಹಾಳಾಗಿದ್ದು ವಿವರಗಳು ತಿಳಿಯುವುದಿಲ್ಲ.

ಎರಡನೇ ಶಿಲ್ಪ ಫಲಕವು ವೀರಗಲ್ಲಿನ ಮಾದರಿಗಿಂತ ವಿಭಿನ್ನವಾಗಿದ್ದು ಇಲ್ಲಿಯ ವೀರ ಎತ್ತರದ ಪೀಠದಲ್ಲಿ ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ಜಟಭಾರವಿದ್ದು ಕೊರಳಲ್ಲಿ ಮತ್ತು ತೋಳುಗಳಲ್ಲಿ ರುದ್ರಾಕ್ಷಿ ಸರವಿದೆ. ಕಿವಿಗಳಲ್ಲಿಯೂ ಕೂಡ ರುದ್ರಾಕ್ಷಿಗಳಿವೆ. ಇವನ ಪಕ್ಕದಲ್ಲಿ ಇಬ್ಬರು ಚಾಮರಧಾರಿಣಿಯರು ಚಾಮರವನ್ನು ಬೀಸುತ್ತಿರುವಂತೆ ಬಿಡಿಸಲಾಗಿದೆ. ಎರಡನೆಯ ಹಂತದಲ್ಲಿ ವೀರ ಕೈಮುಗಿದು ಕುಳಿತಿರುವಂತೆ, ಅಲಂಕೃತ ವಿಮಾನದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವಂತೆ ಬಿಡಿಸಿದೆ. ಮೂರನೆಯ ಹಂತದಲ್ಲಿ ಭಕ್ತನು ದೇವಾಲಯದ ಬಳಿ ಶಿವಲಿಂಗಕ್ಕೆ ಪೂಜಾ ಕೈಂಕರ್ಯದಲ್ಲಿ ತೊಡಗಿರುವ ಪೂಜಾರಿಯ ಜೊತೆಗೆ ಸಹಕರಿಸುತ್ತಿರುವಂತೆ ಬಿಡಿಸಲಾಗಿದೆ. ನಿಂತಿರುವ ಹಸು ಹಾಲು ಕುಡಿಯುತ್ತಿರುವ ಕರುವನ್ನು (ಉಭಯಮುಖಿ) ಬಿಡಿಸಲಾಗಿದೆ. ದೇವಾಲಯದ ಶಿವಲಿಂಗದ ಪ್ರತಿಕೃತಿಯನ್ನು ಈ ಶಿಲಾಫಲಕದಲ್ಲಿ ಬಿಡಿಸಲಾಗಿದೆ. ಹೀಗಾಗಿ ಈ ವೀರಗಲ್ಲನ್ನು ಅನುಸರಿಸಿ ರಚಿಸಿದ ಭಕ್ತನೊಬ್ಬನ ಶಿಲಾಫಲಕವಾಗಿದೆ.

ಈ ಗ್ರಾಮದ ಮೂರನೆಯ ವೀರಗಲ್ಲಿನ ಎರಡು ಮತ್ತು ಮೂರನೆಯ ಹಂತಗಳು

ಮಾತ್ರವಿದ್ದು ತಳಗಡೆಯ ಯುದ್ಧ ವಿವರದ ದೃಶ್ಯಗಳು ಭೂಮಿಯಲ್ಲಿ ಸೇರಿಹೋಗಿದೆ. ಎರಡು ಮತ್ತು ಮೂರನೆ ಹಂತದ ನಡುವಿರುವ ಪಟ್ಟಿಯಲ್ಲಿ ಶಾಸನವಿದೆ. ಎರಡನೇ ಹಂತದಲ್ಲಿ ಪುಷ್ಪಕ ವಿಮಾನದಲ್ಲಿ ಕೈಮುಗಿದು ಕುಳಿತ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ವಿಮಾನದ ಎರಡೂ ಪಕ್ಕದಲ್ಲೂ ಇಬ್ಬಿಬ್ಬರು ಅಪ್ಸರೆಯರಿದ್ದು ಅವರಲ್ಲಿಬ್ಬರು ವಿಮಾನದ ಹಿಡಿಯನ್ನು ಒಂದು ಕೈಲಿ ಹಿಡಿದು ಮತ್ತೊಂದು ಕೈಯಲಿ ಚಾಮರ ಹಿಡಿದು ಬೀಸುತ್ತಿದ್ದಾರೆ. ಅವರ ಹಿಂದಿರುವವರು ತಮ್ಮ ಒಂದು ಕೈಯನ್ನು ಸೊಂಟದ ಮೇಲಿಟ್ಟು ಮತ್ತೊಂದು ಕೈನಲ್ಲಿ ಗದೆಯಂತಿರುವ ವಸ್ತುವನ್ನು ಎತ್ತಿಹಿಡಿದಿದ್ದಾರೆ. ಮೇಲಿನ ಹಂತದಲ್ಲಿ ಗೌತಮೇಶ್ವರ ದೇವಾಲಯ ದಲ್ಲಿರುವ ಶಿವಲಿಂಗದ ಮೇಲೆ ಮೂರು ಅಲಂಕೃತ ಪಟ್ಟಿಕೆಗಳಿರುವ ಗೋಪುರಾಕಾರದ ಕಿರೀಟವಿದೆ. ಲಿಂಗದ ಮೇಲೆ ಅಭಿಷೇಕದ ಜಲಪಾತ್ರೆ ಇದೆ. ಲಿಂಗಕ್ಕೆ ಎಡಭಾಗದಲ್ಲಿರುವ ವ್ಯಕ್ತಿ ಪೂಜಾರಿ ಯಾಗಿದ್ದು ತಲೆಗೆ ರುಮಾಲೂ ಎಡಗೈಲಿ ಗಂಟೆ ಬಲಗೈಲಿ ದೀಪಾರತಿಯನ್ನು ಬೆಳಗಿಸುವಂತೆ, ಲಿಂಗದ ಬಲಭಾಗದಲ್ಲಿ ಒಬ್ಬ ವ್ಯಕ್ತಿ ಪೂಜಾ ಸಲಕರಣೆಗಳನ್ನಿಟ್ಟುಕೊಂಡಿರುವಂತೆಯೂ, ಆ ವ್ಯಕ್ತಿಯ ಪಕ್ಕ ಸ್ವಲ್ಪ ಹಿಂದೆ ವೀರನು ಪದ್ಮಾಸನದಲ್ಲಿ ಕುಳಿತು ಕೈಮುಗಿದು ಪ್ರಾರ್ಥಿಸುವಂತೆಯೂ, ಅವನ ಬಲ ಹಿಂಭಾಗದಲ್ಲಿ ಒಂದು ನಂದಿಯ ಶಿಲ್ಪವನ್ನು ಕೆತ್ತಲಾಗಿದೆ. ಮತ್ತೊಂದು ಭಾಗದಲ್ಲಿ ಅಲಂಕೃತ ಹಸು ಠೀವಿಯಿಂದ ತಲೆ ಎತ್ತಿ ನಿಂತಿರುವಂತೆ, ತನ್ನ ತಾಯಬಳಿ ಹಿಗ್ಗಿನಿಂದ ಹಾಲು ಕುಡಿಯಲು, ತನ್ನ ಬಾಲವನ್ನು ಮೇಲೆತ್ತಿ ಮುಂಗಾಲನ್ನು ಮಡಿಚಿರುವ ಕರುವಿನ ದೃಶ್ಯ ಮನಮೋಹಕವಾಗಿ ಶಿಲ್ಪಿ ಬಿಡಿಸಿದ್ದಾನೆ.

ಶಾಸನದ ಕಲ್ಲಿನಲ್ಲಿರುವ ಬರಹವನ್ನು ಅದರ ಪಡಿಯಚ್ಚು ಪಡೆಯುವ ಅವಕಾಶವಿಲ್ಲದೆ ಅದನ್ನು ಬಿಟ್ಟು ಬರಲಾಯಿತು.

೩. ಹಿರೇಮಗಳೂರು

ಹಿರೇಮಗಳೂರಿನ ಕೊದಂಡರಾಮಸ್ವಾಮಿ ದೇವಾಲಯದ ಎಡಪಾರ್ಶ್ವದಲ್ಲಿ ಮೂರು ಶಿಲ್ಪಸಹಿತ ಶಿಲಾಫಲಕಗಳಿದ್ದು ಅವುಗಳಲ್ಲಿ ಒಂದು ಶಿಲಾಫಲಕವು ಈಚಿನದಾಗಿದೆ. ಅಂದು ಸುಮಾರು ೧೭ನೇ ಶತಮಾಕ್ಕೆ ಸೇರಿದ್ದಾಗಿದೆ. ಉಳಿದ ಎರಡರಲ್ಲಿ ಒಂದು ಹೊಯ್ಸಳೊತ್ತರ ಕಾಲದ ವೀರಗಲ್ಲಾಗಿದ್ದು, ಇನ್ನೊಂದು ಗೋಸಾಸ ಕಲ್ಲಾಗಿದೆ. ಹದಿನೇಳನೆ ಶತಮಾನದ ವೀರಗಲ್ಲು ಹುಲಿಬೇಟೆ ವೀರಗಲ್ಲಾಗಿದ್ದು ಅಸ್ಪಷ್ಟವಾಗಿದೆ. ಹೊಯ್ಸಳೋತ್ತರ ಕಾಲದ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು ತಳಗಡೆ ಎದುರುಬದಾಗಿರುವ ಯುದ್ಧ ವೀರರು ಅದರ ಮೇಲು ಭಾಗದಲ್ಲಿ ಸ್ವರ್ಗಕ್ಕೆ ಅಲಂಕೃತ ಪುಷ್ಪಕ ವಿಮಾನದಲ್ಲಿ ಕುಳಿತಿರುವ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಅಪ್ಸರೆಯರು ಆದರ ಮೇಲು ಭಾಗದಲ್ಲಿ ಶಿವಸಾನಿಧ್ಯದಲ್ಲಿ ಕುಳಿತಿರುವ ವೀರನ ಶಿಲ್ಪವನ್ನು ಬಿಡಿಸಲಾಗಿದೆ. ಜಟೆಬಿಟ್ಟಿರುವ ಯತಿ, ನಂದಿ, ಸೂರ್ಯ‌ರನ್ನು ಶಿಲ್ಪಿ ಬಿಡಿಸಿದ್ದಾನೆ.

ಈ ವೀರಗಲ್ಲಿನ ಪಕ್ಕದಲ್ಲಿರುವ ಗೋಸಾಸ ಕಲ್ಲಿನಲ್ಲಿ ಇಬ್ಬರು ವ್ಯಕ್ತಿಗಳು ನಿಂತಂತೆ ಇದ್ದು ಒಬ್ಬ ಧಾರೆಯ ಪಾತ್ರೆಯಿಂದ ನೀರನ್ನೆರೆದು ದಾನ ಕೊಡುತ್ತಿರುವಂತೆಯೂ ಅದರ ಮೇಲಿನ ಹಂತದಲ್ಲಿ ಕರುವಿಗೆ ಹಾಲು ಕುಡಿಸುತ್ತಿರುವ ಹಸುವಿನ (ಉಬಯಮುಖಿ) ಚಿತ್ರವೂ ಇದೆ. ಅದರ ಮೇಲೆ

ವಿಮಾನದಲ್ಲಿರುವ ಶಿವಲಿಂಗವನ್ನು ಬಿಡಿಸಲಾಗಿದೆ. ಇದೊಂದು ದಾನ ಶಾಸನವಾಗಿದ್ದು ಗೋಸಾಸ ಕಲ್ಲುಗಳ ಅಧ್ಯಯನಕ್ಕೆ ಈ ಶಿಲ್ಪ ಸಹಿತ ಗೋಸಾಸಕಲ್ಲು ಮುಖ್ಯ ಆಕರವಾಗುತ್ತದೆ.

೪. ಗರ್ಜಿ

ಗರ್ಜಿಯ ಕಲ್ಲೇಶ್ವರ ದೇವಾಲಯದ ಬಳಿ ಇರುವ ವೀರಗಲ್ಲು ಶಿಲ್ಪದ ದೃಷ್ಟಿಯಿಂದ ಗಂಗರ ಕಾಲಕ್ಕೆ ಸೇರಿದ್ದಾಗಿದೆ. ತಳಭಾಗ ನೆಲದಲ್ಲಿ ಹೂತು ಹೋಗಿದೆ. ಒಂದು ಹಂತದಲ್ಲಿ ಅಪ್ಸರೆಯರು ವೀರನನ್ನೂ ಸ್ವರ್ಗಕ್ಕೆ ಕೊಂಡೊಯ್ಯುವ ಹಾದಿಯಲ್ಲಿದ್ದಾರೆ. ಅಪ್ಸರೆಯರು ಒಂದು ಕಾಲಿನ ಪಾದವನ್ನು ನೆಲಕ್ಕೂರಿ ಹಿಂದಿನ ಕಾಲನ್ನು ಪಾದ ಮತ್ತು ಮಂಡಿಯೂರಿ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುವ ತಯಾರಿಯಲ್ಲಿರುವಂತೆ ಬಿಡಿಸಲಾಗಿದೆ. ಮೇಲಿನ ಹಂತದ ಪಟ್ಟಿಕೆಯಲ್ಲಿ ವೀರನು ಪದ್ಮಾಸನದಲ್ಲಿ ಕುಳಿತು ಎರಡೂ ಕೈಗಳಲ್ಲಿ ಪದ್ಮಗಳನ್ನು ಹಿಡಿದಿರುವಂತೆಯೂ, ಅವನ ಪಕ್ಕದಲ್ಲಿ ಅಪ್ಸರೆಯರು ಚಾಮರ ಬೀಸುತ್ತಿರುವಂತೆ ಶಿಲ್ಪಿ ಬಿಡಿಸಿದ್ದಾನೆ.

ನೊಳಂಬ ಅರಸಿ ದೀವಳಬ್ಬರಸಿಯ ರಚನಾತ್ಮಕ ಕಾರ್ಯಗಳು

ಕರ್ನಾಟಕವನ್ನು ಆಳಿದ ಶಾತವಾಹನರ ಕಾಲದಲ್ಲಿ ಶಾತವಾಹನ ಅರಸರು ತಮ್ಮ ತಾಯಿಯ ಹೆಸರನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುವ ಮೂಲಕ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದರೆಂಬುದನ್ನು ತಿಳಿಯಬಹುದು. ಬನವಾಸಿಯ ನಾಗಶಿಲ್ಪದ ಶಾಸನದಲ್ಲಿ ಶಿವಸ್ಕಂದ ನಾಗಶ್ರೀಯು ತಾನು ಯುವರಾಜನ ಮಾತೆಯೆಂದು ಹೇಳಿಕೊಂಡಿದ್ದಾಳೆ. ಆಕೆ ನಾಗಪ್ರತಿಮೆ ಕೆರೆ ಮತ್ತು ವಿಹಾರಗಳನ್ನು ಮಾಡಿಸಿ ದಾನ ಮಾಡಿದ್ದಳು. ಚಲುಕ್ಯ ವಿಕ್ರಮಾದಿತ್ಯನ ನಂತರದ ಶಾಸನಗಳಲ್ಲಿ ಚಾಲುಕ್ಯವಂಶದ ಅನೇಕ ರಾಣಿಯರು ಪಟ್ಟದಕಲ್ಲು ಮುಂತಾದ ಕಡೆ ಅನೇಕ ವಾಸ್ತು ರಚನೆಗಳಿಗೆ ಕಾರಣರಾಗಿದ್ದಾರೆ ಎಂದು ತಿಳಿದುಬರುತ್ತದೆ. ಕದಂಬರ ಸಮಕಾಲೀನರಾಗಿ ದಕ್ಷಿಣ ಕರ್ನಾಟಕವನ್ನು ಆಳಿದ ಗಂಗರಸರ ರಾಣಿಯರು ಸ್ವತಂತ್ರ ಸಮಾನ ಮನಸ್ಕರಾಗಿ ಅನೇಕ ದೇವಾಲಯ ಕೆರೆ ಮೊದಲಾದ ರಚನೆಗೆ ಕಾರಣರಾಗಿದ್ದಾರೆ. ಹತ್ತನೆಯ ಶತಮಾನದ ಅಂತ್ಯದಲ್ಲಿ ರಾಜಕೀಯ ಅಸ್ಥಿರತೆಗಳ ನಡುವೆಯೂ ರಾಣಿಯರು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಿರುವುದು ಶಾಸನಗಳಿಂದ ತಿಳಿಯುತ್ತದೆ. ರಾಣಿಯರು ರಾಜನ ಜೊತೆಯಲ್ಲಿ ರಾಜಕಾರಣಗಳಲ್ಲಿ ಭಾಗವಹಿಸಿ ಕೆಲವು ನಾಡುಗಳ ಅಧಿಕಾರ ಸೂತ್ರವನ್ನಿಡಿದು ಸಮರ್ಥವಾಗಿ ಆಳ್ವಿಕೆ ಮಾಡಿದ್ದಾರೆ. ಅದರಲ್ಲಿ ಗಂಗರ ಬೂತುಗನ ತಾಯಿ ಪರಮಬ್ಬೆ, ಜಯಸಿಂಹನ ಅಕ್ಕ ಅಕ್ಕಾದೇವಿ ದಾನ ಚಿಂತಾಮಣಿ ಅತ್ತಿಮಬ್ಬೆ ಮೊದಲಾದ ಹೆಸರುಗಳನ್ನು ಉಲ್ಲೇಖ ಮಾಡಬಹುದು.

ಪ್ರಸ್ತುತ ಲೇಖನದ ಉದ್ದೇಶ ಕರ್ನಾಟಕದ ಮಾಂಡಳೀಕ ಅರಸು ಮನೆತನಗಳಲ್ಲಿ ಒಂದಾದ ನೊಳಂಬ ಆರಸನ ರಾಣಿ ದೀವಳಬ್ಬರಸಿಯ ಸಮಾಜಮುಖಿ ಕಾರ್ಯಗಳನ್ನು ಪರಿಚಯಿಸುವುದಾಗಿದೆ.

ನೊಳಂಬರು ಕ್ರಿ.ಶ ೭೮೦ರಲ್ಲಿಯೇ ಅಸ್ತಿತ್ವಕ್ಕೆ ಬಂದರೂ ಆರಂಭದಲ್ಲಿ ಗಂಗರ ಮಾಂಡಲೀಕರಾಗಿದ್ದರು. ಮುಂದೆ ಗಂಗರ ವಿರುದ್ಧವಾಗಿ ತಿರುಗಿ ಬಿದ್ದರು. ನಂತರ ರಾಷ್ಟ್ರಕೂಟರ, ಕಲ್ಯಾಣ ಚಾಳುಕ್ಯರ ಮಾಂಡಳೀಕರಾಗಿ ಆಡಳಿತ ನಿರ್ವಹಿಸಿದರು. ಪಲ್ಲವ-ಚಾಳುಕ್ಯ, ಪಲ್ಲವ-ರಾಷ್ಟ್ರಕೂಟ, ಚೋಳ-ರಾಷ್ಟ್ರಕೂಟ, ಚೋಳ-ಚಾಳುಕ್ಯ ರಾಜ್ಯಗಳ ಗಡಿಗಳ ನಡುವೆ ನೊಳಂಬರು ಆಳ್ವಿಕೆ ಮಾಡುತ್ತಿದ್ದು ಅಲ್ಲಿನ ಘರ್ಷಣೆಗಳಲ್ಲಿ ನೊಳಂಬರು ಪಾಲ್ಗೊಳ್ಳುತ್ತಿದ್ದರು. ಇಂತಹ ಘರ್ಷಣೆಗಳ ನಡುವೆಯೂ ಸಾಂಸ್ಕೃತಿಕ ಕಾರ್ಯಗಳಾದ ದೇವಾಲಯಗಳ ರಚನೆ, ಕೆರೆಗಳ

ನಿರ್ಮಾಣ ಮತ್ತು ಅವುಗಳ ಜೀರ್ಣೋದ್ಧಾರದ ಕೆಲಸಗಳು ನಡೆದಿರುವುದು ಕುತೂಹಲಕರ ಸಂಗತಿ. ಇಂತಹ ಒಂದು ಸಂಗತಿಯನ್ನು ಅದರಲ್ಲೂ ಒಬ್ಬ ರಾಣಿ ಮಾಡಿದ ಕೆಲಸ-ಕಾರ್ಯಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ನೊಳಂಬ ಅರಸ ಪೊಳಲ್ಚೋರನ ಪತ್ನಿ ಮತ್ತು ಕದಂಬ ವಂಶದ ರಾಜಕುಮಾರಿಯಾದ ದೀವಳಬ್ಬರಸಿಯು ರಾಜ್ಯಸೂತ್ರಗಳನ್ನು ತನ್ನ ಕಿರಿಯ ಮಗನ ಪರವಾಗಿ ಹಿಡಿದ ಕಾಲವು ನೊಳಂಬರ ಇತಿಹಾಸದಲ್ಲಿ ಸಂಕ್ರಮಣ ಕಾಲವಾಗಿತ್ತು. ಪಾರಂಪರಿಕ ಅರಸರಾದ ತಲಕಾಡಿನ ಗಂಗರನ್ನು ಚೋಳರು ಸೋಲಿಸಿದ್ದರು. ಹಾಗೆಯೇ ದಕ್ಷಿಣ ಭಾರತದ ಪ್ರಬಲ ರಾಜ ಮನೆತನವಾಗಿದ್ದ ರಾಷ್ಟ್ರಕೂಟರನ್ನು ಮೂಲೆಗೆ ತಳ್ಳಿ ಕಲ್ಯಾಣದ ಚಾಲುಕ್ಯರು ಪಟ್ಟಕ್ಕೆ ಬಂದಿದ್ದರು. ಈ ಹಂತದಲ್ಲಿ ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ನೊಳಂಬರು ಇದ್ದರು. ಈ ಅವಧಿಯಲ್ಲಿ ನೊಳಂಬರ ಪಾರಂಪರಿಕ ರಾಜಧಾನಿಯಾಗಿದ್ದ, ಹೆಂಜೇರುವಿನಿಂದ ರಾಜ್ಯಭಾರ ಮಾಡುತ್ತಿದ್ದ ಪೊಳಲ್ಚೋರನ ಪತ್ನಿಯೇ ದೀವಳಬ್ಬರಸಿ. ಈಕೆಯ ಬಗ್ಗೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಆವನಿ ಗ್ರಾಮದ ಒಂದೆರಡು ಶಾಸನಗಳು ಸ್ವಲ್ಪಮಟ್ಟಿಗೆ ಈಕೆಯ ಬಗ್ಗೆ ವಿವರಗಳನ್ನು ನೀಡುತ್ತವೆ. ಈಕೆಯನ್ನು ಕದಂಬ ವಂಶದ ರಾಜಕುಮಾರಿಯೆಂದು ಇಮ್ಮಡಿ ಪೊಳಲ್ಚೋರನ ಪತ್ನಿಯೆಂದೂ ತಿಳಿಸುತ್ತವೆ.

ಶಾಸನಕಾರ ಇಮ್ಮಡಿ ಪೊಳಲ್ಚೋರನ ಅಗ್ರಮಹಿಷಿಯಾದ ದೀವಳಬ್ಬರಸಿಯ ಗುಣಗಾನವನ್ನು ಕೆಳಗಿನ ಪದ್ಯದಲ್ಲಿ ವರ್ಣಿಸಿದ್ದಾನೆ.

ಶ್ರೀವಧುಧರೆ ಪೊಳಲ್ಚೋ
ರಾವನಿಪಂಗಗ್ರಮಹಿಷಿ ಭುವನಾಂಬಿಕೆ ವಾಕ್
ದೇವಿಯರ ದೊರೆಯರೆನಿಸಿದ
ದೀವಬ್ಬರಸಿಯರ ದೊರೆಗೆಟ್ಟರ್ ಪೆಱರೊಳರೇ ॥

ಅತಿಶಯಮಾಗೆ ತಮ್ಮ ಹೆಸರೊಳ್ನೀೞ್ ತತ್ಪತಿ ನಾಮದಿಂ ಯಶೋ
ರ್ಜಿತಮೆನಿಪಗ್ರಹಾರಮ ವಿನಾಶಿ ನಮಸ್ಸಮೆ ಮಾಡಿ ರಾಜ್ಯದೊ
ಳ್ಸುತ ನನುಕೂಳನಾಗಿ ಬೆಸಕೆಯ್ಯೆ ಗುಣೋನ್ನತಿಯೊಪ್ಪಿನಿಂದರು
ನ್ಧತಿ ದೊರೆ ದೀವಳಬ್ಬರಸಿಯರ್ಜ್ಜಗತೀ ತಳಕೇಂ ಪವಿತ್ರರೋ ॥

ಅರಸ ಪೊಳಲ್ಚೋರನ ಪಟ್ಟದ ರಾಣಿ ದೀವಳಬ್ಬರಸಿಯು ಶ್ರೀಮನ್ನಾರಾಯಣನ ಪತ್ನಿಯರಾದ ಲಕ್ಷ್ಮೀದೇವಿ, ಭೂದೇವಿಯರನ್ನು, ಶಿವನಪತ್ನಿ ಪಾರ್ವತಿದೇವಿ ಹಾಗೂ ಬ್ರಹ್ಮನ ರಾಣಿ ವಾಕ್ ಸಂಪನ್ನಳಾದ ಸರಸ್ವತೀ ದೇವಿಯರಿಗೆ ಸಮಾನಳಾದವಳು. ಈಕೆಯಂತೆ ಭೂಲೋಕದಲ್ಲಿ ಮತ್ಯಾರಾದರೂ ಇರುವರೇ? ದೀವಬ್ಬರಸಿ ತನ್ನ ಹೆಸರಿನಲ್ಲಿ ಹಾಗೂ ತನ್ನ ಪ್ರೀತಿ ಪಾತ್ರನಾದ ಪತಿಯ ಹೆಸರಿನಲ್ಲಿ ಅವನ ಕೀರ್ತಿವಿಶ್ವದಲ್ಲಿ ನಾಶವಾಗದೆ ಶಾಶ್ವತವಾಗಿರುವಂತಹ ಅತಿಶಯವಾದ ಅಗ್ರಹಾರವನ್ನು ರಚಿಸಿದಳು. ರಾಜ್ಯದಲ್ಲಿ ಹೇಳಿದ ಕೆಲಸವನ್ನು ಮಾಡಿಸುವಂತಹ ಸಹಕಾರವಿರುವ ಸುತನನ್ನು ಪಡೆದಿರುವ ಅತಿಶಯವಾದ ಉತ್ತಮ ಗುಣಗಳನ್ನು ಹೊಂದಿರುವ ಅರುಂಧತಿದೇವಿಗೆ ಸಮಾನಳಾದ ದೀವಳಬ್ಬರಸಿಯಂತೆ ಈ ಜಗತ್ತಿನಲ್ಲಿ ಅದೆಷ್ಟು ಜನ ಸ್ತ್ರೀಯರಿದ್ದಾರೆ?

ಮೇಲಿನ ಪದ್ಯಗಳಲ್ಲಿ ದೀವಳಬ್ಬರಸಿಯು ತನ್ನ ಮತ್ತು ಗಂಡನ ಹೆಸರಿನಲ್ಲಿ ಅಗ್ರಹಾರ ರಚನೆಯನ್ನು ವಿವರಿಸುತ್ತಾ ಆಕೆಯ ಗುಣಗಳನ್ನು ಕವಿ ನಿರೂಪಿಸಿದ್ದಾನೆ. ಮುಂದುವರಿದು ದೀವಳಬ್ಬರಸಿ ಕಟ್ಟಿಸಿದ ಕೆರೆಯ ಬಗ್ಗೆ ಕವಿಯ ವರ್ಣನೆಯಲ್ಲಿ ಪದ್ಯದ ಮೂಲಕ ಗಮನಿಸಬಹುದು.

ವಿದಿತಂ ಲೋಕಕ್ಕೆ ಮುನ್ನಂ ರಘುಕುಳದಹನೋಗ್ರೇಷುವಿಂ ಕಾಯ್ದು ತಿಣ್ಣಂ
ಕುದಿಗೊಣ್ಡು ಟ್ಟುತ್ತಗಸ್ತ್ಯಕುಡಿಯುತುಗುಟ್ದಿನಿಂ ಕಟ್ಟುಪಟ್ಟಿದ್ದಿನ್ತ
ಪ್ಪುದು ಪೆಂಪಿನ್ತಾಳ್ದಿತೆನ್ದ ನ್ದಱಿಯರೆ ಲವಣಾಂಬೋಧಿಯುಂ ಪೋಲಿಸಲ್ವೇ
ಡಿದುವೆ (೧) ತಾನೆತ್ತಲೆಂಬನ್ತತಿ ಬಹುಳ ಜಳನ್ದೀವಳಬ್ಬಾಸಮುದ್ರಂ

ಹಿಂದೆ ರಾಮನು ಬೆಂಕಿಯಂತಹ ಬಾಣಗಳ ತೀಕ್ಷ್ಣತೆಯಿಂದ ದಶಕಂಠನ ಶಿರವನ್ನು ಕತ್ತರಿಸಿದಾಗಿನ ಕೋಪಾಗ್ನಿಯಂತೆ ಅಗಸ್ತ್ಯರು ಸಮುದ್ರವನ್ನು ಕೋಪದಿಂದ ಅಪೋಶನಮಾಡಿ ಜೀರ್ಣಿಸಿಕೊಂಡಾಗ ಜನರ ಬೇಡಿಕಯನ್ನು ಮನ್ನಿಸಿ ನೀರನ್ನು ಮತ್ತೆ ಉಗುಳಿದನು. ಆ ಉಗುಳಿದ ನೀರು ಸಮುದ್ರವನ್ನು ತುಂಬಿದಂತೆ ದೀವಳಬ್ಬರಸಿ ಕಟ್ಟಿಸಿದ ಕೆರೆಯನ್ನು ಲವಣಸಮುದ್ರಕ್ಕೆ ಹೋಲಿಸಲಾಗುವುದೇ? ಇದೇ ಅಪಾರವಾದ ಜಲರಾಶಿಯಿಂದ ತುಂಬಿ ಸಮುದ್ರದಂತೆ ಶೋಭಿಸುತ್ತಿತ್ತು.

ಪದೆದಾಯಾಸಕ್ಕೆ ಪಕ್ಕಾಗಿರೆ ಗಡ ಪಿರಿದು ಭ್ರಾನ್ತಿನಿಂ ಪೋ (.) ದೊನ್ದ
ಬ್ದದೊಳಿನ್ತೆನ್ತಾನು ಮೆಯ್ದುತ್ತಿರ ದಮರ ನದೀಕಾನೆ ಯುಂ ಕಾಣ್ಬರೀ (.)
(.)ದೆಸರ್ಸಿಯ್ದಿದೇಂ ಸಂಭಿತಮೋ ನಮುಗಪ್ಪಿ ಱಿಂಗಂಗೆ ತೆಂಕ
ಣ್ದಿದಿರಂ ಬನ್ದಿಟ್ಟುದೆಂಬಂನ್ತತಿ ಬಹಳ ಜಳನ್ದೀವಳಬ್ಬಾಸಮುದ್ರಂ

ವರ್ಷಕ್ಕೊಮ್ಮೆ ದೊಡ್ಡದಾಗಿ ಭ್ರಾಂತಿಯನ್ನಿರಿಸಿಕೊಂಡು ಆಯಾಸವಾದರೂ ಉತ್ಸಾಹದಿಂದ ಗಂಗಾನದಿಯೆಂಬ ಪವಿತ್ರ ಕಾಂತೆಯನ್ನು ಕಾಣಲು ಹೋಗುವರು. ಆಕೆ ಅಂದರೆ ಗಂಗಾನದಿಯೆ ಜನರ ಮೇಲಿನ ಪ್ರೀತಿಯಿಂದ ಅವರ ಆಯಾಸವನ್ನು ತಪ್ಪಿಸುವ ಕಾರಣದಿಂದ ದಕ್ಷಿಣಕ್ಕೆ ಬಂದು ನಮ್ಮೆದುರಿನಲ್ಲಿ ತುಂಬಿ ನಿಂತಿರುವ ಜಲರಾಶಿಯಿಂದ ಕೆರೆಯು ಕಣ್ಮನ ತಣಿಸುವಂತೆ ಕಾಣುತ್ತದೆ.

ದೀವಳಬ್ಬರಸಿ ಕಟ್ಟಿಸಿದ ಕೆರೆ ಎಂದು ಕವಿ ಕೆರೆಯ ವರ್ಣನೆ ಮಾಡಿದ್ದಾನೆ.

ಮನುಚರಿತಂ ಮಹೇಂದ್ರ ನೃಪನಿಂದೆ ಪರೋಕ್ಷದೊಳಾಮಾಹತ್ಮ್ಯನಾ
ಜನನಿ ಮಹೇಂದ್ರ ನಾಮದೆ ಕೊಳಂ ನಿಜ ನಾಮದೊಳಿನ್ತಟಾಕಮೀ
ಶನ ಭವನಮ್ಮುಕುನ್ದ ಭವನಂಗಳ ನಿಂಬಿನಿ ಮಾಡಿ ಧರ್ಮವ
ರ್ಧನದೆ ಕನೀಯ ನನ್ದನನ ರಾಜ್ಯಮನೀಕ್ಷಿಸುಗಾವ ಕಾಲಮಂ

ಮನು ಚರ್ಕವರ್ತಿಯಂತೆ ಚಾರಿತ್ರ್ಯವನ್ನು ಹೊಂದಿದ್ದ ಮಹೇದ್ರನ ಸಾವಿನ ನಂತರ ಆ ಮಹಾತ್ಮನ ತಾಯಿಯಾದ ದೀವಳಬ್ಬರಸಿ ಹಿರಿಯ ಮಗ ಮಹೇಂದ್ರನ ಹೆಸರಿನಲ್ಲಿ ಒಂದು ಕೊಳವನ್ನೂ, ತನ್ನ ಹೆಸರಿನಲ್ಲಿ ಕೆರೆಯನ್ನು ಶಿವಾಲಯವನ್ನು ಮತ್ತು ಮುಕುಂದನ ಆಲಯವನ್ನು ಕಟ್ಟಿಸಿ ಧರ್ಮ ಅಭಿವೃದ್ಧಿಯಾಗುವಂತೆ ಏರ್ಪಡಿಸಿದಳು. ಕಿರಿಯ ಮಗನ ರಾಜ್ಯವೈಭವವನ್ನು ಸದಾಕಾಲವೂ ವೀಕ್ಷಿಸುತ್ತಾ ಇದ್ದಳೆಂದು ಹೇಳಿದೆ.

ನೆಟ್ಟನೆ ಕದಂಬ ವಂಶಂ
ಪುಟ್ಟಿದೆ ಮನೆ ಪಲ್ಲವೇನ್ದ್ರನಿಱುವ ನೊೞಂಬಂ
ಪುಟ್ಟಿದ ಮಗನಿಗೆ ಮುಗಿಲಂ
ಪುಟ್ಟಿಪುದಂ ಪೆಂಪು ದೀವಳಬ್ಬರಿಸಿಯರಾ ॥

ಸ್ವಸ್ತಿ ಶ್ರೀಮದನೇಕ ದಿವ್ಯಗುಣ ಸಾನ್ದರ್ಯಲಯಾ ಸಾಯತಾ

ಭೂಲೋಕಾಗ್ರ್ಯ ಕದಂಬ ವಂಶ ತಿಲಕಾಸದ್ಭಿಸ್ಸದಾವನ್ದಿತಾ
ಶ್ರೀಮದ್ರಾಜ ಮನೋಜ ಭೂಪಮಹಿಷೀ ದಿವಾಂಬಿಕಾ ವಿಶ್ರುತಾ
ಪೂತಾನೂತ ಪತಿವ್ರತಾಸ್ತುತ ಗುಣದೇದೀಪ್ಯ ಮಾನಾಜನಿ
ಕೃತ್ವಾ ದೇವಾಯತ ನಮ್ಮೇಹೇಶ್ವರಾರ್ಪ್ಪಣ ಮನನ್ತ ಪಾಪ
ವಿನಾಶ ಘಂಟಾ ದೀವಾಂಬಕಾಯಾ ನೊಳಂಬ ನಾರಾಯಣೇಶ್ವರಾಯ ಸುದತ್ತಾ॥

ಹುಟ್ಟಿದ್ದು ಕದಂಬ ವಂಶದಲ್ಲಾದರೂ, ತನ್ನ ಒಡಲಲ್ಲಿ ಜನಿಸಿದ ಮಗ ನೊಳಂಬ ಪಲ್ಲವ ಇರಿವ ನೊಳಂಬನ ಕೀರ್ತಿ ಆಕಾಶದೆತ್ತರಕ್ಕೇರಲಿ, ವಿಶ್ವವಿಖ್ಯಾತಿ ಪಡೆಯಲಿ ಎಂದು, ನೊಳಂಬನಾರಾಯಣೇಶ್ವರನಿಗೆ, ಮಹೇಶ್ವರಾರ್ಪಣವೆಂದು ಪಾಪವಿನಾಶ ಘಂಟೆಯನ್ನು ಅರ್ಪಿಸಿದ ದೀವಳಬ್ಬರಸಿಯನ್ನು ಶಾಸನ ಕವಿ ಸಂಸ್ಕೃತ ಭಾಷೆಯಲ್ಲಿ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ರಚಿಸಿದ್ದಾನೆ. ಹೀಗೆ ಶ್ರೀರಾಜಮನೋಜ ದೊರೆಯ ರಾಣಿ ಶ್ರೇಷ್ಠವಾದ ಕದಂಬ ವಂಶಕ್ಕೆ ತಿಲಕದಂತಿರುವ, ಪತಿವ್ರತೆಯರು ಆರಾಧಿಸುವ ಮಂಗಳಕರವಾದ ಗುಣವುಳ್ಳ ದೀವಳಬ್ಬರಸಿಯ ಸಾಂಸ್ಕೃತಿಕ ಚೆಲುವಿನ ಮಿಡಿತಗಳನ್ನು ಜಗತ್ತಿಗೆ ಹಂಚಿದ್ದಾಳೆ.

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೫ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ–ಕನ್ನಡಿಗ–ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಗದಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು–೫೬೦೦೧೮